Leave of Absence to Sri F. S. Patil —Grant of

MR. SPEAKER.—I have received a letter dated 18th March 1969 from Sri F. S. Patil, Member of Legislative Assembly, requesting under Rule 188 for leave of absence from attending the current sittings of the Assembly from 21st March 1969 to 31st March 1969 due to ill-health.

Is it the pleasure of the Assembly that permission be granted to Sri F. S. Patil for being absent from attending the current sittings of the Assembly from 21st March to 31st March 1969 ?

HON. MEMBERS.—Yes.

(*Permission to remain absent is granted.*)

Calling Attention to a matter of urgent Public Importance *re*: Murder of forest guards in Kanakapura Taluk.

MR. SPEAKER.—Now Calling Attention notice by Sri N. B. Sirdesai, but he is absent. This relates to the Murder of forest guards in Kanakapura Taluk. It is not taken up.

Budget Estimates for 1969-70 Demand for Grants.

Demands Nos. 20, 22, 38 and 51.

(*Debate Contd*).

MR. SPEAKER —As I understand from the Whips, they would require three hours for the discussion of demands. The discussion on these demands will continue upto 6 P.M. The Private Members' business will start at 6 P.M. and close at 8 P.M.

ಶ್ರೀ ಅಜೀಜ್ ಸೇಟ್.—ಸ್ವಾಮಿ, ತಾವು ಅಧ್ಯಕ್ಷರಾಗಿ ಬಂದ ಮೇಲೆ ಇಲ್ಲಿ ಸಭೆಯನ್ನು ರಾತ್ರಿ 8 ಗಂಟೆ, 9 ಗಂಟೆ ಮತ್ತು 10 ಗಂಟೆಯವರೆಗೂ ನಡೆಸುವುದಕ್ಕೆ ಪ್ರಾರಂಭವಾಯಿತು. ಇದು ಸರಿಯಾದ್ದಲ್ಲ. ನಮ್ಮ ಕಾರ್ಯಕಲಾಪಗಳನ್ನು ಸಾಯಂಕಾಲ 6 ಕ್ಕೆ ನಿಲ್ಲಿಸಬೇಕೆಂದು ನಾನು ಅರಿಕೆ ಮಾಡಕೊಳ್ಳುತ್ತೇನೆ.

ಅಧ್ಯಕ್ಷರು.—ಉಭಯ ಪಕ್ಷಗಳ ಮತ್ತು ಸಭೆಯಲ್ಲಿ ಬಹುಮಂದಿ ಸದಸ್ಯರ ಅಭಿಪ್ರಾಯ ಹಾಗಿರುವುದರಿಂದ ಕೂಡಲೇ ಬೇಕಾಗುವುದು. ಈಗ ಶ್ರೀ ಡಿ. ಎಸ್. ಗೌಡ ಅವರು ಮಾತನಾಡ ಬಹುದು.

†ಶ್ರೀ ಡಿ. ಎಸ್. ಗೌಡ (ದೇವನಹಳ್ಳಿ) –ಮಾನ್ಯ ಸಭಾಪತಿಗಳೇ, ಮಾನ್ಯ ವ್ಯವಸಾಯ ಖಾತಾ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಬೆ ಡಿಕೆಗಳನ್ನು ನಾನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಇಂದು ನಮ್ಮ ದೇಶ ದಾರಿದ್ರ್ಯ ಮತ್ತು ಆಹಾರಾಭಾವಗಳಿಂದ ಪೀಡಿತವಾಗಿದೆ. ನಮ್ಮ ದೇಶದ ಇಂಥಾ ಒಂದು ಪರಿಸ್ಥಿತಿಗೆ ಮೂಲ ಕಾರಣ ದೇಶದಲ್ಲಿರತಕ್ಕ ವ್ಯವಸಾಯ ಬಹಳ ಹಿಂದುಳಿದಿದ್ದು ಅದರಲ್ಲಿ ಯಾವ ಪ್ರಗತಿಯೂ ಇಲ್ಲದಿರುವುದೇ ಆಗಿದೆ. ಇಲ್ಲಿ ಒಂದು ಎಕರೆಯಲ್ಲಿ ಬರತಕ್ಕ ಉತ್ಪತ್ತಿ

ಯನ್ನೂ ಮತ್ತು ಒಬ್ಬ ರೈತನ ವೈಯಕ್ತಿಕ ವರಮಾನವನ್ನೂ ಹೋಲಿಕೆ ಮಾಡಿ ನೋಡಿದರೆ ಈ ಎರಡೂ ಬಹಳ ಕಡಮೆ ಇರುತ್ತದೆ. ದೇಶ ಇದೇ ರೀತಿಯಲ್ಲಿ ಇನ್ನು ಮುಂದಕ್ಕೂ ಮುಂದು ವರಿಯುವುದಾದರೆ ನಮ್ಮ ದೇಶದ ಪರಿಸ್ಥಿತಿ ಏನಾಗಬಹುದೆಂಬುದನ್ನು ಹೇಳುವುದಕ್ಕೆ ಬಹಳ ಕಷ್ಟ ವಾಗುತ್ತದೆ. ಒಂದು ಕಡೆ ಆಹಾರದ ಉತ್ಪತ್ತಿ ದೇಶದಲ್ಲಿ ದಿನ ದಿನಕ್ಕೂ ಕಡಮೆಯಾಗುತ್ತಿದ್ದರೆ ಇನ್ನೊಂದು ಕಡೆ ದೇಶದ ಜನಸಂಖ್ಯೆ ದಿನ ದಿನಕ್ಕೂ ಏರುತ್ತಿದೆ. ಇಂಥಾ ಇಕಟ್ಟಿನಲ್ಲಿ ನಮ್ಮ ರಾಜ್ಯದಲ್ಲಿ ಜನರ ಅರ್ಥಿಕದ ಅಡಿಗಲ್ಲು ಮತ್ತು ದೇಶದ ಪ್ರಗತಿ ಎರಡೂ ದೇಶದಲ್ಲಿರತಕ್ಕ ವ್ಯವಸಾಯ ವನ್ನೇ ಅವಲಂಬಿಸಿರುವಾಗ, ಈ ಬಾಬಿನಿಂದ ಹೆಚ್ಚಿನ ಉತ್ಪತ್ತಿ ಬಾರದಿದ್ದರೆ, ಬಹಳ ಕಷ್ಟವಾಗು ತ್ತದೆ. ಆದರೆ ಇತ್ತೀಚೆಗೇನೋ ದೇಶದಲ್ಲಿ ಆರ್ಥಿಕ ಪ್ರಗತಿಯ ಚಿನ್ಹೆಗಳು ಅಲ್ಲಲ್ಲೇ ಕಂಡು ಬರುತ್ತಿದ್ದರೂ, ಮತ್ತು ರೈತಾಪಿ ಜನರಲ್ಲಿ ಕಾಣುತ್ತಿದ್ದ ಆಲಸ್ಯ ಮಾಯವಾಗುತ್ತಿದ್ದರೂ ರೈತನಿಗೆ ನವ ಚೇತನವನ್ನು ಕೊಡತಕ್ಕ ಪರಿಹಾರಗಳು ಅವನಿಗೆ ಸುಲಭವಾಗಿ ಸಿಕ್ಕುತ್ತಿಲ್ಲ. ನಾವು ಈ ದಿವಸ ರೈತನಿಗೆ ಅತ್ಯಗತ್ಯವಾಗಿ ಬೇಕಾಗಿರುವ ಎಲ್ಲಾ ಸಾಮಾನುಗಳನ್ನು ಸುಗಮವಾಗಿ ಹಾಗೂ ಸುಲಲಿತವಾಗಿ ಒದಗಿಸಿದ್ದೇ ಆದರೆ ಆತನಲ್ಲಿ ಒಂದು ಹೆಚ್ಚಿನ ಆಕಾಂಕ್ಷೆಯುಂಟಾಗಿ ದೇಶದ ಪ್ರಗತಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಅತನು ಮುಂದುವರಿಯಲು ಸಾಧ್ಯವಾಗುತ್ತದೆ. ಆತನಿಗೆ ಅಗತ್ಯವಾಗಿ ಬೇಕಾದ ಉತ್ತಮ ದರ್ಜೆಯ ಹಾಗೂ ಅತ್ಯಾಧುನಿಕ ಬಿತ್ತನೆ ಬೀಜ, ತಾಂತ್ರಿಕ ಉಪಕರಣಗಳು ಹಾಗೂ ಸರ್ಕಾರದಿಂದ ಆತನಿಗೆ ಲಭಿಸಬೇಕಾದ ಇನ್ನುಳಿದ ಸಹಾಯ ಗಳನ್ನು ಸಕಾಲಕ್ಕೆ ಒದಗಿಸಿದ್ದೇ ಆದರೆ ಅತನು ದೇಶದ ಅರ್ಥಿಕ ಬೆಳವಣಿಗೆಗೆ ಒಂದು ಮಾರ್ಗದರ್ಶನ ಮಾಡಬಲ್ಲ. ನಮ್ಮ ದೇಶದಲ್ಲಿ ಇಂದು ನೂರಕ್ಕೆ ಎಪ್ಪತ್ತು ಎಂಬತ್ತು ಜನರು ವ್ಯವಸಾಯವನ್ನು ಅವಲಂಬಿಸಿರುತ್ತಾರೆ; ಇದರಲ್ಲಿ ನಿರತರಾಗಿರುತ್ತಾರೆ. ಆದರೆ ನಮ್ಮ ದೇಶದ ಆಹಾರ ಉತ್ಪತ್ತಿ ಬಹಳ ಕಡಮೆ; ಅನ್ನತಕ್ಕ ಕೂಗು ಬಹಳ ದಿವಸಗಳಿಂದಲೂ ಇರುತ್ತದೆ. ಆದರೆ ನಮ್ಮ ದೇಶದಲ್ಲಿ ಉತ್ಪನ್ನವಾಗತಕ್ಕ ಬೆಳೆಗಳನ್ನು ಇನ್ನಿತರೇ ದೇಶಗಳಿಗೆ ಹೋಲಿಕೆ ಮಾಡಿದಾಗ ನಮ್ಮ ಮಟ್ಟ ಎಲ್ಲಿದೆ ಎಂಬುದು ಗೊತ್ತಾಗುತ್ತದೆ. ನಮ್ಮ ದೇಶದಲ್ಲಿ ಬೆಳೆಯುತಕ್ಕ ಗೋಧಿ ಬೆಳೆಯನ್ನು ಅಮೇರಿಕಾ ಮತ್ತು ಜಪಾನುಗಳಿಗೆ ಹೋಲಿಕೆ ಮಾಡಿ ನೋಡಿದರೆ ನಮ್ಮ ರಾಷ್ಟ್ರದಲ್ಲಿ ಒಂದು ಹೆಕ್ಟಾರಿಗೆ 10—12 ಕ್ವಿಂಟಾಲುಗಳಾದರೆ ಪರರಾಷ್ಟ್ರಗಳಲ್ಲಿ ಇದಕ್ಕೆ ಎರಡರಷ್ಟು ಬರುತ್ತದೆಂದು ತಿಳಿದು ಬಂದಿದೆ. ನಮ್ಮ ರಾಷ್ಟ್ರೀಯ ಆದಾಯ ನೂರಕ್ಕೆ 42 ಇದ್ದರೆ, ನಮ್ಮ ಭಾರತದಿಂದ ಪರರಾಷ್ಟ್ರಗಳಿಗೆ ರಫ್ತು ಮಾಡತಕ್ಕ ವಸ್ತುಗಳಲ್ಲಿ ಶೇಕಡಾ 55 ರಷ್ಟು ವಸ್ತುಗಳು ನಮ್ಮ ವ್ಯವಸಾಯದ ಉತ್ಪನ್ನ ವಸ್ತು ಗಳಾಗಿವೆ ಎಂಬುದನ್ನು ನಾವೆಲ್ಲರೂ ಮುಖ್ಯವಾಗಿ ಗಮನಿಸತಕ್ಕ ವಿಷಯವಾಗಿದೆ. ಅಂದರೆ ನಮ್ಮ ರಾಷ್ಟ್ರ ಉತ್ಪತ್ತಿಗೆ ಈ ವ್ಯವಸಾಯ ಬಹಳ ಮುಖ್ಯವಾದದ್ದು ಮೂಲಭೂತವಾದದ್ದು ಎಂಬುದನ್ನು ಇದು ಸೂಚಿಸುತ್ತಿದೆ. ಆದ್ದರಿಂದ ನಾವು ಈ ವ್ಯವಸಾಯಕ್ಕೆ ಇಲ್ಲಿ ಒಂದು ಹೆಚ್ಚಿನ ಪ್ರಾಧಾನ್ಯತೆ ಯನ್ನು ಕೊಡದಿದ್ದರೆ ಸಾಧ್ಯವೇ ಇಲ್ಲ. ಆ ಒಂದು ಪ್ರಾಧಾನ್ಯತೆಯನ್ನು ನಾವು ಎಷ್ಟರ ಮಟ್ಟಿಗೆ ಕೊಡಬೇಕು ಎಂಬುದನ್ನು ಎತ್ತಿ ತೋರಿಸಲು ನಾನು ಕೆಲವು ಅಂಶಗಳನ್ನು ಈಗ ಈ ಸಭೆಯ ಗಮನಕ್ಕೆ ತರಬಯಸುತ್ತೇನೆ:—

ನಮ್ಮ ರಾಷ್ಟ್ರದಲ್ಲಿ ಒಂದು ಹೆಕ್ಟಾರಿನಲ್ಲಿ ಬೆಳೆಯತಕ್ಕ ಧಾನ್ಯಗಳ ಪ್ರಮಾಣ ಎಷ್ಟು ಎಂಬುದನ್ನು ಮುಂದುವರಿದ ರಾಷ್ಟ್ರಗಳಿಗೆ ಹೋಲಿಕೆ ಮಾಡಿ ನೋಡುವುದಾದರೆ — 1964-65 ರ ಅಂಕಿ ಅಂಶಗಳ ಪ್ರಕಾರ ನಮ್ಮ ಭಾರತದಲ್ಲಿ ಗೋಧಿ ಒಂದು ಹೆಕ್ಟಾರಗೆ 7·3 ಕ್ವಿಂಟಾಲುಗಳಾದರೆ ಈಜಿಪ್ಟಿನಲ್ಲಿ 27·6 ಕ್ವಿಂಟಾಲಿದೆ. ಅಮೇರಿಕಾದಲ್ಲಿ ಹೆಕ್ಟಾರಿಗೆ 17·7 ಕ್ವಿಂಟಾಲಿದೆ. ಅದೇ ರೀತಿ ಭತ್ತದ ಬೆಳೆಯನ್ನು ತಗೆದುಕೊಂಡರೆ ಭರತಖಂಡದಲ್ಲಿ ಒಂದು ಹೆಕ್ಟಾರಿನಲ್ಲಿ 16·1 ಕ್ವಿಂಟಾಲಾದರೆ ಜಪಾನಿನಲ್ಲಿ 51·1 ಕ್ವಿಂಟಾಲು ಉತ್ಪತ್ತಿ ಬರುತ್ತದೆಂದು ಕಂಡು ಬಂದಿದೆ.

[Mr. Chairman (Sri B. P. Kadam) in the Chair]

ಮತ್ತು ಈಜಿಪ್ಟಿನಲ್ಲಿ 50.4 ಕ್ವಿಂಟಾಲ್ ಇದೆಯೆಂದು ಗೊತ್ತಾಗುತ್ತದೆ. ಬುನಾದಿ ಕಾಲ ದಿಂದಲೂ ವ್ಯವಸಾಯವನ್ನು ಅಲಂಬಿಸಿರತಕ್ಕ ನಮ್ಮ ದೇಶದಲ್ಲಿ, ಸ್ವಾತಂತ್ರ ಬಂದನಂತರ ಅನೇಕ ಯೋಜನೆಗಳಲ್ಲಿ ಹೆಚ್ಚಿನ ಪ್ರಾಧಾನ್ಯತೆಯನ್ನು ವ್ಯವಸಾಯಕ್ಕೆ ಒದಗಿಸಿಕೊಟ್ಟಿದ್ದಾರೆ ತಾಂತ್ರಿಕ ಅಥವಾ ಯಾವ ಕಾರಣದಿಂದಲೋ ಇದರಲ್ಲಿ ಒಂದು ನ್ಯೂನತೆ ಇದೆ. ಈ ದೇಶದಲ್ಲಿ ವ್ಯವಸಾಯ ಗಾರರು ಅವಿದ್ಯಾವಂತರಾಗಿದ್ದರೂ, ವ್ಯವಸಾಯದಲ್ಲಿ ಬಹುಶಃ ಯಾವ ದೇಶದ ರೈತನಿಗಿಂತಲೂ ನಮ್ಮ ದೇಶದ ರೈತ ಹಿಂದುಳಿದಿಲ್ಲ. ಇನ್ನು ಸುಧಾರಿಸಿದ ಬೀಜ ಮತ್ತು ರಾಸಾಯನಿಕ ಗೊಬ್ಬರ ಇವುಗಳ ಬಗ್ಗೆ ಒಂದು ಕ್ರಾಂತಿಕಾರಕವಾದ ವಿಚಾರ ಇದೆ. ಅವಿದ್ಯಾವಂತ ರೈತರು ಇದನ್ನು ಹೆಚ್ಚಿನ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಈಗ ಮುಂದೆ ಮುಂದೆ ಬರುತ್ತಿದ್ದಾರೆ.

(ಶ್ರೀ ಡಿ. ಎಸ್. ಗೌಡ)

ಇದರಿಂದ ಹೆಚ್ಚಿನ ಅನುಕೂಲತೆ ಇದೆಯೆಂಬುದು ನಮ್ಮೆಲ್ಲರಿಗೂ ತಿಳಿದ ವಿಷಯವಾಗಿದೆ. ಈ ರಾಜ್ಯದಲ್ಲಿ ಆದಷ್ಟು ಶೀಘ್ರವಾಗಿ ವ್ಯವಸಾಯೋತ್ಪತ್ತಿಗೆ ಕೊಡುವ ಸಾಲವನ್ನು ಒಂದು ಸಂಸ್ಥೆ ಮುಖಾಂತರ ರೈತರಿಗೆ ದೊರಕುವಂತೆ ಆಗಬೇಕು. ಇವತ್ತು ನಾನಾ ರೂಪದಲ್ಲಿ ರೈತರಿಗೆ ಸಾಲದ ಸೌಲಭ್ಯಗಳನ್ನು ಕೊಡುವುದಕ್ಕೆ ಸರ್ಕಾರ ಮುಂದೆ ಬಂದಿದೆ. ಇದು ಬಹಳ ಸಂತೋಷಕರವಾದ ಸಂಗತಿ. ಆದರೆ ರೈತ ತಾಲ್ಲೂಕು ಕಚೇರಿಯಿಂದ ಜಿಲ್ಲೆಗೆ ಮತ್ತು ವಿಧಾನಸೌಧಕ್ಕೆ ತಿರುಗಾಡುವ ಮುಖಾಂತರ ಅವನಿಗೆ ಬೇಕಾದಂಥ ಟ್ರ್ಯಾಕ್ಟರ್ಸ್, ಫರ್ಟಿಲೈಜರ್ಸ್, ಉತ್ತಮವಾದ ಬೀಜ ಹಾಗೂ ರಾಸಾಯನಿಕ ಗೊಬ್ಬರಗಳನ್ನು ಜಾಗ್ರತೆಯಾಗಿ ಒದಗಿಸಿಕೊಂಡು ಅತಿ ವೇಗದಲ್ಲಿ ವ್ಯವಸಾಯವನ್ನು ಪ್ರಗತಿದಾಯಕವಾಗಿ ಸಾಧಿಸಬೇಕೆಂಬ ಗುರಿ ಇಟ್ಟುಕೊಂಡಿದ್ದಾನೆ. ಆದರೆ ಬಹುಶಃ ಈ ದೇಶದಲ್ಲಿ ಆ ಗುರಿಯನ್ನು ಮುಟ್ಟಲಾರೆವು ಎಂದು ನನಗನ್ನಿಸುತ್ತದೆ. ಇದಕ್ಕಾಗಿ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಕೆಲವು ಕಾಲದ ಹಿಂದೆ ಕೆಲವು ಅಮೇರಿಕನ್ ಅಗ್ರಿಕಲ್ಚರಲ್ ಯೂನಿವರ್ಸಿಟಿ ಮತ್ತು ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿಯವರು ಮತ್ತು ಮತ್ತೊಂದು ಕಡೆಯಿಂದ ಬಂದಂಥ ಬ್ಯಾಂಕ್ಸ್ ಎಕ್ಸ್‌ಪರ್ಟ್ಸ್ ಒಂದು ವಿಚಾರವನ್ನು ಹೇಳಿದರು. ಅಮೇರಿಕಾದಲ್ಲಿ, ಇಡೀ ರೈತನ ಒಟ್ಟು ಭೂಮಿ ಏನಿದೆ, ಆ ಭೂಮಿಯ ಒಟ್ಟು ಬೆಲೆ ಏನು ಇದೆಯೋ ಅದನ್ನು ಸರ್ಕಾರದಿಂದ ಸಾಲದ ರೂಪದಲ್ಲಿ ಪಡೆದಿದ್ದಾರೆ. ಅದಕ್ಕೆ ಎಷ್ಟೊಂದು ಕೊಡಬಹುದು ಎಂದು ತೀರ್ಮಾನಿಸಲು ಒಂದೊಂದು ಜಿಲ್ಲೆಯಲ್ಲಿಯೂ ಒಂದೊಂದು ಯೂನಿಟ್ ಮಾಡಿಕೊಂಡಿದ್ದಾರೆ. ಅದರಂತೆ ಬಹುಶಃ ನಮ್ಮ ತಾಲ್ಲೂಕು ಕೇಂದ್ರಗಳಲ್ಲಿಯೂ ಅಗ್ರಿಕಲ್ಚರಲ್ ಸೊಸೈಟೀಸ್ ಮತ್ತು ಬ್ಯಾಂಕ್ಸ್ ಸ್ಥಾಪನೆ ಮಾಡಬಹುದು. ಒಂದೂವರೆ ಎಕರೆಯಿಂದ ಸುಮಾರು 50–100 ಎಕರೆವರೆಗೆ ಇರುವ ಭೂಮಿ ಯಾರಲ್ಲಿ ಇದೆಯೋ ಆ ಲೆಕ್ಕವೆಲ್ಲಾ ನಮ್ಮ ವ್ಯವಸಾಯ ಇಲಾಖೆಯಲ್ಲಿರಬೇಕು. ಅವನಿಗೆ ಬೇಕಾದಂಥ ಬೀಜ, ಹಣ, ಇನ್ನೂ ತಾಂತ್ರಿಕ ಉಪಕರಣಗಳು, ಅವನು ಬೆಳೆದಿರತಕ್ಕ ಬೆಳೆಯೇನು, ಇವನ್ನು ನಾವು ಇಟ್ಟುಕೊಂಡು, ಅವನು ನಮ್ಮಲ್ಲಿ ಬಾರದೇ ಇರುವ ಹಾಗೆ ಮಾಡಿ, ಕಾಗದದ ಮುಖಾಂತರವೇ ಅವನಲ್ಲಿ ವ್ಯವಹಾರ ನಡೆಸಿ ಅವನಿಗೆ ಕೊಡಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸುವ ಮಟ್ಟಕ್ಕೆ ನಾವು ಪ್ರಯತ್ನ ಮಾಡಿದರೆ ಬಹುಶಃ ಈಗಿರತಕ್ಕಂಥ ಸ್ಥಿತಿಗಿಂತ ಇನ್ನೂ ಬಹುವಾಗಿ ಸುಧಾರಿಸಬಹುದು. ಇವತ್ತಿನ ದಿವಸ ನಮ್ಮ ಸರ್ಕಾರದವರು ಕೊಡುವ ಸಾಲ ಸೌಲಭ್ಯಗಳು ಕೇವಲ ಪ್ರಗತಿಪರವೆಂದೆನಿಸಿಕೊಂಡಿದ್ದರೂ, ಗೊತ್ತಿರತಕ್ಕ ಕೆಲವೇ ರೈತರಿಗೆ ಎಲ್ಲಾ ವಿಧವಾದ ಸೌಕರ್ಯಗಳು ಒದಗುತ್ತಿವೆ. ಇವತ್ತು ನಮ್ಮ ದೇಶದಲ್ಲಿ 100, 500, ಸಾವಿರ ಎಕರೆ ಹಿಡುವಳಿದಾರರು ಬಹಳ ಕಡಿಮೆ ಇದ್ದಾರೆ. ಸರ್ವೇ ಸಾಮಾನ್ಯವಾಗಿ 20 ಎಕರೆ ಹಿಡುವಳಿ ಭೂಮಿಗೆ ಅನುಕೂಲವಾಗುವ ಸಣ್ಣ ಟ್ರ್ಯಾಕ್ಟರುಗಳನ್ನು ಒದಗಿಸಬೇಕು. ನಮ್ಮ ಕೈಗಾರಿಕೆಯಲ್ಲಿ ಕೃಷಿ ಪ್ರಗತಿಗೆ ಬರಬೇಕೆಂಬ ನಮ್ಮ ಮಾತು ಮತ್ತು ಹೇಳಿಕೆಗಳು ಕೇವಲ ಕಾಗದದಲ್ಲಿ ಇರುವುದಾದರೆ ಅದರಿಂದೇನೂ ಪ್ರಯೋಜನವಿಲ್ಲ. ರೈತ ಮುಂದೆ ಒಳ್ಳೆ ಫಲ ಕಂಡುಕೊಳ್ಳಲು ಅನುಕೂಲವಾದ ಆಕರ್ಷಣೀಯವಾದ ಸಣ್ಣ ಉಪಕರಣಗಳು ಅಂದರೆ ಸಣ್ಣ ಟ್ರ್ಯಾಕ್ಟರುಗಳನ್ನು ಕಂಡುಹಿಡಿಯುವುದು ನಮ್ಮ ಕರ್ತವ್ಯ. ರಷ್ಯಾ ಮತ್ತು ಜಪಾನ್ ದೇಶಗಳಲ್ಲಿರುವಂತೆ ಅಂತಹ ನಮೂನೆಗಳನ್ನು ನಮ್ಮ ದೇಶದಲ್ಲಿಯೂ ಮಾಡಿದರೆ, ಅದಕ್ಕೋಸ್ಕರ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಹೆಚ್ಚಿನ ದುಡ್ಡನ್ನು ಒದಗಿಸಿದರೆ, ನಮ್ಮ ದೇಶದ ರೈತರಿಗೆ ಹೆಚ್ಚಿನ ಉಪಕಾರವಾಗಿ, ವ್ಯವಸಾಯ ಪ್ರಗತಿ ಮತ್ತು ಈ ದೇಶದ ಆರ್ಥಿಕ ಪ್ರಗತಿಯುಂಟಾಗುತ್ತದೆ. ಆದರೆ ಈ ದೇಶದಲ್ಲಿ ರಾಜ್ಯ ಸರ್ಕಾರ ಈ ಬಾಬಿಗೆ ಹೆಚ್ಚಿಗೆ ದುಡ್ಡನ್ನು ಒದಗಿಸಿಲ್ಲವೆಂದು ಹೇಳಬೇಕಾಗುತ್ತದೆ. ಈಗ ದೊರೆಯುವ ಟ್ರ್ಯಾಕ್ಟರುಗಳಿಂದ ನನ್ನಂಥ ದೊಡ್ಡ ರೈತರಿಗೆ ಅನುಕೂಲವಾಗುತ್ತದೆ. ಸಣ್ಣ ಹಿಡುವಳಿದಾರರಿಗೆ ಅದರಿಂದ ಅನುಕೂಲವಾಗುವುದಿಲ್ಲ. ಆದ್ದರಿಂದ ಆಧುನಿಕ ರೀತಿಯಲ್ಲಿ ವ್ಯವಸಾಯ ಪ್ರಗತಿ ಇನ್ನೂ ತೀವ್ರವಾಗಿ ಆಗುವಂತೆ ಯೋಚನೆ ಮಾಡಬೇಕು. ವ್ಯವಸಾಯ ಒಂದು ಶ್ರದ್ಧೆಯಿಂದ ಮುಂದುವರಿಯಬೇಕು. ಅದಕ್ಕೆ ತಕ್ಕ ಪ್ರಯತ್ನವನ್ನು ಸರ್ಕಾರದವರು ಮಾಡಬೇಕು.

ಇನ್ನು ಎಲೆಕ್ಟ್ರಿಸಿಟಿ ವಿಚಾರ. ಎಲೆಕ್ಟ್ರಿಸಿಟಿ ಡಿಮ್ಯಾಂಡ್ ಇಲ್ಲಿ ಇಲ್ಲದಿದ್ದರೂ ಅಗ್ರಿಕಲ್ಚರಲ್ ಮತ್ತು ವಿದ್ಯುಚ್ಛಕ್ತಿ ಇವೆರಡಕ್ಕೂ ಬಹಳ ಸಂಬಂಧವಿದೆ. ಇವತ್ತು ನಮ್ಮ ದೇಶದಲ್ಲಿ ಹೇರಳವಾದ ಎಲೆಕ್ಟ್ರಿಸಿಟಿ ಇದೆ. ಆದರೆ ರೈತ ಬಾವಿ ಅಗೆದು ರೆಡಿಯಾಗಿ ನಿಂತಿರುತ್ತಾನೆ. ಅವನಿಗೆ ಪಂಪುಸೆಟ್ಟು ಎಲೆಕ್ಟ್ರಿಸಿಟಿ ಮಂಜೂರು ಆಗಬೇಕಾದರೆ ಎರಡು ವರ್ಷಗಳಾದರೂ ಬೇಕು. ಕಾರಣ, ಕೇವಲ ಹಣದ ಅಭಾವ, ಕಂಬ ಇಲ್ಲ, ಕಂಬಿ ಇಲ್ಲವೆಂದು ಹೇಳುವುದು ಸರಿಯಾದ ಮಾತಲ್ಲ. ನಮಗೆ ತ್ವರಿತವಾಗಿ ಆರ್ಥಿಕ ಪ್ರಗತಿ ಆಗಬೇಕಾದರೆ ನಿಜವಾಗಿ ಇಂತಹ ನ್ಯೂನತೆಗಳು ಹೋಗಬೇಕು. ಅದು ಸರ್ಕಾರಕ್ಕೆ ಹೊಣೆಯಲ್ಲವೆಂದು ಹೇಳಬಾರದು. ರೈತರಿಗೆ ಬೇಕಾಗಿರತಕ್ಕ ಸೌಲಭ್ಯಗಳನ್ನು

ಕೊಟ್ಟರೆ, ರೈತ ಸಾಲವನ್ನು ಮರುಪಾವತಿ ಮಾಡುವಂಥ ಶಕ್ತಿ ಬರುತ್ತದೆ, ಮತ್ತು ಅವನು ವ್ಯವಸಾಯದಲ್ಲಿ ಮುಂದೆ ಮುಂದೆ ಹೋಗಬೇಕೆಂಬ ಮನಸ್ಸು ಹೊಂದುತ್ತಾನೆಂದು ನಾನು ಸರ್ಕಾರದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಸಣ್ಣ ನೀರಾವರಿ ಯೋಜನೆ. ಇದನ್ನು ಹೆಚ್ಚು ಉಪಯೋಗವಾಗುವ ರೀತಿಯಲ್ಲಿ ಮಾಡಬೇಕು. ಮಳೆಯ ಅಭಾವದಿಂದ ಬಹುತೇಕ ರೈತರು ಮಳೆಯನ್ನೇ ನಂಬಿಕೊಂಡು ವ್ಯವಸಾಯ ಪ್ರಗತಿಯಾಗದೇ ಇರುವುದಕ್ಕೆ ಕಾರಣವಾಗಿದೆ. ಹಿಂದೆ ತಿಳಿಸಿದಂತೆ, ರೈತರಿಗೆ ಅತಿ ಜರೂರಾಗಿ ಬಾವಿಗಳನ್ನು ತೋಡಿಸುವುದಕ್ಕೆ ಅನುಕೂಲ ಮಾಡುವುದು, ಅದಕ್ಕೆ ಬೇಕಾದಂಥ ವಿದ್ಯುಚ್ಛಕ್ತಿ ಒದಗಿಸುವುದು ಮತ್ತು ಅವಶ್ಯಕವಿರುವ ಕಡೆಗಳಲ್ಲಿ ಕೆರೆಗಳನ್ನು ಕಟ್ಟಿಸುವುದು, ಅನುಕೂಲವಿರುವ ಕಡೆಗಳಲ್ಲಿ ಸಣ್ಣ ಸಣ್ಣ ನದಿಗಳಿಗೆ ಅಣೆಕಟ್ಟನ್ನು ಕಟ್ಟಿಸುವ ಯೋಜನೆಗಳನ್ನು ಸರ್ಕಾರದವರು ಕೂಡಲೇ ಮಾಡಬೇಕೆಂದು ಅನೇಕ ಸಾರಿ ನಾವು ಇಲ್ಲಿ ಒತ್ತಾಯ ಮಾಡಿದ್ದೇವೆ. ದೇವನಹಳ್ಳಿ ಮತ್ತು ಹೊಸಕೋಟೆಯಲ್ಲಿ ದಕ್ಷಿಣ ಪಿನಾಕಿನಿ ಎಂಬ ನದಿ ಹರಿಯುತ್ತದೆ. ತನ್ಮೂಲಕ ವ್ಯವಸಾಯ ಪ್ರಗತಿಗೆ ಬಾವಿಗಳಲ್ಲಿ ಶಾಶ್ವತವಾಗಿ ನೀರು ನಿಂತು ರೈತರಿಗೆ ಅನುಕೂಲವಾಗುತ್ತದೆ. ಅಂಥಾದ್ದನ್ನು ಸರ್ಕಾರದವರು ಗಮನಿಸಬೇಕು. ಇನ್ನು ಕೃಷಿ ತೆರಿಗೆ ಮತ್ತು ರಾಸಾಯನಿಕ ಗೊಬ್ಬರದ ಮೇಲೆ ತೆರಿಗೆ ವಿಧಿಸುವ ಯೋಜನೆ ಏನಿದೆಯೋ ಅದನ್ನು ಆ ವ್ಯವಸ್ಥೆಯನ್ನು ಕೂಡಲೇ ಬಿಡಬೇಕಾಗುತ್ತದೆ. ಏಕೆಂದರೆ, ವ್ಯವಸಾಯದಲ್ಲಿ ಅತ್ಯುನ್ನತವಾದ ಉತ್ಪತ್ತಿ ಇಲ್ಲ. ಲಾಭ ಕೊಡುವ ಕೈಗಾರಿಕೆಯ ಕ್ಷೇತ್ರಗಳಿಗೆ ನಾನಾ ರೀತಿಯಲ್ಲಿ ತೆರಿಗೆ ಹಾಕುವ ಹಾಗೆ ರೈತರಿಗೆ ಹಾಕಬಾರದು. ಮಳೆಯ ಅಭಾವದಿಂದ, ಮಳೆಯ ದವಡೆಗೆ ಸಿಕ್ಕಿರುವ ರೈತರಿಗೆ ವ್ಯವಸಾಯ ತೆರಿಗೆ ಹಾಕುವುದನ್ನು ಯೋಚಿಸುವುದಾದರೆ, ಅವರು ವ್ಯವಸಾಯ ಕ್ಷೇತ್ರ ಬಿಡುವುದಕ್ಕೆ ಸಿದ್ಧನಾಗುತ್ತಾನೆ. ಇದರಿಂದ ದೇಶದಲ್ಲಿ ವ್ಯವಸಾಯ ಪ್ರಗತಿಯೇ ಇಲ್ಲದೇ ಇರುವುದಕ್ಕೆ ಕಾರಣವಾಗುತ್ತದೆ. ಈ ದೇಶದಲ್ಲಿ ವ್ಯವಸಾಯ ತೆರಿಗೆ ರೈತನ ಮೇಲೆ ಕೂಡದು ಎಂಬುದಾಗಿ ನಾನು ನಮ್ರವಾಗಿ ವಿನಂತಿಸುತ್ತೇನೆ, ಮತ್ತು ಈ ರಾಸಾಯನಿಕ ಗೊಬ್ಬರಗಳ ಮೇಲೆ ತೆರಿಗೆಯನ್ನು ಹಾಕಬಾರದು ಎಂದು ಕೇಳಿಕೊಳ್ಳುತ್ತೇನೆ. ಇವತ್ತು ರೈತನಿಗೆ ಬೇಕಾಗಿರತಕ್ಕಂತಹ ಸಾಲ ಸೌಲಭ್ಯಗಳ ಜೊತೆಗೆ ಸಂಶೋಧನೆಯ ಮುಖಾಂತರ ಉತ್ತಮ ಬೀಜಗಳು ಸಿಗುವಂತೆ ಮಾಡಬೇಕು. ತೋಟಗಾರಿಕೆ ಇಲಾಖೆಯಲ್ಲಿ ಇವತ್ತು ಹೆಚ್ಚು ದಕ್ಷತೆಯಿಂದ ಕೆಲಸಮಾಡುತ್ತಿದ್ದಾರೆ. ಆದರೆ ಅವರಿಗೆ ಒದಗಿಸಿರತಕ್ಕ ಹಣ ಏನೂ ಸಾಲದು. ತೋಟಗಾರಿಕೆಯ ಇಲಾಖೆಯ ಮುಖಾಂತರ ಹಣ್ಣು ಮತ್ತು ತರಕಾರಿ ಬೆಳೆಯುವ ಕೇಂದ್ರಗಳನ್ನು ತಾಲ್ಲೂಕು ಕೇಂದ್ರಗಳಲ್ಲಿಯೂ ಮಾಡಿ ಸಾಮಾನ್ಯ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

3–30 P.M.

ಅದೇ ರೀತಿ ಇವತ್ತು ನಮ್ಮಲ್ಲಿ 100 ವರ್ಷಗಳ ಹಿಂದೆ ಏನು ಕಾಡು ಇತ್ತು, ಅದು ಇಲ್ಲ. ಆದ್ದರಿಂದ ಅರಣ್ಯ ಇಲಾಖೆಯವರು ದಟ್ಟವಾದ ಕಾಡುಗಳನ್ನು ಬೆಳೆಸಲು ಹೆಚ್ಚು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಇಂದು ನಮ್ಮಲ್ಲಿ ಉತ್ತಮವಾದ ರಾಸುಗಳನ್ನು ಬೆಳೆಸಬೇಕು, ಮತ್ತು ಅದನ್ನು ಪ್ರತಿಯೊಬ್ಬ ರೈತನಿಗೂ ಸಿಗುವಂತೆ ಮಾಡಬೇಕು. ಅದೇ ರೀತಿ ಜಿಲ್ಲಾ ಕೇಂದ್ರಗಳಲ್ಲಿ ಹಾಲಿನ ಕೇಂದ್ರಗಳನ್ನು ಸ್ಥಾಪಿಸಿ, ರೈತನು ಅಲ್ಲಿಗೆ ತನ್ನ ಹಾಲನ್ನು ಒದಗಿಸಿ ಕೊಡುವಂತೆ ಆಗಬೇಕು, ಮತ್ತು ಅಂಥ ಹಾಲಿನಿಂದ ಉತ್ತಮವಾದ ಪದಾರ್ಥವನ್ನು ತಯಾರು ಮಾಡುವಂತೆ ಆಗಲಿ ಮತ್ತು ಅದರಿಂದ ಹೆಚ್ಚಿನ ಅನುಕೂಲ ಜನರಿಗೆ ಆಗಲಿ ಎಂದು ಹಾರೈಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Mr. CHAIRMAN.—The lists submitted by both the Whips, are very lengthy. I would therefore request the hon. Members, who participate in the dabate, to complete their speeches in about five or six minutes. I now call upon Sri N. A. Channe Gowda.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಸಭಾಧ್ಯಕ್ಷರೇ, ರಾಜ್ಯದ ಕೃಷಿ ಮಂತ್ರಿಯವರು ಮಂಡಿಸಿರತಕ್ಕಂತಹ ಬೇಡಿಕೆಯನ್ನು ವಿರೋಧಿಸುತ್ತಾ ಕೆಲವು ಅಂಕಿಅಂಶಗಳನ್ನು ತಮ್ಮ ಮುಂದಿಡಬಯಸುತ್ತೇನೆ. 1956ರಲ್ಲಿ 100 ಬೇಸ್ ಇದ್ದ ಇಂಡೆಕ್ಸ್ ಸಂಖ್ಯೆಗಳು. 1963–64 ರಲ್ಲಿ ಆಹಾರಧಾನ್ಯಗಳು 142.7 ಇದ್ದರೆ, 65–66 ರಲ್ಲಿ 104.3 ಆಗಿದೆ. ರಾಗಿ 63–64 ರಲ್ಲಿ 168.5 ಇದ್ದರೆ, 65–66 ರಲ್ಲಿ 113.4 ಆಗಿದೆ. ಜೋಳ 63–64 ರಲ್ಲಿ 141.5 ಇದ್ದರೆ, 65–66 ರಲ್ಲಿ 113.3 ಆಗಿದೆ. ನಾನ್ ಫುಡ್ ಗ್ರೈನ್ಸ್ 63–64 ರಲ್ಲಿ 120.5 ಇದ್ದದ್ದು

(ಶ್ರೀ ಎಚ್. ಎ. ಚನ್ನೇಗೌಡ)

65–66 ರಲ್ಲಿ 107.3 ಆಗಿದೆ. ಕಬ್ಬು 190.6 ಇದ್ದದ್ದು 145.1 ಆಗಿದೆ. ಇದಕ್ಕೆಲ್ಲಾ ನಮ್ಮ ಕೃಷಿ ಮಂತ್ರಿಯವರು ಒಂದೇ ಒಂದು ಉತ್ತರವನ್ನು ಹೇಳುತ್ತಿದ್ದಾರೆ. ಮಳೆಬಾರದೆ ನಷ್ಟ ಆಗಿರುವುದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇವರು ಇಲಾಖೆಯಲ್ಲಿ ಹೆಚ್ಚು ಅಧಿಕಾರಿಗಳನ್ನು ನೇಮಿಸುವುದರಲ್ಲಿ ತಲ್ಲೀನರಾಗಿದ್ದಾರೆ ವಿನಹ ಕಾರ್ಯವನ್ನು ದಕ್ಷತೆಯಿಂದ ನಡೆಸುತ್ತಾ ಇಲ್ಲ. ಈ ವ್ಯವಸಾಯ ಇಲಾಖೆಯವರು ಉದಾಸೀನತೆಯೂ ಇದಕ್ಕೆ ಕಾರಣವಾಗಿದೆ. ಇಲ್ಲಿ ಮುಖ್ಯಾಧಿಕಾರಿಗಳು ತಮ್ಮ ಸ್ವಾರ್ಥತೆಯನ್ನು ಸಾಧನೆ ಮಾಡಿ ಕೊಳ್ಳುವುದಕ್ಕೆ ಕೆಲಸವನ್ನು ಮಾಡುತ್ತಿದ್ದಾರೆ. ಉದಾಹರಣೆಗೆ ಮೊನ್ನೆ ನಾನು ಕೇಳಿದ ಒಂದು ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಕ್ರಿಮಿನಾಶಕಗಳನ್ನು ಸಿಂಪಡಿಸುವುದರಲ್ಲಿ ಹೇಗೆ ಅಧಿಕಾರಿಗಳ ಕೈವಾಡವಿದೆಯೆಂಬುದನ್ನು ಪ್ರಶ್ನೆಯ ಮೂಲಕ ಹೊರಪಡಿಸಬೇಕೆಂದು ಪ್ರಯತ್ನ ಮಾಡಿದೆ. ನಮ್ಮ ರಾಜ್ಯದ ಪ್ರತಿನಿಧಿ ಕೇಂದ್ರ ರಾಜ್ಯ ಮಂತ್ರಿಯವರ ಮಗ ಒಬ್ಬ ಕೇಂದ್ರ ಪಾರ್ಲಿಮೆಂಟಿನ ಸದಸ್ಯರ ತಮ್ಮ, ಮತ್ತು ಒಬ್ಬ ಸ್ಟೇಟ್ ಲೆವೆಲ್ ಆಫೀಸರ್, ಇವರು ಎಲ್ಲಾ ಒಂದು ವ್ಯಾಪಾರ ಸಂಸ್ಥೆ ಪ್ರಾರಂಭ ಮಾಡಿದ್ದಾರೆ—ಕ್ರಿಮಿನಾಶಕ ವಸ್ತುಗಳನ್ನು ಒದಗಿಸುವುದಕ್ಕೆ. ಸುಮಾರು 75 ಪರ್‌ಸೆಂಟ್ ಎಲ್ಲಾ ಈ ಸಂಸ್ಥೆಯಿಂದಲೇ ಕೊಂಡುಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ, ಈ ಸ್ಟೇಟ್ ಲೆವೆಲ್ ಅಧಿಕಾರಿ ವೈಯಕ್ತಿಕವಾದ ಆದೇಶಗಳನ್ನು ಕೊಡುತ್ತಿದ್ದಾರೆ. ಸಿಂಪಡಿಸುವ ಔಷಧಿಯಾದರೂ ಔಟ್ ಡೇಟೆಡ್ ಆದವು. ಇಂಥವುಗಳನ್ನು ಸಿಂಪಡಿಸಿ ಬೆಳೆಯಾದರೂ ಏನು ? ರೈತರಿಗೆ ಇದರಿಂದ ಉಪಯೋಗವಾದರೂ ಏನು ? ರೈತರಿಗೆ ಉಪಯೋಗವಾಗುವಂತಹ ಮಾರ್ಗಗಳನ್ನು ಈ ಇಲಾಖೆಯವರು ಅನುಸರಿಸುತ್ತಾ ಇಲ್ಲ. ನಾನು ವೈಯಕ್ತಿಕವಾಗಿ ದೂಷಿಸುತ್ತಾ ಇಲ್ಲ. ಇನ್ನು ಇಲೆಕ್ಟ್ರಿಕ್ ಇಲಾಖೆಯವರು ಪವರ್ ಸಪ್ಲೈ ಮಾಡುತ್ತಿರುವ ವಿಚಾರದಲ್ಲಿ ಒಂದು ತಾತ್ಸಾರ ಮನೋಭಾವನೆಯಿಂದ ಮಾಡುತ್ತಿದ್ದಾರೆ. ಇರಿಗೇಶನ್ ಪೊಟೆನ್‌ಶಿಯಲ್ ಉಪಯೋಗಿಸಿಕೊಳ್ಳುವುದಕ್ಕೆ ಸಾಕಾದಷ್ಟು ಮುತುವರ್ಜಿ ವಹಿಸುತ್ತಾ ಇಲ್ಲ. ಇಲಾಖೆಯ ದೊಡ್ಡ ದೊಡ್ಡ ಅಧಿಕಾರಿಗಳು ಹಾರ್ಟಿಕಲ್ಚರ್, ಅಗ್ರಿಕಲ್ಚರ್ ಇಲಾಖೆಗಳನ್ನು ಒಂದುಗೂಡಿಸಿ ಎಂದು ಕಚ್ಚಾಡುವುದನ್ನು ಬಿಟ್ಟು, ತಮ್ಮ ತಮ್ಮ ಕರ್ತವ್ಯ ಮಾಡಿ ರೈತರಿಗೆ ಮಾರ್ಗ ದರ್ಶನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರಾಜ್ಯ ಸರ್ಕಾರದವರ ಹೆಚ್ಚಿನ ಪಾತ್ರವೂ ಇದರಲ್ಲಿದೆ. ಇವತ್ತು ರಾಜ್ಯಸರ್ಕಾರದವರು ಈ ಕೃಷಿಯನ್ನು ಒಂದು "ಸಿಂಡ್ರೆಲ್ಲಾ" ಆಗಿ ಮಾಡಿದ್ದಾರೆ. ಯಾವ ತೀರ್ಮಾನವನ್ನು ಶೀಘ್ರವಾಗಿ ತೆಗೆದುಕೊಳ್ಳುವ ಹಾಗೆ ಇಲ್ಲ.

ಇನ್ನು ಫರ್ಟಿಲೈಜರ್ಸ್ ಬೆಲೆ ತೆಗೆದುಕೊಳ್ಳಿ ಈ ವಿಚಾರದಲ್ಲಿ ನಾನು ಏನು ಮಾಡುವುದಕ್ಕಾಗುತ್ತದೆ? ಮೊರಾರ್ಜಿದೇಸಾಯಿಯವರು ಹೇಳಿದ್ದಾರೆ ಎಂದು ಹೇಳುತ್ತಾರೆ. ರಾಜ್ಯಸರ್ಕಾರದವರು ಕೇಂದ್ರಸರ್ಕಾರಕ್ಕೆ ಒತ್ತಾಯ ಮಾಡಿ, ಪ್ರಭಾವನ್ನು ಬೀರಿ, ಅಗ್ರಿಕಲ್ಚರಲ್ಲಿ ವೆಲ್ತ್ ಟಾಕ್ಸ್ ಹಾಕಿದರೆ ಫರ್ಟಿಲೈಜರ್ ಬೆಲೆ ಹೆಚ್ಚಿಸಿದರೆ, ಕೃಷಿ ಕ್ಷೀಣವಾಗುತ್ತದೆ, ಅದನ್ನು ಹಾಕಬಾರದು ಎಂದು ಹೇಳಬೇಕು. ಫರ್ಟಿಲೈಸರ್ಸ್ ಮೇಲೆ 10 ಪರಸೆಂಟ್ ಟ್ಯಾಕ್ಸ್ ಹಾಕಿದರೆ, ಉಪಯೋಗಿಸುವುದು ಕಡಮೆ ಯಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ರೈತನಿಗೆ ಬರತಕ್ಕ ನಿವ್ವಳ ಲಾಭ ಕಡಮೆಯಾಗುತ್ತದೆ. ಮೊರಾರ್ಜಿಯವರು ಹೇಳುತ್ತಾರೆಯೇ ವಿನಾ ಫರ್ಟಿಲೈಸರನ್ನು ಕೊಂಡುಕೊಳ್ಳುವುದಿಲ್ಲ. ಈಗ ಕಬ್ಬು ಬೆಳೆಯುವವರಿಗೆ ಕೂಡ ಒಂದು ತೊಂದರೆಯಾಗಿದೆ. ಸಕ್ಕರೆ ಮೇಲೆ 23 ಪರ್‌ಸೆಂಟ್ ಎಕ್ಸೈಸ್ ಡ್ಯೂಟಿ ಹಾಕಿದ್ದಾರೆ. ಒಂದು ಕ್ವಿಂಟಾಲಿಗೆ ಸುಮಾರು 80—90 ರೂಪಾಯಿ ಎಕ್ಸೈಸ್ ಡ್ಯೂಟಿ ಬೀಳುತ್ತದೆ. ರಾಜ್ಯಸರ್ಕಾರದವರು ಇದಕ್ಕೆ, ಕೇಂದ್ರ ಸರ್ಕಾರದವರೊಡನೆ ಹೋರಾಟ ಮಾಡಿ ಈ ರೀತಿ ರಿಟ್ರೋಗ್ರೇಡ್ ಸ್ಟೆಪ್ಸ್ ತೆಗೆದುಕೊಳ್ಳಬಾರದು ಎಂದು ಒತ್ತಾಯ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ವ್ಯವಸಾಯವನ್ನು ಉದ್ಧಾರಮಾಡಬೇಕಾದರೆ, ಈ ಇಲಾಖೆಯಿಂದ ಖಂಡಿತವಾಗಿಯೂ ಸಾಧ್ಯವಿಲ್ಲವೆಂದು ನನ್ನ ಅಭಿಮತ. ಅದಕ್ಕೆ ಒಂದು ಅಗ್ರಿಕಲ್ಚರಲ್ ಪ್ರೊಡಕ್ಷನ್ ಬೋರ್ಡು ಮಾಡಿ, ಅದು ಇನ್‌ಪುಟ್ಸ್, ಪವರ್ ಸಪ್ಲೈ, ಮೈನರ್ ಇರಿಗೇಶನ್. ಕೋ-ಆಪರೇಟಿವ್ ಸೊಸೈಟೀಸ್, ಎಲ್ಲ ಕಾರ್ಯವನ್ನು ವಹಿಸಿಕೊಳ್ಳಬೇಕು. ಹಾಗೆ ಮಾಡಿದರೆ, ಈಗ ಸದ್ಯಸದಲ್ಲಿರುವಂತಹ ಅವಾಂತರವೆಲ್ಲಾ ತಪ್ಪುತ್ತದೆ. ಈಗ ತಹಸೀಲ್ದಾರವರು ಲೋನ್ ಸ್ಯಾಂಕ್ಷನ್ ಮಾಡಿದರೆ, ಸೊಸೈಟಿಯವರು ಇಂಥಿಂಥವರಿಂದಲೇ ಪಂಪ್‌ಸೆಟ್ಟುಗಳನ್ನು ತೆಗೆದುಕೊಳ್ಳಬೇಕೆಂದು ಹೇಳುವುದರಿಂದ ಅದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ವ್ಯವಸಾಯ ಇಲಾಖೆ, ಮತ್ತು ಸಹಕಾರ ಇಲಾಖೆ, ಮತ್ತು ಇತರ ಇಲಾಖೆಗಳಿಗೂ ಹೊಂದಾಣಿಕೆ ಬಹಳ ಕಡಿಮೆ ಇದೆ. ಇದನ್ನು ಸಾಧಿಸುವುದಕ್ಕೆ ಅಗ್ರಿಕಲ್ಚರಲ್ ಪ್ರೊಡಕ್ಷನ್ ಬೋರ್ಡು ಮಾಡಿದರೆ, ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಅದೇ

ರೀತಿ ಅಗ್ರಿಕಲ್ಚರಲ್ ಎಜುಕೇಶನ್ ಬಗ್ಗೆಯೂ ಹೆಚ್ಚು ಅವಕಾಶ ಮಾಡಿಕೊಡಬೇಕು. ನಮ್ಮ ರಾಜ್ಯದಲ್ಲಿ ಇಂಜಿನಿಯರಿಂಗ್ ಡಿಪ್ಲೊಮಾ ಹೋಲ್ಡರ್ಸ್ ಬಹಳ ಜಾಸ್ತಿಯಾಗಿದ್ದಾರೆ. ಕೆಲವು ಇಂಜಿನಿಯರಿಂಗ್ ಪಾಲಿಟೆಕ್ನಿಗಳನ್ನು ಅಗ್ರಿಕಲ್ಚರಲ್ ಪಾಲಿಟೆಕ್ನಿಕ್ ಆಗಿ ಡೈವರ್ಸಿಫೈ ಮಾಡಿದರೆ ಕೃಷಿ ವಿದ್ಯಾಭ್ಯಾಸ ಹೆಚ್ಚಾಗುತ್ತದೆ. ಇವತ್ತು ನಮ್ಮ ದೇಶದ ದುರಾದೃಷ್ಟವೋ ಏನೋ ಎಂಬಂತೆ, ಮನೆಯಲ್ಲಿ ಹುಟ್ಟಿದವರೆಲ್ಲಾ ರೈತರೇ ಆಗಿದ್ದಾರೆಂಬ ಭಾವನೆ ಇದೆ. ಅವರಿಗೆ ಯಾವ ವಿಧವಾದಂತಹ ಟ್ರೈನಿಂಗೂ ಬೇಕಾಗಿಲ್ಲವೆಂಬ ಭಾವನೆ ಬಂದಿದೆ. ಅಮೇರಿಕಾದಲ್ಲಿ 100 ವರ್ಷಗಳ ಹಿಂದೆ 100ಕ್ಕೆ 70 ಮಂದಿ ವ್ಯವಸಾಯದಲ್ಲಿ ನಿರತರಾಗಿದ್ದರು. ಈಗ ಕೇವಲ 7 ಮಂದಿ ನಿರತರಾಗಿದ್ದಾರೆ. ಇಂಡಿಯಾ ದೇಶದಲ್ಲ ಈಗ 70 ಮಂದಿ ಇದ್ದಾರೆ. ಮೈಸೂರು ರಾಜ್ಯದಲ್ಲಿ 74 ಪರ್‌ಸೆಂಟ್ ವ್ಯವಸಾಯದಲ್ಲಿದ್ದಾರೆ. ವ್ಯವಸಾಯಗಾರನ ವಾರ್ಷಿಕ ವರಮಾನ ಕೇವಲ 1:7 ರೂಪಾಯಿ ಮಾತ್ರ. ನಮ್ಮ ನಾಯಕರು ವಿದ್ಯಾವಂತರನ್ನು, "ನೀವು ಹಳ್ಳಿಗೆ ಹೋಗಿ ವ್ಯವಸಾಯ ಮಾಡಿ" ಎಂದು ಹೇಳುತ್ತಿದ್ದಾರೆ. ಅವರಿಗೆ ವ್ಯವಸಾಯದ ರೀತಿನೀತಿಗಳು ಗೊತ್ತಿದೆಯೇ, ಎಂಬುದನ್ನು ಯೋಚನೆ ಮಾಡುವುದಿಲ್ಲ. ವಿದ್ಯಾವಂತರಿಗೆ ಕೆಲಸಸಿಕ್ಕದಿದ್ದರೆ ಅವರು ಹಳ್ಳಿಗೆ ಹೋಗಿ ಅಲ್ಲಿರತಕ್ಕ ನಿರುದ್ಯೋಗಿಗಳ ಜೊತೆಗೆ ಇವರೂ ಸೇರಿಕೊಂಡು ನಿರುದ್ಯೋಗ ಸಮಸ್ಯೆ ಇನ್ನೂ ಉಲ್ಬಣ ಮಾಡುತ್ತಾರೆ. ಆದ್ದರಿಂದ ಹೆಚ್ಚು ಹೆಚ್ಚು ಅಗ್ರಿಕಲ್ಚರಲ್ ಶಾಲೆಗಳನ್ನು ತೆಗೆದು ರೈತರ ಮಕ್ಕಳಿಗೆ ಹೆಚ್ಚಿನ ಕೃಷಿ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಸರ್ಕಾರದವರು ಗಮನಕೊಡಬೇಕು. ಸಾಮಾಜಿಕ ಚಟುವಟಿಕೆಗಳ ಬಗ್ಗೆ ಕೂಡ ಸರ್ಕಾರದವರು ಗಮನಕೊಡಬೇಕು. ಹಳ್ಳಿಗಳಲ್ಲಿ ನೂರಾರು ವ್ಯವಸಾಯ ಕೂಲಿಗಾರರು ತಾವು ಸಂಪಾದನೆ ಮಾಡಿದಂತಹ ಹಣವನ್ನು ತಮ್ಮ ಮನೆಯ ಮೇಲ್ಮೆಗೆ ಉಪಯೋಗಿಸುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಹಳ್ಳಿ ಹಳ್ಳಿಗಳಿಗೂ ಹೋಟೆಲುಗಳು ಬಂದಿವೆ. ಕ್ಲಬ್ಬುಗಳನ್ನು ನಡೆಸುವುದಕ್ಕೆ ಸರ್ಕಾರದವರು ಲೈಸೆನ್ಸ್ ಕೊಟ್ಟು ಎಷ್ಟೋ ಅನಾಹುತಗಳಾಗುತ್ತಿವೆ ಆದ್ದರಿಂದ ಹಳ್ಳಿಗಳಲ್ಲಿ ಕ್ಲಬ್ಬುಗಳನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರದವರು ಲೈಸೆನ್ಸ್ ಕೊಡಬಾರದು. ಸಣ್ಣ ಸಣ್ಣ ಪಟ್ಟಣಗಳಲ್ಲಿ ಕೂಡ ಕ್ಲಬ್ಬುಗಳನ್ನು ನಡೆಸಿ ಅಲ್ಲಿ ಅನೇಕ ತರಹ ಜೂಜುಗಾರಿಕೆಯನ್ನು ಪ್ರಾರಂಭ ಮಾಡಿದ್ದಾರೆ. ಇಂಥಾ ಅಪಾಯಕಾರಿ ಪರಿಸ್ಥಿತಿಯ ಕಡೆ ಸರ್ಕಾರ ಹೆಚ್ಚು ಗಮನ ಕೊಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ನಮ್ಮ ರಾಜ್ಯದಲ್ಲಿ ಹೆಚ್ಚು ಡೈರಿ ಫಾರಂಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಗಮನ ಕೊಡಬೇಕು. ಶ್ರೀಮಾನ್ ರಾಚಯ್ಯನವರು ಕೇಂದ್ರದ ಮಂತ್ರಿಗಳ ಹತ್ತಿರ ತಮ್ಮ ವೈಯಕ್ತಿಕವಾದ ಪ್ರಭಾವವನ್ನು ಬೀರಿ ನಮ್ಮ ರಾಜ್ಯಕ್ಕೆ ಡೈರಿ ಫಾರ್ಮಿಂಗ್ ಸೆಂಟರುಗಳನ್ನು ಮತ್ತು ಸೆಂಟ್ರಲ್ ಡೈರಿ ಫಾರ್ಮಿಂಗ್ ರಿಸರ್ಚ್ ಸ್ಟೇಷನ್‌ಗಳನ್ನು ಪ್ರಾರಂಭಿಸುವುದಕ್ಕೂ ಪ್ರಯತ್ನ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಮತ್ತೊಂದು ಮುಖ್ಯವಾದ ಅಂಶವೇನೆಂದರೆ ನಮ್ಮ ರಾಜ್ಯದಲ್ಲಿ ಹೈಡ್ರೋಗ್ರಾಫಿಕ್ ಸರ್ವೆಯನ್ನು ಮಾಡಿಸಿ ಸರ್ಕಾರದವರೇ ಬೋರ್‌ವೆಲ್‌ಗಳನ್ನು ತೆಗೆಸಬೇಕು. ಮೈನರ್ ಇರಿಗೇಷನ್ನಿನಲ್ಲಿ ಸಾವಿರಾರು ಲಕ್ಷ ರೂಪಾಯಿಗಳನ್ನು ಸರ್ಕಾರದವರು ವೆಚ್ಚ ಮಾಡಿದ್ದಾರೆ. ಆದರೂ ಕೂಡ ಮಳೆ ಬಂದರೆ ಮೈನರ್ ಇರಿಗೇಷನ್ ಉಪಯೋಗವಾಗುತ್ತದೆ. ಇಲ್ಲದಿದ್ದರೆ ಆಕಾಶದ ಕಡೆ ಕೈ ತೋರಿಸಬೇಕಾಗುತ್ತದೆ. ಹೈಡ್ರೋಗ್ರಾಫಿಕಲ್ ಸರ್ವೆ ಮಾಡಿಸಿ, ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿಯೂ ಬೋರ್ ವೆಲ್‌ಗಳನ್ನು ತೆಗೆಸಿಕೊಟ್ಟು ರೈತರಿಗೆ ನೀರಾವರಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಡಬೇಕು. ಅದಕ್ಕೆ ತಗಲತಕ್ಕ ಖರ್ಚಿಗಾಗಿ ವಾಟರ್ ರೇಟ್ ಹಾಕಿ ಅದನ್ನು ರೈತರಿಂದ ವಸೂಲು ಮಾಡಿಕೊಳ್ಳಿ ಎಂದು ನಾನು ಹೇಳುತ್ತೇನೆ.

ಬೀದರ್ ಡಿಸ್ಟ್ರಿಕ್ಟಿನಲ್ಲಿ 40 ಬ್ಲಾಸ್ಟರಿಂಗ್ ಮೆಷನ್‌ಗಳು ಇವೆಯೆಂದು ನಾನು ಕೇಳಿದ್ದೇನೆ. ಈ ಉಪಕರಣಗಳನ್ನು ಹೇಗೆ ಉಪಯೋಗ ಮಾಡಬೇಕೆಂಬುದು ಅಗ್ರಿಕಲ್‌ಚರಲ್ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿನವರಿಗೆ ಗೊತ್ತೇ ಇಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗುತ್ತದೆ. ಈ ಕಡೆ ಸರ್ಕಾರದವರು ತೀವ್ರ ಗಮನಕೊಡಬೇಕು. ಪ್ರಚಾರಕ್ಕೆ ಸ್ವಲ್ಪ ಭಾಗ ಹಣವನ್ನು ಮೀಸಲಾಗಿಟ್ಟು ಬಾಕಿ ಹಣದಲ್ಲಿ ಎಲ್ಲಾ ಕಡೆಗಳಲ್ಲಿಯೂ ಸರ್ಕಾರದವರೇ ಬಾವಿ ತೇಗಿಸಿಕೊಟ್ಟು ರೈತರಿಗೆ ನೀರಾವರಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್‌ಟೆನ್‌ಸೀವ್ ಅಗ್ರಿಕಲ್‌ಚರಲ್ ಡೆವಲೆಪ್‌ಮೆಂಟ್ ಯೋಜನೆಯ ಪ್ರಕಾರ ಬೇಕಾದಷ್ಟು ಆಹಾರವನ್ನು ಉತ್ಪಾದನೆ ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಹೆಚ್ಚು ಹಣವನ್ನು ಸಿಬ್ಬಂದಿಗಾಗಿ ಖರ್ಚು ಮಾಡುತ್ತಾರೆ. ಈಗ ತಮಗೆ ಬೇಕಾದರೆ ಕೆಲವು ಅಂಕಿಅಂಶಗಳನ್ನು ಕೊಡುತ್ತೇನೆ. 1966 ನೇ ಇಸವಿ ಆಡಿಟ್ ರಿಪೋರ್ಟಿನಲ್ಲಿ ಈ ರೀತಿ ಹೇಳಿದ್ದಾರೆ. ಈ ಯೋಜನೆಗೆ ಎಸ್ಟಾಬ್ಲಿಷ್‌ಮೆಂಟ್‌ಗೋಸ್ಕರ 5,64,000 ರೂಪಾಯಿಗಳು ಖರ್ಚಾಗುತ್ತಾ ಇದ್ದದ್ದು 6 ಲಕ್ಷ 80 ಸಾವಿರ ರೂಪಾಯಿಗಳು ಖರ್ಚಾಗಿದೆ. ಒಂದು ಆನ್ಯುಯಲ್ ಡೆವಲಪ್‌ಮೆಂಟಲ್ ಎಕ್ಸ್‌ಪೆಂಡಿಚರ್‌ಗಾಗಿ

(ಶ್ರೀ ಎನ್. ಎ. ಚನ್ನೇಗೌಡ)

ಖರ್ಚಾಗಿರತಕ್ಕ 14 ಲಕ್ಷ 50 ಸಾವಿರ ರೂಪಾಯಿಗಳಲ್ಲಿ 5 ಲಕ್ಷ 5 ಸಾವಿರ ರೂಪಾಯಿಗಳು ಖರ್ಚಾಗಿದೆ, ಎಸ್ಟಾಬ್ಲಿಷ್‌ಮೆಂಟ್ ಮಾತ್ರ ಹೆಚ್ಚಾಯಿತು. ರೈತರಿಗೆ ಕೊಡಬೇಕಾದಂತಹ ಸಬ್ಸಿಡಿ, ಇಂಪ್ಲಿಮೆಂಟ್ಸ್ ಕೆಮಿಕಲ್ ಫರ್ಟಿಲೈಜರ್ಸ್ ಸಪ್ಲೈ ಇವುಗಳಿಗೆಲ್ಲಾ ಕಡಿಮೆ ಆಯಿತು. ರೈತ ಆಕರ್ಷಕ ಮಾರ್ಕೆಟ್ ಬೆಲೆಯಿಂದ ಹೆಚ್ಚು ಬೆಳೆಯುತ್ತಿದ್ದಾನೆಯೇ ವಿನಾ ವ್ಯವಸಾಯ ಇಲಾಖೆಯವರ ಪ್ರಯತ್ನದಿಂದ ಅಥವಾ ಪ್ರಚಾರದಿಂದ ಖಂಡಿತಾ ಅಲ್ಲ ಎಂದು ನಾನು ನಿರ್ವಿವಾದವಾಗಿ ಹೇಳುತ್ತೇನೆ. ತಮಗೆ ಮತ್ತೊಂದು ಅಂಕಿಅಂಶವನ್ನು ಕೊಡುತ್ತೇನೆ. ಈಗ ಹೈಬ್ರಿಡ್ ಧಾನ್ಯವನ್ನು ನಮ್ಮ ರಾಜ್ಯದಲ್ಲಿ ಜಾಸ್ತಿ ಬೆಳೆದಿದ್ದೇವೆಂದು ಹೇಳಿದ್ದಾರೆ. 1968-69ನೇ ಇಸವಿಯಲ್ಲಿ 2 ಲಕ್ಷ ಎಕರೆಯಲ್ಲಿ ಹೈಬ್ರಿಡ್ ಜೋಳವನ್ನು ಬೆಳೆಯಬೇಕೆಂಬ ಟಾರ್ಗೆಟ್ ಇತ್ತು. ಅದರಲ್ಲಿ 82,873 ಎಕರೆಯಲ್ಲಿ ಹೈಬ್ರಿಡ್ ಜೋಳವನ್ನು ಬೆಳೆದಿದ್ದಾರೆ ಇದು ಒಂದು ಅಚೀವ್‌ಮೆಂಟ್ ಆಗುತ್ತದೆಯೇ? ಇಷ್ಟು ಹೇಳಿ ಕಾಲಾವಕಾಶವಿಲ್ಲದ್ದರಿಂದ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಸಭಾಧ್ಯಕ್ಷರೇ ಇವೊತ್ತಿನ ದಿವಸ ನಮ್ಮ ಮುಂದೆ ಇರತಕ್ಕಂಥ ವ್ಯವಸಾಯ, ಪಶುಪಾಲನೆ ಮತ್ತು ಅರಣ್ಯ ಖಾತೆಗೆ ಸಂಬಂಧಪಟ್ಟ 20,19,49,000 ರೂಪಾಯಿಗಳ ಬೇಡಿಕೆಗಳನ್ನು ಸ್ವಾಗತಿಸುತ್ತಾ, ನಮ್ಮ ರಾಜ್ಯದಲ್ಲಿ, ಭಾರತ ದೇಶದಲ್ಲಿ 100ಕ್ಕೆ 75ರಿಂದ 80ರಷ್ಟು ವ್ಯವಸಾಯಗಾರರು ಇರತಕ್ಕ ಈ ರಾಷ್ಟ್ರದಲ್ಲಿ ವ್ಯವಸಾಯಗಾರರ ಹಿತರಕ್ಷಣೆಯ ಬಗ್ಗೆ ಸರ್ಕಾರ ಹೇಗೆ ಅನೇಕ ಇಲಾಖೆಗಳ ಮೂಲಕ ಪ್ರಗತಿಯನ್ನು ಸಾಧಿಸಿದೆ ಎನ್ನುವ ಬಗ್ಗೆ ಒಂದೆರಡು ವಿಷಯಗಳನ್ನು ನಾನು ಹೇಳಬಯಸುತ್ತೇನೆ. ಇವೊತ್ತಿನ ದಿವಸ ನನಗೆ ಕೊಟ್ಟಿರತಕ್ಕ ಕೆಲವೇ ನಿಮಿಷಗಳಲ್ಲಿ ಎಲ್ಲಾ ವಿಷಯಗಳನ್ನು ಹೇಳುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಮುಖ್ಯ ಮುಖ್ಯವಾದ ವಿಷಯಗಳನ್ನು ನಾನು ಹೇಳುತ್ತೇನೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ವ್ಯವಸಾಯಗಾರರಮೇಲೆ ಹಾಕತಕ್ಕಂಥ ಹೊಸ ಹೊಸ ತೆರಿಗೆಗಳ ವಿಷಯದಲ್ಲಿ ಹೇಳುವುದಾದರೆ ಕೇಂದ್ರ ಸರ್ಕಾರದವರು ಮೊನ್ನೆತಾನೆ ವ್ಯವಸಾಯಗಾರರಿಗೆ ಧಕ್ಕೆ ಬರತಕ್ಕಂಥ ರೀತಿಯಲ್ಲಿ ತೆರಿಗೆಯನ್ನು ವಿಧಿಸುವಂತಹ ಪ್ರಯತ್ನ ಮಾಡಿದ್ದಾರೆ. ಖಂಡಿತವಾಗಿಯೂ ನಾನು ಇದನ್ನು ವಿರೋಧ ಮಾಡುತ್ತೇನೆ. ಪಂಪು ಸೆಟ್ಟು ಗೊಬ್ಬರ ಇವುಗಳಿಗೆ ತೆರಿಗೆಯನ್ನು ವಿಧಿಸುವುದು ಮತ್ತು ವ್ಯವಸಾಯಗಾರರ ಮೇಲೆ ವೆಲ್ತ್ ಟ್ಯಾಕ್ಸ್ ಹಾಕುವುದನ್ನು ವಿರೋಧಿಸಿ ನಮ್ಮ ರಾಜ್ಯ ಸರ್ಕಾರದ ವ್ಯವಸಾಯ ಮಂತ್ರಿಗಳಾಗಲಿ, ಅಥವಾ ಮುಖ್ಯ ಮಂತ್ರಿಗಳಾಗಲೀ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಒಂದು ವೇಳೆ ಕೇಂದ್ರ ಸರ್ಕಾರಕ್ಕೆ ಆ ರೀತಿ ಪತ್ರವನ್ನು ಬರೆಯದೇ ಇದ್ದರೆ ಈಗಲಾದರೂ ಅನೇಕ ಮಾನ್ಯ ಸದಸ್ಯರು ಹೇಳಿದಹಾಗೆ ಆ ತೆರಿಗೆಯನ್ನು ರೈತರಮೇಲೆ ಹಾಕಕೂಡದು ಎಂದು ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಬರೆಯಬೇಕು ಎಂದು ನಾನು ಎಚ್ಚರಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ರೈತ ಅನೇಕ ಕಷ್ಟಗಳಲ್ಲಿ ತೊಳಲಾಡುತ್ತಿದ್ದಾನೆ. ಮುಖ್ಯವಾಗಿ ವ್ಯವಸಾಯದ ಉದ್ಯಮ ಕಷ್ಟವಾಗಿದೆ. ಹೀಗಿರುವಾಗ ಅವನಮೇಲೆ ಮತ್ತಷ್ಟು ತೆರಿಗೆಗಳನ್ನು ಹಾಕಿದರೆ ರೈತರಿಗೆ ತುಂಬಾ ತೊಂದರೆಯಾಗುತ್ತದೆ. ಅದರಿಂದ ಅವರು ಚೇತರಿಸಿಕೊಳ್ಳುವುದು ಕಷ್ಟವಾಗುತ್ತದೆ. ಇದು ಸರ್ವೇಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯ. ಇದರಿಂದ ಆಹಾರದ ಉತ್ಪತ್ತಿ ಕಡಿಮೆಯಾಗಿ ಆಹಾರದ ಅಭಾವ ಜಾಸ್ತಿಯಾಗುತ್ತದೆ. ಕಳೆದ 2-3 ವರ್ಷಗಳಿಂದ ಒಂದಲ್ಲ ಒಂದು ಭಾಗದಲ್ಲಿ ಬಹುತೇಕ ಈ ರಾಜ್ಯದಲ್ಲಿ ಮಳೆಯ ಅಭಾವದಿಂದ ಅಭಾವ ಪರಿಸ್ಥಿತಿ ಬಂದಿದೆ ಎಂಬುದು ದೇಶಕ್ಕೇ ಗೊತ್ತಿದೆ. ಸರ್ಕಾರಕ್ಕೂ ಗೊತ್ತಿದೆ. ಇದಕ್ಕಾಗಿ ಕೇಂದ್ರ ಸರ್ಕಾರದವರು 10 ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯ ಸರ್ಕಾರದವರಿಗೆ ಕೊಟ್ಟಿದ್ದಾರೆ ಇಂಥಾದ್ದರಲ್ಲಿ ರೈತರಮೇಲೆ ಗೊಬ್ಬರ ಮತ್ತು ಪಂಪುಸೆಟ್ಟುಗಳ ಮೇಲೆ ಕೇಂದ್ರ ಸರ್ಕಾರದವರು ತೆರಿಗೆಯನ್ನು ಹಾಕುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ ಇದರ ಜೊತೆಗೆ ವಿದ್ಯುಚ್ಛಕ್ತಿ ಇಲಾಖೆಯವರು, ವಿದ್ಯುಚ್ಛಕ್ತಿ ಮಂಡಲಿಯವರು ವಿದ್ಯುಚ್ಛಕ್ತಿ ದರಗಳನ್ನು ಜಾಸ್ತಿ ಮಾಡಿದ್ದಾರೆ. ವಿದ್ಯುಚ್ಛಕ್ತಿ ಮಂಡಲಿಯವರು ವಿದ್ಯುಚ್ಛಕ್ತಿಯನ್ನು ಬೇರೆ ರಾಜ್ಯಗಳಿಗೆ ಮಾರತಕ್ಕಂಥ ದರವನ್ನು ಹೋಲಿಸಿ ನೋಡಿದರೆ ನಮ್ಮ ರಾಜ್ಯದ ರೈತರಿಗೆ ಕೊಟ್ಟಿರತಕ್ಕ ವಿದ್ಯುಚ್ಛಕ್ತಿಯ ದರ ಹೆಚ್ಚು ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಖಂಡಿತವಾಗಿಯೂ ನಾನು ಇದನ್ನು ವಿರೋಧಿಸುತ್ತೇನೆ. ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರು ಇದನ್ನು ದಯವಿಟ್ಟು ಪುನರ್‌ವಿಮರ್ಶೆಮಾಡಬೇಕು. ಬೇರೆ ಬೇರೆ ರಾಜ್ಯಗಳಿಗೆ ಒಂದು ಯೂನಿಟ್ ವಿದ್ಯುಚ್ಛಕ್ತಿಗೆ 4-5 ನಯಾ ಪೈಸೆಗಳಂತೆ ವಿದ್ಯುಚ್ಛಕ್ತಿಯನ್ನು ಕೊಟ್ಟು ನಮ್ಮ ರಾಜ್ಯದವರಿಗೆ ಒಂದು ಯೂನಿಟ್ಟಿಗೆ

25—30 ಪೈಸೆಗಳಂತೆ ಚಾರ್ಜ್‌ಮಾಡುವುದಾದರೆ ವಿದ್ಯುಚ್ಛಕ್ತಿ ಮಂಡಲಿಯವರಿಗೆ ನಮ್ಮ ದೇಶದ ವ್ಯವಸಾಯಗಾರರು ಮಾಡಿರತಕ್ಕ ಅನ್ಯಾಯವೇನು ? ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರು ಪತ್ರಿಕೆಯಲ್ಲಿ ಕೊಟ್ಟಂಥ ಹೇಳಿಕೆಯಲ್ಲಿ ಮೈಸೂರು ರಾಜ್ಯದಲ್ಲಿ ವಿದ್ಯುತ್‌ದರ ಏನಿವೆ ಅದು ದಕ್ಷಿಣವಲಯ ರಾಜ್ಯಗಳ ದರಗಳಿಗಿಂತ ಕಡಿಮೆ ಇವೆ ಎಂದು ಹೇಳಿದ್ದಾರೆ. ವಿದ್ಯುಚ್ಛಕ್ತಿ ಮಂಡಲಿಯವರು ನಮ್ಮ ರಾಜ್ಯದ ವಿದ್ಯುಚ್ಛಕ್ತಿ ಉತ್ಪಾದನೆಯ ವಿಷಯದಲ್ಲಿ ನಮ್ಮ ರಾಜ್ಯದ ಜನತೆಗೆ ಮುಚ್ಚುಮರೆ ಮಾಡಿದ್ದಾರೆ ಇದರ ಬಗ್ಗೆ ಸರಿಯಾದಂತಹ ಅಂಕಿ ಅಂಶಗಳನ್ನು ತೋರಿಸುತ್ತ ಇಲ್ಲ ಎಂದು ಹೇಳಬೇಕಾಗಿದೆ. ಮತ್ತೊಂದು ಮುಖ್ಯವಾದ ವಿಷಯವೆಂದರೆ ರೈತರಿಗೆ ಸಾಲ ಕೊಡುವುದು, ಈ ಬಗ್ಗೆ ಹೇಳಬೇಕೆಂದರೆ, ಅಗ್ರಿಕಲ್ಚರ್ ರಿಫೈನಾನ್ಸ್ ಕಾರ್ಪೊರೇಷನ್, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್, ಸರ್ವಿಸ್ ಕೋಆಪರೇಟಿವ್ ಬ್ಯಾಂಕ್ ಮುಂತಾದವು ರೈತರಿಗೆ ಅಲ್ಪಕಾಲಾವಧಿಯ ಸಾಲ ಮತ್ತು ಮಧ್ಯಮಕಾಲಾವಧಿಯ ಸಾಲವನ್ನು ಕೊಡುತ್ತಿವೆ. ಈ ಬ್ಯಾಂಕ್‌ಗಳು ಕೊಡುತ್ತಿರುವ ಸಾಲಗಳು ನಿಜವಾಗಿಯೂ ಇವತ್ತಿನ ದಿವಸ ಸಾಮಾನ್ಯ ರೈತರಿಗೆ ಸಕಾಲದಲ್ಲಿ ಸಿಗುತ್ತಿಲ್ಲ. ಪ್ರಭಾವಶಾಲಿಗಳಾದವರಿಗೆ ಮಾತ್ರ ಸಿಗುತ್ತಿದೆ. ತಮ್ಮ ಶಕ್ತಿಸಾಮರ್ಥ್ಯವನ್ನು ಉಪಯೋಗಿಸಿಕೊಂಡು ಸಾಲವನ್ನು ಪಡೆಯುವವರು ಜಾಸ್ತಿಯಾಗುತ್ತಿದ್ದಾರೆ. ಈ ರೀತಿ ಸಾಲ ತೆಗೆದುಕೊಂಡವರು ಸಕಾಲದಲ್ಲಿ ಹಣವನ್ನು ವಾಪಸ್ ಕೊಡುತ್ತಿಲ್ಲವಾದ್ದರಿಂದ ಕೆಲವು ಬ್ಯಾಂಕ್‌ಗಳು ಮತ್ತು ಸೊಸೈಟಿಗಳು ಮುಚ್ಚುವ ಸ್ಥಿತಿಗೆ ಬಂದಿವೆ. ಆದಕಾರಣ ಈ ಬಗ್ಗೆ ಹೊಸದಾಗಿ ಒಂದು ಸುಧಾರಿತ ಕ್ರಮವನ್ನು ಜಾರಿಗೆ ತಂದು ಎಲ್ಲರಿಗೂ ಸಕಾಲದಲ್ಲಿ ಸಾಲ ಸಿಗುವಂತೆ ಏರ್ಪಾಡು ಮಾಡಬೇಕು. ಮತ್ತು ಸಾಲ ತೆಗೆದುಕೊಂಡವರು ಸಕಾಲದಲ್ಲಿ ವಾಪಸ್ ಕೊಡುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದೆಂದು ಸಂಬಂಧಪಟ್ಟ ಸಹಕಾರ ಇಲಾಖೆಗೆ ಸೂಚಿಸಬಯಸುತ್ತೇವೆ.

ಇನ್ನು ಗೊಬ್ಬರದ ಬಗ್ಗೆ ಹೇಳಬೇಕೆಂದರೆ ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಗೊಬ್ಬರದ ದಾಸ್ತಾನು ಇದೆ, ಕೋಟ್ಯಾಂತರ ರೂಪಾಯಿಗಳಷ್ಟು ಗೊಬ್ಬರ ನಮ್ಮಲ್ಲಿ ದಾಸ್ತಾನು ಇದೆ ಎಂಬುದಾಗಿ ಅನೇಕ ಮಾನ್ಯಸದಸ್ಯರುಗಳು ಇದುವರೆಗೆ ಹೇಳುತ್ತಿದ್ದರು. ಒಂದು ಕಾಲಕ್ಕೆ ಕೇಂದ್ರಸರ್ಕಾರದವರನ್ನು ಸಾಕಷ್ಟು ಗೊಬ್ಬರವನ್ನು ಒದಗಿಸಬೇಕೆಂದು ನಾವು ಕೇಳಬೇಕಾಗಿತ್ತು. ಆದರೆ ಈಗ ಸಾಕಷ್ಟು ಗೊಬ್ಬರ ಇದ್ದು ರೈತರಿಗೆ ಸಿಗುವಂತೆ ಸರ್ಕಾರದವರು ಏರ್ಪಾಡು ಮಾಡಿರುವುದು ಶ್ಲಾಘನೀಯವಾದುದು. ಆದರೆ ಗೊಬ್ಬರದ ಬೆಲೆ ಮಾತ್ರ ನಮ್ಮರಾಜ್ಯದಲ್ಲಿರುವಷ್ಟು ಬೇರೆ ಯಾವ ದೇಶದಲ್ಲಿಯೂ ಇಲ್ಲವೆಂದು ಘಂಟಾಘೋಷವಾಗಿ ಹೇಳಬಹುದು. ಇವತ್ತಿನ ದಿವಸ ಗೊಬ್ಬರವನ್ನು ಕೊಳ್ಳುವ ಶಕ್ತಿ ರೈತರಿಗೆ ಇಲ್ಲವಾಗಿದೆ. ಆದಕಾರಣ ಗೊಬ್ಬರದ ಬೆಲೆಯನ್ನು ಕಡಿಮೆ ಮಾಡಬೇಕೆಂದು ಕೇಂದ್ರಸರ್ಕಾರದವರನ್ನು ನಮ್ಮ ಸರ್ಕಾರದವರು ಕೇಳಿಕೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ವಿದ್ಯಾಭ್ಯಾಸ, ಕೈಗಾರಿಕೆ, ವ್ಯವಸಾಯ ಮುಂತಾದ ಪ್ರತಿಯೊಂದು ವಿಷಯದಲ್ಲಿಯೂ ಸಹ ಕೇಂದ್ರಸರ್ಕಾರದವರು ಹಸ್ತಕ್ಷೇಪ ಮಾಡುವುದು ಸರಿಯಲ್ಲ. ಈ ವಿಚಾರದಲ್ಲಿ ಈ ಸಭೆಯಲ್ಲಿ ಮಾನ್ಯ ಸದಸ್ಯರುಗಳು ಏನು ಅಭಿಪ್ರಾಯ ಪಡುತ್ತಾರೋ ಅದನ್ನು ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರಿಗೆ ತಿಳಿಸಬೇಕು ; ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವ್ಯವಸಾಯ ಇಲಾಖೆಯ ಬಗ್ಗೆ ಹೇಳಬೇಕೆಂದರೆ ಈ ಇಲಾಖೆಯಲ್ಲಿ ಅನೇಕ ಸುಧಾರಣೆಗಳು ಆಗುತ್ತಿವೆ ಎಂಬುದಾಗಿ ಸರ್ಕಾರದವರು ಹೇಳುತ್ತಲೇ ಇದ್ದಾರೆ. ಆದರೆ ಇವತ್ತಿನ ದಿವಸ ವ್ಯವಸಾಯ ಇಲಾಖೆಯಲ್ಲಿ ಹೆಚ್ಚಿನ ಹಣವನ್ನು ಅಧಿಕಾರಿಗಳಿಗೇ ಖರ್ಚು ಮಾಡುತ್ತಿದ್ದಾರೆ. ಈ ಇಲಾಖೆಯಲ್ಲಿ ಸರ್ಕಾರದವರು ಅಧಿಕಾರಿಗಳನ್ನು ದೊಡ್ಡ ಸೋಲ್ಜರ್ಸ್‌ನಂತೆ ಕ್ರಿಯೇಟ್ ಮಾಡುತ್ತಿದ್ದಾರೆ. ಡಿವಿಜನ್ ಮಟ್ಟದಲ್ಲಿ ಜಾಯಿಂಟ್ ಡೈರೆಕ್ಟರ್ ಇರುತ್ತಾರೆ. ಸಬ್ ಡಿವಿಜನಲ್ ಮಟ್ಟದಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಇರುತ್ತಾರೆ. ಜಿಲ್ಲಾಮಟ್ಟದಲ್ಲಿ ಡಿಸ್ಟ್ರಿಕ್ಟ್ ಅಗ್ರಿಕಲ್ಚರ್ ಆಫೀಸರ್ ಇರುತ್ತಾರೆ. ಇವರಿಗೆ ಸಲಹೆಗಳನ್ನು ಕೊಡುವುದಕ್ಕೆ ಟೆಕ್ನಿಕಲ್ ಅಸಿಸ್ಟೆಂಟ್‌ಗಳು ಇರುತ್ತಾರೆ. ಇಷ್ಟೊಂದು ಆಫೀಸರ್‌ಗಳು ಇದ್ದರೂ ಕೂಡ ರೈತರಿಗೆ ಸೂಕ್ತವಾದ ತಾಂತ್ರಿಕ ಸಲಹೆಗಳನ್ನು ಸಕಾಲದಲ್ಲಿ ಕೊಡುತ್ತಿದ್ದಾರೆಯೇ ಎಂದರೆ ಅದು ಬಹಳ ಕಡಿಮೆ ಎಂದು ಹೇಳಬಹುದು. ನಾವು ನಿರೀಕ್ಷೆ ಮಾಡಿದಷ್ಟು ಸಲಹೆಗಳನ್ನು ಕೊಡುತ್ತಿಲ್ಲ. ಒಂದೇ ಇಲಾಖೆಯಲ್ಲಿ ಅನೇಕ ರೀತಿಯ ತಜ್ಞರು ಇದ್ದಾರೆ. ಸಬ್‌ಡಿವಿಜನ್‌ಮಟ್ಟದಲ್ಲಿ ಫರ್ಟಿಲೈಜರ್ ಆಫೀಸರ್ ಇದ್ದಾರೆ. ಮತ್ತು ಕಾಂಪೋಸ್ಟ್ ಮೆನ್ಯೂರ್ ಆಫೀಸರ್ ಎಂದು ಇದ್ದಾರೆ. ಇದೇ ರೀತಿ ಅನೇಕ ಹೆಸರುಗಳನ್ನು ಇಟ್ಟುಕೊಂಡಿರುವ ಆಫೀಸರ್‌ಗಳು ಇದ್ದಾರೆ. ಆದರೆ ಅದೇ ಮಟ್ಟದಲ್ಲಿ ಕೆಲಸಗಳು ಮಾತ್ರ ಆಗುತ್ತಿಲ್ಲ. ಈ ಆಫೀಸರ್‌ಗಳು ಮೇಲಿನ ಅಧಿಕಾರಿಗಳಿಗೆ ತಿಂಗಳಿಗೆ ಒಂದು ಸಾರಿ ಪ್ರೋಗ್ರೆಸ್ ರಿಪೋರ್ಟ್ ಕೊಡಬೇಕಾಗಿದೆ. ಇದನ್ನು ಕೊಡುವುದರಲ್ಲಿಯೇ ತಮ್ಮ ಕಾಲವನ್ನು ಕಳೆಯುತ್ತಿದ್ದಾರೆ. ಈ

(ಶ್ರೀ ಎನ್. ಚಿಕ್ಕೇಗೌಡ)

ಅಧಿಕಾರಿಗಳು ಭರ್ತಿ ಮಾಡಿಕೊಡಬೇಕಾಗಿರುವ ಫಾರಂಗಳು ಕೂಡ ಬಹಳ ದೊಡ್ಡದಾಗಿರುತ್ತವೆ. ರೈತರ ನಿಜವಾದ ಸಮಸ್ಯೆಗಳು ಏನು ಎಂಬುದರ ಕಡೆ ಈ ಅಧಿಕಾರಿಗಳು ಸಾಕಷ್ಟು ಗಮನ ಕೊಡುತ್ತಿಲ್ಲ. ಕಾರಣವೆಂದರೆ ಈ ಅಧಿಕಾರಿಗಳು ಆಗಾಗ್ಗೆ ವಿಚಾರಗೋಷ್ಠಿಗಳಲ್ಲಿ ಭಾಗವಹಿಸಲು ಹೋಗುತ್ತಿರುತ್ತಾರೆ. ಸೆಕ್ರೆಟೇರಿಯಟ್ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕ್‌ಮಟ್ಟದಲ್ಲಿ ಆಗಾಗ್ಗೆ ವಿಚಾರಗೋಷ್ಠಿಗಳನ್ನು ಏರ್ಪಾಡು ಮಾಡುವುದನ್ನು ಇನ್ನುಮುಂದೆ ಕೈಬಿಡುವುದು ಒಳ್ಳೆಯದೆಂದು ನನ್ನ ಒಂದು ಅನುಭವದಿಂದ ಹೇಳುತ್ತಿದ್ದೇನೆ. ಇವತ್ತಿನದಿವಸ ಗ್ರಾಮಸೇವಕರುಗಳು, ವಿಸ್ತರಣಾಧಿಕಾರಿಗಳು ತಮ್ಮ ಮೇಲಿನ ಅಧಿಕಾರಿಗಳಿಗೆ ಅಂಕಿಅಂಶಗಳನ್ನು ಒದಗಿಸುವುದರಲ್ಲಿಯೇ ಕಾಲಕಳೆಯುತ್ತಿದ್ದಾರೆ.

ಇನ್ನು ಬೀಜದ ಬಗ್ಗೆ ಹೇಳಬೇಕೆಂದರೆ, ರೈತರಿಗೆ ಸಕಾಲದಲ್ಲಿ ಬೀಜಗಳನ್ನು ಒದಗಿಸುವ ಏರ್ಪಾಡು ಮಾಡಬೇಕು. ಮತ್ತು ತಾಂತ್ರಿಕ ಸಲಹೆಗಳನ್ನು ಸಹ ಕೊಡಬೇಕು. ಮಾನ್ಯ ಹಣಕಾಸಿನ ಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಬೀಜ ಉತ್ಪಾದನಾ ಕೇಂದ್ರಗಳು ನಮ್ಮ ರಾಜ್ಯದಲ್ಲಿ 89 ಇವೆಯೆಂದು ಹೇಳಿದ್ದಾರೆ. ಕೆಲವು ಬಿತ್ತನೆ ಬೀಜಗಳು ರೈತರಿಗೆ ಸಿಗುತ್ತಿದ್ದರೂಕೂಡ ಮತ್ತೆ ಕೆಲವು ಬೀಜಗಳು ರೈತರಿಗೆ ಸಕಾಲದಲ್ಲಿ ಸಿಗುತ್ತಿಲ್ಲ. ನ್ಯಾಷನಲ್ ಸೀಡ್ ಕಾರ್ಪೊರೇಷನ್ ಎಂಬುದು ಇದೆ. ಈ ಕಾರ್ಪೊರೇಷನ್ನಿನ ಆಡಳಿತ ಹಡಗು ಸಂಸ್ಥೆಯ ವ್ಯಾಪಾರದಂತೆ ಇದೆ. ಈ ಕಾರ್ಪೊರೇಷನ್ ನವಕೋಟಿ ನಾರಾಯಣನ ಸಂಸ್ಥೆಯಾಗಬಾರದೆಂದು ಹೇಳುತ್ತೇನೆ. ಈ ಬಗ್ಗೆ ಒಂದು ಸೀಡ್ ರೆಗ್ಯುಲೇಷನ್ ಆಕ್ಟನ್ನು ಜಾಗ್ರತೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರದವರು ಈ ವಿಚಾರದಲ್ಲಿ ಲಾ ಡಿಪಾರ್ಟ್‌ಮೆಂಟ್‌ನೊಂದಿಗೆ ವಿಚಾರ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಸರ್ಕಾರದವರು ಇದಕ್ಕೆ ಟಾಪ್‌ಪ್ರಿಯಾರಿಟಿ ಕೊಟ್ಟು ಈ ಆಕ್ಟನ್ನು ತರಬೇಕೆಂದು ಹೇಳುತ್ತಿದ್ದೇನೆ. ಬೀಜದ ಸಂಶೋಧನೆಯ ಬಗ್ಗೆ ಹೇಳಬೇಕೆಂದರೆ ಈ ಕಾರ್ಯವನ್ನು ವ್ಯವಸಾಯ ಇಲಾಖೆಯವರು ಕೃಷಿವಿಶ್ವವಿದ್ಯಾನಿಲಯಕ್ಕೆ ವಹಿಸಿದ್ದಾರೆ. ಈ ಅಣುಯುಗದಲ್ಲಿ ಬೀಜದ ಬಗ್ಗೆ ಸಂಶೋಧನೆ ನಡೆಸುವುದು ಬಹಳವಿದೆ. ಕಡಿಮೆ ಕಾಲದಲ್ಲಿ ಬೆಳೆಯಾಗುವಂತಹ ಒಳ್ಳೆಯ ಬೀಜಗಳನ್ನು ರೈತರಿಗೆ ಸಕಾಲದಲ್ಲಿ ಒದಗಿಸುವ ವ್ಯವಸ್ಥೆಯಾಗಬೇಕು. ಈ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಯಾಗಬೇಕಲ್ಲದೆ ರೈತರಿಗೆ ಒಳ್ಳೆಯ ತಳಿಬೀಜಗಳನ್ನು ಒದಗಿಸುವುದಕ್ಕೆ ವ್ಯವಸ್ಥೆಮಾಡಬೇಕೆಂದು ಸೂಚಿಸಬಯಸುತ್ತೇನೆ. ಒಂದು ವಿಚಾರವನ್ನು ದುಃಖದಿಂದ ಹೇಳಬೇಕಾಗಿದೆ, ಏನೆಂದರೆ ವ್ಯವಸಾಯ ಇಲಾಖೆಯಲ್ಲಿರುವ ಅಧಿಕಾರಿಗಳಲ್ಲಿಯೂ ಮತ್ತು ಕೃಷಿ ವಿಶ್ವವಿದ್ಯಾನಿಲಯದಲ್ಲಿರುವ ಅಧಿಕಾರಿಗಳಲ್ಲಿಯೂ ಸಹ ಸಮರಸಭಾವನೆ ಇಲ್ಲದಿರುವುದು. ಈ ಬಗ್ಗೆ ಸಂಬಂಧಪಟ್ಟಮಂತ್ರಿಗಳು ಸಮರಸಭಾವನೆಯನ್ನು ಈ ಅಧಿಕಾರಿಗಳಲ್ಲಿ ಉಂಟುಮಾಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು. ಉದಾಹರಣೆಗೆ ಪಂಜಾಬ್ ರಾಜ್ಯದ ಬಗ್ಗೆ ಹೇಳಬೇಕೆಂದರೆ, ಆ ರಾಜ್ಯದಲ್ಲಿಯೂ ಕೂಡ ಪ್ರತ್ಯೇಕ ಇಲಾಖೆಗಳು ಇದ್ದರೂ ಕೂಡ, ಆ ಇಲಾಖೆಗಳವರು ಒಂದು ಹೈಪವರ್ ಕಮಿಟಿ ಮಾಡಿಕೊಂಡು ಪ್ರತಿ ತಿಂಗಳೂ ಕೂಡ ಸಭೆ ಸೇರಿ ಸಂಬಂಧಪಟ್ಟ ವಿಚಾರಗಳ ಬಗ್ಗೆ ಚರ್ಚೆ ಮಾಡಿ ಒಂದು ನಿರ್ಧಾರಕ್ಕೆ ಬರುತ್ತಿದ್ದಾರೆ. ಇದೇ ರೀತಿ ನಮ್ಮ ರಾಜ್ಯದಲ್ಲಿಯೂ ಕೂಡ ನಡೆಯಬೇಕು ಮತ್ತು ಎರಡು ಇಲಾಖೆಗಳಲ್ಲಿಯೂ ಸಮರಸ ಭಾವನೆ ಬರಬೇಕು. ಒಬ್ಬರಿಗೊಬ್ಬರು ಹೊಂದಿಕೊಂಡು ಕೆಲಸ ಮಾಡಬೇಕು. ಸಂಬಂಧಪಟ್ಟ ಮಂತ್ರಿಗಳು ಸಹ ಕೃಷಿವಿಶ್ವವಿದ್ಯಾನಿಲಯದ ಪ್ರೊಚಾನ್ಸಲರ್ ಆಗಿದ್ದಾರೆ. ಆದಕಾರಣ ಮಾನ್ಯಮಂತ್ರಿಗಳು ಪಂಜಾಬ್ ರಾಜ್ಯದಲ್ಲಿರುವ ಪದ್ಧತಿಯನ್ನು ಜಾರಿಗೆ ತರಬೇಕು. ಕೃಷಿ ವಿಶ್ವವಿದ್ಯಾನಿಲಯದವರು ಇವತ್ತಿನದಿವಸ ಹೊಸ ಹೊಸ ತಳಿಗಳನ್ನು ಬಿಡುಗಡೆ ಮಾಡುತ್ತಿದ್ದಾರೆ. ಹಂಸರಾಗಿಯನ್ನು ಸಹ ಬಿಡುಗಡೆ ಮಾಡಿದ್ದಾರೆ. ಹಂಸರಾಗಿಯ ಬಗ್ಗೆ ಹೇಳಬೇಕಾದರೆ ಇದನ್ನು ಬಹಳ ಆತುರವಾಗಿ ಬಿಡುಗಡೆ ಮಾಡಿದ್ದಾರೆ. ಇದರಲ್ಲಿ ಅನೇಕ ಲೋಪದೋಷಗಳು ಬಂದಿವೆ ಎಂದು ಕೇಳುತ್ತೇವೆ. ಇದೇ ರೀತಿ ಐ ಆರ್ ಎಂಟು ಎಂದು ಗಡಿಬಿಡಿಯಲ್ಲಿ ತಂದು ರೈತರಿಗೆ ಹಂಚಿದರು. ಇದರಿಂದ ಬೆಂಗಳೂರು ಜಿಲ್ಲೆಯ ಕೆಲವು ಕಡೆ ರೈತರುಗಳಿಗೆ ಕಷ್ಟವಾಯಿತು. ಇದರ ಬಗ್ಗೆ ಏನು ಲೋಪದೋಷಗಳಿವೆ ಅವನ್ನು ಸರಿಪಡಿಸಿ ರೈತರಿಗೆ ಹಂಚುವ ವ್ಯವಸ್ಥೆಯನ್ನು ಇಲಾಖೆಯವರು ಮಾಡಬೇಕು. ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸ್‌ನಲ್ಲಿರುವ ವೈಸ್ ಚಾನ್ಸಲರು ಹಾಗೂ ಅಗ್ರಿಕಲ್‌ಚರಲ್ ಸೈನ್ಸ್ ಡಿಪಾರ್ಟ್‌ಮೆಂಟಿನಲ್ಲಿರುವ ಇಬ್ಬರು ಅಧಿಕಾರಿಗಳು ರೈತರಿಗೆ ಬಹಳ ಅನುಕೂಲವಾಗುವಂತೆ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಇಲ್ಲಿರುವ ವ್ಯವಸಾಯ ಕಾಲೇಜಿಗೆ ವ್ಯಾಸಂಗಕ್ಕೆ ಬರುವವರಿಗೆ ಹೆಚ್ಚು ಸೀಟುಗಳನ್ನು ಕೊಡಬೇಕು. ಈಗೇನೋ ಸಂಬಂಧಪಟ್ಟ ಮಂತ್ರಿಗಳು ಬ್ಲಾಕ್ ಗ್ರಾಂಟ್ ಹಾಗೂ ಡೆವಲಪ್‌ಮೆಂಟ್ ಗ್ರಾಂಟ್ ಎಂದು ಸುಮಾರು 90 ಲಕ್ಷದವರೆಗೆ ಕೊಟ್ಟಿದ್ದಾರೆ. ಇದನ್ನು ಹೆಚ್ಚಿಸ

ಬೇಕೆಂದು ನಾವು ಕೆಲವು ಶಾಸಕರು ಆಗಿಂದಾಗ್ಗೆ ಮಾನ್ಯ ಮಂತ್ರಿಗಳಲ್ಲಿ ಹಾಗೂ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದುದರ ಫಲವಾಗಿ ಈಚೆಗೆ ಹೆಚ್ಚಿಗೆ ಕೊಟ್ಟಿದ್ದಾರೆ. ಇದಕ್ಕಾಗಿ ನನ್ನ ಧನ್ಯವಾದಗಳನ್ನು ಅವರಿಗೆ ಅರ್ಪಿಸುತ್ತೇನೆ. ಇನ್ನು ವ್ಯವಸಾಯದ ಕಾಲೇಜಿನಲ್ಲಿ ಸೀಟುಗಳನ್ನು ಹೆಚ್ಚು ಮಾಡುವ ವ್ಯವಸ್ಥೆ ಮಾಡಬೇಕೆಂದು ಇಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

4-00 P.M.

ಇನ್ನು ಬೆಂಗಳೂರು ಡೈರಿ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಬೆಂಗಳೂರಿನಲ್ಲಿರುವ ಡೈರಿಯಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ಇಲ್ಲಿನ ಅಧಿಕಾರಿಗಳು ಕೂಡ ಸರಿಯಾಗಿ ಕೆಲಸ ಮಾಡುತ್ತಾರೆ ಎಂದು ಹೇಳಲು ನಾನು ತಯಾರಾಗಿಲ್ಲ. ಹಿಂದೆ ಇಲ್ಲಿಂದ 50—60 ಸಾವಿರ ಲೀಟರು ಹಾಲು ಸರಬರಾಜು ಮಾಡುತ್ತಾರೆ ಎಂದು ಇತ್ತು, ಇದು ಬದಲಾವಣೆಯಾಗಿ 36 ಸಾವಿರಕ್ಕೆ ಇಳಿದಿದೆ. ಇದೂ ಅಲ್ಲದೆ ಇದರಲ್ಲಿ ಮಿಲ್ಕ್ ಪೌಡರು ಮಾಡಬೇಕು ತುಪ್ಪ ಮಾಡಬೇಕು ಬೆಣ್ಣೆ ಮಾಡಬೇಕು ಎಂದು ಪ್ರಯತ್ನ ಮಾಡಿ ಕೊನೆಗೆ ಇಲ್ಲಿದ್ದ ಬೆಣ್ಣೆಯನ್ನು ಸುಟ್ಟುಹಾಕಿದ ಬಗ್ಗೆ ಈಗಾಗಲೇ ಈ ಸಭೆಯಲ್ಲಿ ಮಾತ್ರವಲ್ಲದೆ, ಬೀದಿ ಬೀದಿಗಳಲ್ಲಿ ಬಸ್ಸುಗಳಲ್ಲಿಯೂ ಕೂಡ ಜನರು ಮಾಡುವ ಟೀಕೆಗಳನ್ನು ಕೇಳುತ್ತಲೇ ಇದ್ದೇವೆ. ಆದುದರಿಂದ ನಾನು ಸರ್ಕಾರಕ್ಕೆ ಸೂಚನೆ ಮಾಡುವುದು ಈಗಲಾದರೂ ಇದರ ಬಗ್ಗೆ ಸುಮ್ಮನೆ ಅಂಕೆ ಸಂಖ್ಯೆಗಳನ್ನು ಕೊಡುವುದಕ್ಕೆ ಹೋಗದೆ ಸರಿಯಾದ ತನಿಖೆಗೆ ಸಂಬಂಧಪಟ್ಟ ಮಂತ್ರಿಗಳು ಏರ್ಪಾಡು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಹಾಲಿನ ದರ ನೋಡುವುದಾದರೆ, 1-1-67ರಿಂದ 4-7-68ರವರೆಗೆ 60 ಪೈಸೆಯಿಂದ 1-50 ಪೈಸೆಯಾಯಿತು. 5-7-68 ರಿಂದ 30-10-68ರವರೆಗೆ 90 ಪೈಸೆಯಿಂದ 1-15 ಪೈಸೆವರೆಗೆ ಆಯಿತು. 1-11-68 ರಿಂದ 11-2-69 ರ ವರೆಗೆ 80 ಪೈಸೆಯಿಂದ 1-06 ಪೈಸೆವರೆಗೆ ಆಯಿತು. 12-2-69 ರಿಂದ 20 ಪೈಸೆ ಜಾಸ್ತಿಯಾಯಿತು ಎಂದು ಕಾಸ್ಟ್ ಆಫ್ ಪ್ರೊಡಕ್ಷನ್ ಶೇಕಡಾ 3.5 ರಷ್ಟು ಹಾಗೂ 4.5 ರಷ್ಟು ಜಾಸ್ತಿಯಾಯಿತು ಎಂದು 96 ಪೈಸೆವರೆಗೆ ಹೆಚ್ಚು ಮಾಡಿದರು ಇದರಲ್ಲಿ ಉತ್ಪಾದಕರಿಗೆ ಹುಲ್ಲು ಹಾಗೂ ಇನ್ನಿತರ ಪದಾರ್ಥಗಳ ಬೆಲೆ ಜಾಸ್ತಿಯಾಯಿತು ಎಂದು ಪದೇ ಪದೇ ಏರಿಸುತ್ತಾ ಹೋದರೆ ಇದರಿಂದೇನು ಜನಕ್ಕೆ ಅನುಕೂಲ ಮಾಡಿದಂತಾಗುತ್ತದೆ? ಇವೊತ್ತು ಸರಕಾರದ ನೌಕರರಿಗೂ ತುಟ್ಟಿಭತ್ಯ, ಮನೆ ಬಾಡಿಗೆ ಭತ್ಯ ಎಲ್ಲ ಜಾಸ್ತಿ ಕೊಡುತ್ತೀರಿ. ಆದರೆ ರೈತರಿಗೆ ಯಾವ ವಿಧವಾದ ಸೌಕರ್ಯವನ್ನೂ ಕೊಡುತ್ತಿಲ್ಲ. ಬೆಂಗಳೂರು ಡೈರಿಗೆ ಸಂಬಂಧಪಟ್ಟ ಹಾಗೆ ಡೈರೆಕ್ಟರು ಎಂದು ಒಬ್ಬರು ಅಧಿಕಾರಿಗಳಿದ್ದಾರೆ. ಇವರು ಸರಿಯಾಗಿ ಸಹಕಾರ ಮಾಡಿ ಕೆಲಸ ಮಾಡುತ್ತಿಲ್ಲ. ಇಲ್ಲಿ ನೋಡಿದರೆ ಎಲ್ಲ ತೊಗಲಕ್‌ನ ದರ್ಬಾರಿನಂತೆ ನಡೆಯುತ್ತಿದೆ. ಇವರೇನೋ ಜಿಲ್ಲಾಧಿಕಾರಿಗಳಾಗಿದ್ದವರು ಮತ್ತು ಟ್ರಾನ್ಸ್‌ಪೋರ್ಟ್ ಕಮಿಷನರಾಗಿದ್ದವರು. ಇಂಥವರನ್ನು ಇಲ್ಲಿ ಮ್ಯಾನೇಜಿಂಗ್ ಡೈರೆಕ್ಟರಾಗಿ ಮಾಡಿದ್ದಾರೆ. ಇವರು ಇಲ್ಲದ ಜಗಳಗಳನ್ನು ತಂದು ತೊಂದರೆಗಳನ್ನು ಉಂಟುಮಾಡುತ್ತಿದ್ದಾರೆ. ಇಲ್ಲಿರುವ ಯೂನಿಯನ್‌ನವರೊಡನೆ ಸಹಕಾರ ಮಾಡುತ್ತಿಲ್ಲ. ಇಲ್ಲದ ಕಿತ್ತಾಟಗಳನ್ನು ಮಾಡುತ್ತಾರೆ. ಇವೊತ್ತು ಪ್ರೈವೇಟಾಗಿ ಡೈರಿ ಮಾಡುತ್ತಿರುವವರು ಬಹಳ ಚೆನ್ನಾಗಿ ನಡೆಸುತ್ತ ಎಲ್ಲರಿಗೂ ಹಾಲನ್ನು ಕೊಡುತ್ತಿದ್ದಾರೆ. ಇಲ್ಲಿ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಎಂದು 8 ಪೈಸೆ ಬೇರೆ ತೆಗೆದುಕೊಳ್ಳುತ್ತಾರೆ. ಹೀಗಿದ್ದರೂ ಸರಕಾರ ನಷ್ಟದಲ್ಲಿ ಕೆಲಸ ಮಾಡುತ್ತೆ ಎಂದು ಹೇಳುತ್ತಾರೆ. ಬೆಂಗಳೂರು ಡೈರಿಯ ಬಗ್ಗೆ ಅನೇಕವಾದ ಟೀಕೆಗಳನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು, ಎಸ್ಟಿಮೇಟ್ಸ್ ಕಮಿಟಿಯವರು ಮಾಡಿದ್ದಾರೆ. ಇವರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಹೇಳುತ್ತಲೂ ಬರುತ್ತಿದ್ದಾರೆ. ಇಂತಹ ಡೈರಿಯನ್ನು ಯೂನಿಸೆಫ್‌ನವರು ಕೊಡುಗೆಯಾಗಿ ಕೊಟ್ಟಿರುವುದನ್ನು ಚೆನ್ನಾಗಿ ನಡೆಸದೆ ಇರಲು ಕಾರಣ ಗೊತ್ತಾಗುತ್ತಿಲ್ಲ. ಬೇರೆ ಕಡೆ ಇರುವ ಡೈರಿಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಇಲ್ಲಿ ಇಲ್ಲದ ಜಗಳಗಳು ಹಾಗೂ ಸ್ಟ್ರೈಕ್‌ಗಳು ಆಗಾಗ್ಗೆ ಆಗುತ್ತಲೇ ಇರುತ್ತವೆ. ಇಲ್ಲಿನ ಅಧಿಕಾರಿಗಳಲ್ಲಿ ಒಂದು ರೀತಿಯಾದ ಸಮರಸ ಭಾವನೆಯೇ ಇಲ್ಲ. 50 ಪೈಸೆ ಇದ್ದ ಹಾಲಿನ ರೇಟು 68 ಪೈಸೆಯಾಯಿತು ಅನಂತರ 90 ಪೈಸೆಗೆ ಏರಿತು ಕಾಸ್ಟ್ ಆಫ್ ಪ್ರೊಡಕ್ಷನ್ ಹೆಚ್ಚಾಯಿತು ಎಂದು ಇವೊತ್ತಿನ ದಿವಸ ಹಾಲೇ ಇಲ್ಲ ಎನ್ನುತ್ತಿದ್ದಾರೆ. ಡಬ್ಬಲ್ ಟೋನ್ಡ್ ಮಿಲ್ಕ್ ಬೇಕಾದರೆ ಕೊಡುತ್ತೇವೆ ಎನ್ನುತ್ತಾರೆ. ನಮ್ಮ ರಾಜ್ಯಸಭಾ ಸದಸ್ಯರಾದ ಶ್ರೀ ಶ್ರೀರಾಂ ಎನ್ನುವವರು ಪ್ರೈವೇಟು ಡೈರಿಯನ್ನು ಬೆಂಗಳೂರು ನಗರದಲ್ಲಿ ಮಾಡಿಕೊಂಡು ಹೆಚ್. ಎ. ಎಲ್. ಹಾಗೂ ಇನ್ನಿತರ ಕಡೆಗಳಿಗೆ ಹಾಲನ್ನು ಬಹಳ ಚೆನ್ನಾಗಿ ಸರಬರಾಜು ಮಾಡುತ್ತಿದ್ದಾರೆ ಮತ್ತು ಬಹಳ ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಇದೇ ರೀತಿ ಮಧ್ಯ ಪ್ರದೇಶದಲ್ಲಿ ಕೈರಾನ್ ಮಿಲ್ಕ್ ಸೊಸೈಟಿ ಎಂದು ನಡೆಸಿಕೊಂಡು ಬರುತ್ತಿದ್ದಾರೆ. ಇಲ್ಲಿ ಅಮುಲ್ ಮಿಲ್ಕ್ ಪ್ರಾಡಕ್ಟ್ಸ್ ತಯಾರು

(ಶ್ರೀ ಎನ್. ಚಿಕ್ಕೇಗೌಡ)

ಮಾಡುತ್ತಿದ್ದಾರೆ. ಹಾಗೂ ಇನ್ನು ಅನೇಕ ಸಹಕಾರ ಸಂಘಗಳು ಕೆಲಸ ಮಾಡುತ್ತಿವೆ. ಆದರೆ ನಮ್ಮ ಬೆಂಗಳೂರು ಡೈರಿಯನ್ನು ನೋಡಿದರೆ ಅಲ್ಲಿ ಒಂದು ರೀತಿಯಾದ ಡಬ್ಬಲ್ ಗೇಂನಂತೆ ಕೆಲಸ ಮಾಡುತ್ತಿದ್ದಾರೆ. ಇದರಿಂದ ಜನರಿಗೆ ವಿಶ್ವಾಸ ಕಡಿಮೆಯಾಗುತ್ತದೆ. ಜನತೆಯ ಪ್ರೀತಿ ಸಂಪಾದಿಸಬೇಕಾದರೆ ಒಳ್ಳೆಯ ಹಾಲನ್ನು ಕೊಟ್ಟು ಪಬ್ಲಿಕ್ ಕಾನ್‌ಫಿಡೆನ್ಸ್ ಸಂಪಾದಿಸಬೇಕು. 1965ರಲ್ಲಿ ಆರಂಭವಾದ ಬೆಂಗಳೂರು ಡೈರಿಯಲ್ಲಿ 1969ನೇ ಇಸವಿಯಾದರೂ ಬೆಂಗಳೂರಿನ ಜನತೆಗೆ ಒಳ್ಳೆಯ ಹಾಲು ಇನ್ನೂ ದೊರೆಯುತ್ತಿಲ್ಲ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದು ಅಗತ್ಯ. ಈ ಡೈರಿ ಬಗ್ಗೆ ಮಾನ್ಯ ಮಂತ್ರಿಗಳು ಅದರ ಅಧಿಕಾರಿಗಳು ಕೊಡುವ ಅನೇಕ ಅಂಕಿ ಅಂಶಗಳನ್ನು ಹೇಳಬಹುದು. ಇದರಿಂದ ಜನತೆಗೆ ಹಾಲು ಒದಗಿಸಿದಂತಾಗುವುದಿಲ್ಲ. ಇದಕ್ಕಿರುವ ಅಡಚಣೆಗಳನ್ನು ನಿವಾರಿಸಿ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಇನ್ನೊಂದು ವಿಷಯ ಅನಿಮಲ್ ಹಸ್‌ಬೆಂಡ್ರಿ ವಿಚಾರವಾಗಿ ಮಾತ್ರ ಹೇಳುತ್ತೇನೆ. ಈ ಇಲಾಖೆಯಲ್ಲಿ ರಿಂಡರ್ ಪೆಸ್ಟ್ ಎರಾಡಿಕೇಷನ್ ಸ್ಕೀಂ ಎಂದು ನಮ್ಮ ಕಡೆ ಕೆಲವು ಹಳ್ಳಿಗಳಲ್ಲಿ ತಂದರು. ಇದರಿಂದಾಗಿ ಕೆಲವು ರಾಸುಗಳು ಹಾಳಾಗಿ ಹೋದವು. ಇವರು ಕೊಡುವ ವಾಕ್ಸೀನೊ ದೋಷಯುಕ್ತವಾಗಿತ್ತೋ ಏನೋ ಗೊತ್ತಿಲ್ಲ. ದೊಡ್ಡ ರೋಗ ಬಂದು ಒಳ್ಳೆಯ ರಾಸುಗಳು ಸತ್ತುಹೋದವು. ಇದರಿಂದಾಗಿ ಇಲ್ಲಿನ ಅಧಿಕಾರಿಗಳು ಹಳ್ಳಿ ಕಡೆ ಬಂದಾಗ ನಾನೇ ರಕ್ಷಣೆ ಕೊಡಬೇಕಾಗಿ ಬಂತು. ಇಲ್ಲದಿದ್ದರೆ ಹಳ್ಳಿ ರೈತರು ಇವರನ್ನು ಹೊಡೆದುಬಿಡುತ್ತಿದ್ದರು. Cross-bred animals are very sensitive. There is some defect in the vaccine. I understand that this vaccine is being got from the Madras State. ಸಾವಿರಾರು ರೂಪಾಯಿಗಳಷ್ಟು ಖರ್ಚು ಮಾಡಿ ರಿಂಡರ್‌ಪೆಸ್ಟ್ ಸ್ಕೀಂ ತಂದು ಇದನ್ನು ಸರಿಯಾಗಿ ಪರಿಶೀಲನೆ ಮಾಡಿಕೊಡದೆ ಇಂತಹ ಕಷ್ಟಗಳಾಗುತ್ತಿರಬಹುದು. ಇನ್ನು ಮುಂದೆ ಸರಿಯಾದ ಒಂದು ಶಾಸನ ಮಾಡಿ ಎಲ್ಲ ಔಷಧಿಗಳನ್ನೂ ಸರಿಯಾಗಿ ಇನ್ಸ್‌ಪೆಕ್ಟ್ ಮಾಡಿ ಅನಂತರ ಅವನ್ನು ಉಪಯೋಗಿಸಬೇಕು ಎಂದು ಸರಕಾರಕ್ಕೆ ಸೂಚಿಸಬಯಸುತ್ತೇನೆ. ಈಗ ಇದಕ್ಕೆ ಸರಿಯಾದ ಆಕ್ಟ್ ಇಲ್ಲ. ಇದನ್ನು ಕಂಟ್ರೋಲ್ ಮಾಡಲು ಸೂಕ್ತವಾದ ಒಂದು ಶಾಸನವನ್ನು ತರಬೇಕು.

ಅಗ್ರಿಕಲ್‌ಚರಲ್ ಇಂಜನಿಯರಿಂಗ್ ಎಸ್ಟಾಬ್ಲಿಷ್‌ಮೆಂಟಿಗಾಗಿ ಹೆಚ್ಚು ಹಣ ಖರ್ಚಾಗುತ್ತಿದೆ. ವೆಲ್‌ಬೋರಿಂಗು ಯಂತ್ರಗಳು ಹಾಗೂ ಇನ್ನಿತರ ಯಂತ್ರೋಪಕರಣಗಳನ್ನು ರೈತರಿಗೆ ಒದಗಿಸಿ, ಉಪಯುಕ್ತವಾದ ಕೆಲಸವನ್ನು ಈ ಶಾಖೆಯವರು ಮಾಡುತ್ತಿದ್ದಾರೆ. ಇದರ ಬಗ್ಗೆ ಒಂದು ಸರ್ವೆ ಮಾಡಿಸಿ ಎಲ್ಲೆಲ್ಲಿ ಯಾವ ಯಾವ ಕೆಲಸಗಳು ಆಗಬೇಕು ಅಲ್ಲಿ ಇಂತಹ ಬ್ಲಾಸ್ಟಿಂಗ್ ಮತ್ತು ಬೋರಿಂಗ್ ಯಂತ್ರಗಳನ್ನು ಹೆಚ್ಚಿಗೆ ತರಿಸಿ ರೈತರಿಗೆ ಅನುಕೂಲಮಾಡಿಕೊಡಬೇಕು ಎಂದು ಇಲ್ಲಿ ಸಲಹೆ ಮಾಡುತ್ತೇನೆ.

ಸ್ವಾಮಿ, ಈ ಮೊಬೈಲ್ ಸಾಯಿಲ್ ಟೆಸ್ಟಿಂಗ್ ಲಾಬರಾಟರಿ ಯೂನಿಟ್ಸ್, ಏನಿದೆ ಅದನ್ನು ರಾಜ್ಯದಲ್ಲಿ ಹೆಚ್ಚು ಮಾಡಬೇಕು. ಇದನ್ನು ಹೆಚ್ಚು ಹೆಚ್ಚಾಗಿ ತರಿಸಿ ಜಿಲ್ಲಾ ಮಟ್ಟದಲ್ಲಿ ಇಡುವಂತೆ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಸಾಯಿಲ್ ಕನ್‌ಸರ್ವೇಷನ್ ಸಬ್‌ಡಿವಿಷನ್ ವಿಷಯ. ಈಗ ನೀರು ಇಲ್ಲದೇ ಇರುವ ಕಡೆ ಅಷ್ಟಿಮಮ್ ಸಾಯಿಲ್ ಕನ್‌ಸರ್ವೇಷನ್ ಮಾಡಿ ನೀರು ಇರುವ ಕಡೆ ನೀರಿನ ಗುಣ ನೋಡಿ ಅದನ್ನು ಸರಿಪಡಿಸಿ ವ್ಯವಸಾಯಕ್ಕೆ ಹೆಚ್ಚು ಅನುಕೂಲ ಮಾಡುತ್ತಾ ಇರುವುದರಿಂದ ಈ ಸಬ್ ಡಿವಿಷನ್‌ಗಳನ್ನು ಹೆಚ್ಚು ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಫಾರೆಸ್ಟ್ ಇಲಾಖೆ ವಿಷಯ. ಸರ್ವೆ ಸೌದೆ ಏನು ಇದೆ ಇದಕ್ಕೆ ಪರ್ಮಿಟ್ ಪದ್ಧತಿ ಇದೆ. ಈಗ ಇದರಿಂದ ಏನು ತೊಂದರೆಯಾಗಿದೆ ಎಂದರೆ ಪರ್ಮಿಟ್‌ಗಳನ್ನು ತೆಗೆದುಕೊಳ್ಳಬೇಕಾದರೆ ಅಧಿಕಾರಿಗಳನ್ನು ಹುಡುಕಿಕೊಂಡು ಹೋಗುವುದಕ್ಕೆ ಕಷ್ಟವಾಗಿದೆ. ನನ್ನ ಕ್ಷೇತ್ರದ್ದು ಒಂದು ಉದಾಹರಣೆ ಹೇಳುವುದಾದರೆ ರೇಂಜ್ ಫಾರೆಸ್ಟ್ ಆಫೀಸರು ಯಾವಾಗಲೂ ಬೆಂಗಳೂರಿನಲ್ಲೇ ಇರುತ್ತಾರೆ. ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಅವರ ಛೇಂಬರ್‌ನಲ್ಲಿ ಹೇಳಿದ್ದೇನೆ. ಅವರು ಅವರನ್ನು ತಕ್ಷಣ ವರ್ಗ ಮಾಡುತ್ತೇನೆ ಎಂದು ಹೇಳಿದರು. ಆದರೆ ನಾನು ಹೇಳಿದಮೇಲೆ ಅವರನ್ನು ವರ್ಗ ಮಾಡುವುದು ಬೇಡ ಆದರೆ ಈ ವಿಷಯವನ್ನು ಸಂಬಂಧಪಟ್ಟ ಡಿವಿಷನಲ್ ಫಾರೆಸ್ಟ್ ಆಫೀಸರಿಗೆ ತಿಳಿಸಿದರೆ ಸಾಕೆಂದು ಹೇಳಿದೆ. ಅವರೂ ಇದುವರೆಗೂ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಆದರೆ ಈ ಪರ್ಮಿಟ್ ವ್ಯವಸ್ಥೆ ಏನು ಇದೆಯೋ ಅದನ್ನು ತೆಗೆಯು

ಬೇಕು ಎಂದು ಹೇಳುತ್ತೇನೆ. ಈ ಅರಣ್ಯ ಖಾತೆ ಬಗ್ಗೆ ಹೇಳುವುದಾದರೆ ಸ್ಟೇಟ್ ಅವರೇಜ್ 13 ಪರ್ಸೆಂಟು ಇದೆ. ಇಂಟರ್‌ನ್ಯಾಷನಲ್ ಆವರೇಜ್ 20 ಪರ್ಸೆಂಟು ಇದೆ. ಇಂಡಿಯಾ ಆವರೇಜ್ 19 ಪರ್ಸೆಂಟು ಇದೆ. ನಮಲ್ಲಿ ಇನ್ನೂ ಈ ಫಾರೆಸ್ಟ್ ವೆಲ್ತ್ ಹೆಚ್ಚಿಸಬೇಕು ಎಂದು ಹೇಳುತ್ತೇನೆ.

ಇನ್ನು ಗಂಧದ ಮರದ ಕಳ್ಳ ಸಾಗಾಣಿಕೆ ಬಗ್ಗೆ ಒಂದು ಉಪಪ್ರಶ್ನೆ ಕೇಳಿದ್ದೇನೆ. ಈ ಕಳ್ಳಸಾಗಾಣಿಕೆಯ ಮರವನ್ನು ಸಾಗಿಸುವ ವಾಹನಗಳನ್ನು ಯಾರು ಹಿಡಿಯುತ್ತಾರೋ, ಅಧಿಕಾರಿಗಳೇ ಆಗಿರಲಿ, ಅಧಿಕಾರೇತರರೇ ಆಗಿರಲಿ ಅವರಿಗೆ ಕ್ಯಾಷ್ ಅವಾರ್ಡ್ ಕೊಡಬೇಕು ಅಥವಾ ಮೆರಿಟೋರಿಯಲ್ ಸರ್ಟಿಫಿಕೇಟ್ ಕೊಡಬೇಕು. ರೈತರು ತಮ್ಮ ಖಾಸಗಿ ಜಮೀನಿನಲ್ಲಿ ಗಂಧದ ಮರವನ್ನು ಬೆಳೆಸಿದರೆ ಅವರಿಗೆ ಸರಿಯಾದ ಬೆಲೆ ಸಿಕ್ಕುತ್ತಾ ಇಲ್ಲ. ಆದುದರಿಂದ ಅವರು ಅದನ್ನು ಬೆಳೆಸುವುದಕ್ಕೆ ಏನು ಖರ್ಚು ಮಾಡುತ್ತಾರೋ ಅದರ 50 ಪರ್ಸೆಂಟನ್ನಾದರೂ ಕೊಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಸಭಾಪತಿಗಳೇ, ಈ ಮಾನ್ಯ ಸಭೆಯ ಮುಂದೆ ಇರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ನಾನು ಕೆಲವು ಸಲಹೆಗಳನ್ನು ಹೇಳಬಯಸುತ್ತೇನೆ. ಸ್ವಾಮಿ, ಈ ಮೂರು ಬೇಡಿಕೆಗಳ ಬಗ್ಗೆ ಇಟ್ಟಿರುವ ಕಾಲಾವಕಾಶ ಬಹಳ ಕಡಿಮೆಯಾಗಿರುವುದರಿಂದ ಇದರ ಬಗ್ಗೆ ಸ್ಥೂಲವಾಗಿ ಕೆಲವು ಅಂಶಗಳನ್ನು ಹೇಳುವುದಕ್ಕೆ ಅವಕಾಶ ಕೊಡಬೇಕು ಎಂದು ಹೇಳುತ್ತೇನೆ. ನಾವು ಒಂದೇ ಸಮನೆ ಈ ವ್ಯವಸಾಯದಲ್ಲಿ ಏನು ಒಂದು ಪ್ರಗತಿಯನ್ನು ನಿರೀಕ್ಷಿಸಿದ್ದೇವೋ ಅದು ಕಂಡುಬಂದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಆದುದರಿಂದ ಇದರ ಬಗ್ಗೆ ಸ್ವಲ್ಪ ಸ್ಥೂಲವಾಗಿ ಪರಿಶೀಲಿಸಿ ಈ ವ್ಯವಸಾಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ಮನವಿ ಮಾಡಿಕೊಂಡು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ.

ಈ ವ್ಯವಸಾಯದ ಇಲಾಖೆಯಲ್ಲಿ ಸಂಶೋಧನೆ, ವಿಸ್ತರಣೆ ಮತ್ತು ವಿದ್ಯಾಭ್ಯಾಸ ಇವು ಮೂರು ಮುಖ್ಯವಾದುವು. ನಮ್ಮ ರಾಜ್ಯದಲ್ಲಿ ಮಳೆ ನೀರನ್ನೇ ಆಧಾರವಾಗಿರುವ ಜಮೀನಿನ ಕಡೆ, ಅಂದರೆ ಡ್ರೈ ಕ್ರಾಪ್ಸ್ ಕಡೆ, ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದುವರೆಗೆ ಯಾವುದಾದರೂ ಕಮರ್ಶಿಯಲ್ ಕ್ರಾಪ್ಸ್ ಕಡೆಗೆ, ಡ್ರೈ ಕ್ರಾಪ್ಸ್ ಕಡೆಗೆ ಯಾವ ವಿಧವಾದ ಸಂಶೋಧನೆಯ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಅದನ್ನು ಸರ್ಕಾರ ಗಮನಿಸಬೇಕು.

ಇನ್ನು ಈಗ ಇರತಕ್ಕಂಥ ವಿಸ್ತರಣೆ ವಿಚಾರ ತೆಗೆದುಕೊಂಡರೆ ಈಗಿನ ಪ್ರಗತಿ ಸಾಲದು. ಹಳ್ಳಿಯ ರೈತರಿಗೆ ಈ ಯೋಜನೆಯು ಪೂರ್ಣ ಉಪಯೋಗವಾಗುವಂತೆ ಮಾಡಬೇಕು. ಈಗ ಜಿಲ್ಲಾ ಮಟ್ಟದಲ್ಲಿರತಕ್ಕಂಥ ಸಬ್ ಡಿವಿಷನ್ ಅಧಿಕಾರಿಗಳು ಮತ್ತು ಎನ್. ಇ. ಎಸ್. ಮಟ್ಟದಲ್ಲಿರತಕ್ಕಂಥ ಅಧಿಕಾರಿಗಳು ಏನು ಇದ್ದಾರೋ ಅವರು ರೈತರ ಅನುಕೂಲಕ್ಕೆ ಬೇಕಾದ ವಿಷಯ ಸಂಗ್ರಹಣೆ ಮಾಡಿರುವುದು ಸಾಲದು. ಆದುದರಿಂದ ಅವರಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟು ಅವರು ಹೆಚ್ಚು ವಿಷಯವನ್ನು ಸಂಗ್ರಹಣೆ ಮಾಡಿಕೊಂಡು ರೈತನಿಗೆ ಹೆಚ್ಚು ಪ್ರಯೋಜನವಾಗುವಂಥ ರೀತಿಯಲ್ಲಿ ಒಂದು ವ್ಯವಸ್ಥೆ ಮಾಡಬೇಕು. ಈಗ ನೀವು ಮಾಡುವಂಥ ಖರ್ಚು ಅನ್ಯಾಯವಾಗುತ್ತಿದೆ ಮತ್ತು ಅದರಿಂದ ರೈತನಿಗೆ ಯಾವ ಉಪಕಾರವೂ ಆಗುವುದಿಲ್ಲ ಎಂದು ಹೇಳಬಯಸುತ್ತೇನೆ.

ಇನ್ನು ವ್ಯವಸಾಯದ ವಿದ್ಯಾಭ್ಯಾಸದ ವಿಚಾರವಾಗಿ ಹೇಳಬೇಕಾದರೆ, ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ 20-30 ರೂಪಾಯಿ ಕೊಡುತ್ತಾರೆಂದು ದುಡ್ಡಿಗಾಗಿ ಯಾವರೀತಿ ಅಪರೇಷನ್ ಮಾಡಿಸಿಕೊಳ್ಳುತ್ತಾರೋ ಆ ರೀತಿ ಸ್ಟೈಪೆಂಡ್‌ಗೋಸ್ಕರ ಬಂದಿರುವಂಥವರಿಗೆ ತರಪೇತಿ ಕೊಟ್ಟರೆ ಸಾಲದು. ಅವರು ಯಾವ ಯಾವ ಭೂಮಿಯಲ್ಲಿ ವ್ಯವಸಾಯ ಮಾಡಿದ್ದಾರೆ, ಅವರಿಗೆ ಎಷ್ಟು ಎಕರೆ ಭೂಮಿ ಇದೆ, ಅವನ ತಂದೆತಾಯಿಗಳಿಗೆ ಏನು ಕೆಲಸ, ಅವನು ಬೇಸಾಯ ಮಾಡಲು ಎತ್ತು ಇಟ್ಟಿದ್ದಾರೆಯೇ ಇದೆಲ್ಲಾ ವಿಚಾರ ಮಾಡಬೇಕು. ಅವರಿಗೆ ಸ್ವಂತವಾಗಿ 10 ಎಕರೆ ಅಥವಾ 5 ಎಕರೆ ಭೂಮಿ ಇರಬೇಕು, ಅವನೇ ಸ್ವಂತವಾಗಿ ವ್ಯವಸಾಯ ಮಾಡತಕ್ಕ ಅನುಭವ ಇರಬೇಕು. ಅಂಥಹವರನ್ನು ಮಾತ್ರ ಈ ವ್ಯವಸಾಯ ಕಾಲೇಜಿಗೆ ಸೇರಿಸಿಕೊಂಡು ತರಪೇತಿ ಕೊಡಬೇಕೇ ಹೊರತು ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ಈಗ ಆಗತಕ್ಕಂಥ ವ್ಯವಸಾಯದ ಬಾಬಿನ ಖರ್ಚು ನಿಲ್ಲಿಸಬೇಕು.

ಇನ್ನು ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ಪ್ರತಿಯೊಬ್ಬರೂ ಹೇಳಿದ್ದಾರೆ. ಇದರ ಕಾರ್ಯಕ್ರಮವನ್ನು ವರ್ಷೇ ವರ್ಷೇ ಜಾಸ್ತಿ ಮಾಡುವ ಬದಲು ಕಡಿಮೆ ಮಾಡಿಕೊಂಡು ಬರುತ್ತಾ ಇದ್ದಾರೆ. ಇದಕ್ಕಾಗಿ 1966-67ನೇ ಸಾಲಿನಲ್ಲಿ 2 ಲಕ್ಷ 85 ಸಾವಿರ ಎಕರೆಯನ್ನು ಈ ಕಾರ್ಯಕ್ರಮಕ್ಕೆ ಅಳ

(ಶ್ರೀ ಜಿ. ರಾಮೇಗೌಡ)

ವಡಿಸಿಕೊಂಡು ಅಲ್ಲಿ ಬಾಂದುಗಳನ್ನು ಹಾಕುವುದಕ್ಕೆ ಏರ್ಪಾಡು ಮಾಡಿದ್ದಾರೆ. 1967–68 ರಲ್ಲಿ ಈ ಕಾರ್ಯಕ್ರಮವನ್ನು 95 ಸಾವಿರಕ್ಕೆ ಇಳಿಸಿದರು. 1968–69 ಕ್ಕೆ 50 ಸಾವಿರ ಇಳಿಸಿದರು. ಇನ್ನೂ ಸರಿಯಾದ ಅಂಕಿಅಂಶ ಕೊಟ್ಟಿಲ್ಲ ಇಷ್ಟಾದರೂ ಬಾವಿಗಳಲ್ಲಿ ನೀರೇ ಇರುವುದಿಲ್ಲ. ಆದುದರಿಂದ ಈ ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ದಿನೇ ದಿನೇ ಹೆಚ್ಚು ಕಾರ್ಯಕ್ರಮ ನಡೆಯಬೇಕೇ ಹೊರತು ಕಡಿಮೆ ಮಾಡುವುದರಲ್ಲಿ ಏನೂ ಅರ್ಥ ಇಲ್ಲ. ಅದನ್ನು ಯೋಚನೆ ಮಾಡಬೇಕು. ಈ ಸಾಯಿಲ್ ಕನ್‌ಸರ್ವೇಷನ್‌ನಲ್ಲಿ ವರ್ಷೇ ವರ್ಷೇ 100 ಕ್ಕೆ 25 ಭಾಗ ಕಡಿಮೆ ಮಾಡುತ್ತಿದ್ದಾರೆ. ಯಾವ ಅಧಿಕಾರಿಗಳಾಗಲಿ, ಯಾವ ಸಬ್ ಓವರ್‌ಸೀಯರ್ ಆಗಲಿ ಸಾಕಷ್ಟು ಸಿಬ್ಬಂದಿ ಇಲ್ಲ, ಬೆಂಗಳೂರು ಜಿಲ್ಲೆಯಲ್ಲಿರತಕ್ಕಂಥ ಸಬ್‌ಡಿವಿಷನಲ್ಲಿ ಕೆಲಸ ಮಾಡುವುದಕ್ಕೆ ಸಾಕಷ್ಟು ಸಿಬ್ಬಂದಿ ಇಲ್ಲ. ಹಾಗಿರುವಾಗ ನೆಪ ಮಾತ್ರಕ್ಕೆ ಸಬ್‌ಡಿವಿಷನ್ ಇಟ್ಟುಕೊಂಡಿದ್ದಾರೆ. ಇದರ ಅಂಕಿಅಂಶ ತೆಗೆದು ನೋಡಿದರೆ ರೈತನಿಗೆ ಏನೇನು ಅನ್ಯಾಯವಾಗುತ್ತದೆ ಎಂದು ಹೇಳಲು ಮನಸ್ಸಿಗೆ ನೋವಾಗುತ್ತದೆ. ಇದೇ ರೀತಿ ಎಲ್ಲಿಯವರೆಗೆ ಮುಂದುವರೆಯುತ್ತದೆ ಎಂದು ಕೇಳಬೇಕಾಗಿದೆ. ಆದುದರಿಂದ ದಯುವಿಟ್ಟು ಈ ಸಾಯಿಲ್ ಕನ್‌ಸರ್ವೇಷನ್ ಕೆಲಸ ಬಹಳ ಮುಖ್ಯವಾಗಿರುವುದರಿಂದ ಇದಕ್ಕೆ ಮೊದಲನೇ ಸ್ಥಾನ ಕೊಟ್ಟು ಕೆಲಸಮಾಡಿದರೆ ರೈತನಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಇದು ಉತ್ತಮವಾದ ಸಲಹೆಯಾದುದರಿಂದ ಇದರ ಬಗ್ಗೆ ಗಮನ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಸಾಯಿಲ್ ಟೆಸ್ಟಿಂಗ್‌ನಲ್ಲಿ ಆಧುನಿಕ ರೀತಿಯ ಎಲ್ಲ ಪದ್ಧತಿಗಳನ್ನೂ ಅನುಸರಿಸಬೇಕು, ರೈತರ ಭೂಮಿಯಲ್ಲಿ ಏನು ಸಾರವಿದೆ, ಎಂದು ಪರೀಕ್ಷೆ ಮಾಡಿ, ಆ ಸಾರಕ್ಕೆ ಅನುಸಾರವಾಗಿ ಏನೇನು ಗೊಬ್ಬರ ಹಾಕಬೇಕು. ಯಾವ ರೀತಿ ವ್ಯವಸಾಯ ಮಾಡಬೇಕು ಎನ್ನುವುದನ್ನು ತಿಳಿಯಪಡಿಸಬೇಕು. ಆದರೆ ಸರ್ಕಾರದಿಂದ ರೈತರಿಗೆ ಮಾಡಿಕೊಟ್ಟಿರುವ ಅನುಕೂಲಗಳಾದರೂ ಏನು ! ವರ್ಷೆವರ್ಷೇ ಎಷ್ಟು ಮಣ್ಣಿನ ಸಾರವನ್ನು ಪರೀಕ್ಷೆ ಮಾಡಬೇಕು ಎಂದು ಇಟ್ಟಿದ್ದೀರೊ ಅದನ್ನು ಕಡಮೆ ಮಾಡುತ್ತ ಬಂದಿದ್ದೀರಿ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದು ಟೆಸ್ಟಿಂಗ್ ಲ್ಯಾಬೋರೇಟರಿ ಮಾಡಿ ಎಂದರೆ ಅದನ್ನು ಮಾಡುವುದಕ್ಕೆ ಆಗಿಲ್ಲ. ನೀವು ಮಾಡುವುದಕ್ಕೆ ಆಗುವುದಿಲ್ಲವೆಂದರೆ, ನಾವು ಖಾಸಗಿಯಾಗಿ ಮಾಡುತ್ತೇನೆ, ಅದಕ್ಕೆ ಉತ್ತೇಜವನ್ನು ಕೊಡಿ ಎಂದರೆ ಅದನ್ನೂ ಮಾಡುವುದಿಲ್ಲ. ಸಾರ ಸಂರಕ್ಷಣೆ, ಸಾರ ಪರೀಕ್ಷೆ ಮಾಡಿ ಗೊಬ್ಬರ ಹಾಕತಕ್ಕ ರೀತಿ ಮತ್ತು ಎಂಥ ಗೊಬ್ಬರ ಹಾಕಬೇಕು ಎನ್ನುವುದನ್ನು ತಿಳಿಸದೆ ಇದ್ದರೆ ಏನು ಪ್ರಗತಿ ಮಾಡುವುದು ? ವ್ಯವಸಾಯ ಇಲಾಖೆಯನ್ನು ಚೆನ್ನಾಗಿ ಬೆಳೆಸಿದ್ದೀರಿ, ದೊಡ್ಡ ದೊಡ್ಡ ಹುದ್ದೆಗಳನ್ನು ನಿರ್ಮಾಣ ಮಾಡಿದ್ದೀರಿ, ಸಂಬಳಸಾರಿಗೆಗಳನ್ನು ಹೆಚ್ಚು ಮಾಡಿದ್ದೀರಿ. ಆದರೆ ಅವರಲ್ಲಿ ಅದಕ್ಕೆ ತಕ್ಕಂತೆ ದುಡಿಯಬೇಕು ಎನ್ನುವ ಉತ್ಸಾಹವಿಲ್ಲ. ನಾನು ಹೋದ ಸಲ ಒಂದು ಸಲಹೆ ಮಾಡಿದೆ. ಒಂದೊಂದು ಸಬ್‌ಡಿವಿಜನ್ನಿಗೆ ಒಬ್ಬ ಅಧಿಕಾರಿ ಮತ್ತು ಸಿಬ್ಬಂದಿ ಕೊಟ್ಟಿದ್ದೀರಿ. ಅವರ ಕೈಕೆಳಗೆ ಒಂದು ಟೆಸ್ಟಿಂಗ್ ಲ್ಯಾಬೊರೇಟರಿ ಇಡಿ ಎಂದು ಸಲಹೆ ಮಾಡಿದೆ. ಮಾಡುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದು ಇನ್ನೂ ಏನೂ ಆಗಿಲ್ಲ. ಈಹೊತ್ತು ಮಾನ್ಯ ಅಧ್ಯಕ್ಷರು ಎರಡು ನಿಮಿಷ ಅವಕಾಶ ಕೊಟ್ಟರೆ ಮಾತನಾಡಬಹುದು, ಇಲ್ಲದೆ ಇದ್ದರೆ ಇಲ್ಲ. ಯಾವರೀತಿಯಲ್ಲಿ ರೈತರಿಗೆ ಸಹಾಯ ಮಾಡಬಹುದು ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ನಮ್ಮ ಭಾಷಣದಿಂದ ಏನೂ ಆಗುವುಲ್ಲ. ಮಂತ್ರಿಗಳ ಹೃದಯ ಚೆನ್ನಾಗಿರಬೇಕು, ಅವರ ಹೃದಯಕ್ಕೆ ತಾಕಿ ಕೆಲಸ ಮಾಡಿದರೆ ಏನಾದರೂ ಅನುಕೂಲವಾಗುತ್ತದೆ.

ನೀರಾವರಿ ಬಾವಿಗಳ ವಿಷಯವನ್ನು ತೆಗೆದುಕೊಂಡರೆ ಮೊದಲು ಸರ್ಕಾರದವರು ಅದಕ್ಕೆ ಸಾಲ ಕೊಡುತ್ತಿದ್ದರು. 'ದತ್ತು ಮಗನಿಗೆಲ್ಲ ಪಿತೃ ಭಕ್ತಿ' ಎನ್ನುವಂತೆ ಆಗಿದೆ ಈಗ ಇದರ ಪರಿಸ್ಥಿತಿ. ನೀರಾವರಿ ಬಾವಿಗಳಿಗೆ ಸಾಲಕೊಡುವುದನ್ನು ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ವಹಿಸಿದ್ದಾರೆ. ಅವರು 90 ಪರ್ಸೆಂಟ್ ಬಾಕಿ ವಸೂಲಾಗಿದ್ದರೆ ಸಾಲ ಕೊಡುತ್ತಾರೆ, ಇಲ್ಲದೆ ಇದ್ದರೆ ಇಲ್ಲ ಎಂದು ಹೇಳುತ್ತಾರೆ. ಸರ್ಕಾರ ಎಷ್ಟು ಸುಲಭವಾಗಿ ಪಕ್ಕಕ್ಕೆ ಸರಿದಿದ್ದಾರೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇದರಲ್ಲಿ ಸದುದ್ದೇಶವಿದೆಯೋ, ದುರುದ್ದೇಶವಿದೆಯೋ ಗೊತ್ತಿಲ್ಲ. ಮೊದಲನೆ ವರ್ಷ ಸಾಲ ಕೊಟ್ಟರು, ಎರಡನೇ ವರ್ಷ ಕೊಟ್ಟರು ಮೂರನೇ ವರ್ಷದಲ್ಲಿ ಕಳೆದ ವರ್ಷ ಕೊಟ್ಟಿದ್ದರ ಅರ್ಧ ಭಾಗ ಕೂಡ ಕೊಡುವುದಕ್ಕೆ ಆಗುವುದಿಲ್ಲ. ಅಂಥ ಪದ್ಧತಿಯನ್ನು ಮಾಡಿದ್ದಾರೆ. ರೈತರಿಗೆ ನೂರು ಬಾವಿಗಳಿಗೆ ಸಾಲ ಕೊಟ್ಟಿರುವುದರಲ್ಲಿ 25 ಬಾವಿಗಳಲ್ಲಿ ಬಂಡೆ ಬಿದ್ದಿದೆ, 25 ಬಾವಿಗಳನ್ನು ತೆಗೆಯುವುದಕ್ಕೇ ಪ್ರಯತ್ನ ಮಾಡಿಲ್ಲ. 50 ಬಾವಿಗಳು ಮಾತ್ರ ಪೂರೈಸಿವೆ. ಇದರ ಬಗ್ಗೆ ಜವಾಬ್ದಾರಿಯನ್ನ ಯಾರಿಗೆ ಕೊಟ್ಟಿದ್ದಾರೆ ಅವರು ಅದನ್ನು ನಡೆಸದೆ ಇದ್ದರೆ ಹೇಗೆ ? ಈ ರೀತಿಯಲ್ಲಿ ರೈತರಿಗೆ ತೊಂದರೆ ಕೊಡುತ್ತಿದ್ದಾರೆ.

1967-68ನೇ ಸಾಲಿನಲ್ಲಿ 17,879 ಬಾವಿಗಳಲ್ಲಿ 15 ಸಾವಿರ ಬಾವಿಗಳಿಗೆ ಮಾತ್ರ ಎಲೆಕ್ಟ್ರಿಸಿಟಿ ಕೊಟ್ಟು ಸರ್ವಿಸ್ ಕೊಟ್ಟಿದ್ದಾರೆ. ಈ ಬಾವಿಗಳು ಸಾಲ ಕೊಟ್ಟು ತೆಗೆದಿರುವುವು. ಸ್ವಂತವಾಗಿ ತೆಗೆದಿರುವ ಬಾವಿಗಳಿಗೆ ವಿದ್ಯುತ್‌ಶಕ್ತಿಯನ್ನು ಕೊಟ್ಟಿಲ್ಲ. ಪಂಪ್‌ಗಳ ವಿತರಣೆಯನ್ನು ಷೆಡ್ಯೂಲ್ ಬ್ಯಾಂಕುಗಳಿಗೆ ಮತ್ತು ಸಹಕಾರ ಬ್ಯಾಂಕುಗಳಿಗೆ ತಳ್ಳಿದ್ದಾರೆ. ನಿಮ್ಮ ಟಾರ್ಗೆಟ್ ಪ್ರಕಾರ ಏನಾದರೂ ನಡೆಯುತ್ತಿದೆಯೇ ? ನಡೆಯಲಿಲ್ಲವೆಂದರೆ ಕಾರಣವೇನು ? ಎಲ್ಲ ರೀತಿಯಲ್ಲಿಯೂ ಬಹಳ ಅಸಮರ್ಪಕವಾಗಿದೆ. ಇದನ್ನೆಲ್ಲ ಸರಿಯಾಗಿ ನಡೆಸಬೇಕು, ಮತ್ತು ಇದನ್ನು ನೋಡತಕ್ಕ ಜವಾಬ್ದಾರಿ ಮಾನ್ಯ ಮಂತ್ರಿಗಳಿಗೆ ಇರಬೇಕು ಎಂದು ನಾನು ಒತ್ತಾಯ ಮಾಡಿ ಹೇಳುತ್ತೇನೆ. ನಮ್ಮ ಪ್ರಗತಿಗೆ ಬರುವ ಅಡ್ಡಿ ಆತಂಕಗಳನ್ನು ಮಾನ್ಯ ಮಂತ್ರಿಗಳು ಸ್ವಲ್ಪ ದಯವಿಟ್ಟು ಗಮನಿಸಬೇಕು.

ಟ್ರಾಕ್ಟರುಗಳ ವಿಷಯ ತೆಗೆದುಕೊಂಡರೆ 290 ಟ್ರಾಕ್ಟರುಗಳನ್ನು ಕೊಟ್ಟಿದ್ದಾರೆ. ಅವುಗಳಿಗೆ ಬೇಕಾದ ಟೈರುಗಳು ಸಿಕ್ಕುವುದಿಲ್ಲ, ಬಿಡಿ ಭಾಗಗಳು ಸಿಕ್ಕುವುದಿಲ್ಲ, ಟೈರುಗಳಿಲ್ಲದೆ ಅನೇಕ ಟ್ರಾಕ್ಟರುಗಳನ್ನು ನಿಲ್ಲಿಸಿದ್ದಾರೆ. ಮಳೆ ಬಂದರೆ ಉಳುವುದಕ್ಕೆ ಟ್ರಾಕ್ಟರುಗಳಿಗೆ ಟೈರುಗಳಿಲ್ಲ. ಇದು ಬಹಳ ಮುಖ್ಯವಾದ ಪ್ರಶ್ನೆ. ಇಂಥ ಕಡೆ ಟೈರುಗಳಿವೆ ಎಂದರೆ ಅದು ಯಾವ ರೈತನಿಗಾದರೂ ದೊರಕಲು ಸಾಧ್ಯವಿದೆಯೇ ಎಂದು ನೋಡಬೇಕು. ಒಂದು ಟೈರಿಗೆ 300 ರೂಪಾಯಿ ಲಾಭ ತೆಗೆದುಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಟ್ರಾಕ್ಟರುಗಳನ್ನು ರಿಪೇರಿ ಮಾಡತಕ್ಕ ವ್ಯವಸ್ಥೆ ಮಾಡುತ್ತೇವೆಂದು ಹೇಳುತ್ತಿದ್ದರು. ಇನ್ನೂ ವರೆಗೆ ಏನೂ ಆಗಿಲ್ಲ. ಬಿಡಿ ಭಾಗಗಳು ರೈತರಿಗೆ ಸರಿಯಾದ ಬೆಲೆಗೆ ಸಿಕ್ಕತಕ್ಕ ವ್ಯವಸ್ಥೆ ಇಲ್ಲ. ಟ್ರಾಕ್ಟರುಗಳಿಗೆ ಬೇಕಾದ ಟೈರು ಮತ್ತು ಬಿಡಿ ಭಾಗಗಳು ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಬೋರ್‌ವೆಲ್‌ಗಳ ವಿಚಾರ ತೆಗೆದುಕೊಂಡರೆ ರಾಜ್ಯದಲ್ಲಿರುವ 19 ಜಿಲ್ಲೆಗಳಲ್ಲಿ 174 ತಾಲ್ಲೂಕುಗಳಿದ್ದರೂ ಕೇವಲ 70 ಬೋರ್‌ವೆಲ್ ಹಾಕಿದ್ದೇವೆಂದು ಹೇಳಿದ್ದಾರೆ. ಒಂದೊಂದು ತಾಲ್ಲೂಕಿಗೆ ಒಂದೊಂದು ಬೋರ್‌ವೆಲ್ ಹಾಕತಕ್ಕ ವ್ಯವಸ್ಥೆಯಾಗಿಲ್ಲ ಎಂದರೆ ಏನು ಮಾತು ? ರೈತನಿಗೆ ರಿಯಾಯಿತಿ ದರದಲ್ಲಿ ಬೋರ್‌ವೆಲ್‌ಗಳನ್ನು ಹಾಕತಕ್ಕುದು ಬಹಳ ಒಳ್ಳೆಯದು. ಕಷ್ಟ ಪರಿಸ್ಥಿತಿಯಲ್ಲಿರುವ ರೈತ ಸಹಸ್ರ ರೂಪಾಯಿಗಳನ್ನು ಖರ್ಚು ಮಾಡಿದರೂ ನೀರು ಸಿಕ್ಕದೆ ಇರುವಾಗ ಬೋರ್‌ವೆಲ್‌ಗಳನ್ನು ಸುಲಭವಾಗಿ, ಕಡಿಮೆ ದರದಲ್ಲಿ ಹಾಕುವ ವ್ಯವಸ್ಥೆ ಮಾಡಿ ಪಂಪ್‌ಸೆಟ್‌ಗಳನ್ನು ಹಾಕಿಕೊಟ್ಟರೆ ರೈತನಿಗೆ ಸಹಾಯ ಮಾಡಿದಂತಾಗುತ್ತದೆ. ಒಂದು ವರ್ಷದಲ್ಲಿ 70 ಬೋರ್‌ವೆಲ್ ಮಾತ್ರ ಮಾಡಿಕೊಟ್ಟರೆ ಪ್ರಗತಿ ಸಾದಿಸಿದ್ದೇವೆಂದು ಹೇಗೆ ಹೇಳುತ್ತೀರಿ ? ಯಾವಾಗ ಕೇಳಿದರೂ ಹಣವಿಲ್ಲದೆಂದು ಹೇಳುತ್ತೀರಿ. ಅನ್ಯಾಯವಾಗಿ ಹಣ ಖರ್ಚಾಗತಕ್ಕ ಇಲಾಖೆಗಳಿವೆ. ಆ ಇಲಾಖೆಗಳಿಂದ ತೆಗೆದುಕೊಳ್ಳಿ ಅಥವಾ ನೀವು ಎಷ್ಟು ಹಣ ಕೇಳಿದರೂ ಕೊಡುತ್ತೇವೆ. ವ್ಯವಸಾಯ ಇಲಾಖೆಯ ಬೇಡಿಕೆ ಮೂಲಕ ಕೊಡುವ ಹಣದಲ್ಲಿ ಮೀನುಗಾರಿಕೆಗೆ ಅಷ್ಟು, ತೋಟಗಾರಿಕೆ ಅಷ್ಟು, ಹೋಗುತ್ತದೆ. ಉಳಿದದ್ದು ವ್ಯವಸಾಯ ಇಲಾಖೆಯ ಅಧಿಕಾರಿಗಳಿಗೆ ಸಂಬಳ ಕೊಡುವುದಕ್ಕೆ ಮಾತ್ರ ಆಗುತ್ತದೆ. ಇನ್‌ಸೆಕ್ಟಿಸೈಡ್ಸ್, ಪೆಸ್ಟಿಸೈಡ್ಸ್, ಕೊಡಿ ಎಂದು ಕೇಳಿದರೆ ಇಲಾಖೆಯಿಂದ ತರಿಸಿ ಸಬ್ಸಿಡೈಸ್ ಮಾಡಿ ಕೊಡುತ್ತಾರೆ. ಈ ಕ್ರಿಮಿನಾಶಕಗಳನ್ನು ಉಪಯೋಗ ಮಾಡಿದರೆ ಇಲಿಗಳು ಸಾಯುವುದಿಲ್ಲ, ಸೊಳ್ಳೆಗಳು ಸಾಯುವುದಿಲ್ಲ, ಗಿಡ್ಡಲು ಹೋಗುವುದಿಲ್ಲ ಇಂಥ ಮದ್ದುಗಳನ್ನು ಕೊಡುತ್ತಾರೆ. ಒಳ್ಳೆಯ ಮದ್ದುಗಳು ಮಾರುಕಟ್ಟೆಯಲ್ಲಿವೆ. ಅವನ್ನು ತೆಗೆದುಕೊಳ್ಳಲು ರೈತರ ಹತ್ತಿರ ದುಡ್ಡು ಇರುವುದಿಲ್ಲ. 'ಕಿಮೆಟ್' ಎಂಬ ಶ್ರೇಷ್ಠವಾದ ಮದ್ದು ಇದೆ. ಅದು ಒಂದು ಕೆ.ಜಿ. ಗೆ 8 ರೂಪಾಯಿ ಆಗುತ್ತದೆ. ಅದನ್ನು ಒದಗಿಸಿ ಎಂದರೆ ಇಲಾಖೆಯವರು ಅದನ್ನು ಕೊಡತಕ್ಕ ವ್ಯವಸ್ಥೆ ಮಾಡಿಲ್ಲ. ಸುಲಭವಾಗಿ ಸಿಕ್ಕುವುದು, ಅವರಿಗೆ ಬೇಕಾಗಿರುವ ಕಂಪೆನಿಗಳಲ್ಲಿ ಬರುವಂಥದು, ಇವುಗಳನ್ನು ಮಾತ್ರ ಒದಗಿಸುತ್ತಾರೆ. ಇದರಿಂದ ರೈತ ಕಣ್ಣು ಕಣ್ಣು ಬಿಡತಕ್ಕ ಪರಿಸ್ಥಿತಿ ಬಂದಿದೆ. ಕ್ರಿಮಿನಾಶಗಳನ್ನು ಒದಗಿಸುವಾಗ ಉತ್ತಮವಾದುದನ್ನೂ, ಪ್ರಯೋಜನವಾಗುವಂಥದನ್ನೂ ತಂದು ಕೊಡಬೇಕು. ಕಿರ್ಲೋಸ್ಕರ್ ಪಂಪ್‌ಸೆಟ್‌ಗಳಿಗೆ ಆಂಧ್ರ ಮತ್ತು ಮದ್ರಾಸಿನಲ್ಲಿ ಏನು ಬೆಲೆ ಗೊತ್ತು ಮಾಡಿದ್ದಾರೆ, ನಮ್ಮ ರಾಜ್ಯದಲ್ಲಿ ಏನು ಬೆಲೆ ಗೊತ್ತುಮಾಡಿದ್ದಾರೆ ? ಅದೇ ರೀತಿ 'ಗಂಗ' ಡೀಸೆಲ್ ಪಂಪ್‌ಸೆಟ್‌ಗೆ ಯಾವ ರೀತಿಯಾಗಿ ಬೆಲೆಗಳನ್ನು ಆಂಧ್ರ ಮತ್ತು ಮದ್ರಾಸ್ ರಾಜ್ಯಗಳಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಗೊತ್ತುಮಾಡಿದ್ದಾರೆ ಎನ್ನುವುದನ್ನು ನೋಡಿದರೆ ಅದರಲ್ಲಿ ಬಹಳ ವ್ಯತ್ಯಾಸವಿರುವುದು ಗೊತ್ತಾಗುತ್ತದೆ. ನಾವು ಏನಾದರೂ ಕೇಳಿದರೆ ಟೆಂಡರ್ ಕರೆಯಲಾಗಿತ್ತು, ಅದರ ಪ್ರಕಾರ ಕಡಮೆ ದರ ಕೊಟ್ಟುದನ್ನು ಅಂಗೀಕಾರ ಮಾಡಿದ್ದೇವೆಂದು ಹೇಳುತ್ತಾರೆ, ಬೇರೆ ರಾಜ್ಯಗಳಲ್ಲಿ ಹೇಗಿದೆ, ನಮ್ಮ ರಾಜ್ಯದಲ್ಲಿ ಯಾವ ದರವನ್ನು ಗೊತ್ತುಮಾಡಿಕೊಳ್ಳಬೇಕು ಎನ್ನುವುದನ್ನು ಆಲೋಚನೆ ಮಾಡಬೇಕಾದ್ದು ಇಲಾಖೆಯವರ ಆದ್ಯ ಕರ್ತವ್ಯ. ಆ ಕಾರ್ಯ

(ಶ್ರೀ ಜಿ. ರಾಮೇಗೌಡ)

ವನ್ನು ಮಾಡದೆ ಬಂದಿದ್ದ ಮೂರು ಟೆಂಡರುಗಳಲ್ಲಿ ಒಂದು ಕಡಮೆ ಇದ್ದುದನ್ನು ಒಪ್ಪಿಕೊಂಡಿದ್ದೇವೆಂದರೆ ಎಷ್ಟು ತೊಂದರೆಯಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು.

ಉತ್ತಮವಾದ ಬೀಜಗಳು ಸಿಕ್ಕುವುದಿಲ್ಲ ಎಂದು ಇಲಾಖೆಯವರಿಗೆ ಹೇಳುತ್ತಿದ್ದೇವೆ. ರೈತರಿಗೆ ಒದಗಿಸುವ ಬೀಜಗಳಲ್ಲಿ ಸೇಕಡ 50 ಭಾಗ ಚೆನ್ನಾಗಿರುವುದಿಲ್ಲ. ಉಳುಮೆ ಮಾಡಿ, ಬಿತ್ತನೆ ಮಾಡಿ ಮೊಳಕೆ ಬರದೆ ಇದ್ದರೆ ರೈತ ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ. ಒಂದು ಒಳ್ಳೆಯ ಮಾತು ಹೇಳಿ, ಉತ್ತಮವಾದ ಬೀಜಗಳನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಮಾಡದೆ ಇದ್ದರೆ ವ್ಯವಸಾಯವನ್ನು ಯಾವ ರೀತಿಯಿಂದ ಉತ್ತಮಪಡಿಸುತ್ತೀರಿ ಎನ್ನುವುದನ್ನು ಆಲೋಚನೆ ಮಾಡಬೇಕು. ಉತ್ತಮವಾದ ಬೀಜವಿಲ್ಲ, ಸಾಕಷ್ಟು ನೀರಿಲ್ಲ, ಭೂಮಿಯಲ್ಲಿರುವ ಸಾರ ಪರೀಕ್ಷೆ ಮಾಡುವ ವ್ಯವಸ್ಥೆ ಸರಿಯಾಗಿಲ್ಲ, ಎಷ್ಟರಮಟ್ಟಿಗೆ ನಿರೀಕ್ಷೆ ಮಾಡಿದ್ದೆವೋ ಅಷ್ಟರಮಟ್ಟಿಗೆ ಸಮರ್ಪಕವಾಗಿ ನಡೆದಿಲ್ಲ. ಪ್ರಗತಿ ಪಕ್ಷದಲ್ಲಿ ನಡೆಯುವುದಕ್ಕೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಟ್ಟಿಲ್ಲ, ಆಧುನಿಕ ರೀತಿಯಲ್ಲಿ ವ್ಯವಸಾಯ ಮಾಡಲು ಬೇಕಾಗಿರುವ ಉಪಕರಣಗಳನ್ನು ಒದಗಿಸಿಲ್ಲ. ಇದನ್ನು ಮೊದಲು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

4–30 P.M.

ಇನ್ನು ಅನಿಮಲ್ ಹಸ್ಬೆಂಡ್ರಿ ಇಲಾಖೆಗೆ ಸಂಬಂಧಪಟ್ಟಂತೆ ಒಂದೆರಡು ಮಾತನ್ನು ಹೇಳುತ್ತೇನೆ. ಈ ಇಲಾಖೆಯ ಮಂತ್ರಿಗಳು ಬಹಳ ಒಳ್ಳೆಯವರು. ಆದರೆ ಅವರಿಗೆ ಕೋಳಿ ವಿಚಾರ ಗೊತ್ತಿಲ್ಲ, ಮೊಟ್ಟೆ ವಿಚಾರ ಸರಿಯಾಗಿ ಗೊತ್ತಿಲ್ಲ, ಹಸು ಎಂದರೆ ಹಾಲು ಕೊಡುವ ಪ್ರಾಣಿ ಎಂದು ಅವರು ತಿಳಿದುಕೊಂಡಿದ್ದಾರೆ, ಅವರಿಗೆ ಮಾಂಸದ ವಾಸನೆ ಗೊತ್ತಿಲ್ಲ, ಅವರಿಗೆ ಉತ್ತಮವಾದ ಮಂತ್ರಿಯಾಗಿ ಕೆಲಸಮಾಡಬೇಕೆಂಬ ಆಸೆ ಇದೆ. ಹಳ್ಳಿಗಳಲ್ಲಿ ಕೃತಕ ಗರ್ಭಧಾರಣೆಯ ಕೇಂದ್ರವಿದೆ, ಅಲ್ಲಿಗೆ ಹಗಲು—ರಾತ್ರಿ ಯಾವಾಗ ಹೋದರೂ ಸೆಮನ್ ಇಟ್ಟು ದನಗಳಿಗೆ ಅದನ್ನು ಉಪಯೋಗಮಾಡುವುದು ಇರುವ ಕ್ರಮ. ಆದರೆ ಈಗ ಹೋದರೆ ನಾಳೆ ಬಾ ಎಂದು ಹೇಳುತ್ತಾರೆ. ನಾಳೆ ಹೋದರೆ ಹಳ್ಳಿಕಾರ್ ರಾಸುಗಳಿಗೆ ಸಂಬಂಧಪಟ್ಟ ವೀರ್ಯ ಇಲ್ಲವೆಂದು ಹೇಳುತ್ತಾರೆ. ಇನ್ನೊಂದು ದಿನ ಹೋದರೆ ಇನ್ನೇನಾದರೂ ನೆವ ಹೇಳಿ ಕಳಿಸುತ್ತಾರೆ. ಏಕೆ ಹೀಗೆ ಎಂದರೆ ಏನಾದರೂ ನೆವ ಹೇಳುತ್ತಾರೆ. ಅವರಲ್ಲಿ ವೀರ್ಯವಿರುವಾಗ ನಮ್ಮ ಹಸು ಹೀಟ್‌ಗೆ ಬರಬೇಕು. ಅದು ಹೀಟ್‌ಗೆ ಬಂದಾಗ ಅವರಲ್ಲಿ ವೀರ್ಯವಿರುವುದಿಲ್ಲ. ಜನರೇ ವೀರ್ಯ ಯಾವಾಗ ಇರುತ್ತದೆ ಎಂದು ತಿಳಿದುಕೊಳ್ಳಬೇಕು. ಇದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇನೆ. ಹೇಳಿದರೆ ಅವರಿಗೆ ಪರಿಸ್ಥಿತಿ ಉತ್ತಮಪಡಿಸುವುದಕ್ಕೆ ಕೂಡ ಮನಸ್ಸಿಲ್ಲ. ಕೋಳಿಗೆ ಇನಾಕ್ಯುಲೇಷನ್ ಮಾಡುತ್ತಾರೆ, ಅದಕ್ಕೆ ಒಂದಾಣೆ ಛಾರ್ಜುಮಾಡುತ್ತಾರೆ, ಇದನ್ನು ಛಾರ್ಜ್ ಮಾಡಬಾರದು ದನಗಳಿಗೆ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ನಿಗೆ ಉಚಿತವಾಗಿ ಅವಕಾಶ ಮಾಡಿರುವಾಗ ಕೋಳಿಗೆ ಇನಾಕ್ಯುಲೇಷನ್ ಮಾಡುವುದಕ್ಕೆ 6 ಪೈಸೆ ತೆಗೆದುಕೊಳ್ಳುವುದು ಸರಿಯಲ್ಲ. ಇದನ್ನು ಹೇಳಿದರೂ ಕೂಡ ಈಗಲೂ 6 ಪೈಸೆ ವಸೂಲುಮಾಡುತ್ತಿದ್ದಾರೆ. ಮೊಟ್ಟೆಯ ಬೆಲೆ 15 ಪೈಸೆ ಆಗಿದೆ. ಕೋಳಿಯನ್ನು ಸಾಕುವುದು ಹೇಗೆ? ರೈತರ ಮನೆಯಲ್ಲಿ ನೂರು ಇನ್ನೂರು ಮೊಟ್ಟೆಗಳಿರುತ್ತವೆ, ಇಲಾಖೆಯಲ್ಲಿ ಸುಮಾರು 5 ಲಕ್ಷ ಮೊಟ್ಟೆಗಳಿವೆ. ಮೊಟ್ಟೆಗಳ ಉತ್ಪತ್ತಿಯನ್ನು ಹೆಚ್ಚಿಸಲು ಸರಿಯಾಗಿ ಅವಕಾಶ ಮಾಡಿಲ್ಲ. ಮೊಟ್ಟೆಗಳನ್ನು ಎಂಟು ದಿವಸ ಇಟ್ಟರೆ ವಾಸನೆ ಬರುತ್ತದೆ. ಈ ಕಷ್ಟ ಮಂತ್ರಿಗಳಿಗೆ ಗೊತ್ತಿಲ್ಲ. ಅವರು ಮೊಟ್ಟೆ ತಿನ್ನುವುದಿಲ್ಲ. ಎಷ್ಟು ದಿನವಾದರೂ ಮೊಟ್ಟೆ ಇರುವುದಿಲ್ಲ. ಇದನ್ನು ಆಲೋಚನೆಮಾಡಿ ಇದಕ್ಕೇನು ಮಾಡಬೇಕು ಎಂದು ರೈತರಿಗೆ ತಿಳಿಸದಿದ್ದರೆ ಅವರಿಗೆ ಕಷ್ಟವಾಗುವುದು.

ಇನ್ನು ಡೈರಿ ಇದೆ. ಒಂದು ಲೀಟರು ಹಾಲಿಗೆ 150 ಪೈಸೆ, 120 ಪೈಸೆ ಎಂದು ಯಾವ ಆಧಾರದಮೇಲೆ ಗೊತ್ತುಮಾಡಿದ್ದಾರೆ? ಯಾರನ್ನು ಕೇಳಿ ಮಾಡಿದ್ದಾರೆ? ಇದು ಹುಚ್ಚು ದರ್ಬಾರು. ಇದಕ್ಕೇನು ಫಾರ್ಮುಲ ಇದೆ, ಬೇಸಿಸ್ ಏನಿದೆ, ಇದರ ಲೆಕ್ಕಾಚಾರ ಹೇಗೆ ಎಂಬುದು ಗೊತ್ತಿಲ್ಲ. ಮಳೆ ಬಂದಾಗ ದರ ಕಡಮೆ ಇರಬಹುದು. ಅದನ್ನು ಒಪ್ಪಬಹುದು. ಈಗ ಮಾರ್ಚಿ ತಿಂಗಳಲ್ಲಿ 70 ಪೈಸೆ ಯಾವ ಆಧಾರದಮೇಲೆ ಮಾಡಿರುವುದು ಒಂದೆರಡು ಸಾವಿರ ರೂಪಾಯಿಗಳನ್ನು ಕೊಟ್ಟು ಹಸುಗಳನ್ನು ತಂದಿರುವಾಗ 70 ಪೈಸೆ ದರ ನಿಗದಿಮಾಡುವುದು ಸರಿಯೇ? ಹುರುಳಿಗೆ 80 ರೂಪಾಯಿ ಬೆಲೆ ಇದೆ, ಬೂಸ ಮುಂತಾದುವುಗಳ ಬೆಲೆ ಏರಿದೆ. ಹೀಗಿರುವಾಗ ಹಾಲನ್ನು ಕೊಳ್ಳುವ ಬೆಲೆ ನಿಗದಿಮಾಡಿರುವುದು ಸರಿಯಿಲ್ಲದೆ ಅನ್ಯಾಯವಾಗಿದೆ.

ಹಳ್ಳಿಗಳವರಿಗೆ ದನಗಳನ್ನು ಕೊಂಡು ಹಾಲನ್ನು ಸರಬರಾಯಿ ಮಾಡಲು ಧನಸಹಾಯ ವಗೈರೆ ಮಾಡಿ, ಸೊಸೈಟಿಯ ಮೂಲಕ ಲಕ್ಷಾಂತರ ರೂಪಾಯಿಗಳನ್ನು ಕೊಡಿಸಿ ಅದರಿಂದ ಹಸು ಮತ್ತು ಎಮ್ಮೆಗಳನ್ನು ತಂದಿರುವಾಗ 70 ಪೈಸೆಗೆ ದರ ಇಳಿಸಿರುವುದು ಸರಿಯೇ? ಹೀಗೆ ಮಾಡಿದರೆ ರೈತರಿಗೆ ಆಸೆ ತೋರಿಸಿ ಅವರನ್ನು ಗಲ್ಲಿಗೆ ಏರಿಸಿದಂತಾಗುವುದು. ಒಂದೊಂದು ಸಾವಿರ ರೂಪಾಯಿ ಬೆಲೆ ಬಾಳುವ ರಾಸುಗಳನ್ನು ತಂದು ಸಾಕಿರುವವರ ಗತಿ, ಹೀಗೆ ಮಾಡಿದರೆ ಏನಾಗಬೇಕು? ನಾವು ಹೇಳುವುದನ್ನು ಆಲೋಚನೆಮಾಡಿ ಕೈಲಾದ ಸಹಾಯಮಾಡಬೇಕು. ಹಾಗೆ ಮಾಡಿದರೆ ಒಪ್ಪಬಹುದು. ಒಂದು ಎಗ್ಸಿಕ್ಯುಟಿವ್ ಕಮಿಟಿ ಮಾಡಿದ್ದಾರೆ, ಅದಕ್ಕೆ ಛೇರ್ಮನ್ ಇದ್ದಾರೆ. ಅದಕ್ಕೆ ಸರಿಯಾಗಿ ವಿಷಯ ತಿಳಿಯದಿರುವ ಯಾರನ್ನೋ ಸೆಕ್ರೆಟರಿಯಾಗಿ ಹಾಕಿದರೆ ಪ್ರಯೋಜನವೇನು? ಉತ್ತಮವಾದ ಹಾಲನ್ನು ಕಡಮೆ ಬೆಲೆಗೆ ಕೊಡಬೇಕೆಂದರೆ ಹೇಗೆ ಕೊಡಲು ಸಾಧ್ಯ? ಹಾಲು ಸರಬರಾಜು ಮಾಡುವವರಿಗಿರುವ ಕಷ್ಟ ಈ ಸಮಿತಿಯವರಿಗೆ ಗೊತ್ತಿಲ್ಲ. ಉತ್ಪತ್ತಿ ಮಾಡುವವರ ಪರವಾಗಿ ಒಬ್ಬರು ಆ ಸಮಿತಿಯಲ್ಲಿರಬೇಕು ಎಂದು ಹೇಳಿದರೂ ಅದಕ್ಕೆ ಮಂತ್ರಿಗಳು ಗಮನಕೊಟ್ಟಿಲ್ಲ. ಆ ಸಮಿತಿಗೆ ಸಂಬಂಧಪಟ್ಟ ಯೂನಿಯನ್ ಅಧ್ಯಕ್ಷರನ್ನಾದರೂ ಹಾಕಬಹುದಾಗಿತ್ತು. ಅದರ ಉತ್ಪಾದನೆ ಮಾಡುವವರ ಪರವಾಗಿ ಯಾರನ್ನೂ ಹಾಕಿಲ್ಲ. ಡೈರಿಗೆ 80 ಸಾವಿರ ಲೀಟರು ಹಾಲು ಬರುತ್ತಿತ್ತು, ಅದು 34 ಸಾವಿರ ಲೀಟರಿಗೆ ಇಳಿದಿದೆ, ಇದು ಸಮರ್ಪಕವಾಗಿಲ್ಲ. ಪರಂಗಿಯವರು ಇದ್ದಾಗ್ಗೆ ಅಮೃತಮಹಲ್ ಮತ್ತು ಹಳ್ಳಿಕಾರ್ ಈ ಎರಡು ಶ್ರೇಷ್ಠ ಜಾತಿಯ ಹಸುಗಳಿದ್ದುವು. ಎರಡನೆ ಯುದ್ಧವಾದಾಗ ಕೂಡ ಈ ಎರಡು ಜಾತಿಯ ದನಗಳು ಉಪಯೋಗದಲ್ಲಿದ್ದುವು. ಈಗೇನು ಮಾಡಿದ್ದಾರೆ ಎಂಬುದನ್ನು ಕೇಳಿ. ಹಳ್ಳಿಕಾರ್ ಮತ್ತು ಅಮೃತಮಹಲ್ ಜಾತಿಯ ರಾಸುಗಳ ಗತಿಯೇನಾಗಿದೆ ಎಂಬುದನ್ನು ನೋಡಿ. 50 ಈ ಜಾತಿಯ ರಾಸುಗಳು ಹುಟ್ಟಿದರೆ 75 ಸತ್ತವು ಎಂದು ಅಂಕಿಅಂಶ ಕೊಡುತ್ತಾರೆ! 7 ಮಾರಿದ್ದೇವೆ ಎಂದು ಹೇಳುತ್ತಾರೆ. ಈ ಎರಡೂ ಜಾತಿಯ ದನಗಳು ಬಹಳ ಉತ್ತಮ ಜಾತಿಯ ರಾಸುಗಳು, ಇವು ಸಾಕಷ್ಟು ಹಾಲು ಕೊಡುವುದಲ್ಲದೆ ಒಳ್ಳೆಯ ಲಕ್ಷಣಗಳಿಂದ ಕೂಡಿವೆ. ಇವುಗಳ ಉಪಯೋಗ ಎಷ್ಟರಮಟ್ಟಿಗಿದೆ ಎಂದರೆ 10 ಹಾರ್ಸ್ ಪವರ್ ಟ್ರ್ಯಾಕ್ಟರಿರುವಾಗ ಅದರ ಜೊತೆಗೆ 35 ಹಾರ್ಸ್ ಪವರ್ ಟ್ರ್ಯಾಕ್ಟರನ್ನು ಕೊಟ್ಟರೆ ಹೇಗೋ ಹಾಗಿದೆ. ದನಗಳ ಕೊಠಡಿ ನೋಡಿದರೆ ಅಲ್ಲಿದ್ದ ಜಿಂಕ್‌ಷೀಟುಗಳು ಹಾರಿಹೋದರೆ ಅವನ್ನು ಮತ್ತೆ ತಂದುಹಾಕಿರುವುದಿಲ್ಲ. ಈ ವಿಚಾರದಲ್ಲಿ ಕಾಗದ ಬರೆದು ಹೇಳಿದ್ದಾಗಿದೆ. ಹೆಸರುಘಟ್ಟ ರೀಸರ್ಚ್ ಸ್ಟೇಷನಿನಲ್ಲಿ ಹಳ್ಳಿಕಾರ್ ಜಾತಿ ಇದೆ. ಆದರೆ ಅಲ್ಲಿ ರೀಸರ್ಚ್ ಮಾಡಿರುವುದೇನು! ಹಳ್ಳಿಕಾರ್ ಜಾತಿಯ ಲಕ್ಷಣಗಳೇನು, ಅವುಗಳ ಕೊಂಬುಗಳ ಲಕ್ಷಣ, ಕಣ್ಣು ಮುಂತಾದುವುಗಳ ಲಕ್ಷಣ ಹೇಗಿರುತ್ತದೆ ಎಂಬುದನ್ನು ತಿಳಿದುಕೊಂಡಿರಬೇಕು. ನೂರಾರು ವರ್ಷಗಳಿಂದಿರುವ ಈ ರಾಸುಗಳು ನಶಿಸಿಹೋಗುವುದಕ್ಕೆ ಅವಕಾಶ ಕೊಡಕೂಡದು. ಈ ತಳಿಯನ್ನು ಕಾಪಾಡಬೇಕು. ಹಾಗೆ ಮಾಡದಿದ್ದರೆ ಇಂಥ ಉತ್ತಮವಾದ ಜಾತಿಯ ರಾಸುಗಳು ಸಿಕ್ಕುವುದು ಕಷ್ಟ. ಈ ಜಾತಿ ನಶಿಸಿಹೋಗಲು ಅವಕಾಶಕೊಟ್ಟರೆ ಸರಕಾರಕ್ಕೆ ಬಡತನ ಬರುತ್ತದೆ ಎಂದು ಹೇಳಿ ಈ ಬಗ್ಗೆ ವಿರೋಧವನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

DR. R. NAGAN GOUDA (Hospet) : Mr. Speaker Sir, I have heard with great interest the speech made by the hon. Member Sri Rame Gowda and I notice that, according to him, it is a disqualification for the Minister for Animal Husbandary to be a vegetarian. So the Chief Minister will hereafter note while appointing the Minister for Animal Husbandary to fined out whether he is a vegetarian or non-vegetarian.

At the outset, I feel Sir, that the Agriculture Department is proceeding in the right direction now. I am happy to say that the present Minister for Agriculture has gone a step beyond what his predecessor had done. His predecessor Mr. Nijalingappa being the Chief Minister then had increased the agricultural budget by only 2½ crores of rupees. But I notice that Mr. Rachaiah, the present Minister, has increased the budget over 1967-68 by about 5 crores of rupees or about 85 per cent of the budget. I welcome this step on the part of the Government, because, I feel that the Department of Agriculture is a friend of the cultivator and that is what it should be; and many of the officers are also

(SRI R. NAGAN GOUDA)

like that. I also notice from the Budget that there has been an increase in the staff of Experts, I notice that the establishment also has been increased. I am happy to see increase in the staff of the Agricultural Department. In this State of 250 lakhs papulation, 200 lakhs of people are cultivators. How many people do we need to get in touch with these people? I like the Assembly to compare these figures with the figures in the United States because that is a country where they have been producing good crops and it is that country which we are trying to emulate. We require a large number of people to get in touch with the cultivators. I am not one of those who feel that the staff is idling. If that is so, then it should be said that the staff is idling in every other department and so, it is the duty of the departmental heads to get the men in their departments to work properly which we expect they will do.

I am also happy to note that agricultural experiments and resarch have been increased and the provision for the same has been increased from Rs. 4.4 lakhs to Rs. 7.7 lakhs. After all, progress in agriculture is made first in the research laboratories. If we are producing 50 to 60 tons of sugarcane it is because of the new varieties produced in Coimbatore; if we are producing 30 to 50 pallas of paddy per acre it is because of the varities that have been produced like I.R.—8 and so our research must be strengthened. I am happy you are doing that.

The Department has taken multiplication of seeds and development of seeds like oilseeds, cotton seeds etc. I am happy to note that we are going to have a seed farm in the Thungabhadra project area by spending a lot of money.

The next point I am interested in, is plant protection. I notice the Department are taking up comprehensive plant protection scheme and are spending over Rs. 30 lakhs. In this connection I wish to make one suggestion and that is this. It is very necessary that the departmental men must get in touch with the cultivators to know the places where plant protection is needed so that if the spread of the disease is stopped in one place, we may not be required to spend more on the same again. So I request that the provision for plant protection for which you have taken a large amount of money this year may be increased in course of time.

I am happy to see that the department is starting a seed testing laboratory. Now we have got people who are producing more seeds. We are happy to see that some of our farmers are quality-minded and some of them are business-minded. The Department should see that the seeds produced are put into the hands of the cultivators after being tested. This is part of their work and I am happy the Department is doing it.

Then my friend has been speaking about soil testing for which we have soil testing laboratories all over. Now the Department has undertaken soil testing and has provided some funds for it. I notice that

our soil survey organisation is being strengthened and an additional unit is being added to it. In this connection I wish to make one humble suggestion for consideration of the Department. It is difficult for a cultivator to take a sample of this soil or send it in bottles to the laboratory. I wish the Department to instruct either the field men or village level workers to see that whenever a cultivator is anxious that his soil should be tested, the man goes to his gield, takes the sample and have it tested. It does not matter if he is charged a little bit. The cultivator will be willing to pay for it if he wants his soil to be tested instead of himself being required to take the soil to the laboratory. This will help the cultivator and also the nation because then only he can use the proper fertilizer.

I notice that formerly the Department was telling the cultivators to produce 3 or 4 crops, but now they are themselves conducting multiple crop demonstrations and it is a step in the right direction. It ought to be done in all parts of the country.

Then another step on which I should congratulate the department is this. They are now going to train men in the proper use of water. We have always heard people saying, especially white-collared people, saying, that the ryots are wasting a lot of water, but nobody has taken the pains so far to come down and show how to use water properly. I am glad that the Department are going to have training programme to teach the men to learn how to use water.

I am gald you have pilot projects for soil conservation and water management. This is a new subject. Our friend spoke so much about soil conservation. Now in the bunded areas the Department is going to have dry farming. This is a technique by itself and it ought to be scientifically carried out. I am happy the Department has taken steps to start dry-farming in the bunded areas.

The next point is about agricultural engineering. I notice that under agricultural engineering a sum of Rs. 75 lakhs is being provided. There was a time when some of our elders said, we do not need tractors. But now things have changed and we are going to use tractors. Tractors are very necessary. I would suggest to Government that men should be trained for the use of tractors. I wish they open some schools, at least one school for each Division to begin with and then extend it at the rate of one for every district. I suggest that no restrictions need be imposed on the person coming up for training. He may be educated or illiterate, may be a farmer or labourer. Whoever wants to learn should be given the training to run tractors. We have seen our illiterate young-men becoming cleaners and later on becoming drivers of lorries. I hope the Department will take up this suggestion.

I am glad that the Department is providing Rs. 20 laksh for border strip methods in the Tungabhadra area. It is necessary. Hitherto it was only tall talk, but now it has actually been taken up.

(DR. R. NAGAN GOUDA)

The next thing is about borewells. Last time I said we should get 100 Migs but the Government came down to 20, but the Government of India alotted only 8. We must have at least one in each district. You have provided Rs. 23 lakhs. I hope you will be able to provide for more because Places like Sira, Pavagada and parts of Chitradurga and Kudligi can have nothing else but bore wells.

Sir, I have got one suggestion to make about fertilizers. The Government have started Seed Testing Laboratories. My request is to start Fertilizer Mixture Testing Laboratories. It is very important. Umteen people in every district are coming up with mixtures of all kinds. God alone knows what they contain. Even in the United States, no mixture is allowed to go into the market without being tested by the Government. I hope the Government would be able to do this here also.

There are one or two things in which I am personally interested. For years, we have been asking for Sugar Factories Control Act. I understand that a Committee was constituted under the Chairmanship of the Director of Agriculture, and they have drafted a Bill. I hope the Hon. Minister will introduce that Bill and get it passed into an Act.

Finally, Sir, I have one thing to say about prices. Hon. member Sri H. M. Channabasappa spoke about prices. It is a subject in which the State Government has nothing to say. It has to be done with the co-operation of the Central Government. I hope the Hon. Minister, who is the son of a cultivator, will meet the Hon. Minister at the Centre, who is also a cultivator by birth, and tell him that stable prices are important. I can give one example here. If today we have got enough sugar-cane in the country, it is because you fix a stable price for it at least for one or two years. Similarly, if you fix stable price for Jola, Ragi, Paddy, Wheat, Dhall, etc., at least, in the first instance, we the cultivators will assure you that we will produce all that we need. This is a thing which has been done in the United States with great success.

Thank you very much, Sir.

†ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ವ್ಯವಸಾಯ, ಪಶುಪಾಲನೆ ಮತ್ತು ಅರಣ್ಯ ಇಲಾಖೆಗಳ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ, ಸರ್ಕಾರಕ್ಕೆ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ.

ಸ್ವಾಮಿ, ಈ ಸಂದರ್ಭದಲ್ಲಿ ಸಮಯ ಕೊಂಚವಾಗಿರುವುದರಿಂದ ವ್ಯವಸಾಯದ ಬಾಬನ್ನು ನನ್ನ ಬೇರೆ ಮಿತ್ರರಿಗೆ ಮಾತನಾಡಲಿಕ್ಕೆ ಬಿಟ್ಟು ನಾನು ಪ್ರಪ್ರಥಮವಾಗಿ ಈ ಪಶುಪಾಲನಾ ಮಂತ್ರಿಗಳ ಅಧೀನಕ್ಕೊಳಪಟ್ಟಿರುವ ಬೆಂಗಳೂರು ನಗರದ ಹಾಲು ಸರಬರಾಯಿ ಡ್ಯೆರಿ ಅಥವಾ ಕ್ಷೀರ ಸರಬರಾಯಿ ಸಂಸ್ಥೆಯ ವಿಷಯವಾಗಿ ಕೆಲವು ವಿಚಾರಗಳನ್ನು ನಾನು ಹೇಳುತ್ತೇನೆ. ಇದರ ಬಗ್ಗೆ ಹೋದ ಅಧಿವೇಶನದಲ್ಲಿ ಕೂಡ ಹೇಳಿದ್ದೆ. ಈ ಒಂದು ಯೋಜನೆ ಏನಿದೆ ಇದು ನಮ್ಮ ರಾಜ್ಯದ ಬಂಡವಾಳವನ್ನೇ ನುಂಗುವಂಥ ಒಂದು ಯೋಜನೆಯೆಂದು ಹೇಳಿದ್ದೆ. ಅದು ಪ್ರಾರಂಭವಾಗಿ ಇಲ್ಲಿಗೆ ಸುಮಾರು ಎರಡೂವರೆ ವರ್ಷಗಳಾಗಿರಬಹುದು. ಅಷ್ಟು ಅವಧಿಯಲ್ಲಿ 64 ಲಕ್ಷ ರೂ. ಬಂಡವಾಳ ನಷ್ಟವಾಗಿದೆ. ನಾನು ಕಳೆದ ಬಜೆಟ್ ಅಧಿವೇಶನದಲ್ಲಿ ಈ ವಿಚಾರವನ್ನು ಹೇಳಿದ್ದು ಮಾತ್ರವಲ್ಲದೆ ಅಲ್ಲಿಂದ ಬೆಣ್ಣೆಯನ್ನೂ ಕೂಡ ಈ ಮಾನ್ಯ ಸಭೆಯ ಮುಂದೆ ತಂದು ಅದನ್ನು ಇಲ್ಲಿ ತೋರಿಸಿ

ಅದರ ಬಗ್ಗೆ ಕೆಡದಂತೆ ಸರ್ಕಾರದವರು ಏನಾದರೂ ಜಾಗ್ರತೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ಎಷ್ಟು ಹೇಳಿದರೂ, ವಿರೋಧ ಪಕ್ಷಗಳವರು ಎಷ್ಟೇ ನಿಜವಾದ ಸಂಗತಿಗಳನ್ನು ಹೇಳಿದರೂ, ಸರ್ಕಾರಕ್ಕೆ ಅದು 'ಗೋರ್ಕಲ್ಲಮೇಲೆ ಮಳೆ ಸುರಿದಂತೆ' ಅನ್ನುವಂತಾಯಿತು. ಆದರೆ ಆ ದಿವಸ ಆ ಯೋಜನೆಯು ಶ್ರೀಮಾನ್ ದೇವರಾಜ್ ಅರಸರ ಅಧೀನದಲ್ಲಿತ್ತು. ನಾನು ಇಲ್ಲಿ ಆ ದಿವಸ ಹೇಳಿದ್ದನ್ನು ಅವರು ನಂಬದೆ ಅದು ಸತ್ಯಕ್ಕೆ ದೂರವಾದ್ದು ಅಂದರೆ ಸುಳ್ಳು ಎಂತ ಹೇಳಿದ್ದಕ್ಕೆ. ಆಗ ಸಭೆಯಲ್ಲಿದ್ದ ಶ್ರೀಮತಿ ನಾಗರತ್ನಮ್ಮನವರು ಅದು ಕಟು ಸತ್ಯವಾದದ್ದು ಎಂದು ಹೇಳಿದರು. ನಾವು ಇತ್ತ ಕಡೆ ಕುಳಿತಿರ ತಕ್ಕ ವಿರೋಧಪಕ್ಷದ ಸದಸ್ಯರೇನಾದರೂ ಹೇಳಿದರೆ ಸರ್ಕಾರದವರು ಅದಕ್ಕೆ ಗಮನ ಕೊಡಬೇಕು. ಇಲ್ಲವಾದರೆ ದೇಶ ಮುಂದುವರಿಯಲು ಬಹಳ ಕಷ್ಟವಾಗುತ್ತದೆ. ನಾನು ಈ ಸಂದರ್ಭದಲ್ಲಿ ಮುಖ್ಯವಾಗಿ ಪಶುಪಾಲನಾ ಮಂತ್ರಿಗಳಿಗೆ ಒಂದು ವಿಚಾರವನ್ನು ಹೇಳುತ್ತೇನೆ—ಆ ಹಾಲಿನ ಡ್ಯೆರಿಯು ಒಂದು ದೊಡ್ಡ ಸಾಗರವಿದ್ದ ಹಾಗೆ. ನಾನು ಅದರ ವಿಚಾರವನ್ನು ಹೇಳಬೇಕಾಗಿದ್ದರೆ ಏನು ಶಬ್ದ ಉಪಯೋಗ ಮಾಡಬೇಕೆಂಬುದೇ ಗೊತ್ತಾಗುವುದಿಲ್ಲ. ಇಂಥ ಆಡಳಿತ ನಡೆಯುತ್ತಿರು ವುದರಿಂದಲೇ ಶ್ರೀಮಾನ್ ಚಿಕ್ಕೇಗೌಡರು ಸರಿಯಾಗಿ ಇದನ್ನು ತೊಗಲಕ್ ಸರ್ಕಾರ ಎಂದು ಹೇಳಿದ್ದು ಅದು ನ್ಯಾಯವಾಗಿದೆ. ನಮ್ಮ ಸರ್ಕಾರ ಅನುಸರಿಸುತ್ತಿರುವ ನೀತಿಯೂ ಹಾಗೇ ಇದೆ. ನಾನು ಇದನ್ನ ಒಂದು ಬಂಡವಾಳವನ್ನು ಬರಿದು ಮಾಡತಕ್ಕ ಯೋಜನೆ ಎಂದು ಕರೆದಿದ್ದೇನೆ. ಇಲ್ಲಿ ಆಗತಕ್ಕ ನಷ್ಟ ಅಷ್ಟಿಷ್ಟಲ್ಲ. ಅಲ್ಲಿ ತಾ|| 3-12-1967 ರಿಂದ ತಾ|| 30-3-1968 ವರೆಗೆ ಆಗಿರತಕ್ಕ ನಷ್ಟ ಬಹಳವಾಗಿದೆ. 29,191 ಲೀಟರ್ ಹಾಲನ್ನು ಆ ಕ್ಷೀರ ಸಾಗರಕ್ಕೆ ಲಾರಿಯಲ್ಲಿ ತರಲು ಅದಕ್ಕೆ ಮೆಸರ್ಸ್ ಕಿನಿ ಲಾರಿ ಟ್ರಾನ್ಸ್‌ಪೋರ್ಟ್—ಕಲಾಸಿಪಾಳ್ಯ ಇವರಿಗೆ ಬಾಡಿಗೆ ರೂಪದಲ್ಲಿ ಕೊಟ್ಟಿರತಕ್ಕ ಹಣ 2 ಲಕ್ಷದ 6 ಸಾವಿರದ 778 ರೂಪಾಯಿಗಳು. ಇಲಾಖೆಯಲ್ಲಿ 32 ವ್ಯಾನುಗಳಿವೆ. ಅಷ್ಟು ಇದ್ದಾಗ್ಯೂ ಕೇವಲ 80 ದಿನಗಳಲ್ಲಿ 29,191 ಲೀಟರ್ ಹಾಲನ್ನು ತರಲು ಲಾರಿಗೆ ಬಾಡಿಗೆ ರೂಪ ದಲ್ಲಿ 17,152 ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಂದರೆ ಯಾವ ಸಾಂಪ್ರದಾಯಸ್ಥ ಸರ್ಕಾರ ವಾಗಿದ್ದರೂ ಅಷ್ಟು ಬಾಡಿಗೆಯನ್ನು ಕೊಡುತ್ತಿರಲಿಲ್ಲ. ಅದನ್ನು ಲೆಕ್ಕ ಮಾಡಿದರೆ ಒಂದು ಲೀಟರ್ ಹಾಲಿಗೆ 12 ಆಣೆ ಬಾಡಿಗೆಯನ್ನು ಕೊಟ್ಟಹಾಗೆ ಆಗುತ್ತದೆ. ಒಂದು ಲೀಟರ್ ಹಾಲಿಗೆ 12 ಆಣೆ ಲಾರಿ ಬಾಡಿಗೆಯನ್ನು ಕೊಡಬೇಕಾಗಿದ್ದರೆ ಈ ದುಡ್ಡು ಯಾರಪ್ಪನ ಮನೆಯದು ಎಂದು ಕೊಟ್ಟರು? ಅದು ಹೇಗೆ ಕೊಟ್ಟರು? ಒಂದು ಕಿಲೋ ಮೀಟರ್ ದೂರಕ್ಕೆ ನಾಲ್ಕಾಣೆ ಲಾರಿ ಬಾಡಿಗೆಯನ್ನು ಕೊಟ್ಟಿದ್ದಾರೆ. ಹೀಗೆ ಬಾಡಿಗೆಯನ್ನು ಕೊಡುವುದಕ್ಕೆ ಅವರು ಟೆಂಡರನ್ನೇನಾದರೂ ಕರೆದಿದ್ದರೇ? ಪೆಟ್ರೋಲ್ ಸಿಕ್ಕದ ರಾಜ್ಯದಲ್ಲೂ ಕೂಡ ಇಷ್ಟು ದುಬಾರಿಯ ಬಾಡಿಗೆ ಇರಲಾರದು. ಒಂದು ರನ್ನಿಂಗ್ ಮೈಲಿಗೆ ಅಲ್ಲ ಕಿಲೋ ಮೀಟರಿಗೆ 4 ಆಣೆ ಬಾಡಿಗೆ ಲಾರಿಗೆ ಇರುವುದಿಲ್ಲ.

ಶ್ರೀ ಜೆ. ಬಿ. ಶಂಕರ ರಾವ್.—ತಾವು ಹೇಳತಕ್ಕದ್ದು ಯಾವ ಲೆಕ್ಕಾಚಾರದ ಪ್ರಕಾರ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇದೇ ಸಭೆಯಲ್ಲಿ ಶ್ರೀಮಾನ್ ಕೆ. ಎಚ್. ರಂಗನಾಥರವರ ಒಂದು ಪ್ರಶ್ನೆಗೆ ಉತ್ತರ ಕೊಡತಕ್ಕ ಕಾಲದಲ್ಲಿ ಸರ್ಕಾರದವರು ಕೊಟ್ಟ ಉತ್ತರದ ಆಧಾರವನ್ನು ಅನುಸರಿಸಿ ನಾನು ಇದನ್ನು ಹೇಳುತ್ತಿದ್ದೇನೆ. ನಾನು ಇಲ್ಲಿ ಏನು ಹೇಳುತ್ತೇನೋ ಅದಕ್ಕೆಲ್ಲಾ ನನ್ನಲ್ಲಿ ಆಧಾರ ಗಳನ್ನಿಟ್ಟುಕೊಂಡೇ ಮಾತನಾಡುತ್ತಿದ್ದೇನೆ.

ಮಾತ್ರವಲ್ಲದೆ ನವೆಂಬರ್ ತಿಂಗಳಿನಿಂದ ಹಿಡಿದು ಅಂದರೆ 1967 ನೇ ನವೆಂಬರಿನಿಂದ 1968 ನೇ ಫೆಬ್ರುವರಿಯವರೆಗೆ ಅಂದರೆ ನಾಲ್ಕು ತಿಂಗಳಲ್ಲಿ ಆಗಿರತಕ್ಕ ನಷ್ಟ 28,46,529 ರೂಪಾಯಿಗಳು. ಮತ್ತು ಅದರ ಜೊತೆಗೆ 10 ಪೈಸಾಗಳು ಬೇರೆ. ನಾನು ಈಗ ಹೇಳುತ್ತಿರುವ ಈ ನಷ್ಟದಲ್ಲಿ ಹಿಂದೆ ಹೇಳಿದ್ದನ್ನು ಸೇರಿಸಿರುವುದಿಲ್ಲ. ಅದನ್ನು ಕೈ ಬಿಟ್ಟೇ ಮತ್ತೆ ಇಷ್ಟು ನಷ್ಟವಾಗಿದೆ. ಈ ನಾಲ್ಕು ತಿಂಗಳ ಅವಧಿಯಲ್ಲಿ 30 ಲಕ್ಷ ರೂಪಾಯಿಗಳ ನಷ್ಟವಾಗಿದೆ. ಮೊನ್ನೆ ಇದೇ ಸಭೆಯ ಮುಂದೆ ಮಾನ್ಯ ಅರ್ಥ ಸಚಿವರು ಬಡ್ಜೆಟ್ಟನ್ನು ಮಂಡಿಸಿದ್ದ ವೇಳೆಯಲ್ಲಿ ಮಾತನಾಡುತ್ತಾ ನಮಗೆ 126 ಕೋಟಿ ರೂಪಾಯಿಗಳ ಸಾಲವಿದ್ದರೂ ನಮ್ಮಲ್ಲಿ 480 ಕೋಟಿ ರೂಪಾಯಿಗಳಷ್ಟು ಆಸ್ತಿ ಇರುತ್ತೆಂದು ಹೇಳಿ ದರು. ಆ ಆಸ್ತಿಯಲ್ಲಿ ವಿಧಾನ ಸೌಧ, ಶರಾವತಿ ಇಂಥದನ್ನೆಲ್ಲಾ ಸೇರಿಸಿರಬಹುದ. ಈ ಕ್ಷೀರ ಸಾಗರದಂಥ ಒಂದು ಯೋಜನೆ ಇನ್ನು 10 ವರ್ಷಗಳ ಕಾಲ ಮುಂದುವರಿದರೆ ಆ ಆಸ್ತಿಯೆಲ್ಲಾ ಕರಗಿಹೋಗುತ್ತದೆ.........

5-00 P.M.

1968 ನೇ ಜುಲೈನಲ್ಲಿ ಬೆಣ್ಣೆ ಹಾಳಾದ ವಿಷಯವನ್ನು ತಿಳಿಸಿದ್ದೆ. 11,176 ಕೆ.ಜಿ. ಬೆಣ್ಣೆ ಯನ್ನು ಸುಟ್ಟರು. ಆ ಬೆಣ್ಣೆ ಕ್ರಯ 82,292 ರೂಪಾಯಿಗಳು ಆಗುತ್ತದೆ. ಇದನ್ನು ಒಂದು

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಚೂರಾದರೂ ಕಣ್ಣು ತೆರೆದು ನೋಡುತ್ತೀರಾ ? ನಾವು ಏನಾದರೂ ಹೇಳಿದರೆ, ಆ ವಿಷಯದಲ್ಲಿ ತಕ್ಕ ಕ್ರಮ ತೆಗೆದುಕೊಂಡು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳುತ್ತೀರಾ ? ಆ ಅಧಿಕಾರಿ ನಾಲಾಯಕ್ಕು ಎಂದು ಅವನಿಗೆ ಶಿಕ್ಷೆ ಕೂಡ ಕೊಡುವುದಿಲ್ಲ. ನಾವು ಇಲ್ಲಿ ಹೇಳುವುದು ಒಂದು, ನೀವು ಮಾಡುವುದು ಒಂದು. ಬಡ ಬೋರೇಗೌಡನಿಂದ ತೆರಿಗೆಯ ರೂಪದಲ್ಲಿ ಬಂದ ದುಡ್ಡು ಅದು, ತಮ್ಮ ಮನೆಯಿಂದ ತಂದ ದುಡ್ಡು ಅಲ್ಲ. ಪ್ರತಿಯೊಂದು ನಯಾಪೈಸೆ ಖರ್ಚುಮಾಡುವಾಗ ಚೆನ್ನಾಗಿ ಆಲೋಚನೆ ಮಾಡಿ ಖರ್ಚು ಮಾಡಬೇಕು. ಇದು ದೇಶದ ಸಂಪತ್ತೆಂದು ತಿಳಿದುಕೊಳ್ಳಬೇಕು. ಇಲ್ಲದಿದ್ದರೆ ಈ ತರಹ ಸಿಕ್ಕಾಪಟ್ಟೆ ಖರ್ಚುಮಾಡುತ್ತಾ ಹೋದರೆ ಜನ ತಾನೇ ಏನು ಹೇಳುತ್ತಾರೆಂಬುದನ್ನು ಸರ್ಕಾರ ಯೋಚನೆ ಮಾಡಬೇಕು. ಮೈಸೂರು ಸರ್ಕಾರದಲ್ಲಿ ಯೋಜನೆ ಯಾವರೀತಿ ನಡೆಯುತ್ತಿದೆಯೆಂದರೆ, ಒಂದು ಕ್ಷೀರ ಸರಬರಾಜು ಯೋಜನೆ ಏನಿದೆಯೋ ಅದನ್ನು ಒಂದು ಮಾದರಿಯ ಯೋಜನೆಯಾಗಿ ತೋರಿಸಬಹುದು.

ಶ್ರೀ ಜಿ. ಬಿ. ಶಂಕರರಾವ್ (ಪಶು ವೈದ್ಯ, ಪಶು ಸಂಗೋಪನ ಮತ್ತು ಹೈನು ಅಭಿವೃದ್ಧಿ ಶಾಖೆಗಳ ರಾಜ್ಯ ಮಂತ್ರಿಗಳು).—ಹಾಗೆಯೇ ಒಳ್ಳೆಯದು ಮಾಡಿದ್ದನ್ನೂ ಹೇಳಿ.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಅದನ್ನು ಜನರು ಹೇಳುತ್ತಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಒಳ್ಳೆಯದು ಮಾಡಿದ್ದು ಹೇಳಿ ಎಂದು ಹೇಳಿದರೆ, ಈ 29 ಜನ ಮಂತ್ರಿಗಳ ಪ್ರತಿಯೊಬ್ಬರ ಮನೆಯಲ್ಲಿ ನನ್ನ ತಿಳುವಳಿಕೆಯ ಪ್ರಕಾರ ಒಂದು ಮಿನಿಯೇಚರ್ ಡೈರಿ ಶುರುವಾಗಿದೆ. ಒಬ್ಬೊಬ್ಬರೂ 8—10 ಹಸುಗಳನ್ನು ಸಾಕಿ ಸರ್ಕಾರದಿಂದ ಕೊಟ್ಟಿರುವ ಜವಾನರನ್ನು ಉಪಯೋಗಿಸಿ, ಅವರ ತೋಟಗಳಿಗೆ ಗೊಬ್ಬರ ಹಾಕಿ ಅವರಿಂದ ಹುಲ್ಲು ಕೊಯ್ಯಿಸಿ, ಹಸುಗಳನ್ನು ಸಾಕಿಸಿ, ಅವರವರ ಹೆಂಡತಿಯರು ತಿಂಗಳಿಗೆ ಒಂದು ಸಾವಿರ ರೂಪಾಯಿಗಳವರೆಗೂ ಸಂಪಾದನೆ ಮಾಡುತ್ತಿದ್ದಾರೆ. ಈ ಒಂದು ಒಳ್ಳೆಯದನ್ನು ಮಾಡಿದ್ದೀರಿ. ಯಾವ್ಯಾವ ಮಂತ್ರಿಗಳ ಮನೆಯಲ್ಲಿ ಅವರವರ ಹೆಂಗಸರೇ ಹಾಲು ಕರೆದು ಎಷ್ಟೆಷ್ಟು ಸಂಪಾದನೆ ಮಾಡುತ್ತಿದ್ದಾರೆಂಬುದನ್ನು ನೋಡಬೇಕು.

Sri K. PUTTASWAMY (Minister for Law, Labour and Parliamentary Affairs) —What is wrong with that ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸರ್ಕಾರದ ಜಾಗವನ್ನು ತಾವು ಉಪಯೋಗಿಸಿ ಎಂದು ಕೊಟ್ಟಿರುವುದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ (ಸಾಗರ).—ಸನ್ಮಾನ್ಯ ಸದಸ್ಯರು ಮಂತ್ರಿಗಳ ಬಗ್ಗೆ ಇಲ್ಲಿ ಏನು ಬೇಕಾದರೂ ಹೇಳಬಹುದು. ಆದರೆ ಮಂತ್ರಿಗಳ ಪ್ರಿಯಪತ್ನಿಯರ ಬಗ್ಗೆ ದಯವಿಟ್ಟು ಇಲ್ಲಿ ಏನು ಹೇಳುವುದಕ್ಕೂ ಅವಕಾಶವಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಮ್ಮ ಮಂತ್ರಿಗಳಿಗೆ ಮತ್ತು ದೇಶದ ಜನತೆಗೇ ಗೊತ್ತು, ಇದು ಎಲ್ಲರ ಸ್ವತ್ತೆಂದು. ಅವರಿಗೆ ದೊಡ್ಡ ದೊಡ್ಡ ಬಂಗಲೆಗಳ ಸೌಕರ್ಯಗಳನ್ನು ಒದಗಿಸಿದ್ದಾರೆ. ಏನೊಂದು ಹೊಸ ಸನ್ನಿವೇಶವನ್ನು ಒದಗಿಸಿಕೊಂಡಿದ್ದಾರೆಂದರೆ, ಅವರಿಗೆ ಕೊಟ್ಟಿರುವ ಜವಾನರನ್ನೆಲ್ಲಾ ಅವರ ಬಂಗಲೆಗಳಲ್ಲಿ ಬೆಳೆದಿರತಕ್ಕ ಹುಲ್ಲನ್ನು ಕೊಯ್ಯುವುದಕ್ಕಾಗಿ ಇಟ್ಟುಕೊಂಡಿದ್ದಾರೆ. ಅದು ಸರಿಯಲ್ಲ. ಆದ್ದರಿಂದ ಕ್ಷೀರ ಯೋಜನೆಗೆ ಅದಷ್ಟು ಜಾಗ್ರತೆ ಗಮನ ಕೊಟ್ಟು ಅದನ್ನು ಎಲ್ಲಾ ಕಡೆಗಳಲ್ಲಿ ಅಭಿವೃದ್ಧಿಮಾಡಬೇಕು. ಹಾಗಿಲ್ಲದೆ ಇನ್ನು ನಾಲ್ಕೈದು ವರ್ಷಗಳ ಕಾಲ ಇದೇ ರೀತಿ ಕೆಲಸಕಾರ್ಯಗಳು ಮುಂದುವರಿದರೆ, ಸರ್ಕಾರದ ಭಂಡಾರವನ್ನು ಇವರು ಖಂಡಿತವಾಗಿ ಬರಿದು ಮಾಡುತ್ತಾರೆ. ಮಾನ್ಯ ಶ್ರೀ ಕೆ. ಚಿಕ್ಕೇಗೌಡರು ಹೇಳಿದಹಾಗೆ ಇದಕ್ಕಾಗಿ ಒಂದು ಕಮಿಷನ್ ನೇಮಕವಾಡಿ ಅಲ್ಲಿ ಅವ್ಯವಹಾರ ಏನೇನಾಗಿದೆ ಎಂಬುದನ್ನು ಕಂಡುಹಿಡಿದು ತಪ್ಪಿತಸ್ಥರಿಗೆ ಕಾನೂನು ಪ್ರಕಾರ ಶಿಕ್ಷೆಮಾಡಬೇಕು.

ಎರಡನೆಯದಾಗಿ, ನನಗೆ ಸಂಬಂಧಪಟ್ಟ ಹಾಗೆ ಮೀನುಗಾರಿಕೆ ಇಲಾಖೆಯ ವಿಷಯ. ಮೀನುಗಾರಿಕೆಯ ಮಂತ್ರಿಗಳು ಬಹಳ ಹುಮ್ಮಸ್ಸಿನಿಂದ ಕೆಲಸಮಾಡುತ್ತಿದ್ದಾರೆ, ಮಾಡುವುದಿಲ್ಲವೆಂದು ನಾನು ಹೇಳುವುದಿಲ್ಲ. ಅವರು ಬಂದಮೇಲೆ ದಿನನಿತ್ಯ ಮೆಂಬರುಗಳಿಗೆ ನೋಟೀಸ್ ಕೊಟ್ಟು ಟೂರ್ ಮಾಡುತ್ತಾರೆ. ನನ್ನ ಅಂದಾಜು ತಿಂಗಳಿಗೆ 29 ದಿವಸಗಳು ಟೂರ್ ಮಾಡುತ್ತಾರೆ. ಅದು ಬಹಳ ಸಂತೋಷ. ಅದರಲ್ಲಿ ಏನೂ ತಪ್ಪಿಲ್ಲ. ಈಗ ಫಿಷರೀಸ್ ಕಾರ್ಪೊರೇಷನ್ ಸ್ಥಾಪನೆ ಮಾಡುತ್ತೇ

ವೆಂದು ಇವರು ಹೇಳಿರುವುದು ಕೆಲವು ವರ್ತಮಾನ ಪತ್ರಿಕೆಗಳಲ್ಲಿ ಬಂದಿದೆ. ಇವತ್ತು ಆಗುತ್ತದೆ, ನಾಳೆ ಆಗುತ್ತದೆ ಎಂಬುದಾಗಿ ಹೇಳಿದರೂ ಆ ಕಾರ್ಪೊರೇಷನ್ ಇದುವರೆಗೂ ಬರಲಿಲ್ಲ. ಬಡ್ಜೆಟ್ಟಿನಲ್ಲಿ ಇದಕ್ಕೆ ಸಂಬಂಧಪಟ್ಟ ಹೆಡ್ ನೋಡಿದರೆ ಫಿಷರೀಸ್ ಕಾರ್ಪೊರೇಷನ್ ಸ್ಥಾಪನೆ ಮಾಡುವ ಸಲುವಾಗಿ ಈ ಸಾರಿ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೋದ ಸಾರಿಯ ಆಯವ್ಯಯಪಟ್ಟಿಯಲ್ಲಿ 10 ಲಕ್ಷ ರೂಪಾಯಿಗಳನ್ನೇ ಒದಗಿಸಿದ್ದರು. ಅಂತೂ ಮಾನ್ಯ ಮುಖ್ಯ ಮಂತ್ರಿಗಳು ಫಿಷರೀಸ್ ಕಾರ್ಪೊರೇಷನ್ನನ್ನು ಆದಷ್ಟು ಜಾಗ್ರತೆಯಾಗಿ ಸ್ಥಾಪನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮಾತ್ರವಲ್ಲದೆ, ಈ ಫಿಷರೀಸ್ ಕಾರ್ಪೊರೇಷನ್ ಮಾಡುವಾಗ ತಾವು ಮೀನುಗಾರಿಕೆಯ ಸಲಹಾ ಸಮಿತಿ ಮಾಡಿದ ಹಾಗೆ ಮಾಡಬೇಡಿ. ಆ ರೀತಿಯಲ್ಲಿ ಡೈರೆಕ್ಟರನ್ನು ಇಡಬೇಡಿ. ಏಕೆಂದರೆ, ಮೀನುಗಾರಿಕೆ ಸಲಹಾ ಸಮಿತಿಯಲ್ಲಿರುವವರಲ್ಲಿ ಅನೇಕರು ಸಮುದ್ರವನ್ನೇ ನೋಡಿಲ್ಲ. ಸಮುದ್ರ ಎಂದು ಹೇಳಿದರೆ ಅದು ಎಷ್ಟು ದೊಡ್ಡದಿದೆ ಎಂದು ನನಗೇ ಪ್ರಶ್ನೆ ಮಾಡುತ್ತಿದ್ದರು. ಕೋಲಾರದವರನ್ನು ಅಥವಾ ಬೆಂಗಳೂರಿನವರನ್ನು ಅಲ್ಲಿ ಸೇರಿಸಿದ್ದೀರಿ. ಅವರು ಇಲ್ಲಿದ್ದು ವಕೀಲಿ ವೃತ್ತಿ ಮಾಡಬಹುದಾಗಿತ್ತು. ಆದರೆ ಅಂಥವರನ್ನು ಆ ಮೀನುಗಾರಿಕೆ ಸಲಹಾ ಸಮಿತಿಗೆ ಸೇರಿಸಿದ್ದೀರಿ. ಅಂತಹ ಕೆಲಸ ಮಾಡಬೇಡಿ. ಯಾರ್ಯಾರಿಗೆ ಮೀನುಗಾರಿಕೆ ವಿಷಯದಲ್ಲಿ ಅನುಭವ ಇದೆಯೋ ಅಂತಹವರನ್ನು ಡೈರೆಕ್ಟರನ್ನಾಗಿ ಮಾಡಿ ಮತ್ತು ಅಂತಹವರನ್ನು ಆ ಸಲಹಾ ಸಮಿತಿಯ ಸದಸ್ಯರನ್ನಾಗಿ ಮಾಡಿ. ನಮ್ಮ ಅರಬ್ಬೀ ಸಮುದ್ರ ಮೀನಿನ ಒಂದು ಚಿನ್ನದ ಗಣಿ ಎಂದು ಹೇಳಿದರೆ ತಪ್ಪು ಇಲ್ಲ. ಅದು ವಿದೇಶೀ ವಿನಿಮಯವನ್ನು ದೊರಕಿಸಿಕೊಡುವ ಒಂದು ವಿಶೇಷ ವಸ್ತು. ಮೊನ್ನೆ ಜನವರಿ 24 ಮತ್ತು 25 ರಂದು ಭಾರತ ನಾರ್ವೇಜಿಯನ್ ಏಜನ್ಸಿಯವರು ಸಿಲೋನ್ ಸಮೀಪದಲ್ಲಿ 62 ಅಡಿಗಳಷ್ಟು ಇರುವ ಒಂದು ದೋಣಿಯನ್ನು ಉಪಯೋಗಿಸಿ ಕೇವಲ ಎರಡು ದಿವಸಗಳಲ್ಲಿಯೇ 32 ಸಾವಿರ ರೂಪಾಯಿಗಳಷ್ಟು ಬೆಲೆಯ 10 ಸಾವಿರ ಟನ್ ಲಸ್ಕರ್ ಜಾತಿಯ ಮೀನುಗಳನ್ನು ತಂದಿದ್ದಾರೆಂದು ವರದಿಯಾಗಿದೆ. ಇಡೀ ಭೂಲೋಕದಲ್ಲಿ ಅರಬ್ಬೀ ಸಮುದ್ರದಲ್ಲಿರುವಷ್ಟು ಮೀನು ಎಲ್ಲಿಯೂ ಇಲ್ಲವೆಂದ ಕ್ಯಾಪ್ಟನ್ ಕ್ರಿಸ್ಟನ್ ಜಾನ್ ಎಂಬುವವರು ಹೇಳಿದ್ದಾರೆ. ಸಣ್ಣ ಸಣ್ಣ ದೋಣಿಗಳನ್ನು ಕೈಬಿಟ್ಟು, ವಿಶಾಲವಾದ ಹಾಗೂ ದೊಡ್ಡದಾದ ದೋಣಿಗಳನ್ನು ಉಪಯೋಗಿಸಿ ಮೀನುಗಳನ್ನು ಹಿಡಿಯುವ ವ್ಯವಸ್ಥೆ ಮಾಡಬೇಕು. ಇಲ್ಲದೇ ಹೋದರೆ ಹೆಚ್ಚು ಪ್ರಗತಿಯನ್ನು ಮೀನಿನ ವ್ಯವಸಾಯದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಮೀನುಗಾರಿಕೆ ಇಲಾಖೆ ಬಗ್ಗೆ ಹೋದಸಾರಿ ಪೇ ಕಮಿಷನ್ ವರದಿ ಚರ್ಚೆಗೆ ಬಂದಾಗ್ಗೆ ಈ ಒಂದು ವಿಷಯವನ್ನು ಹೇಳಿದ್ದೆ. ಹಾರ್ಟಿಕಲ್ಚರಲ್ ಇಲಾಖೆಗಿಂತ ಇವರಲ್ಲಿ ಹೆಚ್ಚು ಕೆಲಸವಾಗುತ್ತಿದೆ. ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಪ್ಲಾನ್ ಸ್ಕೀಮಿನಲ್ಲಿ 80 ಲಕ್ಷ ರೂಪಾಯಿಗಳು ಈ ಬಾಬ್ತಿಗೆ ಇದೆ. ನಾನ್-ಪ್ಲಾನ್ ಸ್ಕೀಂನಲ್ಲಿ ಸಾಧಾರಣವಾಗಿ 32 ಲಕ್ಷ ರೂಪಾಯಿಗಳು ಇದೆ. ಇದು ಮುಂದೆ 2 ಕೋಟಿ 16 ಲಕ್ಷ 41 ಸಾವಿರ ರೂಪಾಯಿಗಳವರೆಗೆ ಹೋಗುತ್ತದೆ. ಹಾಗಿರುವಾಗ ಇದನ್ನು ಮೈನರ್ ಡಿಪಾರ್ಟ್‌ಮೆಂಟ್ ಎಂದು ಏಕೆ ಮಾಡಿದ್ದಾರೋ ನನಗೆ ಅರ್ಥವಾಗುತ್ತಾ ಇಲ್ಲ. ಮೀನುಗಾರಿಕೆ ಇಲಾಖೆ ಅತಿ ಪ್ರಾಮುಖ್ಯವಾದಂಥ ಇಲಾಖೆಯಾಗಿರುವುದರಿಂದ ಹೆಚ್ಚಿನ ಕೆಲಸ ಇದರಲ್ಲಿ ಆಗುವಂತೆ ನೋಡಬೇಕೆಂಬುದಾಗಿ ನಾನು ಪುನಃ ಒತ್ತಾಯ ಮಾಡುತ್ತೇನೆ. ನನ್ನ ಮಿತ್ರರಾದಂಥ ಶ್ರೀ ನಾಡಕರ್ಣಿಯವರು ಇನ್ನು ಮುಂದೆ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ—ಈ ಎರಡರಲ್ಲಿಯೂ ಮೀನಿನ ಅಭಿವೃದ್ಧಿ ಚೆನ್ನಾಗಿ ಆಗುತ್ತದೆ, ಸರ್ಕಾರದವರು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡವೆಂದು ಭೇದಭಾವ ಇಡುವುದಿಲ್ಲವೆಂದು ಹೇಳಿದರು. ಇಲ್ಲಿ ಒಂದು ವಿಚಾರ ಹೇಳುತ್ತೇನೆ. ಮುಂಬಯಿಯಿಂದ ಉತ್ತರ ಕರ್ಣಾಟಕ ಭಾಗ ಮೈಸೂರು ರಾಜ್ಯಕ್ಕೆ ಬಂದಾಗ ಅಲ್ಲಿ ಕೇವಲ ಮೂರು ಶಾಲೆಗಳು ಮಾತ್ರ ಇತ್ತು. ಆದರೆ ಮದ್ರಾಸಿನಿಂದ ದಕ್ಷಿಣ ಕನ್ನಡ ಜಿಲ್ಲೆಯು ಮೈಸೂರಿಗೆ ಸೇರಿದಾಗ, 24 ಶಾಲೆಗಳು ಬಂದಿವೆ. ಅದರಲ್ಲೂ ಕೂಡ ನೌಕರರು ಹೆಚ್ಚಿನವರು ಇದ್ದಾರೆಂದು ಹೇಳುತ್ತಾರೆ. ನೌಕರರಲ್ಲಿ ಕೂಡ, ಏನಾಗಿದೆ ಎಂದರೆ, ಮದ್ರಾಸಿನಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಜನರು ಬಂದಿದ್ದಾರೆ. ಮುಂಬಯಿಯಿಂದ ಉತ್ತರ ಕನ್ನಡ ಜಿಲ್ಲೆಗೆ ಬಹಳ ಕಡಿಮೆ ಸಂಖ್ಯೆಯಲ್ಲಿ ಬಂದಿದ್ದಾರೆ. ಉತ್ತರ ಕನ್ನಡ ಜಿಲ್ಲೆಯವರಿಗೆ ಇಂಜಿನು ಮಾತ್ರ ಕೊಟ್ಟರೆ ಸಾಲದು, ಬೋಟು ಕಲಿಸಲಿಕ್ಕೆ ಹಣ ಕೊಡಬೇಕು, ಇಲಾಖೆಯಿಂದ ಲೋನು ಕೊಡಬೇಕು. ಆದರೆ ನಮ್ಮಲ್ಲಿ ಹಾಗೆ ಇಲ್ಲ. 20 ಇಂಜಿನ್ ಕೊಟ್ಟರೂ ಕೂಡ ಬೋಟ್ ಕಟ್ಟುವ ಜನರು ಇದ್ದಾರೆ. ನನಗೆ ಉತ್ತರ ಕನ್ನಡ, ದಕ್ಷಿಣ ಕನ್ನಡ ಎಂಬ ಭೇದಭಾವವೇನೂ ಇಲ್ಲ. ಎಲ್ಲವೂ ಅಭಿವೃದ್ಧಿಯಾಗಬೇಕು.

ಇನ್ನೊಂದು ವಿಚಾರವೇನೆಂದರೆ, ಈ ರಂಪಣಿ ಬಲೆಯವರು ಯಾರಿದ್ದಾರೆ, ಅವರಿಗೆ ಈ ವರ್ಷ ಹೆಚ್ಚು ಮೀನು ಸಿಗಲಿಲ್ಲ. ಅವರ ಪರಿಸ್ಥಿತಿ ಬಹಳ ಚಿಂತಾಜನಕವಾದ ಪರಿಸ್ಥಿತಿಯಾಗಿದೆ. ಹಿಂದೆ ಅವರಿಗೆ 61 ನೇ ಇಸವಿಯಲ್ಲಿ ನೆರವನ್ನು ನೀಡಿದ್ದಾರೆ. ಅಂಥ ಸಾಲವನ್ನು ಕೊಡುವಂತಹ ಪ್ರಸಂಗ

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಈ ವರ್ಷ ಕೂಡ ಬಂದಿದೆ. ಅವರು ಈಗ ಹೊಟ್ಟೆಯ ಹಿಟ್ಟಿಗಾಗಿ ತವಕಪಡುವಂತಾಗಿದೆ. ಆದ್ದರಿಂದ ಅವರಿಗೆ ಒಂದು 5–10 ಸಾವಿರ ರೂಪಾಯಿ, ಕಡಿಮೆ ದರದ ಬಡ್ಡಿಯಲ್ಲಿ ಕೊಡುವಂತೆ ಮಾಡಬೇಕು. ಅವರು ಮರುಪಾವತಿ ಮಾಡುತ್ತಾರೆ. ಯಾರ್‍ಯಾರು ನಷ್ಟವನ್ನು ಅನುಭವಿಸಿದ್ದಾರೆ, ಅವರಿಗೆ ಇನ್ನೂ 5–6 ತಿಂಗಳು ರಂಪಣಿಯ ಅಥವಾ ಮೀನು ಹಿಡಿಯುವ ವ್ಯವಹಾರವೇ ಇಲ್ಲ. ಆದ್ದರಿಂದ ಅಂಥವರಿಗೆ ಸರ್ಕಾರದವರು ಸಂಪೂರ್ಣವಾದ ನೆರವನ್ನು, ಈ ಮೀನಿನ ಕ್ಷಾಮ ಬಂದಿರುವ ಕಾಲದಲ್ಲಿ ಮಾಡಬೇಕೆಂದು ಕೇಳಿಕೊಂಡು, ಸ್ವಲ್ಪ ಕಾಲ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಲೀಲಾವತಿ ರೈ (ಬಂಟ್ವಾಳ್).—ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಮಾನ್ಯ ವ್ಯವಸಾಯ ಮಂತ್ರಿಯವರು, ಹಾಗೂ ಅರಣ್ಯ ಇಲಾಖೆಯ ಮಂತ್ರಿಯವರು ಮತ್ತು ಮೀನುಗಾರಿಕೆಯ ಮಂತ್ರಿಯವರು ಇಟ್ಟಂತಹ ಬೇಡಿಕೆಯನ್ನು ಸ್ವಾಗತಿಸುತ್ತಾ, ಕೆಲವೊಂದು ಸಲಹೆಗಳನ್ನು ಇಡಬಯಸುತ್ತೇನೆ.

ಮೊದಲನೆಯದಾಗಿ ವ್ಯವಸಾಯದಲ್ಲಿ ಕೆಲವೊಂದು ಸಲಹೆಗಳನ್ನು ಕೊಡುತ್ತೇನೆ. ಇವತ್ತು ರೈತರಿಗೆ ನಾವು ಏನು ಸಾಲಗಳನ್ನು ಕೊಡುತ್ತಿದ್ದೇವೆ, ಅದಕ್ಕೆ ಏನು ಕೆಲವು ನಿಭಂದನೆಗಳು ಇವೆ, ಅದನ್ನು ಹಾಕುವುದು ಸರಿಯಲ್ಲವೆಂದು ಈ ಸಭೆಯಲ್ಲೂ ಅನೇಕರು ಹೇಳಿದ್ದಾರೆ. ಇದರಿಂದ ಫಿನಾನ್ಸ್ ಕಾರ್ಪೊರೇಷನ್, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಎಲ್ಲಾ ಏನು ಕೊಡುತ್ತಾರೆ, ಅದಕ್ಕೆ ಆತಂಕ ಬರುತ್ತದೆ. ಆದ್ದರಿಂದ ಆ ನಿಬಂಧನೆಗಳನ್ನು ಸರಿಪಡಿಸಿ, ರೈತನಿಗೆ ಬೇಕಾದ ಸಾಲವನ್ನು ಕೊಡಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಏಕೆಂದರೆ, ಬಡ ರೈತರು ಸಾಲ ತೆಗೆದುಕೊಳ್ಳುವಾಗ ಮೊದಲು ತೆಗೆದ ಸಾಲವನ್ನು ಸಂದಾಯ ಮಾಡಿ ಮುಂದಿನ ಅಭಿವೃದ್ಧಿ ಸಾಲಕ್ಕೆ ಹೋಗಬೇಕಾಗುತ್ತದೆ. ಆದ್ದರಿಂದ ರೈತರಿಗೆ ಸುಲಭ ರೀತಿಯಲ್ಲಿ ಸಾಲಗಳು ಸಿಗುವಂತೆ ಆಗಬೇಕು. ಮತ್ತು ಸೆಂಟ್ರಲ್ ಬಜೆಟ್ಟಿನಲ್ಲಿ ಫರ್ಟಿಲೈಸರ್ಸ್ ಏನಿದೆ, ಅದಕ್ಕೆ ಧಾರಣೆಯನ್ನು ಜಾಸ್ತಿ ಮಾಡಿದ್ದಾರೆ. ಕೆಲವರು ಅದನ್ನು ಇಲ್ಲಿ ಹೇಳಿದ್ದಾರೆ. ಸರ್ಕಾರದವರು ಅದನ್ನು ಗಮನಕ್ಕೆ ತೆಗೆದುಕೊಂಡು, ನಾವು ಲೆವಿಯನ್ನು ಹೇಗೆ ತೆಗೆದುಕೊಳ್ಳುತ್ತೇವೋ, ಅದೇ ರೀತಿಯಲ್ಲಿ ವ್ಯವಸಾಯಕ್ಕೆ ಬೇಕಾದಂತಹ ಪೆಸ್ಟಿಸೈಡ್ಸ್ ಹಾಗೂ ಫರ್ಟಿಲೈಸರ್ಸ್ ಕಡಮೆ ದರದಲ್ಲಿ ಸಿಗುವಂತೆ ಮಾಡಬೇಕು. ಅದನ್ನು ಹೆಚ್ಚಿಸಿದ್ದು ಸರಿಯಲ್ಲ, ಅದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ತೆಗೆದುಕೊಂಡು, ಹೆಚ್ಚಿಸಿದ್ದನ್ನು ಕಡಮೆ ಮಾಡಬೇಕು, ಇಲ್ಲದಿದ್ದರೆ, ಅದನ್ನು ಸಬ್ಸಿಡಿಯಾಗಿ ಮಾಡಿ, ನಮ್ಮ ರೈತರಿಗೆ ಸುಲಭವಾಗಿ ಸಿಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಫರ್ಟಿಲೈಸರ್ಸ್ ಕೊಟ್ಟರೂ ಸಾಲದು. ಅಲ್ಲಿ ಮಳೆ ಬಂದರೆ ಮಾತ್ರ ವ್ಯವಸಾಯ. ಮಳೆ ಇಲ್ಲದಿದ್ದರೆ, ನೀರು ಇಲ್ಲ. ನಾನು ಹಿಂದೆ ಕೂಡ ನೇತ್ರಾವತಿಯ ನೀರಿನ ವಿಚಾರದಲ್ಲಿ ಒಂದು ಸಲಹೆಯನ್ನು ಕೊಟ್ಟಿದ್ದೆ. ಮಂಗಳೂರಿನಲ್ಲಿ ಫರ್ಟಿಲೈಸರ್ ಕಾರ್ಖಾನೆಯಾಗುತ್ತದೆಂದು, ನೇತ್ರಾವತಿಯ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ತಡೆಯನ್ನು ಹಾಕಿದ್ದಾರೆ. ಅದರಿಂದ ರೈತರಿಗೆ ನೀರನ್ನು ಉಪಯೋಗಿಸಿಕೊಳ್ಳದ ಹಾಗೆ ಆಗಿದೆ. ಅಲ್ಲಿ ಆ ಕಾರ್ಖಾನೆಯಾಗುವ ಕಾಲಕ್ಕೆ ಮತ್ತು ಅದಕ್ಕೆ ನೀರನ್ನು ಉಪಯೋಗಿಸುವ ಸಂದರ್ಭ ಬರುವುದಕ್ಕೆ ಇನ್ನೂ 2–3 ವರ್ಷವಾದರೂ ಹೋಗುತ್ತದೆ. ಅಷ್ಟರವರೆಗೆ ನೇತ್ರಾವತಿ ಹೊಳೆಯ ನೀರು ಸಮುದ್ರಕ್ಕೆ ಹೋಗುತ್ತಿರುತ್ತದೆ. ಆದ್ದರಿಂದ ಅದನ್ನು ರೈತರಿಗೆ ಕೊಡುವಂತೆ ಸರ್ಕಾರದವರು ಹುಕುಂ ಮಾಡಬೇಕೆಂದು ಸೂಚಿಸುತ್ತೇನೆ; ಅಲ್ಲಿ ಎತ್ತು ತಗ್ಗು ಪ್ರದೇಶಗಳಿರುವುದರಿಂದ, ಬರೇ ಪಂಪ್‌ಸೆಟ್ಟುಗಳಿಂದ ನೀರು ತೆಗೆದರೂ ಸಾಕಾಗುವುದಿಲ್ಲ. ಅಲ್ಲಿ ನಾಲ್ಕೈದು ವರ್ಷಗಳಿಂದ ಲಿಫ್ಟ್ ಇರಿಗೇಷನ್ ಸ್ಕೀಮನ್ನು ಹಾಕಿಕೊಂಡಿದ್ದಾರೆ. ಇವತ್ತು ರೈತರು ಹೆಚ್ಚು ಬೆಳೆಸಬೇಕೆಂದು ಹೇಳುವಾಗ, ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಸಹಕಾರಗಳನ್ನು ಕೊಡಬೇಕಾದುದು ಅತ್ಯಾವಶ್ಯಕ. ಅದರಲ್ಲೂ ಪ್ರಾಮುಖ್ಯವಾದುದು ನೀರು. ಆದ್ದರಿಂದ ಹೊಳೆಯಲ್ಲಿರುವಂತಹ ನೀರನ್ನು ರೈತರಿಗೆ ಉಪಯೋಗಿಸಲು ಹುಕುಂ ಮಾಡಿ, ಹೆಚ್ಚಿನ ಬೆಳೆಯನ್ನು ಬೆಳೆಸುವುದಕ್ಕೆ ನಮ್ಮ ಸರ್ಕಾರದವರು ಸಹಕಾರ ಕೊಡುವುದು ಅತ್ಯಗತ್ಯ. ಅಲ್ಲಿ ಕೆಲವೊಂದು ಲಿಫ್ಟ್ ಇರಿಗೇಷನ್ ಸ್ಯಾಂಕ್ಷನ್ ಆಗಿದೆ. ಆದರೆ ಇನ್ನೂ ಕಾರ್ಯಗತವಾಗಿಲ್ಲ. ಅದನ್ನು ಈ ವರ್ಷದ ಸ್ಕೀಂನಲ್ಲಿ ತೆಗೆದುಕೊಂಡು, ರೈತರಿಗೆ ಹೆಚ್ಚು ಬೆಳೆಯಲು ಸಹಾಯ ಮಾಡಬೇಕು. ಅದರಲ್ಲೂ ಬಂಟ್ವಾಳ ಮತ್ತು ಸಜಿಪನಾಡು ಲಿಫ್ಟ್ ಇರಿಗೇಷನ್ ಏನಿದೆ, ಅದು ಆದರೆ, ಅಲ್ಲಿ ಎರಡು ಸಾವಿರ ಎಕರೆಯಲ್ಲಿ ಬೆಳೆ ಬೆಳೆಸುವುದಕ್ಕೆ ಅಸ್ಪದ ಇದೆ. ಈಗ ಒಂದು ಸಣ್ಣದು ಮಾಡಿದ್ದರಲ್ಲಿ 500 ಎಕರೆ ಸಾಗುವಳಿ ಮಾಡುತ್ತಿದ್ದಾರೆ. ಈಗ ಎರಡೂ ಸ್ಯಾಂಕ್ಷನ್ ಆಗಿದೆ,

ಒಂದೊಂದರಲ್ಲಿ ಎರಡೆರಡು ಸಾವಿರ ಎಕರೆಯಲ್ಲಿ, ಎರಡನೇ ಬೆಳೆ, ಮೂರನೇ ಬೆಳೆಯಾಗುವಂತಹ ಪರಿಸ್ಥಿತಿ ಇದೆ. ಆದ್ದರಿಂದ ಅದನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. 5-6 ವರ್ಷದಿಂದ ಇರುವಂತಹ ಈ ಸಜಿಪನಾಡು ಯೋಜನೆ, ಕರ್ವಾರಗುಂಡಿ ಯೋಜನೆ ಮತ್ತು ಫರಂಗಿಪೇಟೆ ಯೋಜನೆ, ಎಂಬ ಈ ಮೂರು ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಅದಷ್ಟು ಜಾಗ್ರತೆ ತೆಗೆದುಕೊಂಡು, ಅದರಿಂದ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ನಾವು ಪಂಪುಸೆಟ್ಟುಗಳನ್ನು ಎಷ್ಟೋ ವರ್ಷಗಳಿಂದ ಜಿಲ್ಲಾ ಮಟ್ಟದಲ್ಲಿಯೂ ಹಾಗೂ ಸ್ಟೇಟ್ ಮಟ್ಟದಲ್ಲಿಯೂ ಕೇಳುತ್ತಿದ್ದೇವೆ. ಸರ್ಕಾರದವರು ಕೊಡತಕ್ಕಂಥ ಪಂಪುಸೆಟ್ಟುಗಳನ್ನು ಟೆನೆಂಟ್ಸ್ ತೆಗೆದುಕೊಳ್ಳುವ ಹಕ್ಕು ಇರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಒಂದು ಹೊಸ ಕಂಡೀಷನ್ ಪ್ರಕಾರ ಟೆನೆಂಟ್ಸ್ ಏನಿದ್ದಾರೆ ಅವರಿಗೆ ಪಂಪುಸೆಟ್ಟು ತಗೆದುಕೊಳ್ಳುವುದಕ್ಕೆ ಒಂದು ಸೆಕ್ಯೂರಿಟಿ ಇಲ್ಲ. ಆದ್ದರಿಂದ ಒಕ್ಕಲುದಾರರಿಗೆ, ಟೆನೆಂಟುಗಳಿಗೆ ಪಂಪುಸೆಟ್ಟುಗಳನ್ನೇ ಸೆಕ್ಯೂರಿಟಿ ತೆಗೆದುಕೊಳ್ಳುವಂಥಾ ಒಂದು ಸವಲತ್ತನ್ನು ಸರ್ಕಾರದವರು ಕೊಡಬೇಕು ಎಂಬು ನಾನು ಒತ್ತಾಯಪೂರ್ವಕವಾಗಿ ಮಾನ್ಯ ವ್ಯವಸಾಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ 100ಕ್ಕೆ 90 ಜನ ರೈತರು ಗೇಣಿದಾರ ರೈತರು, ಟೆನೆಟ್ಸ್ ಆಗಿರುತ್ತಾರೆ. ಆದ್ದರಿಂದ ಪಂಪುಸೆಟ್ಟುಗಳನ್ನೇ ಸೆಕ್ಯೂರಿಟಿಯಾಗಿ ತೆಗೆದುಕೊಂಡು ಅವರಿಗೆ ಸರ್ಕಾರದವರು ಪಂಪುಸೆಟ್ಟುಗಳನ್ನು ಕೊಡುವಂತಹ ಸವಲತ್ತುಗಳನ್ನು ಕೊಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮೀನುಗಾರಿಕೆಯ ವಿಷಯದಲ್ಲಿ ಶ್ರೀಮಾನ್ ಭಾಸ್ಕರಶೆಟ್ಟರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆ ಮೀನಿನ ಚಿನ್ನದ ಗಣಿ ಎಂದು ಹೇಳಬಹುದು. ಎಂದರೆ ಮೀನು ಚಿನ್ನದ ಗಣಿ ಆಗುವುದಿಲ್ಲ. ಮೀನನ್ನು ಪರದೇಶಕ್ಕೆ ಕಳುಹಿಸಿದರೆ ಚಿನ್ನ ಉತ್ಪತ್ತಿಯಾಗುತ್ತದೆ. ಮೀನಿನ ಉತ್ಪಾದನೆಯಿಂದಲೂ ಸಹ ಆಹಾರದ ಸಮಸ್ಯೆ ಬಹಳಮಟ್ಟಿಗೆ ನೀಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಕಿ ಇಲ್ಲದೆ ಇದ್ದರೆ ಮೀನನ್ನೇ ತಂದು ಉಪಯೋಗಿಸಿ ಜನಗಳು ಜೀವಿಸುತ್ತಿದ್ದಾರೆ. ಆದ್ದರಿಂದ ಮೀನಿನ ಕ್ರಯ ಜಾಸ್ತಿಯಾಗಿದೆ. ಪ್ರತಿಯೊಬ್ಬರೂ ಮೀನನ್ನು ತಿನ್ನುತ್ತಿದ್ದರೆ ಅವರು ಬುದ್ಧಿವಂತರಾಗುತ್ತಾರೆ ಎಂದು ಅನೇಕರು ಹೇಳುತ್ತಿದ್ದಾರೆ. ಹೀಗಾಗಿ ಪ್ರತಿಯೊಬ್ಬರೂ ಮೀನು ತಿನ್ನುತ್ತಿರುವುದರಿಂದ ಮೀನಿನ ಕ್ರಯ ಜಾಸ್ತಿಯಾಗುತ್ತಿದೆ. ಆದ್ದರಿಂದ ಸರ್ಕಾರದವರು ಸ್ವಲ್ಪ ಕಡಿಮೆ ದರದಲ್ಲಿ ಜನಗಳಿಗೆ ಮೀನು ದೊರೆಯುವ ಹಾಗೆ ಕ್ರಮ ಕೈಗೊಳ್ಳಬೇಕು ಎಂದು ನಾನು ಹೇಳುತ್ತೇನೆ. ಮತ್ತು ವ್ಯವಸಾಯ ಮಂತ್ರಿಗಳು ಮತ್ತು ಮೀನುಗಾರಿಕೆಯ ಮಂತ್ರಿಗಳು ಸೇರಿ ಮೀನುಗಾರಿಕೆಯ ಅಭಿವೃದ್ಧಿಯ ಬಗ್ಗೆ ಹೆಚ್ಚು ಗಮನ ಕೊಡಬೇಕು. ಮತ್ತು ಇಬ್ಬರು ಮಾನ್ಯ ಮಂತ್ರಿಗಳು ಸೇರಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಮೀನುಗಾರಿಕೆ ಕಾಲೇಜನ್ನು ತೆರೆಯುವ ಬಗ್ಗೆ ಹೆಚ್ಚಿನ ಪ್ರಯತ್ನ ಮಾಡಿ ಅದು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ಬರುವಂತೆ ಪ್ರಯತ್ನ ಮಾಡಬೇಕು. ಮಾನ್ಯ ಮೀನುಗಾರಿಕೆಯ ಮಂತ್ರಿಗಳು ಮೀನುಗಾರರ ಮಕ್ಕಳಿಗೆ ತರಪೇತಿಯನ್ನು ಕೊಡುವಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿರತಕ್ಕದ್ದು ಸಂತೋಷದ ಸುದ್ದಿ. ಅವರು ತರಪೇತಿಯನ್ನು ಪಡೆದನಂತರ ಅವರಿಗೆ ಸಾಕಷ್ಟು ಕೆಲಸಗಳು ದೊರೆಯುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿ ವಿಷಯದಲ್ಲಿ ಕೆಲವೊಂದು ವಿಷಯಗಳನ್ನು ನಾನು ಹೇಳಬೇಕಾಗುತ್ತದೆ. ವಿದ್ಯುಚ್ಛಕ್ತಿಗೆ ಈಗ ಸುಮಾರು 5-6 ತಿಂಗಳಿಂದ ಯಾವರೀತಿ ಚಾರ್ಜ್ ಮಾಡುತ್ತಿದ್ದಾರೆ ಎಂಬುದು ನಮಗೆ ಅರ್ಥವಾಗುವುದಿಲ್ಲ. ಕೆಲವು ಮನೆಗಳಲ್ಲಿ ಎಲೆಕ್ಟ್ರಿಸಿಟಿ ಕನ್‌ಸಮ್‌ಷನ್ 10-15 ಯೂನಿಟ್ ಇದ್ದದ್ದು 30-40 ಯೂನಿಟ್ಟಿಗೆ ಬರುತ್ತಿದೆ. ಆ ಬಗ್ಗೆ ಕೆಲವೊಂದು ಕಂಪ್ಲೇಂಟ್ ಕೊಟ್ಟರೆ ಅದು ಮೀಟರ್ ದೋಷ ಎಂದು ಹೇಳುತ್ತಾರೆ. ಕೆಲವು ಲೀಕೇಜ್ ಎಂದು ಹೇಳುತ್ತಾರೆ. ಪ್ರತಿಯೊಬ್ಬರ ಪಂಪುಸೆಟ್ಟುಗಳಲ್ಲಿಯೂ ಕಂಪ್ಲೇಂಟ್ಸ್ ಬರುತ್ತಿವೆ. ಇದನ್ನು ಸಂಬಂಧಪಟ್ಟ ಇಲಾಖೆಯವರು ಮುತವರ್ಜಿ ವಹಿಸಿ ಸರಿಪಡಿಸಬೇಕೆಂದು ನಾನು ಒತ್ತಿ ಒತ್ತಿ ಹೇಳುತ್ತೇನೆ.

ಅಗ್ರಿಕಲ್‌ಚರಲ್ ಮತ್ತು ಹಾರ್ಟಿಕಲ್‌ಚರ್ ಎರಡು ಇಲಾಖೆಗಳನ್ನೂ ಸೇರಿಸಿ ತುಂಬಾ ಹಣವನ್ನು ಇಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಸಹ ಬಹಳ ಹುಮ್ಮಸ್ಸಿನಿಂದ ರೈತರ ಕಷ್ಟಗಳು ಏನಿವೆ ಎಂಬುದನ್ನು ತಿಳಿದುಕೊಂಡು ಸಾಧ್ಯವಾದಮಟ್ಟಿಗೆ ಅವುಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಹಾರ್ಟಿಕಲ್‌ಚರಲ್ ಇಲಾಖೆಯವರು ಪ್ರತಿಯೊಂದು ಊರಿನಲ್ಲಿಯೂ ತಮ್ಮ ಇಲಾಖೆಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ತೃಪ್ತಿಕರವಾದ ರೀತಿಯಲ್ಲಿ ಮಾಡುವಂಥಾ ಒಂದು ವ್ಯವಸ್ಥೆಯನ್ನು

(ಶ್ರೀಮತಿ ಕೆ. ಲೀಲಾವತಿ ರೈ)

ಮಾಡಬೇಕು. ಈಗ ಸರ್ಕಾರದವರು ಸಾರ್ವಜನಿಕರ ಉದ್ದೇಶಕ್ಕಾಗಿ ಕೆಲವೊಂದು ಭೂಮಿಯನ್ನು ರೈತರಿಂದ ವಶಪಡಿಸಿಕೊಳ್ಳುವಾಗ ಅವರಿಗೆ ಕೊಡಬೇಕಾದಂಥ ಹಣವನ್ನು ಕೂಡಲೇ ಕೊಡುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ರೈತರು ವ್ಯವಸಾಯ ಮಾಡುವಂತಹ ಭೂಮಿಯನ್ನು ಸರ್ಕಾರದವರಿಗೆ ಬಿಟ್ಟುಕೊಡುವಾಗ ಅವರಿಗೆ ಕೂಡಲೇ ಹಣ ಸಿಕ್ಕದಿದ್ದರೆ, ರೈತರು ತಮ್ಮ ಭೂಮಿಯನ್ನು ಸರ್ಕಾರದ ಯಾವುದೇ ಕೆಲಸಕ್ಕಾಗಲೀ ಬಿಟ್ಟುಕೊಡುವುದಕ್ಕೆ ಸ್ವಲ್ಪ ಹಿಂದೆ ಮುಂದೆ ನೋಡುತ್ತಾರೆ. ಆದ್ದರಿಂದ ಅವರಿಗೆ ಭೂಮಿಯನ್ನು ಬಿಟ್ಟುಕೊಟ್ಟ ಕೂಡಲೇ ಹಣವನ್ನು ಕೊಡಬೇಕು. ಇದರಲ್ಲಿ ಏನಾದರೂ ತೊಂದರೆ ಇದ್ದರೆ ಅದನ್ನು ಸರಿಪಡಿಸಬೇಕು. ಹಾಗೆಯೇ ಹಾರ್ಟಿಕಲ್‌ಚರಲ್ ಇಲಾಖೆಯಲ್ಲಿರತಕ್ಕ ನೌಕರರ ಗ್ರೇಡನ್ನು ಸರಿಯಾದ ರೀತಿಯಲ್ಲಿ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ವೆಟರ್‌ನರಿ ಇಲಾಖೆಯ ವಿಷಯವಾಗಿ ಒಂದೆರಡು ಮಾತುಗಳನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಮಲೆನಾಡು ಪ್ರದೇಶ ಬಹಳ ಹಿಂದುಳಿದಿದೆ. ಅದರಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆ ಹಳ್ಳಿಗಾಡುಗಳಿಂದ ಕೂಡಿದ ಜಿಲ್ಲೆ. ಪ್ರತಿಯೊಬ್ಬ ಮನುಷ್ಯರೂ ಕೂಡ ಒಳ್ಳೆಯ ಹಾಲು ಕುಡಿಯಬೇಕು, ಒಳ್ಳೆಯ ಬೆಣ್ಣೆಯನ್ನು ತಿನ್ನಬೇಕು. ಗಟ್ಟಿಮುಟ್ಟಾಗಿ ಬೆಳೆಯಬೇಕು, ದೇಶಸೇವೆಯನ್ನು ಮಾಡಬೇಕು ಎನ್ನುವಂಥಾ ರೂಢಿ ಇದೆ. ಅದಕ್ಕಾಗಿ ಸರ್ಕಾರದವರು ಪಶುಪಾಲನೆಯ ಬಗ್ಗೆ ಹೆಚ್ಚು ನಿಗಾ ಕೊಡಬೇಕು. ಮಾನ್ಯ ವೆಟರ್‌ನರಿ ಮಂತ್ರಿಗಳಲ್ಲಿ ನನ್ನ ವಿನಂತಿ ಇಷ್ಟೆ. ಹಳ್ಳಿಗಾಡಿನಲ್ಲಿ ಆರ್. ವಿ. ಡಿ. ಡಿಸ್‌ಪೆನ್ಸರಿಗಳ ಅಗತ್ಯ ಇದೆ. ಆದ್ದರಿಂದ ಅವುಗಳನ್ನು ಹಳ್ಳಿಗಾಡುಗಳಲ್ಲಿ ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಮತ್ತು ಪ್ರತಿಯೊಂದು ಆರ್. ವಿ. ಡಿ. ಡಿಸ್ಪೆನ್ಸರಿಯಲ್ಲಿಯೂ ಸ್ಟಾಕ್‌ಮನ್‌ಗಳನ್ನು ನೇಮಕಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಇಷ್ಟು ವಿಷಯಗಳನ್ನು ನಾನು ವಿನಂತಿ ಮಾಡಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಂ. ಜಾಲಿಸಟ್ಗಿ (ಭಟಕಲ್).—ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಮುಂದೆ ಮಂಡಿಸಿರತಕ್ಕ ವ್ಯವಸಾಯ, ಪಶುಪಾಲನೆ ಮತ್ತು ಅರಣ್ಯ ಖಾತೆಗಳ ಬೇಡಿಕೆಗಳ ಬಗ್ಗೆ ನಾನು ಕೆಲವು ಉಪಯುಕ್ತವಾದ ಸೂಚನೆಗಳನ್ನು ಕೊಡಲಿಕ್ಕೆ ನಿಂತಿದ್ದೇನೆ. ಈ ಬೇಡಿಕೆಗಳ ಬಗ್ಗೆ 11,24,039 ರೂಪಾಯಿಗಳನ್ನು ಏನು ಈ ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ ಇದು ಕಡಿಮೆ ಎಂದು ನಾನು ಭಾವಿಸುತ್ತೇನೆ. ಈ ಖಾತೆ ಮನುಷ್ಯನ ಜೀವನಕ್ಕೆ ಸಂಬಂಧಪಟ್ಟ ಖಾತೆ. ಆದ್ದರಿಂದ ಈ ಖಾತೆಯ ಬಗ್ಗೆ ಹೆಚ್ಚಿನ ಹಣವನ್ನು ಒದಗಿಸಬೇಕಾಗಿತ್ತು. ಇನ್ನು ಮುಂದಾದರೂ ಈ ಖಾತೆಗೆ ಹೆಚ್ಚಿಗೆ ಹಣವನ್ನು ಕೊಡಬೇಕೆಂದು ಮಾನ್ಯ ಅರ್ಥ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ಕಳೆದ 4 ವರ್ಷಗಳಿಂದ ಬರಗಾಲ ಪರಿಸ್ಥಿತಿ ಉಂಟಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಈ ರೀತಿ ಬರಗಾಲ ಪರಿಸ್ಥಿತಿ ಆಗಲಿಕ್ಕೆ ಮೂಲಭೂತ ಕಾರಣ ಏನು ಎಂಬುದನ್ನು ಸೂಕ್ಷ್ಮವಾಗಿ ವಿಚಾರ ಮಾಡಬೇಕು. ಮಳೆಗೂ ಬೆಳೆಗೂ ಒಂದು ಸಂಬಂಧ ಇದೆ. ಮಳೆ ಸರಿಯಾಗಿ ಆಗಬೇಕಾದರೆ ಅರಣ್ಯ ಅತಿ ಅವಶ್ಯ. ಆದ್ದರಿಂದ ಅರಣ್ಯಕ್ಕೂ ಬೇಸಾಯಕ್ಕೂ ನಿಕಟ ಸಂಬಂಧ ಇದೆ. ಅರಣ್ಯಕ್ಕೂ ಮತ್ತು ಬೇಸಾಯಕ್ಕೂ ಒಂದು ಸಮತೋಲನ ಇದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಮೈಸೂರು ರಾಜ್ಯದಲ್ಲಿ ಕೆಲವು ತೊಡಕುಗಳು ಇವೆ. ಇದನ್ನು ಸರಿಯಾಗಿ ಸರ್ಕಾರದವರು ವಿಚಾರ ಮಾಡಿ ಅರಣ್ಯಕ್ಕೂ ಮತ್ತು ಬೇಸಾಯಕ್ಕೂ ಇರುವಂಥಾ ಸಮತೋಲನವನ್ನು ಇಡುವುದಕ್ಕೆ ಪ್ರಯತ್ನ ಮಾಡಿಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗುತ್ತದೆ. ನಮ್ಮ ನ್ಯಾಷನಲ್ ಫಾರೆಸ್ಟ್ ಪಾಲಿಸಿ ಪ್ರಕಾರ ಮಲೆನಾಡಿನಲ್ಲಿ 60 ಪರ್ಸೆಂಟ್ ಮೈದಾನದಲ್ಲಿ 20 ಪರ್ಸೆಂಟ್ ಫಾರೆಸ್ಟ್ ಇರಬೇಕೆಂದು ಎಷ್ಟೋ ವರ್ಷಗಳ ಹಿಂದೆಯೇ ತೀರ್ಮಾನವಾಗಿದೆ. ಉತ್ತರ ಕನ್ನಡ ಜಿಲ್ಲೆಯನ್ನು ಬಿಟ್ಟು ಬಾಕಿ ಯಾವ ಜಿಲ್ಲೆಗೆ ಹೋಗಿ ನೋಡಿದರೂ ಕೂಡ ಆ ಪ್ರಮಾಣದಲ್ಲಿ ಫಾರೆಸ್ಟ್ ಇಲ್ಲ. ಈಗ ಉದಾಹರಣೆಗೆ ತಮಗೆ ಕ್ಷಾಮ ಬಂದಿರತಕ್ಕ ಜಿಲ್ಲೆಗಳನ್ನು ನಾನು ಹೇಳುತ್ತೇನೆ. ತುಮಕೂರು ಜಿಲ್ಲೆಯಲ್ಲಿ ಕಾಡು 8·5 ಇದೆ. ಕೋಲಾರ ಜಿಲ್ಲೆಯಲ್ಲಿ 10·6 ಪರ್ಸೆಂಟ್ ಇದೆ. ಚಿತ್ರದುರ್ಗ ಜಿಲ್ಲೆಯಲ್ಲಿ 9·9 ಪರ್ಸೆಂಟ್ ಇದೆ. ಬಿಜಾಪುರ ಜಿಲ್ಲೆಯಲ್ಲಿ 5·1 ಪರ್ಸೆಂಟ್ ಕಾಡು ಇದೆ. ಹಾಸನ ಜಿಲ್ಲೆಯಲ್ಲಿ 7·5 ಪರ್ಸೆಂಟ್ ಕಾಡು ಇದೆ. ಗುಲ್ಬರ್ಗದಲ್ಲಿ 4·2 ಪರ್ಸೆಂಟ್ ಇದೆ. ಬೀದರ್‌ನಲ್ಲಿ 4·2 ಪರ್ಸೆಂಟ್ ಇದೆ. ಮಂಡ್ಯ 2 ಪರ್ಸೆಂಟ್ ಇದೆ. ಆದರೆ ನ್ಯಾಷನಲ್ ಪಾಲಿಸಿ ಪ್ರಕಾರ ಹೆಚ್ಚಿಗೆ ಅರಣ್ಯವನ್ನು ಬೆಳೆಸಬೇಕು. ಸರ್ಕಾರ ಈ ಪ್ರಯತ್ನವನ್ನು ಮಾಡದಿದ್ದರೆ ಖಂಡಿತವಾಗಿಯೂ ಬರಗಾಲ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಆದ್ದರಿಂದ ಅರಣ್ಯಸಂಪತ್ತು ಬಹಳ ಹೆಚ್ಚು ಇರುವ ಕಡೆ ಕಡಿಮೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ 81 ಪರ್‌ಸೆಂಟ್ ಅರಣ್ಯಸಂಪತ್ತು ಇದೆ. ಇಡೀ ರಾಜ್ಯದ ಸರಾಸರಿ ತೆಗೆದುಕೊಂಡರೆ 18 ಪರ್‌ಸೆಂಟ್ ಅರಣ್ಯಸಂಪತ್ತು ಇದೆ. ಅರಣ್ಯಸಂಪತ್ತನ್ನು ಒಂದೇ ಜಾಗದಲ್ಲಿ ಬೆಳೆಸಿದರೆ ಬೇರೆ ಕಡೆಗಳಲ್ಲಿ ಮಳೆ ಸರಿಯಾಗಿ ಬರುವುದಿಲ್ಲ. ಆದಕಾರಣ ನ್ಯಾಷನಲ್ ಫಾರೆಸ್ಟ್ ಪಾಲಿಸಿಯ ಪ್ರಕಾರ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಅರಣ್ಯವನ್ನು ಬೆಳೆಸಬೇಕು. ಈ ದೆಶೆಯಲ್ಲಿ ಸರ್ಕಾರದವರು ಸಾಕಷ್ಟು ಪ್ರಯತ್ನ ಮಾಡಬೇಕು. ಮತ್ತು ಈ ಬಗ್ಗೆ ಗಂಭೀರವಾಗಿ ವಿಚಾರ ಮಾಡಬೇಕು. ಈ ರೀತಿ ಮಾಡದಿದ್ದರೆ ಅಭಾವಪರಿಸ್ಥಿತಿಯನ್ನು ಶಾಶ್ವತವಾಗಿ ಸುಧಾರಿಸಲಿಕ್ಕೆ ಆಗುವುದಿಲ್ಲ. ವ್ಯವಸಾಯದ ಬಗ್ಗೆ ಮಾನ್ಯ ನಾಗನಗೌಡರು ಸಹ ಬಹಳವಾಗಿ ಹೇಳಿದರು.

5-30 P.M.

The Development of Agriculture and Forest-problems and promises-by John Phillips ಎಂಬುವರು ಬರೆದ ಪುಸ್ತಕವನ್ನು ಓದಿಲ್ಲವೆಂದು ಕಾಣುತ್ತದೆ. ಈ ಪುಸ್ತಕವನ್ನು ಅರಣ್ಯಶಾಖೆಯಮಂತ್ರಿಗಳು ಮತ್ತು ವ್ಯವಸಾಯ ಶಾಖೆಯಮಂತ್ರಿಗಳು ಓದಿ ಅದರಂತೆ ಜಾರಿಗೆ ತರಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅರಣ್ಯ ಪ್ರದೇಶಗಳಲ್ಲಿ ಮತ್ತು ವ್ಯವಸಾಯ ಪ್ರದೇಶಗಳು ಒಂದು ಸಮತೋಲನದಲ್ಲಿ ಇಲ್ಲದಿರುವುದರಿಂದ ನಮ್ಮ ಆರ್ಥಿಕ ಪರಿಸ್ಥಿತಿ ಕಂಗಲಾಗಿದೆ. ಜನರಿಗೆ ಹೊಟ್ಟೆತುಂಬ ಅನ್ನ ಮೈತುಂಬ ಬಟ್ಟೆ ಸಿಗುತ್ತಿಲ್ಲ. ಹಿಂದೆ ಬ್ರಿಟಿಷರು ಜನರಿಗೆ ಪುಕ್ಕಟೆಯಾಗಿ ಕಟ್ಟಿಗೆಯನ್ನು ಒದಗಿಸುತ್ತಿದ್ದರು. ಈಗಿನ ಸರ್ಕಾರದಲ್ಲಿ ಅದೂ ಸಿಗುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿರುವ ಅರಣ್ಯಸಂಪತ್ತು ಕಡಿಮೆ ಮಾಡಬೇಕು. ಈಗಿರುವ 81 ಪರ್‌ಸೆಂಟನ್ನು 60 ಪರ್‌ಸೆಂಟ್‌ಗೆ ಇಳಿಸಿ ಉಳಿದ 21 ಪರ್‌ಸೆಂಟ್‌ನಲ್ಲಿರುವ 5 ಲಕ್ಷ ಎಕರೆಯನ್ನು ಬೇಸಾಯಕ್ಕೆ ಕೊಡಬೇಕು. ಈ ರೀತಿ ಮಾಡಿದರೆ ಬೇಸಾಯದ ಪ್ರದೇಶ ಮತ್ತು ಅರಣ್ಯದ ಪ್ರದೇಶ ಸಮತೋಲನವಾಗುತ್ತದೆ. ಈಗಿನ ಬೇಸಾಯದ ಮಂತ್ರಿಗಳು ಹಿಂದೆ ಅರಣ್ಯಖಾತೆಯ ಮಂತ್ರಿಗಳಾಗಿದ್ದಾಗ ನಮ್ಮ ಜಿಲೆಗೆ ಬಂದಿದ್ದಾಗ ಈ ಒಂದು ಸಮಸ್ಯೆಯನ್ನು ಅವರ ಮುಂದೆ ಹೇಳಿದಾಗ ಅವರು I am not here to liquidate forest wealth ಎಂದು ಹೇಳಿದರು.

ಶ್ರೀ ಬಿ. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ಈಗ 70 ಸಾವಿರ ಎಕರೆಯನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಎಂ. ಎಂ. ಜಾಲಿಸಟ್‌ಗಿ.—ಅವರು ಆ ರೀತಿ ಹೇಳಿದಾಗ ಚರ್ಚಿಲ್‌ರು ಹೇಳಿದ ಮಾತು ಜ್ಞಾಪಕಕ್ಕೆ ಬಂತು. ಈಗ ಅವರು ಬೇಸಾಯ ಖಾತೆಯನ್ನು ಹೊಂದಿದ್ದಾರೆ. ಆದ್ದರಿಂದ ಈ ವಿಚಾರವನ್ನು ಬೇಸಾಯಖಾತೆಯ ಮಂತ್ರಿಗಳು ಮತ್ತು ಅರಣ್ಯಖಾತೆಯ ಮಂತ್ರಿಗಳು ವಿಚಾರ ಮಾಡಿ ಒಂದು ಸಮತೋಲನಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ನಾನು ಟೀಕೆ ಮಾಡುತ್ತಿಲ್ಲ. ನಮ್ಮ ಜಿಲ್ಲೆಯ ಪರಿಸ್ಥಿತಿಯನ್ನು ಮಾನ್ಯ ಮಂತ್ರಿಗಳು ಸಮಗ್ರವಾಗಿ ವಿಚಾರ ಮಾಡಿ ಒಂದು ಅಭಿಪ್ರಾಯಕ್ಕೆ ಬರುವುದು ಒಳ್ಳೆಯದು ನನ್ನ ಅಭಿಪ್ರಾಯದಲ್ಲಿ ಈ ಎರಡು ಖಾತೆಗಳನ್ನು ಒಬ್ಬರೇ ಮಂತ್ರಿಗಳು ನೋಡಿಕೊಳ್ಳುವುದು ಒಳ್ಳೆಯದು. ಅರಣ್ಯಭೂಮಿಯನ್ನು ಬೇಸಾಯ ಭೂಮಿಯನ್ನು ಒಂದು ಸಮತೋಲನಕ್ಕೆ ತಂದರೆ ನಮ್ಮ ರಾಜ್ಯದಲ್ಲಿ ಆಹಾರದ ಪರಿಸ್ಥಿತಿ ಸುಧಾರಿಸುತ್ತದೆ. ಮತ್ತು ನಾವು ಈ ಬಗ್ಗೆ ಸ್ವಾವಲಂಬಿಗಳಾಗುವುದಕ್ಕೆ ಅವಕಾಶವಾಗುತ್ತದೆ. ಅರಣ್ಯ ಇಲಾಖೆ ಮತ್ತು ಬೇಸಾಯ ಇಲಾಖೆ ಒಂದು ರಥದ ಎರಡು ಕುದುರೆಗಳು ಇದ್ದಂತೆ ಎರಡು ಕುದುರೆಗಳು ಸಹ ಸಮರಸದಿಂದ ಓಡಿದರೆ ಗುರಿಯನ್ನು ಮುಟ್ಟುತ್ತವೆ. ಆದರೆ ಒಂದು ಕುದುರೆ ಏರಿ ಕಡೆಗೆ ಎಳೆದರೆ ಮತ್ತೊಂದು ಕುದುರೆ ನೀರಿನ ಕಡೆಗೆ ಎಳೆದರೆ ಗುರಿ ಮುಟ್ಟುವುದಕ್ಕಾಗುವುದಿಲ್ಲ. ಈ ಒಂದು ಉದಾಹರಣೆಯನ್ನು ಇಟ್ಟುಕೊಂಡು ಈ ಎರಡು ಇಲಾಖೆಯವರು ಸಮರಸದಿಂದ ಕೆಲಸಮಾಡಿದರೆ ಮಾತ್ರ ನಮ್ಮ ರಾಜ್ಯದಲ್ಲಿ ಬರಗಾಲವನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗುತ್ತದೆ. ಇದೇ ರೀತಿ ಮುಂದುವರೆದರೆ ನಮಲ್ಲಿರುವ ಆಹಾರದ ಅಭಾವವನ್ನು ಹೋಗಲಾಡಿಸುವುದಕ್ಕಾಗುವುದಿಲ್ಲ. ಆಂಧ್ರ, ಪಂಜಾಬ್ ಮುಂತಾದ ಬೇರೆ ದೇಶಗಳಿಗೆ ಆಹಾರಕ್ಕಾಗಿ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಹೋಗುವುದು ತಪ್ಪುವುದಿಲ್ಲವೆಂದು ಖಂಡಿತವಾಗಿ ಹೇಳುತ್ತೇನೆ. ಮಾನ್ಯ ಅರಣ್ಯಖಾತೆಯ ಮಂತ್ರಿಗಳು ರೈತ ಕುಟುಂಬದಲ್ಲಿ ಹುಟ್ಟಿದವರು. ಅವರು ಇದನ್ನು ಸಮಗ್ರವಾಗಿ ವಿಚಾರ ಮಾಡಿ ನಮ್ಮ ಜಿಲ್ಲೆಯಲ್ಲಿ 81 ಪರ್‌ಸೆಂಟ್‌ನ್ನು ಇರುವ ಅರಣ್ಯಸಂಪತ್ತನ್ನು 60 ಪರ್‌ಸೆಂಟ್‌ಗೆ ಇಳಿಸಬೇಕು. ಉಳಿದ 21 ಪರ್‌ಸೆಂಟ್‌ನ್ನು ಬೇಸಾಯಕ್ಕೆ ಬಿಟ್ಟುಕೊಟ್ಟರೆ ಸರ್ಕಾರಕ್ಕೆ ವರ್ಷಕ್ಕೆ 4 ಕೋಟಿ

(ಶ್ರೀ ಎಂ. ಎಂ. ಜಾಲಸಟಗಿ)

ರೂಪಾಯಿಗಳ ಆದಾಯ ಬರುತ್ತದೆ. ಏಕೆಂದರೆ ಈ 21 ಪರ್‌ಸೆಂಟ್ ಕಾಡಿನಲ್ಲಿ ಕೆಲಸಕ್ಕೆ ಬಾರದ ಗಿಡಗಂಟೆಗಳು ಬೆಳೆದಿವೆ. ಅಮೇರಿಕಾ, ಜರ್ಮನಿ, ಕೆನಡಾ ಮುಂತಾಥ ದೇಶಗಳಲ್ಲಿ ಹೆಚ್ಚಿನ ಬೆಳೆಯನ್ನು ಕಡಿಮೆ ಪ್ರದೇಶಗಳಲ್ಲಿ ಬೆಳೆಯಲು ಕಾರಣವೇನೆಂದರೆ ಅವರು ಬೇಸಾಯ ಕ್ಷೇತ್ರ ಮತ್ತು ಅರಣ್ಯ ಕ್ಷೇತ್ರವನ್ನು ಸಮತೋಲನವಾಗಿ ಇಟ್ಟುಕೊಂಡಿರುವುದು. ಈ ಒಂದು ಪದ್ಧತಿಯನ್ನು ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಜಾರಿಗೆ ತಂದರೆ ನಮ್ಮ ಸರ್ಕಾರಕ್ಕೆ 40 ಕೋಟಿ ರೂಪಾಯಿಗಳ ಹೆಚ್ಚಿನ ಆದಾಯ ಬರುತ್ತದೆಂದು ನಾನು ಘಂಟಘೋಷವಾಗಿ ಹೇಳುತ್ತೇನೆ. ಇದನ್ನು ಸಂಬಂಧಪಟ್ಟ ಅಧಿಕಾರಿಗಳು ವಿಚಾರ ಮಾಡಬೇಕು. ನಮ್ಮ ಜಿಲ್ಲೆಯ 21 ಪರ್‌ಸೆಂಟ್ ಅರಣ್ಯವನ್ನು ಆಹಾರಧಾನ್ಯವನ್ನು ಬೆಳೆಯುವುದಕ್ಕೆ ಮತ್ತು ಅರ್ಗಿಕಲ್ಚರ್ ಇಲಾಖೆಗೆ ಬಿಟ್ಟುಕೊಡಬೇಕು. 100 ವರ್ಷಗಳ ಹಿಂದೆ ಬ್ರಿಟಿಷರು ಏನು ಒಂದು ಸಿಲಬಸ್ ಇಟ್ಟುಕೊಂಡು ಅರಣ್ಯದ ಬಗ್ಗೆ ಶಿಕ್ಷಣ ಕೊಡುತ್ತಿದ್ದರೋ ಅದೇ ಶಿಕ್ಷಣವನ್ನು ಈ ಸ್ಪುಟ್ನಿಕ್ ಯುಗದಲ್ಲಿಯೂ ಕೂಡ ನಮ್ಮ ಸರ್ಕಾರದವರು ಕೊಡುತ್ತಿದ್ದಾರೆ ಮತ್ತು ಅನುಸರಿಸುತ್ತಿದ್ದಾರೆ. ಇದು ಸರಿಯಲ್ಲ. 81 ಪರ್‌ಸೆಂಟ್ ಅರಣ್ಯದಲ್ಲಿ 21 ಪರ್‌ಸೆಂಟ್‌ನಲ್ಲಿ ನಿರುಪಯೋಗಿಯಾದ ಗಿಡಗಂಟೆಗಳು ಬೆಳೆಯುತ್ತಿರುವುದರಿಂದ ಈ ಪ್ರದೇಶಗಳನ್ನು ಬೇಸಾಯಕ್ಕೆ ಬಿಟ್ಟುಕೊಟ್ಟರೆ ಈಗಿನದಕ್ಕಿಂತ 10 ಪಟ್ಟು ಹೆಚ್ಚಿನ ಆಹಾರವನ್ನು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಈ ವಿಚಾರವನ್ನು ನಮ್ಮ ಜಿಲ್ಲೆ ಮುಂಬೈ ರಾಜ್ಯದಲ್ಲಿ ಇದ್ದಾಗಿನಿಂದಲೂ ಹೇಳುತ್ತಲೇ ಇದ್ದೇವೆ. ಶ್ರೀಯುತರುಗಳಾದ ಬಾಸಿನ್, ಮಸೂರ್‌ಕರ್, ಎಸ್. ಎಸ್. ಶಾಸ್ತ್ರಿ ಇವರುಗಳು ತಮ್ಮ ಜೀವನವನ್ನೇ ಮುಡುಪಾಗಿಟ್ಟುಕೊಂಡು ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಬ್ರಿಟಿಷರ ಕಾಲದಲ್ಲಿ ಸುಮಾರು ಅರ್ಧ ಶತಮಾನದವರೆಗೆ ಪ್ರಯತ್ನ ಮಾಡಿದ್ದಾರೆ. ಆದರೆ ಫಲಕಾರಿಯಾಗಲಿಲ್ಲ. ಸ್ವಾತಂತ್ರ್ಯ ಬಂತು. ಸ್ವಾತಂತ್ರ್ಯಬಂದಮೇಲೆ ಇದು ಬಗೆಹರಿಯುತ್ತದೆಂದು ನಾವುಗಳು ತಿಳಿದುಕೊಂಡಿದ್ದೆವು. ಆದರೆ ಆಗಲಿಲ್ಲ. ಸ್ವಾತಂತ್ರ್ಯಬಂದ ಕೆಲವು ಸಮಯದಲ್ಲಿ ನಮ್ಮಜಿಲ್ಲೆಯು ವಿಶಾಲಮೈಸೂರಿಗೆ ಸೇರಿತು. ಕನ್ನಡ ರಾಜ್ಯವಾಗಿರುವುದರಿಂದ ನಮ್ಮ ಸಮಸ್ಯೆಗಳೆಲ್ಲಾ ಬಗೆಹರಿಯುತ್ತವೆ ಎಂದು ತಿಳಿದುಕೊಂಡಿದ್ದೆವು. ಆದರೆ ಇನ್ನೂ ಸಮಸ್ಯೆಯನ್ನು ಸಮಗ್ರವಾಗಿ ಸರಕಾರ ಅರ್ಥ ಮಾಡಿಕೊಂಡಿಲ್ಲ. ನಮ್ಮ ಜಿಲ್ಲೆಯಿಂದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಒಬ್ಬರು ಇದ್ದಾರೆ. ಅವರು ಒಬ್ಬರು ಏನು ತಾನೇ ಮಾಡುತ್ತಾರೆ. ಹಿಂದೆ ಕೂಡ ಐದಾರು ಜನ ಕಾಂಗ್ರೆಸ್ಸು ಸದಸ್ಯರು ನಮ್ಮ ಜಿಲ್ಲೆಯಿಂದಲೂ ಇದ್ದರು. ಆದರೆ ಇವರೆಲ್ಲಾ ಪಾರ್ಟಿ ಡಿಸಿಪ್ಲಿನ್ ಕಾರಣದ ಮೇಲೆ ಯಾವ ಮಾತೂ ಆಡುವುದಕ್ಕಾಗಲಿಲ್ಲ. ಹೀಗಾಗಿ ನಮ್ಮ ಭಾಗದ ಸಮಸ್ಯೆಗಳು ಯಾವುವೂ ಇನ್ನೂ ಪರಿಹಾರವಾಗಲಿಲ್ಲ ಎಂದು ನನ್ನ ಭಾವನೆ. ಇವೊತ್ತು ಇಲ್ಲಿ ಮಾತಾಡಿದ ಮಾನ್ಯ ಸದಸ್ಯರಾದ ಶ್ರೀಮಾನ್ ಚಿಕ್ಕೇಗೌಡರು ಹೇಳಿರುವುದನ್ನು ಕೇಳಿದರೆ ಅವರು ಅಪೊಸಿಷನ್ ಸದಸ್ಯರು ಮಾತನಾಡಿದ ಧಾಟಿಯಲ್ಲೇ ಮಾತನಾಡಿದರು ಎಂದು ನನಗೆ ಕಾಣಿಸುತ್ತದೆ. ನಮ್ಮ ಕಡೆ ಎರಡು ಕೆಲಸಗಳು ಮುಖ್ಯವಾಗಿ ಆಗಬೇಕು. ನಮ್ಮಲ್ಲಿ ಸುಮಾರು ಎರಡು ಲಕ್ಷ ಜನಸಂಖ್ಯೆ ಇದೆ ಮತ್ತು ಸುಮಾರು ಐದು ಲಕ್ಷ ಎಕರೆ ಭೂಮಿ ಇದೆ ಮತ್ತು ಸರಕಾರಕ್ಕೆ ಭೂಮಿಗಾಗಿ ಸುಮಾರು 10—15 ಸಾವಿರ ಅರ್ಜಿಗಳನ್ನು ಕೊಡಲಾಗಿದೆ. ಈವೆಲ್ಲಾ ಕೋಲ್ಡ್ ಸ್ಟೋರೇಜ್‌ನಲ್ಲಿವೆ. ಇದರ ಬಗ್ಗೆ ಈಗ ಪ್ರಸ್ತಾಪಮಾಡಲು ಹೋಗುವುದಿಲ್ಲ. ಇನ್ನೊಂದು ಸಂದರ್ಭದಲ್ಲಿ ಪ್ರಸ್ತಾಪಮಾಡುತ್ತೇನೆ. ನಮ್ಮಲ್ಲಿ ಭೂಮಿ ವ್ಯವಸಾಯ ಮಾಡುವ ರೈತರು ಇದ್ದಾರೆ. ಇವರಿಗೆ ಸಾಕಷ್ಟು ಜಮೀನು ಕೊಟ್ಟು ಬಾಕಿ ಉಳಿಕೆ ಇರುವ ಜಮೀನನ್ನು ಮೈಸೂರು ರಾಜ್ಯದ ಇತರ ಜನತೆಗೆ ಯಾರಿಗೆ ಭೂಮಿ ಇಲ್ಲವೋ ಅವರಿಗೆ ಕೊಡಬಹುದು. ಸುಮಾರು ಎರಡು ಲಕ್ಷ ಎಕರೆ ಜಮೀನಿನಲ್ಲಿ ಭತ್ತ ಬೆಳಸಲಿಕ್ಕೆ ಅವಕಾಶ ಇದೆ ಮತ್ತು ಮೂರು ಲಕ್ಷ ಎಕರೆ ಜಮೀನಿನಲ್ಲಿ ಪ್ಲಾಂಟೇಷನ್ ಕ್ರಾಪ್ ಮಾಡಲು ಅವಕಾಶ ಇದೆ. ಎರಡನೆಯದು ಇವನ್ನೆಲ್ಲಾ ಮಾಡಲು ಹಣದ ಸಹಾಯ ಮಾಡಬೇಕು. ಲ್ಯಾಂಡು ಡೆವಲಪ್‌ಮೆಂಟು ಬ್ಯಾಂಕು ಮೂಲಕ ಕೊಡುತ್ತೇವೆಂದು ಹೇಳುತ್ತಾರೆ. ನಮ್ಮ ದೇಶ ಇಂದು ಆಹಾರದಲ್ಲಿ ಸ್ವಾವಲಂಬನೆ ಪಡೆಯಬೇಕಾದರೆ ನಮ್ಮ ಕಡೆ ಬೇಕಾದಷ್ಟು ವನ ಸಂಪತ್ತು ಇದೆ, ಜಲ ಸಂಪತ್ತು ಇದೆ, ನೆಲ ಸಂಪತ್ತು ಇದೆ. ಇದಕ್ಕಾಗಿ ಸರಕಾರದವರು ರೈತರಿಗೆ ಅನುಕೂಲವಾಗುವಂತೆ ಮೂರು ನಾಲ್ಕು ಕೋಟಿ ರೂಪಾಯಿಗಳಷ್ಟು ಇರುವ ಒಂದು ಕಾರ್ಪೊರೇಷನ್ ಮಾಡಿ, ಇದರಲ್ಲಿ ಸರಕಾರದವರೂ ಮತ್ತು ರೈತರು ಷೇರು ಕ್ಯಾಪಿಟಲ್ ಹಾಕಿ, ಇಲ್ಲಿ ಉತ್ತಮವಾದ ಪ್ಲಾಂಟೇಷನ್ ಕ್ರಾಪ್‌ಗಳು ಎಂದರೆ ಪೈನ್ ಆಪಲ್, ಅಡಕೆ, ತೆಂಗು, ಪೆಪ್ಪರ್ ಕಾರ್ಡಮಂ ಕಾಫೀ ಇತ್ಯಾದಿ ದುಡ್ಡು ತರುವಂತಹ ಬೆಳೆಗಳನ್ನು ಮಾಡಲು ಪ್ರಯತ್ನ ಮಾಡಬೇಕು. ಹೀಗೆ ಮಾಡಿದರೆ ನಮ್ಮ ರಾಜ್ಯದಲ್ಲಿ ನಮ್ಮ ಜಿಲ್ಲೆ ಒಳ್ಳೆಯ ನಂದನವನದ ಜಿಲ್ಲೆಯಾಗುತ್ತದೆ. ಇದರಿಂದ ಆಹಾರದ ಕೊರತೆಯೂ ನೀಗುತ್ತದೆ ಮತ್ತು ನಮ್ಮ ದೇಶದ ಆರ್ಥಿಕ ಸ್ಥಿತಿಯೂ ಸುಧಾರಿಸುತ್ತದೆ.

ಇನ್ನು ನಮ್ಮ ರಾಜ್ಯದಲ್ಲಿ ಬುಲ್ ಡೋಜರುಗಳನ್ನು ರೈತರಿಗೆ ಕೊಡುತ್ತಿದ್ದಾರೆ. ಇದನ್ನು ರಿಪೇರಿ ಮಾಡುವ ವರ್ಕ್‌ಷಾಪುಗಳನ್ನು ಎಲ್ಲ ಜಿಲ್ಲೆಗಳಲ್ಲೂ ಇರುವಂತೆ ವ್ಯವಸ್ಥೆ ಮಾಡಬೇಕು. ಮತ್ತು ಬುಲ್ ಡೋಜರುಗಳ ಟ್ರೇನಿಂಗು ಶಾಲೆಗಳನ್ನು ಪ್ರತಿ ಜಿಲ್ಲೆಯಲ್ಲೂ ಇರುವಂತೆ ಏರ್ಪಾಡು ಮಾಡಬೇಕು.

ಇನ್ನು ಫಿಷರೀಸ್ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ನಮ್ಮ ಈಗಿನ ಮಂತ್ರಿಗಳು ಬಹು ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ಕರಾವಳಿ ಪ್ರದೇಶದಲ್ಲಿ ಇನ್ನೂ ಹೆಚ್ಚು ಕೆಲಸ ಮಾಡಿಸಿಕೊಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಂಚೇಗೌಡ (ಮದ್ದೂರು).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದಿಟ್ಟಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಅಂಶಗಳನ್ನು ಈ ಸಭೆಯ ಮುಂದೆ ಇಡಲಿಕ್ಕೆ ಪ್ರಯತ್ನ ಪಡುತ್ತೇನೆ. ಕೃಷಿಗೆ ಸಂಬಂಧಪಟ್ಟಂತೆ ಬಡ್ಜೆಟಿನಲ್ಲಿ ಏನು ಮೊಬಲಗನ್ನು ಒದಗಿಸಿದ್ದಾರೆ ಮತ್ತು ಯಾವ ಉದ್ದೇಶಕ್ಕಾಗಿ ಒದಗಿಸಿದ್ದಾರೆ ಎನ್ನುವುದನ್ನು ನೋಡಿದರೆ ಅವರು ಒದಗಿಸಿರತಕ್ಕ ಬಹುಭಾಗದ ಮೊಬಲಗು ಅಧಿಕಾರಿಗಳಿಗೋಸ್ಕರ ವೆಚ್ಚವಾಗುತ್ತದೆ ಕಳೆದ ಎರಡು ವರ್ಷಗಳಿಂದೀಚೆಗೆ ಸುಮಾರು ಐದು ಕೋಟಿ ರೂಪಾಯಿಗಳಷ್ಟನ್ನು ಕೃಷಿ ಇಲಾಖೆಯು ವೆಚ್ಚಕ್ಕಾಗಿ ಮೊದಲು ವೆಚ್ಚ ಮಾಡುತ್ತಿದ್ದುದಕ್ಕಿಂತ ಹೆಚ್ಚಾಗಿ ಒದಗಿಸಿದ್ದಾರೆ ಇದನ್ನು ನೋಡಿದಂತಹವರಿಗೆ ಕೃಷಿಗಾಗಿ ಹೆಚ್ಚು ಉತ್ತೇಜನ ಕೊಡುತ್ತಿದ್ದಾರೆ, ಇದು ಸಂತೋಷಪಡತಕ್ಕ ವಿಚಾರ ಎಂದು ಅರ್ಥವಾಗುತ್ತದೆ. ಅದರೆ ದಿನೇ ದಿನೇ ವ್ಯವಸಾಯ ಇಲಾಖೆಗೂ ಸಾಮಾನ್ಯ ರೈತರಿಗೂ ಇರತಕ್ಕ ಸಂಬಂಧ ಕಡಿಮೆಯಾಗುತ್ತಾ ಇರುವಾಗ ಈ ಇಲಾಖೆಯ ವೆಚ್ಚ ಹೆಚ್ಚಾಗಿ ಬೆಳೆಯಬೇಕಾದರೆ ಇದಕ್ಕೆ ಕಾರಣವೇನು ಎನ್ನುವುದನ್ನು ಯಾರೇ ಅವರೂ ಕೂಡ ಯೋಚನೆ ಮಾಡಲೇಬೇಕಾಗಿದೆ.

ಈಗ ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಇದರ ಜವಾಬ್ದಾರಿ ಗ್ರಾಮಸೇವಕರದ್ದು ಮತ್ತು ಇದು ವಿಸ್ತರಣಾಧಿಕಾರಿಯ ಹೊಣೆಯಾಗಿರುತ್ತದೆ. ಈಗ ಅಧಿಕಾರಗಳಿಗೂ ರೈತರಿಗೂ ಇರುವ ಸಂಪರ್ಕ ಕಡಿಮೆಯಾಗುತ್ತಾ ಬಂದಿದೆ. ಬೇಸಾಯದ ವಿಷಯದಲ್ಲಿ ತಮಾಷೆ ಮಾಡುತ್ತಾ ಇದ್ದೀರಿ. ಹೀಗಿದ್ದಾಗ್ಯೂ ಸಹ ಇಷ್ಟೊಂದು ಹಣವನ್ನು ವೆಚ್ಚ ಮಾಡತಕ್ಕದ್ದು ಸರಿಯೇ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಇದರ ಬಗ್ಗೆ ಅನೇಕ ಸ್ನೇಹಿತರು ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಈ ವ್ಯವಸಾಯದ ಇಲಾಖೆ ಬೃಹದಾಕಾರವಾಗಿ ಬೆಳೆದಿದ್ದರೂ ಕೂಡ ಅವರೇ ಎಲ್ಲಾ ರೈತರ ಜಮೀನಿಗೂ ಹೋಗಿ ಉತ್ತು ಬಿತ್ತು ಮಾಡಿ ಕೊಡಬೇಕು ಎಂದೇನೂ ಇಲ್ಲ. ಅದು ಸಾಧ್ಯವೂ ಇಲ್ಲ. ಆದರೆ ಈ ವ್ಯವಸಾಯದಲ್ಲಿ ಹೊಸದಾಗಿ ಏನು ಪರಿಶೋಧನೆ ನಡೆಸಿದ್ದಾರೆ ಅಂದರೆ ಹೈಬ್ರೀಡ್ ವೆರೈಟಿ ಬಗ್ಗೆ ಏನು ಕಂಡುಹಿಡಿದಿದ್ದಾರೋ ಅದರಿಂದ ಎಷ್ಟು ಜನ ರೈತರಿಗೆ ಉಪಯೋಗವಾಗಿದೆ ಅನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಅಥವಾ ಯಾವುದಾದರೂ ಒಂದು ಪ್ರದೇಶ ತೆಗೆದುಕೊಂಡು, ನೀರಾವರಿ ಪ್ರದೇಶದಲ್ಲಿ ಎಷ್ಟು ಪರ್ಸೆಂಟು ರೈತರಿಗೆ ಅನುಕೂಲವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಈ ಇಲಾಖೆಗೆ ಪ್ರತಿವರ್ಷವೂ ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ ಮತ್ತು ಅದೇ ಧಾಟಿಯಲ್ಲಿ ಪರಿಶೋಧನೆಗಳೂ ಕೂಡ ನಡೆಯಬೇಕು. ಜನರು ಪೂರ್ಣ ಅನುಭವ ಪಡೆಯಬೇಕಾದರೆ ರೈತರಿಗೆ ಮಾಡಿರಿ ಎಂದು ಹೇಳುವ ಬದಲು ಅವರೇ ಸ್ವತಃ ಮಾಡಿ ತೋರಿಸಿದರೆ ಅದರಿಂದ ಅಗತಕ್ಕಂಥ ಪ್ರಯೋಜನ ಜಾಸ್ತಿಯಾಗುತ್ತದೆಯೇ ವಿನಃ ಕಡಿಮೆಯಾಗುವುದಿಲ್ಲ. ಅನೇಕ ಸ್ನೇಹಿತರು ಉದಾಹರಣೆ ಕೊಡುವಾಗ ಅಮೇರಿಕಾ ಜಪಾನ್‌ದೇಶದ ವ್ಯವಸಾಯದ ಬಗ್ಗೆ ಹೇಳಿದರು. ಮಂಡ್ಯದಲ್ಲಿ ವಿ.ಸಿ. ಫಾರಂನಲ್ಲಿ ಜಪಾನೀಯರು ಬಂದು ವ್ಯವಸಾಯ ಮಾಡಿದರು ಬೆಳಗ್ಗೆಯಿಂದ ಸಾಯಂಕಾಲದವರೆಗೂ ಅವರು ಚೆನ್ನಾಗಿ ದುಡಿದು ಕೆಲಸ ಮಾಡುತ್ತಾರೆ ಇದರಿಂದ ನಮ್ಮ ರೈತರಿಗೆ ಏನು ಗೊತ್ತಾಗುತ್ತದೆ ಎಂದರೆ ಬೇಸಾಯ ಮಾಡುವ ರೈತರು ಯಾರು ಚೆನ್ನಾಗಿ ಬೇಸಾಯ ಮಾಡುತ್ತಾರೋ ಅವರು ಮುಂದುವರಿಯುವುದಕ್ಕೆ ಸಾಧ್ಯವಿದೆ ಎನ್ನುವುದು ಗೊತ್ತಾಗುತ್ತದೆ. ಅದೇರೀತಿ ತಮಿಳುನಾಡಿನಲ್ಲೂ ಸಹ ಜಪಾನ್‌ದೇಶದ ಬೆಳವಣಿಗೆ ನೋಡಿ ಅವರೂ ಕೂಡ ವ್ಯವಸಾಯದಲ್ಲಿ ಬಹಳ ಮುಂದೆ ಬಂದಿದ್ದಾರೆ.

ಇನ್ನು ನಮ್ಮ ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಒಬ್ಬೊಬ್ಬ ಡಿ.ಎ.ಓ. ಕೊಟ್ಟಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಬಿ.ಡಿ.ಓ. ಇದ್ದಾಗೂ ಕೂಡ ಡಿ.ಎ.ಓ. ಕೊಟ್ಟಿದ್ದಾರೆ. ಅವರಿಗೆ ಏನೂ ಕೆಲಸ ಇಲ್ಲ ಇದು ಅನಾವಶ್ಯಕ. ಮತ್ತು ಈ ಇಲಾಖೆಯಲ್ಲಿ ಅನೇಕ ಉಪಇಲಾಖೆಗಳು ಇವೆ. ಅದರಲ್ಲಿ ಅನೇಕವು ಅನಾವಶ್ಯಕವಾದುದು ಎಂದು ಕಾಣುತ್ತದೆ. ಈಗ ವ್ಯವಸಾಯದ ಇಲಾಖೆ

(ಶ್ರೀ ಎಂ. ಮಂಚೇಗೌಡ)

ಯಲ್ಲಿ ಸಿಬ್ಬಂದಿ ವರ್ಗ ಏನು ಇದೆ ಅದರಲ್ಲಿ 100ಕ್ಕೆ 20 ಜನ ಮಾತ್ರ ಇಟ್ಟುಕೊಂಡು ಬಾಕಿ 80 ಜನರನ್ನು ಬೇರೆ ಕಡೆಗೆ ವರ್ಗಾಯಿಸಿದರೆ ಒಳ್ಳೆಯದು. ಸರ್ಕಾರಿ ಕೆಲಸಕ್ಕೆ ಸೇರಿಕೊಂಡಾದ ಮೇಲೆ ಪುನಃ ತೆಗೆದುಹಾಕುವುದಕ್ಕೆ ಆಗುವುದಿಲ್ಲ. ಸರ್ಕಾರದ ಆಡಳಿತದ ಯಂತ್ರದಲ್ಲಿ ಸಾಮಾನ್ಯ ಜನತೆಯ ಸಂಪರ್ಕ ತಪ್ಪಿಹೋಗಿರುವುದರಿಂದ ಅನೇಕ ಕಷ್ಟನಷ್ಟಗಳು ಉಂಟಾಗಿವೆ. ಇದರಿಂದ ರೈತರಿಗೆ ತೆರಿಗೆ ಹೆಚ್ಚುತ್ತಾ ಇದೆಯೇ ವಿನಃ ಅನುಕೂಲವಾಗುವುದಿಲ್ಲ. ಈ ವ್ಯವಸಾಯದ ಇಲಾಖೆಯಲ್ಲಿ ಸಹಸ್ರಾರು ರೂಪಾಯಿ ಸಂಬಳಕೊಟ್ಟು ಅನೇಕ ಪರಿಣತರನ್ನು ಇಟ್ಟುಕೊಂಡಿದ್ದೀರಿ. ಮೇಜರ್ ಇರಿಗೇಷನ್ ಇರುವ ಕಡೆ ಹೆಚ್ಚಿಗೆ ಸಿಬ್ಬಂದಿ ಇಟ್ಟುಕೊಂಡಿದ್ದೀರಿ. ಅವರು ಒಣ ಪ್ರದೇಶದ ಕಡೆ ಇರುವ ರೈತರುಗಳ ಕಷ್ಟ ಸುಖಗಳನ್ನೂ ನೋಡಬೇಕು. ವ್ಯವಸಾಯ ಮಾಡಲು ಮಳೆಯನ್ನೇ ಅವಲಂಬಿಸಿರುವ ರೈತರ ಕಷ್ಟ ಸುಖಗಳನ್ನೂ ವ್ಯವಸಾಯ ಇಲಾಖೆಯವರು ಗಮನಿಸಬೇಕು. ಲಿಫ್ಟ್ ಇರಿಗೇಷನ್‌ಗೆ ಸಾಧ್ಯವಾದಷ್ಟು ಉತ್ತೇಜನಕೊಡಬೇಕು ಆ ಬಗ್ಗೆ ಅಧಿಕಾರಿಗಳಿಗೆ ಹೆಚ್ಚು ಜವಾಬ್ದಾರಿ ವಹಿಸಿ ಅವರ ಕಷ್ಟಸುಖಗಳನ್ನು ನೋಡಬೇಕು. ಈ ರೀತಿ ವ್ಯವಸಾಯದ ಇಲಾಖೆಗೆ ಏನು ಖರ್ಚು ಮಾಡುತ್ತಿದ್ದೀರೋ ಆ ಸಿಬ್ಬಂದಿ ನೌಕರರು ರೈತರ ಕಷ್ಟಸುಖಗಳನ್ನು ನೋಡಿ ರೈತರಿಗೆ ಉತ್ತೇಜನ ಮಾಡುವುದಾದರೆ ಆಗ ವ್ಯವಸಾಯಗಾರರ ಮೇಲೆ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಆಗಲಿ, ವೆಲ್ತ್ ಟ್ಯಾಕ್ಸ್ ಆಗಲಿ ಏನು ಹಾಕುತ್ತಿರೋ ಅದನ್ನು ಈ ಸಭೆಯಲ್ಲಿ ಯಾರೂ ವಿರೋಧ ಮಾಡುವುದಕ್ಕೆ ಸಾಧ್ಯವಿಲ್ಲ. ಎಂದು ಹೇಳುತ್ತೇನೆ. ಆದುದರಿಂದ ಅನಾವಶ್ಯಕವಾಗಿ ಸಿಬ್ಬಂದಿ ವರ್ಗಕ್ಕೆ ಖರ್ಚು ಮಾಡುತ್ತಾ ಹೋದರೆ ಪ್ರಯೋಜನವಿಲ್ಲ.

ಇನ್ನು ಮಂಡ್ಯ ಷುಗರ್ ಫ್ಯಾಕ್ಟರಿ ಫಾರಂ ವಿಷಯ. ಈ ಫಾರಂನಲ್ಲಿ 5–6 ವರ್ಷದಿಂದಲೂ ನಷ್ಟವಾಗುತ್ತಾ ಇದೆ. ಆ ಫಾರಂನಲ್ಲಿ ಅನೇಕಮಂದಿ ಪರಿಣತರು ಇದ್ದಾರೆ ಇನ್ನು ಮಿಶ್ರಣಗೊಬ್ಬರದ ವಿಷಯ ಅದರಲ್ಲಿ ಒಂದೊಂದು ಮೂಟೆಯೂ ಒಂದೊಂದು ತರಹ ಇರುತ್ತದೆ. ಆದುದರಿಂದ ರೈತರು ಯಾರೂ ಆ ಗೊಬ್ಬರವನ್ನು ಅಪೇಕ್ಷೆ ಮಾಡುವುದಿಲ್ಲ ಮತ್ತು ಅದರ ಬೆಲೆಯೂ ಕೂಡ ಒಂದೇ ಸಮನಾಗಿ ಏರುತ್ತಾ ಇದೆ. ರೈತರಿಗೇ ಬೇಕಾದಂಥ ಮಿಶ್ರಗೊಬ್ಬರವನ್ನು ಚೆನ್ನಾಗಿ ತಯಾರು ಮಾಡದೆ ಅವರು ಹೇಗಿದ್ದರೂ ತೆಗೆದುಕೊಳ್ಳುತ್ತಾರೆಂದು ತಿಳಿದು ಈ ರೀತಿ ಮಾಡುವುದು ಯಾವನ್ಯಾಯ ! ಯಾವುದಾದರೂ ರೀತಿಯಲ್ಲಿ ನೀವು ಜನಗಳಿಗೆ ಉತ್ತೇಜನ ಕೊಡುವುದಾದರೆ ಅಂಥಾ ಕೆಲಸವನ್ನು ನೀವು ಮೊದಲು ಮಾಡಿ ತೋರಿಸಿದರೆ ಜನ ಅದರಂತೆ ಮಾಡುವರು. ಆಗ ಅವರು ಆ ಕೆಲಸವನ್ನು ಮಾಡದಿದ್ದರೆ ಅವರನ್ನು ದ್ರೋಹಿಗಳೆಂದು ಕರೆಯಿರಿ ಬೇಡ ಎನ್ನುವುದಿಲ್ಲ. ವ್ಯವಸಾಯದ ಇಲಾಖೆಯಲ್ಲಿ ಯಾರು ಪರಿಣತರು ಇದ್ದಾರೆಯೋ, ಪಾಠಶಾಲೆಯಲ್ಲಿ ಯಾರು ವಿದ್ಯಾಭ್ಯಾಸ ಮಾಡಿಕೊಂಡು ವ್ಯವಸಾಯದ ಇಲಾಖೆಗೆ ಬರುತ್ತಾರೋ ಅವರು ತಮ್ಮ ಹೊಣೆಗಾರಿಕೆ, ರೈತರ ಹೊಣೆಗಾರಿಕೆ, ರಾಜ್ಯ ಸರ್ಕಾರದ ಹೊಣೆಗಾರಿಕೆ ಎನ್ನುವುದನ್ನು ಅರಿಯಲೇಬೇಕು. ಇದನ್ನು ಅವರು ಅರಿತುಕೊಂಡಿಲ್ಲ. ಈ ರೀತಿ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಡಿಗ್ರಿ ಪಡೆದವರನ್ನು ಇನ್ನೂ ಅನೇಕ ವಿದ್ಯಾವಂತರನ್ನು ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಅಧಿಕಾರಿಗಳನ್ನು ಹೆಚ್ಚಿಸಿಕೊಂಡು ಬಂದಿದ್ದಾರೆಯೇ ವಿನಃ ಪ್ರಯೋಜನ ಏನೂ ಆಗಿಲ್ಲ. ಆದುದರಿಂದ ಈ ವ್ಯವಸಾಯದ ಇಲಾಖೆಯ ಸಿಬ್ಬಂದಿ ವೆಚ್ಚವನ್ನು ಕಡಿಮೆ ಮಾಡಿ, ಈ ಸದನದ ಸದಸ್ಯರಾದ ಡಾ|| ಆರ್. ನಾಗನಗೌಡರು ಮತ್ತು ಅನುಭವಸ್ಥರಾದ ರೈತರುಗಳನ್ನೊಳಗೊಂಡ ಒಂದು ಸಮಿತಿ ಮಾಡಿ ಅವರ ವರದಿಯನ್ನು ಪಡೆದುಕೊಂಡು ಈ ಇಲಾಖೆಯಲ್ಲಿ ಹೆಚ್ಚು ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡುವಂತೆ ಮಾಡಬೇಕು. ಆ ರೀತಿ ಮಾಡದೇ ಹೋದರೆ ಹಳ್ಳಿಗಳಲ್ಲಿ ವ್ಯವಸಾಯಾಭಿವೃದ್ಧಿ ಆಗುವುದಿಲ್ಲ. ಆಗಲೇ ಜನ ಪ್ರಶ್ನೆ ಹಾಕುತ್ತಿದ್ದಾರೆ. ಏನ್ರೀ ಈ ವ್ಯವಸಾಯ ಇಲಾಖೆ ಮಾಡುವುದು, ಎಂದು. ಇದಕ್ಕೆ ಒಂದು ಉದಾಹರಣೆ ಹೇಳಬೇಕಾದರೆ ಈ ಹೈಬ್ರೀಡ್ ಬಿತ್ತನೆ ಜೋಳ ಹಾಕುವಾಗ ವ್ಯವಸಾಯದ ಇಲಾಖೆಯವರು ನನ್ನ ಹತ್ತಿರ ಬಂದು 5 ಎಕರೆಗೆ ಹಾಕುತ್ತೇವೆಂದು ಹಾಕಿಸಿದರು. ಅದು ಹುಟ್ಟಲಿಲ್ಲ. ನಾನು ಹೋಗಿ ಕೇಳಿದೆ. ಪುನಃ ಅವರು ಬಂದು ಆಳವಾಗಿ ತೋಡಿಸಿ ಬಿತ್ತನೆ ಹಾಕಿದರು. ಆಗಲೂ ಹುಟ್ಟಲಿಲ್ಲ. ಕೊನೆಗೆ ಇದನ್ನು ಟೆಸ್ಟ್ ಮಾಡಲು ಬಂದರು. ಆಗ ಅವರು ಇದರಲ್ಲಿ 28 ರಷ್ಟು ಜರ್ಮಿನೇಷನ್ ಇದ್ದುದರಿಂದ ಇದು ಹುಟ್ಟಲಿಲ್ಲ, ಈ ರೀತಿ ಆಯಿತು ಎಂದರು. ಈ ರೀತಿ ಆದರೆ ವ್ಯವಸಾಯ ಇಲಾಖೆಯ ಸಿಬ್ಬಂದಿಗೆ ಖರ್ಚಾಗುತ್ತದೆಯೇ ವಿನಃ ಪ್ರಯೋಜನವಾಗುತ್ತಿಲ್ಲ ಎನ್ನುವುದಕ್ಕೆ ಈ ಮಾತು ಹೇಳುತ್ತೇನೆ. ಕೊನೆಗೆ 5 ಎಕರೆಯಲ್ಲಿ ಎರಡೂವರೆ ಎಕರೆಯಲ್ಲಿದ್ದುದನ್ನು ಕಿತ್ತು ಹಾಕಿ ಪುನಃ ನೆಡಿಸಿದೆ. ನನಗೆ ಅದರಿಂದ ಎಷ್ಟು ವೆಚ್ಚವಾಯಿತು ಎಂದು ಯೋಚನೆ ಮಾಡಿ. ಸಾಧಾರಣ ರೈತರು ಈ ರೀತಿಯಾಗಿ ಖರ್ಚಾದರೆ ಅದನ್ನು ತಡೆದುಕೊಳ್ಳಬಲ್ಲರೇ ಎಂದು ಯೋಚನೆ ಮಾಡಬೇಕು. ಬಿತ್ತನೆ ಬೀಜವನ್ನು

ಒದಗಿಸುವುದಕ್ಕೆ ಪ್ಯಾಕೆಟ್ಟುಗಳ ಮೇಲೆ ಸೀಲು ಹಾಕುತ್ತಾರೆ. ಅದನ್ನು ಒಡೆದರೆ ತಪ್ಪಾಗುತ್ತದೆ ಸೀಡ್ ಕಾರ್ಪೊರೇಷನ್‌ನವರು ಕೀಳುದರ್ಜೆಯ ಬಿತ್ತನೆ ಕೊಡುವುದು ತಪ್ಪಬೇಕು. ಸರ್ಕಾರದವರು ಅವರ ಮೇಲೆ ಹತೋಟಿಯನ್ನು ಏಕೆ ಇಟ್ಟುಕೊಂಡಿಲ್ಲ? ಪಿತ್ರಾರ್ಜಿತ ಆಸ್ತಿ ಮೇಲಿನ ಹಕ್ಕು ಹೋಗುತ್ತಿರುವ ಕಾಲದಲ್ಲಿ ಅಧಿಕಾರಿಗಳು ರಿಟೈರ್ ಆಗುವವರೆಗೂ ಅವರು ನವಾಬ್‌ಗಿರಿ ಮಾಡಲಿ, ರಾಜಕೀಯ ಮಾಡಲಿ, ಏನೇ ಮಾಡಲಿ ಅವರಿಗೆ ಸಂರಕ್ಷಣೆಯುಂಟು. ಇದು ಒಳ್ಳೆಯದಲ್ಲ. ಯಾವುದೇ ಸಾರ್ವಜನಿಕ ಹಣವನ್ನು ಖರ್ಚು ಮಾಡಿದಮೇಲೆ ಚೆನ್ನಾಗಿ ನಿಗಾ ಇಡಬೇಕು. ವ್ಯವಸಾಯ ಮಂತ್ರಿಯವರನ್ನಾಗಲೀ, ಬೇರೆಯವರನ್ನಾಗಲೀ ಟೀಕೆ ಮಾಡುತ್ತಿದ್ದೇನೆಂದು ಯಾರೂ ಭಾವಿಸಬಾರದು. ನಾನು ಮೊದಲಿನಿಂದಲೂ ಆ ರೀತಿ ನಡೆಸಿಕೊಂಡು ಬಂದಿಲ್ಲ. ಅಧಿಕಾರಿಗಳಲ್ಲಿರುವ ಚಾಳಿಯನ್ನು ಕಿತ್ತು ಹಾಕಿದ ಹೊರತು ನಾವು ಉಳಿಯುವುದಕ್ಕೆ ಸಾಧ್ಯವಿಲ್ಲ.

6-00 P.M.

ನಮ್ಮ ರಾಜ್ಯದಲ್ಲಿ ಸೇಕಡ 8 ಭಾಗ ನೀರಾವರಿಯಾಗಿದೆ, 92 ಭಾಗ ಆಗಿಲ್ಲ. ಸರಕಾರದಿಂದ ಏನೇನು ನೆರವು ಕೊಟ್ಟರೂ ಅದು ನೀರಾವರಿ ಪ್ರದೇಶಕ್ಕೆ ಮಾತ್ರ ಸಿಕ್ಕುತ್ತ ಇದೆಯೇ ವಿನಾ ನೀರಾವರಿ ಪ್ರದೇಶವಿಲ್ಲದೆ ಇರುವ ಕಡೆಗೆ ಯಾವುದೂ ಸಿಕ್ಕುತ್ತಿಲ್ಲ. ಒಣ ಜಮೀನಿನಲ್ಲಿ, ಮಳೆ ಕಡಿಮೆ ಯಾದರೂ ಕೂಡ ಏನಾದರೂ ಫಸಲು ತೆಗೆಯಬೇಕಾದರೆ ಅದಕ್ಕೆ ಅನುಕೂಲವಾಗುವಂಥ ಒಂದು ತಳಿಯನ್ನು ಕಂಡುಹಿಡಿಯಬೇಕು. ಆಗ ಮಾತ್ರ 90 ಪರ್ಸೆಂಟ್ ಇರತಕ್ಕ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಸಾಧ್ಯ. ಒಣ ಜಮೀನಿನಲ್ಲಿ ಪರಿಶೋಧನೆಯನ್ನು ನಡೆಸಿ, ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದರೂ ಅವರ ಬುದ್ಧಿಯನ್ನು ಖರ್ಚು ಮಾಡಿ ಒಳ್ಳೆಯ ತಳಿಯನ್ನು ಕಂಡುಹಿಡಿದರೆ ಅವರಿಗೆ ಶಹಭಾಸ್‌ಗಿರಿಯನ್ನು ಕೊಡಬಹುದು. ಇದರಿಂದ ನಮ್ಮ ದೇಶದ ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ.

ವ್ಯವಸಾಯ ಪ್ರಗತಿಯಾಗಬೇಕಾದರೆ ಸಾಕಷ್ಟು ನೀರು ಮತ್ತು ಬಂಡವಾಳ ಬೇಕು. ಬೆಳೆದ ಧಾನ್ಯಕ್ಕೆ ಸರಿಯಾದ ಧಾರಣೆಯೂ ಇರಬೇಕು. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು ಕೊಂಡುಕೊಂಡು ಬಂದು ಮಾರುವ ಗೊಬ್ಬರದ ಬೆಲೆಯಲ್ಲಿ ಸುಮಾರು 60-70 ರೂಪಾಯಿ ವ್ಯತ್ಯಾಸವಾಗುತ್ತದೆ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ, ಸರ್ವಿಸ್ ಕೋ ಆಪರೇಟಿವ್ ಸೊಸೈಟಿ ಇವುಗೆಲ್ಲ ಒಂದು ನಿಗದಿಯಾದ ಪ್ರಮಾಣದಲ್ಲಿ ಲಾಭ ಬಂದೇ ಬರಬೇಕು. ರೈತರಿಗೆ ಕೊಡುವ ಮೂಟೆಗಳನ್ನು ತೂಕಮಾಡಿ ಕೊಡುವುದಿಲ್ಲ. ಆ ಹವ್ಯಾಸವೇ ಇಲ್ಲ. ಸ್ಟೇಟ್‌ಮಾರ್ಕೆಟಿಂಗ್ ಸೊಸೈಟಿಯವರನ್ನು ಚೀಲಗಳನ್ನು ಬಿಚ್ಚಿ ರೀ ಬ್ಯಾಗ್ ಮಾಡಿಕೊಡಿ ಎಂದರೆ ಕೇಳುವವರೂ ಇಲ್ಲ, ಹೇಳುವವರೂ ಇಲ್ಲ. ಗೊಬ್ಬರವನ್ನು ಸರ್ಕಾರದ ಹತೋಟಿಯಲ್ಲಿ ನೇರವಾಗಿ ರೈತರಿಗೆ ಒದಗಿಸುವುದಕ್ಕೆ ಅವಕಾಶ ಮಾಡಿಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಅಭಿಪ್ರಾಯಪಡುತ್ತಿದ್ದೇನೆ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯನ್ನು ತೆಗೆದು ಬಿಡಿ, ಅಲ್ಲಿ ನಡೆಯುವಷ್ಟು ಅನ್ಯಾಯ ಬೇರೆಲ್ಲೂ ನಡೆಯುವುದಿಲ್ಲ, ಸರ್ಕಾರದವರೇ ನೇರವಾಗಿ ನಿಖರವಾದ ದರದಲ್ಲಿ ಕೊಟ್ಟರೆ, ಸ್ವಲ್ಪ ಹಣವನ್ನು ಹೆಚ್ಚಾಗಿ ಕೊಟ್ಟರೂ ಚಿಂತೆ ಇಲ್ಲ. ಆ ರೀತಿ ಮಾಡಬೇಕೆಂದು ಹೇಳುತ್ತೇನೆ.

ಭೂ ಅಭಿವೃದ್ಧಿ ಬ್ಯಾಂಕುಗಳಿಂದ ರೈತನಿಗೆ ಬಾವಿ ತೋಡುವುದಕ್ಕೆ ಹಣ ಕೊಡುತ್ತಾರೆ. ಈ ಬಾವಿಗಳಿಗೆ 2-3 ನೇ ಕಂತು ಹಣ ಕೊಡಲು ದುಡ್ಡಿಲ್ಲ. ಮೊದಲನೇ ಕಂತನ್ನು ಕೊಟ್ಟಿರುವಕಡೆ ಎರಡನೇ ಕಂತು ಕೊಡಲು ದುಡ್ಡಿಲ್ಲ ಎಂದು ಹೇಳುತ್ತಿದ್ದಾರೆ. ಪಂಪ್‌ಸೆಟ್‌ಗಳಿಗೆ ಪರಮಾವಧಿ ಹಣವನ್ನು ಎರಡು ಸಾವಿರ ರೂಪಾಯಿಗೆ ಮಿತಿಗೊಳಿಸಿದ್ದಾರೆ. ವೈರಿಂಗ್ ಮಾಡಲು ರೈತರು ದುಡ್ಡು ಎಲ್ಲಿಂದ ತರುವುದು? ಪೈಪ್‌ಗಳಿಗೆ ಒಂದೆರಡು ಸಾವಿರ ರೂಪಾಯಿ ಬೇಕು. ಯಾವುದಾದರೂ ಒಂದು ಕೈಗಾರಿಕೆಯನ್ನು ಪ್ರಾರಂಭ ಮಾಡಬೇಕಾದರೆ, ಆಮೂಲಾಗ್ರವಾಗಿ ಮನೆ ಕಟ್ಟುವುದರಿಂದ ಹಿಡಿದು ಎಲ್ಲವನ್ನೂ ಲೆಕ್ಕ ಹಾಕಿಕೊಂಡು ಚೆನ್ನಾಗಿ ಎಸ್ಟಿಮೇಟ್ ಮಾಡುತ್ತಾರೆ ಮತ್ತು ಅಷ್ಟನ್ನೂ ಕೂಡ ಬ್ಯಾಂಕುಗಳಿಂದ ಅಥವಾ ಬೇರೆ ಮೂಲಕ ಸಾಲ ಕೊಡಿಸುತ್ತಾರೆ, ಸಬ್ಸಿಡಿ ಕೊಡುತ್ತಾರೆ. ರೈತನಿಗೆ ಆ ರೀತಿ ಏಕೆ ಕೊಡುವುದಿಲ್ಲ! ಒಂದು ಬಾವಿಗೆ 10 ಸಾವಿರ ರೂಪಾಯಿ ಖರ್ಚಾದರೂ ಅಷ್ಟನ್ನೂ ಕೊಟ್ಟು ಅದಕ್ಕೆ ಜಮೀನು ಆಧಾರ ಮಾಡಿಕೊಳ್ಳಿ. ಬಾವಿಗೆ 5 ಸಾವಿರ, ಪಂಪ್‌ಸೆಟ್‌ಗೆ 2 ಸಾವಿರ ಕೊಟ್ಟರೆ ಉಳಿದುದನ್ನು ಅವನು ಎಲ್ಲಿಂದ ತರಬೇಕು? ಇದಲ್ಲದೆ ಖುಷ್ಕಿ ಪ್ರದೇಶದಲ್ಲಿ ನೂರಕ್ಕೆ 10 ಭಾಗ ಕೂಡ ಪಂಪ್‌ಸೆಟ್‌ಗಳಿಗೆ ಸರ್ವಿಸಿಂಗ್ ಆಗಿಲ್ಲ. ಒಂದು ಗುಂಡಿ ತೋಡುವುದು, ಅರ್ಜಿ ಕೊಡುವುದು, ಪಂಪ್‌ಸೆಟ್‌ಗೆ ಲೈಸೆನ್ಸ್ ಪಡೆದು ಕ್ರಷರ್‌ಗೆ ಉಪಯೋಗ ಮಾಡುವುದು ಹೀಗೆ ನಡೆಯುತ್ತಾ ಇದೆ. ಇಲಾಖೆಯವರು ಪಂಪ್‌ಸೆಟ್ ಸರ್ವಿಸ್ ಮಾಡಿದ್ದೇವೆ ಎಂದು ವರದಿ ಕೊಡುತ್ತಾರೆ. ಈ ರೀತಿ ಮಾಡುವುದು ತಪ್ಪಬೇಕು.

(ಶ್ರೀ ಎಂ. ಮಂಚೇಗೌಡ)

ಹೈಬ್ರಿಡ್ ಮೇಜ್ ಬೆಲೆ ಇಳಿಯಿತು, ಮುಂದಿನ ವರ್ಷ ಪರದೇಶಗಳಿಂದ ಧಾನ್ಯ ತರಿಸಬೇಕಾಗಿಲ್ಲ ಎಂದು ಹೇಳಿದರು. ಆ ರೀತಿ ಮಾಡಿದರೆ ಹಳ್ಳಿಯಲ್ಲಿರುವ ಬಡ ಜನಗಳು ಹೊಟ್ಟೆಗೆ ಇಲ್ಲದೆ ಸಾಯುವ ಪರಿಸ್ಥಿತಿ ಬರುತ್ತದೆ. ಹೈಬ್ರಿಡ್ ಮೇಜ್ ಜಾಸ್ತಿಯಾಗಿ ಬೆಳೆದಿಲ್ಲ. ಅದನ್ನು ಉಪಯೋಗ ಮಾಡತಕ್ಕ ವಿಧಾನ ರೈತರಿಗೆ ಗೊತ್ತಿಲ್ಲ. ಮಿಲ್ ಮಾಡಿಸಿಕೊಳ್ಳಲು ಹಳ್ಳಿಗಳಲ್ಲಿ ಸೌಲಭ್ಯವಿಲ್ಲ. ದೊಡ್ಡ ದೊಡ್ಡ ಮಿಲ್ ಮಾಲೀಕರು ಅದರ ಪ್ರಯೋಜನ ಪಡೆಯುತ್ತಿದ್ದಾರೆ. ನಾನು ಎರಡೂಕಾಲು ರೂಪಾಯಿ ಕೊಟ್ಟು ಒಳ್ಳೆಯ ರವೆ ಎಂದು ತೆಗೆದುಕೊಂಡು ಹೋದೆ. ಅದು ಮುಸುಕಿನ ಜೋಳದ ರವೆ. ಇದನ್ನು ಬೆಳೆಯುವವರಿಗೆ ಒಂದು ಕೆ. ಜಿ. ಗೆ. 50 ಪೈಸೆ ಕೂಡ ಸಿಕ್ಕುವುದಿಲ್ಲ. ಕೃಷ್ಣ ಫ್ಲೋರ್‌ಮಿಲ್‌ನಂಥ ಮಿಲ್ ಮಾಲೀಕರಿಗೆ ಮತ್ತು ವ್ಯಾಪಾರ ಮಾಡುವವರಿಗೆ ಲಕ್ಷಗಟ್ಟಲೆ ಲಾಭ ಬರುತ್ತದೆ. ಸರ್ಕಾರದವರು ರೈತರಿಗೆ ಸಂಬಂಧಪಟ್ಟಂತೆ ಮಾತ್ರ ಎಲ್ಲ ಹತೋಟಿಗಳನ್ನೂ ಹಾಕುತ್ತಾರೆ. ಬೇರೆಯವರಿಗೆ ಮಾತ್ರ ಹಾಕುವುದಿಲ್ಲ. ಇದು ಸಮಾಜ ಘಾತುಕತನವಲ್ಲವೋ ? ರೈತರಿಗೆ ಬರುವುದನ್ನು ತಪ್ಪಿಸಿ, ವ್ಯಾಪಾರಸ್ಥರು ಮಿಲ್ ಮಾಲೀಕರು ರವೆ ಮಾಡಿ ಜನರಿಗೆ ಮೋಸ ಮಾಡುವುದನ್ನು ತಪ್ಪಿಸುವುದಿಲ್ಲವೇ ? ಅದಕ್ಕೆ ಕಾನೂನಿಲ್ಲವೇ ? 10 ಎಕರೆ ಜಮೀನು ಹೊಂದಿರುವ ರೈತ ಆರು ಕ್ವಿಂಟಾಲ್ ಧಾನ್ಯವನ್ನು ಕೊಡಬೇಕು ಎಂದು ಹೇಳುತ್ತಾರೆ. ರೈತಾಪಿ ಜನ ಅಷ್ಟು ಉಳಿಸುವುದಕ್ಕಾಗುತ್ತದೆಯೋ ಎಂದು ಕೇಳುತ್ತೇನೆ. ಹೇಳುವುದು ಒಂದು ಮಾಡುವುದು ಒಂದು, ಹೀಗೆ ಬೇಡ. ಜನಗಳಿಗೆ ಮೋಸಮಾಡುವುದೂ ಬೇಡ. ಧೈರ್ಯವಿದ್ದರೆ, ಏನೇನು ತೊಂದರೆಗಳಿವೆ, ಪ್ರತ್ಯಕ್ಷವಾಗಿ ಏನೇನು ಕಣ್ಣಿಗೆ ಕಾಣುತ್ತವೆ, ಅದರ ಬಗ್ಗೆ ವಿಚಾರಣೆ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಿ, ನಿಜವಾಗಿ ಏನೇನು ನಡೆಯುತ್ತಿದೆ, ರೈತರಿಗೆ ನಿಜವಾದ ಕಷ್ಟವೇನಿದೆ ಎಂದು ತಿಳಿದುಕೊಂಡು ಅವರ ವರದಿಯ ಪ್ರಕಾರವಾಗಿ ಆಚರಣೆಗೆ ತರಬೇಕು. ನಾನು ಸದಸ್ಯನಾಗಿರುತ್ತೇನೆ, ಮಂತ್ರಿಯಾಗಿರುತ್ತೇನೆ, ಎಂದು ಹೇಳುವುದಾದರೆ ಏನು ಬೇಕಾದರೂ ಮಾಡಬಹುದು. ನಮ್ಮ ದೇಶ ಉಳಿಯಬೇಕು, ಕೆಟ್ಟ ಹೆಸರು ತಪ್ಪಬೇಕು ಎನ್ನುವ ಯೋಚನೆ ಇದ್ದರೆ ಇರತಕ್ಕ ಲೋಪದೋಷಗಳನ್ನು ಸರಿಪಡಿಸಿದರೆ ಮಾತ್ರ ನಾವು ಉದ್ಧಾರವಾಗುವುದಕ್ಕೆ ಸಾಧ್ಯ ಎಂದು ಹೇಳಿ, ನನಗೆ ಇಷ್ಟು ಕಾಲಾವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಮಾನ್ಯ ಸಭಾಪತಿಗಳೇ, ಈ ಸಭೆಯ ಮುಂದಿರುವ ಪಶುಪಾಲನೆ, ಅರಣ್ಯ, ಮೀನುಗಾರಿಕೆ ಮತ್ತು ಇತರ ಬೇಡಿಕೆಗಳನ್ನು ನಾನು ವಿರೋಧಿಸಿ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ ವ್ಯವಸಾಯ ಇಲಾಖೆಯ ಬಗ್ಗೆ ಕೆಲವು ಜನ ಸ್ನೇಹಿತರು ಮಾತನಾಡಿ, ವ್ಯವಸಾಯ ಇಲಾಖೆಗೆ ಹೆಚ್ಚು ಹಣವನ್ನು ಈ ಸಾರಿ ಖರ್ಚುಮಾಡುವುದಕ್ಕೆ ಸರ್ಕಾರ ಮನಸ್ಸು ಮಾಡಿದೆ, ಅದು ಬಹಳ ಸಂತೋಷದ ವಿಷಯ, ಈ ಇಲಾಖೆ ಅಭಿವೃದ್ಧಿಯಾಗುತ್ತಿದೆ ಎನ್ನುವ ರೀತಿಯಲ್ಲಿ ಡಾಕ್ಟರ್ ನಾಗನಗೌಡರೂ ಮತ್ತು ಕೆಲವರು ಹೇಳಿದರು. ವ್ಯವಸಾಯ ಇಲಾಖೆಗೆ ಹೆಚ್ಚು ಹಣವನ್ನು ಖರ್ಚು ಮಾಡಿದ ಮಾತ್ರಕ್ಕೆ, ವ್ಯವಸಾಯ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ, ಇದರಲ್ಲಿ ಏನೂ ಲೋಪದೋಷಗಳಿಲ್ಲ, ಎಂದು ನಾನಾದರೂ ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ವ್ಯವಸಾಯದ ಅಭಿವೃದ್ಧಿ ಆಗಬೇಕಾದರೆ ಮುಖ್ಯ ನೀರಾವರಿ ಹೆಚ್ಚಾಗಬೇಕು. ನೀರಾವರಿಯನ್ನು ಹೆಚ್ಚು ಮಾಡುವುದಕ್ಕೆ ನಮ್ಮ ಸರ್ಕಾರದವರು ಭಾರಿ ಪ್ರಮಾಣದ ಯೋಜನೆಗಳ ಕೆಲಸ ಮಾಡುತ್ತೇವೆ ಎಂದು ಮಾತಿನಲ್ಲಿ ಹೇಳುತ್ತಿದ್ದಾರೆಯೇ ವಿನಾ ವಾಸ್ತವಿಕವಾಗಿ ನೋಡಿದರೆ ಅವರೇ ಹೇಳುವಂತೆ ಸೇಕಡ ಏಳೂವರೆ ನೀರಾವರಿ ಪ್ರದೇಶವಿದ್ದದ್ದು ಸೇಕಡ 10 ಮಾತ್ರವಾಗುತ್ತಿದೆ. ಅದಕ್ಕಿಂತ ಹೆಚ್ಚಾಗಿಲ್ಲ. ಆಂಧ್ರದಲ್ಲಿ 40 ಪರ್ಸೆಂಟ್ ಆಗಿದೆ ; ಮದ್ರಾಸಿನಲ್ಲಿ 30 ಪರ್ಸೆಂಟ್ ನೀರಾವರಿಯಾಗಿದೆ. ಮೈಸೂರು ರಾಜ್ಯದಲ್ಲಿ 10 ಪರ್ಸೆಂಟ್ ಮಾತ್ರ ನೀರಾವರಿ ಆಗಿರುವುದರಿಂದ ವ್ಯವಸಾಯ ಅಭಿವೃದ್ಧಿ ಮಾಡುವುದಕ್ಕೆ ಇಲಾಖೆಯನ್ನು ದೊಡ್ಡದು ಮಾಡಿ ಅಥವಾ ಆವಶ್ಯಕತೆ ಇಲ್ಲದೆ ಇದ್ದರೂಕೂಡ ಯಾರೋ ಒಬ್ಬರಿಗೆ ಅನುಕೂಲ ಮಾಡುವುದಾಗಲೀ ಷಾ ವ್ಯಾಲೇಸ್ ಕಂಪೆನಿಯಿಂದ ಪವರ್ ಸ್ಪ್ರೇಯರುಗಳನ್ನು ಕೊಂಡುಕೊಳ್ಳಬೇಕೆಂದು ಒಂದು ಸರ್ಕ್ಯುಲರ್ ಕೊಡುವುದರಿಂದಾಗಲೀ ವ್ಯವಸಾಯದ ಅಭಿವೃದ್ಧಿ ಆಗುವುದಿಲ್ಲ. ಸರಕಾರದವರು ನೀರಾವರಿ ವಿಚಾರಕ್ಕೆ ಸಾಕಷ್ಟು ಗಮನ ಕೊಡಬೇಕು. ನೀರಾವರಿ ಹೆಚ್ಚಿಸಬೇಕೆಂದು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇವೆ. ಯಾರು ಜಮೀನಿನಲ್ಲಿ ವ್ಯವಸಾಯ ಮಾಡಿ ಅದನ್ನು ಕಾಪಾಡುತ್ತಿದ್ದಾರೋ ಅವರೇ ಮಾಲೀಕರಾಗಬೇಕು. ಭೂ ಸುಧಾರಣೆ ಬರೀ ಬಾಯಿ ಮಾತಿನಲ್ಲಿದೆಯೇ ಹೊರತು 20 ವರ್ಷಗಳಿಂದ ಅದನ್ನು ಕಾರ್ಯಗತ ಮಾಡುವುದಕ್ಕಾಗಿಲ್ಲ. ಕಷ್ಟಪಟ್ಟು ವ್ಯವಸಾಯ ಮಾಡುವವರಿಗೆ ಜಮೀನು ಸಿಕ್ಕಿಲ್ಲ. ಯಾರು ಕಷ್ಟಪಟ್ಟು ದುಡಿಯುತ್ತಿದ್ದಾರೋ ಅವರಿಗೆ ಮಾಲೀಕತ್ವ ದೊರೆತಿಲ್ಲ. ಬಾವಿಗಳಿಗೆ ಹಣ ಸಾಲದ ರೂಪದಲ್ಲಿ ಸಾಕಷ್ಟು ಸಿಕ್ಕದಿದ್ದರೆ ವ್ಯವಸಾಯಾಭಿ

ವೃದ್ಧಿಯಾಗುವುದಿಲ್ಲ. ಎಷ್ಟೋ ಶ್ರೀಮಂತರ ಜಮೀನು ಬಂಜರು ಬಿದ್ದಿದೆ, ಜಮೀನನ್ನು ಅವರು ಬೀಳು ಬಿಟ್ಟಿದ್ದಾರೆ, ಅದರ ಉಪಯೋಗ ಪಡೆಯಬೇಕು ಎಂದು ಹಿಂದೆ ಎಷ್ಟೋ ಸಲ ಹೇಳಿದ್ದೇನೆ. ಬಂಗಾಳದಲ್ಲಿ ಹಿಂದೆ ಯುನೈಟೆಡ್ ಫ್ರಂಟ್ ಸರಕಾರವಿದ್ದಾಗ ಒಂದು ಶಾಸನಮಾಡಿ ಸಾಗುವಳಿಗೆ ಯೋಗ್ಯವಾದ ಜಮೀನು ಬೀಳುಬಿದ್ದಿರುವುದನ್ನು ಬಲಾತ್ಕಾರವಾಗಿ ಸಾಗುವಳಿಗೆ ಕೊಡಿಸಿದರು. ನಮ್ಮ ಸರಕಾರಕ್ಕೂ ಕೂಡ ಹಾಗೆ ಮಾಡಬೇಕೆಂದು ಏಳು ವರ್ಷಗಳಿಂದಲೂ ಹೇಳುತ್ತಿದ್ದೇನೆ. ಜಮೀನು ಬೆಳೆ ಹೆಚ್ಚಲಿ ಎಂತಲೋ ಅಥವ ಬೇರೆಯವರು ಅಭಿವೃದ್ಧಿಮಾಡಲಿ ಎಂತಲೋ ಶ್ರೀಮಂತರು ತಮ್ಮ ಜಮೀನನ್ನು ಬೀಳುಬಿಟ್ಟಿದ್ದಾರೆ. ಬೆಂಗಳೂರು, ಮೈಸೂರು ಮುಂತಾದ ದೊಡ್ಡ ಪಟ್ಟಣ ಗಳಲ್ಲಿ ಇರುವವರಿಗೆ ಜಮೀನಿರಬಾರದು, ಹಾಗಿದ್ದರೆ ಬೀಳು ಇರುವುದನ್ನು ಸಾಗು ಮಾಡಬೇಕು ಎಂದು ಒಂದು ವರ್ಷ ನೋಟೀಸು ಕೊಡಬೇಕು, ಆ ರೀತಿ ಮಾಡದಿದ್ದರೆ ಆ ಜಮೀನನ್ನು ಸರಕಾರ ತೆಗೆದುಕೊಂಡು ವ್ಯವಸಾಯ ಮಾಡುವ ಬೇರೆಯವರಿಗೆ ಕೊಡಬೇಕು. ಹೀಗೆ ಮಾಡುವುದಕ್ಕೆ ಸರ ಕಾರಕ್ಕೆ ಮನಸ್ಸಿಲ್ಲ. ಇಷ್ಟೇ ಅಲ್ಲ, ಕೋಲಾರ ಜಿಲ್ಲೆಯಲ್ಲಿ ಭಾರಿ ನೀರಾವರಿ ಯೋಜನೆ ಅಥವ ಮೀಡಿಯಂ ನೀರಾವರಿ ಯೋಜನೆ ಮಾಡಲು ಅವಕಾಶವಿಲ್ಲ, ಸಣ್ಣ ನೀರಾವರಿ ಯೋಜನೆಗಳ ವಿಸ್ತರ ಣೆಗೂ ಅವಕಾಶವಿಲ್ಲ. ಅಲ್ಲಿ ಮತ್ತು ಬೆಂಗಳೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ನೀರಾವರಿ ಬಾವಿ ಗಳನ್ನು ತೆಗೆದು ವ್ಯವಸಾಯ ಮಾಡುವುದಕ್ಕೆ ಮಾತ್ರ ಅವಕಾಶವಿದೆ, ಆದುದರಿಂದ ಅಲ್ಲಿ ನೀರಾವರಿ ಬಾವಿಗಳಿಗೆ ಹೆಚ್ಚು ಅವಕಾಶ ಮಾಡಬೇಕು. ಕಳೆದ ಎರಡು ವರ್ಷಗಳಿಂದ ಇದನ್ನು ಹೇಳಿದರೂ ಗಮನ ಕೊಟ್ಟಿಲ್ಲ. ಎಲ್ಲೋ ಒಂದು ಕಡೆ ಬಾವಿಗಳಿಗೆ ಕೊಟ್ಟಿರುವ ಹಣ ದುರುಪಯೋಗವಾಗಿದೆ, ಬಾವಿ ಮಾಡಿಲ್ಲ ಎಂದು ಮಂತ್ರಿಗಳು ಹೇಳುತ್ತಿದ್ದರು. ಅದು ನಿಜವಲ್ಲ, ಶೇಕಡ 70 ರಷ್ಟು ಬಾವಿ ಗಳಾಗಿವೆ, ಹಣ ಸಾಲದೆ ಕಲ್ಲು ಕಟ್ಟುವ ಕೆಲಸ ಮುಂತಾದ್ದು ನಿಧಾನವಾಗಿರಬಹುದು, ಬಾವಿ ಗಳನ್ನು ಅನೇಕರು ತೆಗೆದು ಬೆಳೆ ತೆಗೆಯುತ್ತಿದ್ದಾರೆ, ಕೊಟ್ಟಿರುವ ಹಣ ದುರುಪಯೋಗವಾಗಿಲ್ಲ, ಕೇವಲ ಶೇಕಡ 5 ರಷ್ಟು ಸದುಪಯೋಗವಾಗಿಲ್ಲದಿರಬಹುದು. ಹೆಚ್ಚು ಭಾಗದಲ್ಲಿ ಬಾವಿಗಳಾಗಿವೆ. ಇಂಥ ಪರಿಸ್ಥಿತಿಯಿರುವಾಗ ನೀರಾವರಿ ಬಾವಿಗಳಿಗೆ ಹೆಚ್ಚು ಅವಕಾಶವಮಾಡಿಲ್ಲ. ಯಾವುದೋ ಒಂದು ಸೊಸೈಟಿಯಲ್ಲಿ ಸಾಲ ತೆಗೆದುಕೊಂಡಿರುವ ನೂರೋ ಇನ್ನೂರೋ ಜನರು ಸಾಲ ವಾಪಸು ಕೊಟ್ಟಿಲ್ಲ, ಆದುದರಿಂದ ಇತರರಿಗೂ ಸಾಲ ಕೊಡುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಏನೋ ಒಂದು ಹಟದಿಂದಲೋ ಅಥವ ಬೇರೆ ಕಾರಣದಿಂದಲೋ ನಮ್ಮ ಪ್ರದೇಶಕ್ಕೆ ಹಣ ಕೊಡಬಾರದೆಂದು ಮನಸ್ಸು ಮಾಡಿಕೊಂಡಿರುವಂತೆ ಕಾಣುತ್ತದೆ. ಸುಮ್ಮನೆ ರಿಸರ್ವ್ ಬ್ಯಾಂಕಿನವರು ಒಪ್ಪುತ್ತಿಲ್ಲ ಎಂದು ನೆವ ಹೇಳುತ್ತಾರೆ. ಮಂತ್ರಿಮಂಡಲಕ್ಕೆ ಈ ಪ್ರದೇಶಕ್ಕೆ ಹಣ ಕೊಡಬಾರದು, ಇದನ್ನು ಅಭಿವೃದ್ಧಿ ಮಾಡಬಾರದು ಎಂಬ ಮನಸ್ಸಿರುವುದರಿಂದ ಕಾರಣಾಂತರದಿಂದ ಅನ್ಯಾಯ ಮಾಡುತ್ತಿದ್ದಾರೆ. ಈಗ ಇಂಡಸ್ಟ್ರಿಯಲ್ ಕೋಆಪರೇಟಿವ್ ಬ್ಯಾಂಕ್ ಇದೆ. ಅದಕ್ಕೆ ಸಂಬಂಧಪಟ್ಟ ಹಣ ಖರ್ಚು ಮಾಡಿದ್ದೀರಿ. ಕೈಗಾರಿಕೆಗಳಿಗೆ 5-10 ಸಾವಿರ ಸಾಲ ಕೊಟ್ಟಿದ್ದೀರಿ, ಎಷ್ಟೋ ಜನರಿಗೆ ಸಾಲ ಕೊಟ್ಟಿದ್ದೀರಿ. ಅವರಿಗೇನೂ ನಿಯಮವಿಲ್ಲ, ಎಷ್ಟೋ ಜನ ಹಣ ಸದುಪಯೋಗ ಮಾಡದೆ ಅಲ್ಲಿದ್ದರೂ ಪರವಾಗಿಲ್ಲ. ಆದರೆ ಬಾವಿಗಳಿಗೆ ಕೊಟ್ಟಿರುವ ಸಾಲ ಯಾರೋ ಇನ್ನೂರು ಜನರು ವಾಪಸು ಕೊಟ್ಟಿಲ್ಲ ಎಂದು ಇತರರಿಗೆ ತೊಂದರೆ ಮಾಡುವುದು ಸರಿಯಲ್ಲ, ಯಾರು ಕೊಟ್ಟಿಲ್ಲವೋ ಅವರ ಜಮೀನನ್ನು ಬೇಕಾದರೆ ಹರಾಜು ಮಾಡಿ. ಅದು ಬಿಟ್ಟು ರಿಸರ್ವ್ ಬ್ಯಾಂಕ್ ಒಪ್ಪಿಲ್ಲ, ಆದ್ದರಿಂದ ಸಾಲ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ಇದೇನು ತಮಾಷೆಯೇ ? ಕೋಲಾರದಲ್ಲಿ ಗಂಡ ಸರೇ ಇಲ್ಲ ಎಂಬ ಭಾವನೆಯೇನಾದರೂ ಇದೆಯೋ ?

ಈಗ ಹೈಬ್ರಿಡ್ ಜೋಳದ ವಿಚಾರದಲ್ಲಿ ವ್ಯವಸಾಯದ ಇಲಾಖೆಯವರು ಬಹಳ ಆಸಕ್ತಿ ವಹಿಸಿ ದ್ದಾರೆ, ಇದರಿಂದ ಬೆಳೆ ಜಾಸ್ತಿಯಾಗಿದೆ, ಉತ್ಪತ್ತಿ ಜಾಸ್ತಿಯಾಗಿದೆ ಎಂದು ಕೆಲವರು ಹೇಳುತ್ತಿ ದ್ದಾರೆ. ಆದರೆ ಅದರ ಬೆಲೆ ನೋಡಬೇಕು. ರಾಜ್ಯ ಸರಕಾರ ಬೆಲೆ ವಿಚಾರದಲ್ಲಿ ಏನೂ ಮಾಡು ವುದಕ್ಕಾಗುವುದಿಲ್ಲ. ಅದು ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟಿದೆ ಎಂದು ನಾಗನಗೌಡರು ಹೇಳಿದರು. ಈಗ ನಮ್ಮ ರಾಜ್ಯದಲ್ಲೂ ಮತ್ತು ಕೇಂದ್ರದಲ್ಲೂ ಕಾಂಗ್ರೆಸ್ ಸರಕಾರವೇ ಇದೆ. ಹಾಗಿರುವಾಗ ಕೇಂದ್ರದವರಿಗೆ ಹೇಳಿ ಸರಿಯಾದ ಬೆಲೆ ನಿಗದಿಮಾಡಿಸಲು ಸಾಧ್ಯವಿಲ್ಲದಿದ್ದರೆ ರಾಜೀನಾಮೆ ಕೊಡಬೇಕು. ಈಗ ಹೈಬ್ರಿಡ್ ಜೋಳವನ್ನು ಕ್ವಿಂಟಾಲಿಗೆ 50 ರೂಪಾಯಿನಂತೆ ಮಾರುತ್ತಿದ್ದಾರೆ. ಹೀಗಾದರೆ ಯಾರುತಾನೆ ಅದನ್ನು ಹೆಚ್ಚಾಗಿ ಬೆಳೆಯಲು ಸಾಧ್ಯ ? ಉತ್ಪತ್ತಿ ಜಾಸ್ತಿಯಾಗಬೇಕಾದರೆ ಬೆಲೆ ಸ್ಥಿಮಿತದಲ್ಲಿರಬೇಕು. ಎಲ್ಲಿಯವರೆಗೆ ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಕ್ಕುವುದಿಲ್ಲವೋ ಯಾವತ್ತಿನವರೆಗೆ ರಾಜ್ಯ ಸರಕಾರದವರು ಕೇಂದ್ರ ಸರಕಾರ ದವರಿಗೆ ಹೇಳಿ ಸರಿಯಾದ ಬೆಲೆ ನಿಗದಿಮಾಡಿಸುವುದಿಲ್ಲವೋ ಅಲ್ಲಿಯವರೆಗೆ ಈ ದೇಶದಲ್ಲಿ ಆಹಾರದ ಅಭಾವ ತಪ್ಪುವುದಿಲ್ಲ ಎಂದು ಸವಾಲು ಹಾಕುತ್ತೇನೆ. ಇದನ್ನು ಒಪ್ಪಿಕೊಳ್ಳಿ. ಅಲ್ಲದೆ ಹೈಬ್ರಿಡ್ ಜೋಳದ ಬೀಜವನ್ನು ಸರಬರಾಯಿ ಮಾಡುತ್ತಿದ್ದಾರೆ. ಆದರೆ ಅದನ್ನು ಉಪಯೋಗಮಾಡಿರುವ

(ಶ್ರೀ ಪಿ. ವೆಂಕಟಗಿರಿಯಪ್ಪ)

ಕಡೆ ಅರ್ಥ ಕೂಡ ಹುಟ್ಟಿಲ್ಲ. ಇವಕ್ಕೆ ಕಾರಣರು ಯಾರು ? ರೈತರು ಇದನ್ನು ಇಲಾಖೆಯವರಿಗೆ ಹೇಳಿದರೆ ಕೇಳುವವರೇ ಇಲ್ಲ. ಇಂಥ ಬೀಜವನ್ನು ತರಿಸುವುದಕ್ಕೆ ಕಾರಣರು ಯಾರು, ಎಲ್ಲಿಂದ ಬಂತು ಎಂದು ಪರೀಕ್ಷೆಮಾಡಿ ಸಂಬಂಧಪಟ್ಟ ಅಧಿಕಾರಿಗಳಮೇಲೆ ಉಗ್ರ ಕ್ರಮ ಕೈಕೊಳ್ಳಬೇಕು.

ಈಗ ಅಗ್ರಿಕಲ್ಚರರ್ ಇಂಜಿನಿಯರಿಂಗ್ ಇಲಾಖೆ ಬೇರೆ ಇದೆ. ಈ ಸಂಬಂಧವಾದ ಎರಡು ಇಲಾಖೆಗಳಿಗೆ ಹೊಂದಾಣಿಕೆಯಿಲ್ಲ. ಅಗ್ರೋ ಇಂಡಸ್ಟ್ರೀಸ್ ಇಲಾಖೆ ಬೇರೆ ಇದೆ. ಯಾರಿಗೋ ಅನುಕೂಲ ಮಾಡಿಕೊಡುವುದಕ್ಕೆ, ಯಾರೋ ಬೇಕಾದವರನ್ನು ಛೇರ್ಮನ್ ಮಾಡುವುದಕ್ಕೆ ಯಾರಿಗೋ ಹುದ್ದೆ ಕೊಡುವುದಕ್ಕೆ ಇಲಾಖೆಗಳನ್ನೇಕೆ ಸೃಷ್ಟಿಮಾಡಬೇಕು ? ಬುಲ್‌ಡೋಜರ್ ಕೊಡುವವರೇ ಒಬ್ಬರು, ಬೋರ್‌ವೆಲ್‌ಗೆ ಅನುಕೂಲ ಮಾಡುವವರೇ ಒಬ್ಬರು ಹೀಗೆ ಬೇರೆ ಬೇರೆ ಮಾಡಿದ್ದಾರೆ, ಇಲಾಖೆಗಳಲ್ಲಿ ಹೊಂದಾಣಿಕೆಯಿಲ್ಲ. ಹೀಗೆ ಯಾರಿಗೋ ಅಧಿಕಾರ ಕೊಡುವುದಕ್ಕೆ ಅಧಿಕಾರವನ್ನು ವಿಕೇಂದ್ರೀಕರಣ ಮಾಡುವುದಕ್ಕೆ ಹೊರಟು ಹೀಗೆ ಅವ್ಯವಸ್ಥೆಮಾಡಬಾರದು.

ವ್ಯವಸಾಯದ ವಿಶ್ವವಿದ್ಯಾನಿಲಯದಲ್ಲಿ ಸೀಟು ಕೊಡುವ ವಿಚಾರ ಬಹಳ ತಮಾಷೆಯಾಗಿದೆ. ಈ ದೇಶದಲ್ಲಿ ವ್ಯವಸಾಯಗಾರರ ಮಕ್ಕಳಿಗೆ ಅಥವ ಮುಂದೆ ವ್ಯವಸಾಯ ಮಾಡುವವರಿಗೆ ವ್ಯವಸಾಯ ವಿಶ್ವವಿದ್ಯಾನಿಲಯದಲ್ಲಿ ಹೆಚ್ಚು ಸ್ಥಾನಗಳು ಸಿಕ್ಕಬೇಕು. ಅವರಿಂದ ವ್ಯವಸಾಯಾಭಿವೃದ್ಧಿಯಾಗುವುದು ಎಂದು ಹೇಳುವಾಗ ಇಂದು ಬೆಂಗಳೂರು ನಗರದಲ್ಲಿರುವ ಶ್ರೀಮಂತರ ಮಕ್ಕಳಿಗೆ ಅವರು ಫಾರಿನ್‌ಗೆ ಹೋಗಲು ಅವಕಾಶಮಾಡಿಕೊಡಲು ಅಥವ ದೊಡ್ಡ ಹುದ್ದೆ ಅವರಿಗೆ ದೊರಕಿಸಿಕೊಡಲು ಹೆಚ್ಚು ಸೀಟುಗಳನ್ನು ವ್ಯವಸಾಯ ವಿಶ್ವವಿದ್ಯಾನಿಲಯದಲ್ಲಿ ಕೊಡುತ್ತಿದ್ದಾರೆ. ಇದರಿಂದ ವ್ಯವಸಾಯಗಾರರಿಗೆ ಅನುಕೂಲವಾಗುತ್ತಿಲ್ಲ. ಕೇವಲ ಎರಡು ಸೀಟುಗಳನ್ನೋ ಏನೋ ಅರ್ಹರಿಗೆ ಕೊಡಬಹುದು. ಬೆಂಗಳೂರಿನಲ್ಲಿರುವವರಿಗೆ ಒಂದೂವರೆ ಎಕರೆ ಜಮೀನಿದ್ದರೆ ಅವರಿಗೆ ಸರ್ಟಿಫಿಕೇಟ್ ಕೊಡುತ್ತಾರೆ.

ಹೀಗಾಗಿ ಯಾವ ವ್ಯವಸಾಯಗಾರರಿಗೂ ಕೂಡ ಸೀಟು ಸಿಕ್ಕುತ್ತಾ ಇಲ್ಲ. ಈ ರೀತಿ ಆದರೆ ಯಾವ ಉದ್ದೇಶಕ್ಕಾಗಿ ಈ ವಿಶ್ವದ್ಯಾಲಯ ಸ್ಥಾಪನೆಯಾಗಿದೆಯೋ ಅದು ಸಾಧನೆಯಾಗುವುದಿಲ್ಲ. ಎಷ್ಟು ಜನ ವ್ಯವಸಾಯದ ವಿಷಯದಲ್ಲಿ ತಯಾರಾಗಿದ್ದಾರೆ ಅವರಿಗೆ ಕೆಲಸ ಕೊಡಬೇಡಿ, ಯಾರು ವ್ಯವಸಾಯವನ್ನೇ ಮಾಡುತ್ತೇನೆ ಎಂದು ಹೇಳಿ ಮುಂದೆ ಬರುತ್ತಾರೋ ಅಂಥವರಿಗೆ ಶೇಕಡ 50 ರಷ್ಟು ಸೀಟನ್ನು ಕೊಡಿ. ವ್ಯವಸಾಯದ ವಿಶ್ವವಿದ್ಯಾನಿಲಯದಲ್ಲಿ ಓದಿದಂತಹ ವಿದ್ಯಾವಂತರು ನಮಗೆ ಬಹಳ ಮುಖ್ಯವಾಗಿ ಬೇಕು. ಜಿಲ್ಲಾವಾರು ಸೀಟು ಕೊಡುವ ವಿಷಯದಲ್ಲೂ ಕೂಡ ಹೈಕೋರ್ಟಿನವರು ಆ ರೀತಿ ಕೊಡಬಾರದು ಎಂದು ತಿಳಿಸಿದ್ದರೂ ಕೂಡ ಅದನ್ನು ಗಮನಿಸದೆ ಅದನ್ನು ಮಾಯ ಮಂತ್ರ ಮಾಡಿ ಜಿಲ್ಲಾವಾರು ಪ್ರಾತಿನಿಧ್ಯಕೊಡಬೇಕೆಂದು ಪ್ರಯತ್ನ ಮಾಡುತ್ತಾ ಇದ್ದೀರಿ. ಹೈಕೋರ್ಟಿನ ತೀರ್ಮಾನಕ್ಕೆ ವಿರುದ್ಧವಾಗಿ ತಾವು ಮಾಡುವುದಕ್ಕೆ ಹೋದರೆ ನಿಮ್ಮ ಮೇಲೆ ಕಂಟೆಂಪ್ಟ್ ಆಫ್ ಕೋರ್ಟ್ ಅಪಾದನೆ ಬರುತ್ತದೆ, ಆದ್ದರಿಂದ ಚೆನ್ನಾಗಿ ಇದನ್ನು ಯೋಚನೆ ಮಾಡಿ ಮುಂದುವರಿಯಬೇಕೆಂದು ಹೇಳುತ್ತೇನೆ.

ತೋಟಗಾರಿಕೆ ವಿಷಯದಲ್ಲಿ ಎಲ್ಲಾ ಚೆನ್ನಾಗಿದೆ ಎಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಸೀಡ್‌ಟೆಸ್ಟಿಂಗ್ ಸೆಂಟರ್ ಮಾಡಿದ್ದೀರಿ, ಹೊಸಕೋಟೆಯಲ್ಲಿ ಕಾಲಿ ಫ್ಲವರ್ ಬೀಜ ಕೊಟ್ಟರು, ಅದನ್ನು ತೆಗೆದುಕೊಂಡು ಹಾಕಿದ ಮನುಷ್ಯನ ತೋಟ ಎಲ್ಲಾ ಖಾಲಿ ಆಯಿತು ಏನೂ ಬೆಳೆಯಲೇ ಇಲ್ಲ. ನಾನು ಆ ರೈತನಿಗೆ ಹೇಳಿದೆ, ಡೈರೆಕ್ಟರೋ ಅಥವಾ ಯಾವ ಅಧಿಕಾರಿಗಳು ನಿನಗೆ ಇದನ್ನು ಕೊಟ್ಟರೋ ಅವರ ಮೇಲೆ ಕೋರ್ಟಿನಲ್ಲಿ ಕೇಸು ಹಾಕು ಅಂತ, ಹೇಗೆ ಸ್ವಾಮಿ ಮರಿಗೌಡರ ಮೇಲೆ ಕೇಸು ಹಾಕುವುದು ಅಂತ ಅತ ಅಂದ, ನಾನಾಗಿದ್ದರೆ ಖಂಡಿತವಾಗಿಯೂ ಕೇಸು ಹಾಕುತ್ತಾ ಇದ್ದೆ. ಸರ್ಕಾರದ ದುಡ್ಡು ಜನರಿಂದ ತೆರಿಗೆಯ ರೂಪದಲ್ಲಿ ವಸೂಲಿ ಮಾಡಿದ ಹಣ, ಯಾವುದನ್ನೇ ಆಗಲಿ ಸರಿಯಾಗಿ ಟೆಸ್ಟ್ ಮಾಡಿಕೊಡಬೇಕು, ಇದರಲ್ಲಿ ಡೈರೆಕ್ಟರದು ತಪ್ಪು ಇದೆ ಎಂದು ನಾನು ಹೇಳುತ್ತಾ ಇಲ್ಲ, ಯಾರು ಇದನ್ನು ರೈತರಿಗೆ ಕೊಡುತ್ತಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಡಿಗ್ರೇಡ್ ಅಥವಾ ಡಿಪ್ರಮೋಷನ್ ಮಾಡದಿದ್ದರೆ ಇನ್ನೊಂದು ಸಾರಿಯೂ ಹೀಗೆಯೆ ಮಾಡುತ್ತಾರೆ. ಇದರಿಂದ ಪ್ರಯೋಜನವಾಗುವುದಿಲ್ಲ. ದ್ರಾಕ್ಷಿ ಬೆಳೆಸುವುದಕ್ಕೆ ಹಿಂದೆ ಸಾಲ ಕೊಡುತ್ತಾ ಇದ್ದರು. ಈಗ ಕೊಡುತ್ತಿಲ್ಲ. ಹಿಂದೆ ಕೊಟ್ಟದ್ದು ಸರಿಯಾಗಿ ವಸೂಲಾಗಿಲ್ಲ ಎಂದರೆ ಅದಕ್ಕೆ ಕಾರಣವೇನು ಎಂಬುದನ್ನು ಕಂಡುಹಿಡಿಯದೆ ಇನ್ನೊಬ್ಬರಿಗೂ ಸಾಲ ಕೊಡುವುದಿಲ್ಲ ಅಂತ ಅನ್ನುವುದು ಸರಿಯಲ್ಲ. ದ್ರಾಕ್ಷಿ ಬೆಳೆಯುವುದಕ್ಕೆ ಬಹಳ ಒಳ್ಳೆಯ ಭೂಮಿ ನಮ್ಮ ದೇಶದಲ್ಲಿದೆ. ಕೋಲಾರ ಜಿಲ್ಲೆ ಒಳ್ಳೆಯ ಪ್ರದೇಶ. ಮೊದಲು ಕೊಟ್ಟ ರೀತಿಯಲ್ಲೇ ಸಾಲ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅರಣ್ಯ ಇಲಾಖೆಯಲ್ಲಿ ಯೂಕಲಿಪ್ಟಸ್ ಗಿಡಗಳನ್ನು ಬೆಳೆದಿದ್ದಾರೆ. ಇದನ್ನು ಕೇರಳದಲ್ಲಿರುವ ಬಿರ್ಲಾ ಕಂಪೆನಿಗೆ ಒಂದು ಟನ್‌ಗೆ 26 ರೂಪಾಯಿಯಂತೆ ಕೊಟ್ಟಿದ್ದಾರೆ. ನಾನು ತಮಗೆ ಸವಾಲು ಹಾಕುತ್ತೇನೆ, ನಮ್ಮಲ್ಲಿ 45 ರೂಪಾಯಿ ಮಾರ್ಕೆಟ್ ರೇಟ್ ಇದೆ, ಅದರಂತೆ ಕೊಂಡುಕೊಳ್ಳುವ ಜನ ಇಲ್ಲಿರುವಾಗ 26 ರೂಪಾಯಿಯಂತೆ ಕೊಡುವುದಕ್ಕೆ ಕಾರಣವೇನು! ಬಿರ್ಲಾಕಂಪೆನಿಗೂ ನಿಮಗೂ ಏನಾದರೂ ಅಂಡರ್‌ಸ್ಟ್ಯಾಂಡಿಂಗ್ ಇದೆಯೇ? ಅವರ ಏಜೆಂಟರಾಗಿ ಇದ್ದೀರಾ ಎಂದು ಕೇಳುತ್ತೇನೆ. ಸರ್ಕಾರದ ಹಣ ಖರ್ಚು ಮಾಡಿ ಬೆಳೆಸಿದಂತಹ ಈ ಮರವನ್ನು ಟನ್‌ಗೆ 45 ರೂಪಾಯಿ ಇರುವಾಗ, 26 ರೂಪಾಯಿಯಂತೆ ಈ ಬಿರ್ಲಾ ಕಂಪೆನಿಗೆ ಕೊಟ್ಟಿರುವಂತಹ ಅನ್ಯಾಯವಾದ ವಿಷಯ ಬೇರೊಂದಿಲ್ಲ ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅರಣ್ಯ ಇಲಾಖೆಯ ಬಗ್ಗೆ ಹಿಂದಿನಿಂದಲೂ ಕೂಡ ಒಂದು ಸಲಹೆ ಕೊಡುತ್ತಾ ಇದ್ದೇನೆ. ನಮ್ಮ ಜಿಲ್ಲೆಯಲ್ಲಿ ತುಂಬಾ ಹುಣಸೆ ಮರ ಇದೆ. ಅದರ ಸುತ್ತ ಬೇಕಾದಷ್ಟು ಲಾಂಟಾನ ಬೆಳೆದು ಕೋತಿಗಳ ಹಾವಳಿಯಿಂದ ಬಹಳ ನಷ್ಟವಾಗುತ್ತಾ ಇದೆ. 50 ಸಾವಿರ ರೂಪಾಯಿ ಬರುವ ಕಡೆ 10 ಸಾವಿರ ರೂಪಾಯಿ ಬರುತ್ತಾ ಇಲ್ಲ. ನೂರು ಇನ್ನೂರು ರೂಪಾಯಿ ಖರ್ಚು ಮಾಡಿದರೆ ಲಾಂಟಾನ ತೆಗೆಸಿಹಾಕಿ ಅದನ್ನು ಸಾಗುವಳಿ ಮಾಡುವುದಕ್ಕೆ ಕೊಟ್ಟರೆ ಈಗ ಎಷ್ಟು ಆದಾಯ ಬರುತ್ತಾ ಇದೆಯೋ ಅದಕ್ಕೆ ನಾಲ್ಕರಷ್ಟು ಬರುತ್ತದೆ. ಇದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಐವತ್ತು ಸಾರಿ ಹೇಳಿದ್ದೇನೆ. ಏನು ಮಾಡಿದ್ದಾರೋ ದೇವರೇ ಬಲ್ಲ. ಇದರ ಬಗ್ಗೆ ಈಗಲಾದರೂ ಕ್ರಮ ತೆಗೆದು ಕೊಳ್ಳಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಎಷ್ಟು ಹೊತ್ತಿನವರೆಗೂ ಸಭೆ ನಡೆಯಬೇಕೆಂಬುದು ಮೊದಲನೆಯದು. ಎರಡನೆಯದು ತಾವು ಕೊಟ್ಟಿರುವ ಲಿಸ್ಟ್ ಪ್ರಕಾರ ರಾಜ್ಯದ ಹೆಸರು ಬದಲಾವಣೆ ಮಾಡಬೇಕೆಂಬ ಪ್ರಾಮುಖ್ಯವಾದ ನಿರ್ಣಯ ಇದೆ. ಇದು ಚರ್ಚೆಗೆ ಬರದೇ ಹಾಗೆಯೇ ಹೋಗುತ್ತಾ ಇದೆ. ಆದ್ದರಿಂದ ಇದರ ಚರ್ಚೆಗೆ ಕೂಡಲೇ ಅವಕಾಶ ಕೊಡಬೇಕೆಂದು ಹೇಳುತ್ತೇನೆ. ನಾಳೆ ಬೇಕಾದರೆ ಮಾನ್ಯ ಮಂತ್ರಿಗಳು ಈಗ ನಡೆಯುತ್ತಿರುವ ಚರ್ಚೆಗೆ ಉತ್ತರ ಕೊಡಬಹುದು.

ಉಪಾಧ್ಯಕ್ಷರು.—ಇನ್ನೂ ಸುಮಾರು 6–7 ಜನ ಮಾತನಾಡುವವರು ಇದ್ದಾರೆ, ಈಗ ಚರ್ಚೆಯಾಗುತ್ತಾ ಇರುವುದು ಬಹಳ ಪ್ರಾಮುಖ್ಯವಾದ ವಿಷಯ.

ಶ್ರೀ ವಾಟಾಳ್ ನಾಗರಾಜ್.—ಇದಕ್ಕಿಂತ ಪ್ರಾಮುಖ್ಯವಾದ ವಿಷಯ ಸ್ವಾಮಿ ಈ ನಿರ್ಣಯ.

Sri B. P. GANGADHAR.—This is a point of order I am raising. ತಮಗೆ ಗೊತ್ತಿದ್ದ ಹಾಗೆ 15 ದಿವಸಕ್ಕೆ 2 ದಿನವಾದರೂ ನಾನ್ ಅಫಿಷಿಯಲ್ ಬಿಸಿನೆಸ್‌ಗೆ ಅವಕಾಶ ಕೊಡಬೇಕೆಂದು ಇದೆ. We have flouted that rule successfully. ಈಗ ಒಂದು ತಿಂಗಳಾಯಿತು ಒಂದು ಗಳಿಗೆ ಕೂಡ ನಾನ್ ಅಫಿಷಿಯಲ್ ಬಿಸಿನೆಸ್‌ಗೆ ಅವಕಾಶ ಕೊಟ್ಟಿಲ್ಲ. ನೆರೆ ರಾಜ್ಯದಲ್ಲಿ ಇಂತಹ ನಿರ್ಣಯಕ್ಕೆ ಮೊದಲು ಪ್ರಾಶಸ್ತ್ಯ ಕೊಟ್ಟಿದ್ದಾರೆ. That means to say we are giving second grade importance to the non-official business. As per the rules every week one day must be allotted for the non-official business. Therefore I request the Hon. Chair that other business may kindly be suspended and non-official business be taken up now. This matter is of primary importance. It cannot be postponed to some other day.

ಶ್ರೀ ಎಂ. ಎಸ್. ಕೃಷ್ಣನ್.—ರೂಲ್ 28ರ ಪ್ರಕಾರ ಲಿಸ್ಟ್ ಆಫ್ ಬಿಸಿನೆಸ್ ಕೊಟ್ಟಿದ್ದೀರಿ. ಪ್ರೈವೇಟ್ ಮೆಂಬರ್ಸ್ ಬಿಸಿನೆಸ್ಸಿಗೆ ಅವಕಾಶ ಮಾಡಿ ಕೊಟ್ಟು ಸೇರಿಸಿದ್ದೀರಿ. ಹಾಗಿದ್ದರೂ ಸಹ ಒಂದು ನಿರ್ಣಯ ಕೂಡ ಚರ್ಚೆಯಾಗುತ್ತಿಲ್ಲ, ಇದಕ್ಕೆ ಮೊದಲನೆಯ ಪ್ರಾಶಸ್ತ್ಯ ಕೊಡಬೇಕೆಂದು ಹೇಳುತ್ತೇನೆ.

Mr. DEPUTY SPEAKER.—I know the rules. I agree that private members business should have precedence over other business.

The private members' business will be taken up on some other day.

Sri B. P. GANGADHAR.—It cannot be shelved like that. It is very important.

6-30 P.M.

ಶ್ರೀ ವಾಟಾಳ್ ನಾಗರಾಜ್.—ಖಾಸಗಿ ಕಾರ್ಯಕ್ರಮ ಪ್ರಾಮುಖ್ಯವಾದದ್ದು. ಇಲ್ಲಿ ರಾಜ್ಯದ ಹೆಸರನ್ನು ಬದಲಾಯಿಸುವಂಥ ಒಂದು ಪ್ರಾಮುಖ್ಯವಾದ ನಿರ್ಣಯ ಚರ್ಚೆಯಾಗಬೇಕಾಗಿದೆ.

ಉಪಾಧ್ಯಕ್ಷರು.—ಉಭಯ ಪಕ್ಷಗಳ ನಾಯಕರೂ ಸೇರಿ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲೇ ಆ ವಿಚಾರವನ್ನಾಗಲೇ ತೀರ್ಮಾನ ಮಾಡಿದ್ದಾರೆ.

ಶ್ರೀ ಬಿ. ಪಿ. ಗಂಗಾಧರ್.—ಈ ದಿವಸ ನಮ್ಮ ಹಕ್ಕನ್ನು ತ್ಯಾಜ್ಯಮಾಡಿಕೊಳ್ಳುವುದಕ್ಕೆ ನಾವು ಸಿದ್ಧರಾಗಿಲ್ಲ. ನಮ್ಮ ಹಕನ್ನು ಕಸಿದುಕೊಳ್ಳುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ನಾವು ಯಾವ ಕೆಲಸನ್ನು ಯಾವ ಯಾವ ಕಾಲದಲ್ಲಿ ಮಾಡಬೇಕೋ ಆಯಾಯ ಕೆಲಸಗಳನ್ನು ಆ ದಿವಸವೇ ಮಾಡಬೇಕು.

Sri V. N. PATIL.—The Business Advisory Committee is a paper committee and it is going to be a Paper Committee only.

Mr. DEPUTY SPEAKER.—The hon. Member should not say like that. He may please resume his seat.

Sri M. S. KRISHNAN.—Rule 28 reads like this :

> "Provided further that on a motion made by a Minister for the suspension of this rule the Assembly may resolved to transact Government business on a day allotted for non-official business, in which case the time so used shall be made available for the transaction of private members' business on such other day allotted for Government business as the Speaker in consultation with the Leader of the House may determine."

I take it for granted the Leader of the House and the persons concerned have already determined the hours for Government business and also for Private Members business. ಹಾಗೇ ಮಾಡಿ ನಮಗೆ ಈ ದಿವಸದ ಬಿಜಿನೆಸ್ ಲಿಸ್ಟನ್ನು ಕಳುಹಿಸಿದ್ದಾರೆ. ಅದರ ಪ್ರಕಾರ ಪ್ರೊ॥ ಎಲ್. ಶ್ರೀಕಂಠಯ್ಯನವರ ಒಂದು ಪ್ರಾಮುಖ್ಯವಾದ ಬಿಲ್ಲು ಕೂಡ ಬಂದಿದೆ. ಅದು ಯೂನಿವರ್ಸಿಟಿ ವಿಚಾರಕ್ಕೆ ಸಂಬಂಧಪಟ್ಟ ಬಿಲ್ಲು. ಅಲ್ಲಿ ಬಹಳ ಕುಂಭಕೋಣ ನಡೆಯುತ್ತಿದೆ. ಅದರ ಜೊತೆಗೆ ಈ ರಾಜ್ಯದ ಹೆಸರನ್ನು ಬದಲಾವಣೆ ಮಾಡತಕ್ಕ ನಿರ್ಣಯ ಕೂಡ ಚರ್ಚೆಗಿದೆ.........

ಶ್ರೀ ವಾಟಾಳ್ ನಾಗರಾಜ್.—ಇಲ್ಲಿ ನಾನ್‌ಅಫಿಷಿಯಲ್ ಬಿಜಿನೆಸ್ಸಿಗೆ ಮಾನ್ಯತೆ ಗೌರವಗಳು ಇದ್ದ ಹಾಗೆ ಕಾಣುವುದಿಲ್ಲ. ಒಂದಾವರ್ತಿ ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ವಿಷಯಗಳನ್ನು ಅಡಕ ಮಾಡಿದ ಮೇಲೆ ಅದನ್ನು ಬದಲಾವಣೆ ಮಾಡತಕ್ಕ ಅಧಿಕಾರ ಯಾರಿಗಾದರೂ ಇದೆಯೇ ? ಆ ವಿಚಾರ ಅಧ್ಯಕ್ಷರು ಒಂದು ರೂಲಿಂಗನ್ನು ಕೊಡಬೇಕು.

ಉಪಾಧ್ಯಕ್ಷರು.—ಮಾನ್ಯ ಸಭೆಯವರು ಒಪ್ಪಿದರೆ ಅದನ್ನು ಬದಲಾವಣೆ ಮಾಡಬಹುದು. ನೀವು ಒಬ್ಬೊಬ್ಬರು ಸದಸ್ಯರು ಹೇಳಿದಂತೆ ಮಾಡುವುದಕ್ಕಾಗುವುದಿಲ್ಲ. ಈ ಸಭೆ ಯಾವ ರೀತಿ ದಾರಿ ತೋರಿಸಿದರೆ ಹಾಗೆ ನಾವು ನಡೆಯೋಣ. ಸಭೆ 10 ಗಂಟೆಯವರೆಗೂ ಕುಳಿತುಕೊಳ್ಳಬೇಕು ಎಂದರೆ ಸಭೆ ಅಷ್ಟು ಕಾಲ ನಡೆಯಲೇಬೇಕು.

ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಸಭೆಯ ಮುಂದೆ ಈಗ ಇರತಕ್ಕ ಬೇಡಿಕೆಗಳು ಮಾತ್ರ ಬಹಳ ಹೆಚ್ಚಿನವು, ಖಾಸಗಿ ಕಾರ್ಯಕ್ರಮಗಳು ಹೆಚ್ಚಿನವಲ್ಲ ಎಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಆದರೆ ಸಭೆಯ ಮುಂದಿರತಕ್ಕ ಬೇಡಿಕೆಗಳ ಬಗ್ಗೆ ಈ ದಿವಸ ಹೆಚ್ಚು ಜನರು ಮಾತನಾಡುವುದಕ್ಕೆ ಇಷ್ಟಪಟ್ಟಿದ್ದರಿಂದ ಸ್ವಲ್ಪ ಕಾಲಾವಕಾಶ ಖಾಸಗೀ ಕಾರ್ಯಕ್ರಮಕ್ಕೆ ಸಿಕ್ಕುವುದಕ್ಕೆ ತೊಂದರೆ ಯಾಯಿತು. ಅದು ಅನಿವಾರ್ಯವಾದದ್ದು. ಆದರೆ ನಾನ್‌ಅಫಿಷಿಯಲ್ ಬಿಜಿನೆಸ್ಸನ್ನು ಸಭೆಯು ಉಪೇಕ್ಷೆ ಮಾಡುತ್ತದೆಂದು ತಾವುಗಳು ಯಾರೂ ಭಾವಿಸಬಾರದು. ಸಭೆಯ ಮುಂದಿರತಕ್ಕ ಬೇಡಿಕೆಗಳು ಮುಗಿದನಂತರ ಆ ಕಾರ್ಯಕಲಾಪಗಳನ್ನು ತೆಗೆದುಕೊಳ್ಳೋಣ. ಇದರಲ್ಲಿ ಯಾರ ಹಕ್ಕು

ಭಾಧ್ಯತೆಗೂ ಕುಂದಕ ಬರುವುದಿಲ್ಲ ಎಂದು ನಾನು ಅಧ್ಯಕ್ಷರ ಮೂಲಕ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಈ ದಿವಸ ನಾನ್‌ಅಫಿಷಿಯಲ್ ಬಿಜಿನೆಸ್ ನಡೆಸುವುದಕ್ಕೆ ಅವಕಾಶ ಕೊಡುವುದಕ್ಕೆ ಸಾಧ್ಯವಾಗದಿದ್ದರೆ ಅದಕ್ಕೆ ನಾಳೇ ದಿನವೇ ಅವಕಾಶ ಕೊಡುವುದಾದರೆ ಪರವಾಗಿಲ್ಲ; ಆಗಬಹುದು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ದಿವಸ ಮೂರೂವರೆ ಗಂಟೆಯಲ್ಲಿ ಬಿಜಿನೆಸ್ ಅಡ್ವೈಸರಿ ಸಮಿತಿ ಸೇರಿದ್ದಿತು. ಅಲ್ಲಿ ಚರ್ಚೆ ನಡೆಯುತಕ್ಕ ಕಾಲದಲ್ಲಿ ಇತ್ತ ಕಡೆಯ ಸದಸ್ಯರೂ ಮತ್ತು ಅತ್ತ ಕಡೆಯ ಸದಸ್ಯರೂ ಎಲ್ಲರೂ ಸೇರಿದ್ದರು. ಅಲ್ಲಿ ಎಲ್ಲಾ ಮಾತುಕತೆಗಳೂ ನಡೆದೂ ಎಲ್ಲರೂ ಒಂದು ಒಪ್ಪಂದಕ್ಕೆ ಬಂದರು. ಆ ಒಪ್ಪಂದವೇನೆಂದರೆ: ಈ ದಿವಸ ಇಲ್ಲಿ ನಾನ್‌ಅಫಿಷಿಯಲ್ ಬಿಜಿನೆಸ್ಸನ್ನು ನಡೆಸುವುದಕ್ಕೆ ಸಾಧ್ಯವಾಗದಿದ್ದರೆ ಕೊನೆಯಲ್ಲಿ ಒಟ್ಟಿಗೇ ಎರಡು ದಿವಸ ನಾನ್‌ಅಫಿಷಿಯಲ್ ಬಿಜಿನೆಸ್ಸಿಗೆ ಚರ್ಚೆಗೆ ಇಟ್ಟುಕೊಂಡರಾಯಿತು ಎಂದು ಒಪ್ಪಿಗೆ ಆಯಿತು. ಅಲ್ಲಿ ಹಾಗೆ ಮಾಡದಿದ್ದರೆ ಅಲ್ಲಿಯೂ ಬೈಗುಳ. ಅಲ್ಲಿ ಹಾಗೆ ತೀರ್ಮಾನ ಆಗಿದೆ ಎಂದರೆ ಇಲ್ಲಿ ಬೈಗಳು. ಇದನ್ನು ಎರಡು ಕಡೆಯವರೂ ಒಪ್ಪಿದ್ದಾರೆ. ನಾನ್‌ಅಫಿಷಿಯಲ್ ಡೇಯನ್ನು ಮುಂದಕ್ಕೆ ಹಾಕಿ. ಆಮೇಲೆ ಎರಡು ದಿವಸಗಳು ಒಟ್ಟಿಗೆ ತೆಗೆದುಕೊಳ್ಳೋಣ.

ಶ್ರೀ ಎಂ. ಎಸ್. ಕೃಷ್ಣನ್.—ಅಸೆಂಬ್ಲಿ ಮುಗಿದುಹೋದಮೇಲೆ ಅದನ್ನು ಎಲ್ಲಿ ತೆಗೆದು ಕೊಳ್ಳುತ್ತೀರಿ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಬಿಜಿನೆಸ್ ಅಡ್ವೈಸರಿ ಕಮಿಟಿಯ ವರದಿಯನ್ನು ಮೊನ್ನೆ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಕೆಲವರು ನಾನ್ ಅಫಿಷಿಯಲ್ ಡೇಗೆ ಎರಡು ದಿವಸಗಳು ಒಟ್ಟಿಗೆ ತೆಗೆದುಕೊಳ್ಳೋಣವೆಂದು ಹೇಳಿದ್ದಾರೆ. ಈಗ ಸಮಯ ಜಾಸ್ತಿ ಇರುತ್ತದೆ. ಮಾತನಾಡುವವರು ಬಹಳ ಜನರು ಇದ್ದಾರೆ.

ಶ್ರೀ ಎಲ್. ಶ್ರೀಕಂಠಯ್ಯ.—ಹೋದ ಶುಕ್ರವಾರ ನನ್ನ ಮಸೂದೆ ಕಾರ್ಯಕ್ರಮ ಪಟ್ಟಿಯಲ್ಲಿ ಇದ್ದರೂ ಅದು ಬರಲಿಲ್ಲ. ಬಹುಶಃ ಇವತ್ತು ಅದು ಬರಬಹುದು ಎಂಬುದಾಗಿ ಸಿದ್ಧತೆ ಮಾಡಿಕೊಂಡು ಬಂದೆ. ಬೆಳಿಗ್ಗೆ ಪಿಪರೀಸ್ ಡಿಮ್ಯಾಂಡ್ ಬಗ್ಗೆ ಉತ್ತರ ಕೊಡಬಹುದಾಗಿತ್ತು. 6 ಗಂಟೆಯ ಮೇಲೆ ನಾನ್ ಅಫಿಷಿಯಲ್ ಬಿಸಿನೆಸ್ ಮಾಡಬೇಕಾಗಿತ್ತು. ಅದಕ್ಕೂ ಅವಕಾಶ ಕೊಡಬಹುದಿತ್ತು, ಇದಕ್ಕೂ ಅವಕಾಶ ಕೊಡಬಹುದಿತ್ತು. ಯಾವ ವಿಶ್ವಾಸದಿಂದ ಇಲ್ಲಿಗೆ ಬಂದು ಮಾತನಾಡಬೇಕೋ ಗೊತ್ತಿಲ್ಲ.

ಉಪಾಧ್ಯಕ್ಷರು.—ಈ ಮನೆ ಯಾವ ರೀತಿ ಒಪ್ಪುತ್ತದೋ ಆ ರೀತಿ ಮಾಡುವುದಕ್ಕೆ ನಾನು ತಯಾರಿದ್ದೇನೆ.

Sri B. P. GANGADHAR.—I have raised a point. Unless that point is disposed of, further business should not be taken.

Mr. DEPUTY SPEAKER.—The House has agreed. I have already disposed of that matter.

ಶ್ರೀ ಬಿ. ಪಿ. ಗಂಗಾಧರ್.—ಇದರಲ್ಲಿ ದುರುಪಯೋಗವಾಗಲಿಕ್ಕೆ ಬಹಳ ಕಾರಣವಿದೆ. ಇವತ್ತು ಲಿಸ್ಟ್ ಆಫ್ ಬಿಜಿನೆಸ್‌ನಲ್ಲಿ ಏನು ತೋರಿಸಿದ್ದಾರೋ, ಅದರ ಹಾಗೆ ನಡೆಯುತ್ತಾ ಇಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ದಿವಸ ಈ ಸಭೆಯಲ್ಲಿರತಕ್ಕಂಥ ವ್ಯವಸ್ಥೆ ಸರಿ ಇಲ್ಲ. ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ನೀವು ತಯಾರಿಲ್ಲವೆಂದು ಹೇಳಿದಮೇಲೆ ನಮ್ಮ ಹಕ್ಕು ಭಾದ್ಯತೆಗಳನ್ನು ಮೊಟಕುಮಾಡುತ್ತಿದ್ದೀರಿ.

Sri B. P. GANGADHAR.—It is a fundamental right that under the rules private members business should be taken up once a week. Can it be taken up tomorrow atleast ? If it cannot be taken up tomorrow also, I think our rights will be lost. ತಾವು ಇನ್ನೂ ರೂಲಿಂಗ್ ಕೊಟ್ಟಿಲ್ಲ. ನಾನು ಹೇಳುತ್ತಾ ಇರುವುದು ಏನೆಂದರೆ, ಇದು ಇಲ್ಲಿ ನಾಲ್ಕನೆಯ ಸಾರಿ ಬಂದಿದೆ. ಇದು ಮುಂಚೆ ಬುಧವಾರ ಇತ್ತು. ಕಾಂಗ್ರೆಸ್ ಆಡಳಿತ ಪಕ್ಷದವರ ಸಲುವಾಗಿ ಟೀಕೆ ಮಾಡುವುದು ಬೇಕಾದಷ್ಟು ಇತ್ತು. ಹಿಂದಿನಸಾರಿ ಇದು ಬಂದಾಗಲೂ ಅದೇ ಕ್ರಿಟಿಸಿಜಂ ಮತ್ತು ಅದೇ ರಿಪ್ಲೈ.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಸಮಸ್ಯೆ ಬಹಳ ಗಂಭೀರವಾಗಿದೆ. ಈಗ ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಕಡೆಯವರು ಮತ್ತು ಆ ಕಡೆಯವರು ಹೋಗಿ ಒಂದು ತೀರ್ಮಾನ ಮಾಡಿಕೊಂಡು ಬಂದರೆ, ಅದನ್ನು ನಾವು ಒಪ್ಪುವುದಿಲ್ಲವೆಂದರೆ ಹೇಗೆ ? ಒಂದು ತೀರ್ಮಾನವನ್ನು ಬಿಜಿನೆಸ್ ಅಡ್ವೈಸರಿ ಕಮಿಟಿ ಒಪ್ಪಿಕೊಂಡಿರುವಾಗ, ಅದು ಸರಿಯಲ್ಲವೆಂದು ಹೇಳುವುದಕ್ಕೆ ಏನು ಅಧಿಕಾರವಿದೆ ? ಅದನ್ನು ತಾವು ತಿಳಿಸಬೇಕು.

Mr. DEPUTY SPEAKER.—I cannot give any assurance at this movement. I am going to carry out the wishes of the House.

Sri B. P. GANGADHAR.—In protest we are going out.

(At this stage Sri B. P. Gangadhar withdrew)

ಶ್ರೀ ಬಿ. ವೆಂಕಟರಾಯಪ್ಪ (ಶಿಡ್ಲಘಟ್ಟ).—ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಇರತಕ್ಕ ವ್ಯವಸಾಯ, ಪಶುಸಂಗೋಪನ ಮತ್ತು ಅರಣ್ಯ ಇಲಾಖೆಗಳ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಈ ಸಭೆಯಮುಂದೆ ಕೊಡಲಿಚ್ಛಿಸುತ್ತೇನೆ. ನಮ್ಮ ದೇಶ ವ್ಯವಸಾಯ ಪ್ರಧಾನವಾಗಿರುವ ದೇಶ. ನಮ್ಮ ದೇಶದಲ್ಲಿ ಸೇಕಡ 80ರಷ್ಟು ಜನ ವ್ಯವಸಾಯದಿಂದಲೇ ಜೀವನ ನಡೆಸುತ್ತಾರೆ. ನಮ್ಮ ಮುಖ್ಯಧ್ಯೇಯ ವ್ಯವಸಾಯ ಬಹಳ ತೀವ್ರಗತಿಯಲ್ಲಿ ಬೆಳೆಯಬೇಕೆಂಬುದು. ಆಹಾರ ಹೆಚ್ಚಿಗೆ ಬೆಳೆಯಬೇಕು, ಅದರಲ್ಲಿ ಸ್ವಪರಿಪೂರ್ಣತೆ ಪಡೆಯಬೇಕೆಂಬುದಾಗಿ ಸರ್ಕಾರದವರು ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ವ್ಯವಸಾಯೋತ್ಪನ್ನ ಜಾಸ್ತಿಯಾಗಬೇಕು. ವ್ಯವಸಾಯಗಾರರಿಗೆ ಸಾಕಷ್ಟು ಸೌಕರ್ಯಗಳನ್ನು ಒದಗಿಸಬೇಕು. ಸರ್ಕಾರದವರು ಈಗ ಉತ್ತಮವಾದ ಬೀಜ, ಗೊಬ್ಬರ, ನೀರಾವರಿ ಸೌಲಭ್ಯಗಳನ್ನು ರೈತರಿಗೆ ಕೊಟ್ಟರೆ ನಮ್ಮ ದೇಶದಲ್ಲಿ ರೈತ ಸಾಕಷ್ಟು ಆಹಾರಪದಾರ್ಥಗಳನ್ನು ಬೆಳೆಯುವುದಕ್ಕೆ ತಯಾರಿದ್ದಾನೆ. ಹಾಗೆಯೇ ಬೀಜಗಳ ಉತ್ಪಾದನೆಯ ಬಗ್ಗೆ ಹೇಳುವುದಾದರೆ, ಈಗ ಹೊಸಹೊಸದಾಗಿ ಅನೇಕ ಬೀಜಗಳು ಇಲಾಖೆ ಕಡೆಯಿಂದ ಜಾರಿಗೆ ಬಂದಿವೆ. ಬತ್ತದಲ್ಲಿ ಐ. ಆರ್. 8 ತಾಯ್‌ಚುಂಗ್‌ನೇಟಿವ್ ಹೈಬ್ರಿಡ್‌ಜವಾರ್ ಮೆಕ್ಸಿಕನ್‌ವೀಟ್ ಹೀಗೆ ಅನೇಕ ಹೊಸ ಹೊಸ ಬೀಜಗಳು ಬಂದಿವೆ. ಈಗ ದೇಶದಲ್ಲಿ ಒಂದು ಆಂದೋಳನ ನಡೆಯುತ್ತಿದೆ. ನಮ್ಮಲ್ಲಿ ಹಿಂದೆ ಒಂದು ಎಕರೆಗೆ 4–5 ಕ್ವಿಂಟಾಲ್ ಬತ್ತವನ್ನು ಬೆಳೆಯುತ್ತಿದ್ದರು. ಈ ದಿವಸ ರೈತನಾದವನು 10 ರಿಂದ 20–25 ಕ್ವಿಂಟಾಲ್‌ವರೆಗೂ ಬೆಳೆಯುತ್ತಾನೆ. ಹೈಬ್ರಿಡ್ ಬೀಜಗಳ ಉಪಯೋಗ ಈಗ ಹೆಚ್ಚುಹೆಚ್ಚಾಗಿ ಆಗುತ್ತಿದೆ. ಈ ಒಂದು ಹೈಬ್ರಿಡ್ ಬೀಜಗಳ ಉತ್ಪನ್ನ ನ್ಯಾಷನಲ್ ಸೀಡ್ ಕಾರ್ಪೊರೇಷನ್ ಆಯೋಗದಲ್ಲಿ ನಡೆಯುತ್ತಿದೆ. ಈ ಬೀಜಗಳ ಶೇಖರಣೆ ಮತ್ತು ಅವುಗಳ ವಿಲೇವಾರಿ ಬಗ್ಗೆ ಸಂಸ್ಥಾನ ಸರ್ಕಾರದವರು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಹೈಬ್ರಿಡ್ ಬೀಜಗಳ ಬಗ್ಗೆ ಸರ್ಕಾರ ಏನೊಂದು ಸೌಲಭ್ಯ ಈಗ ರೈತರಿಗೆ ಕೊಡುತ್ತಿದೆಯೋ ಅದು ಏನೇನೂ ಸಾಲದು. ಇದರ ಬಗ್ಗೆ ಉದಾಸೀನ ಭಾವನೆ ಮಾಡಿಕೊಂಡರೆ ಕೇವಲ ಗ್ಯಾಂಬ್ಲಿಂಗ್ ಆಗುತ್ತದೆ. ಬೀಜಗಳ ಉತ್ಪನ್ನ ಕಡಿಮೆಯಾಗುವುದು ಎಂಬ ಶಂಕೆ ನನಗೆ ಬಂದಿದೆ. ಇದರ ಉತ್ಪತ್ತಿಮಾಡುವುದು ಬಹಳ ಕಷ್ಟ. ವೆಚ್ಚ ಜಾಸ್ತಿ. ಆದ್ದರಿಂದ ಸಂಸ್ಥಾನ ಸರ್ಕಾರ ಇದರ ಬಗ್ಗೆ ಒಂದು ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು ಯಾವ್ಯಾವ ವರ್ಷದಲ್ಲಿ ಎಷ್ಟೆಷ್ಟು ಬೀಜಗಳನ್ನು ಉತ್ಪನ್ನಮಾಡಬೇಕು ಎಂಬುದನ್ನು ತಿಳಿದು ಮೂಲ ಬೀಜಗಳ ವಿಲೇವಾರಿ ಜಾಗ್ರತೆಯಾಗಿ ಆಗಬೇಕು. ಈ ಬೀಜಗಳನ್ನು ಬೆಳೆಯುವಂಥ ರೈತರಿಗೆ ಸಾಕಷ್ಟು ಸೌಲಭ್ಯಗಳನ್ನು ಸರ್ಕಾರ ಕೊಡಬೇಕು. ಈ ಬೀಜಗಳನ್ನು ಬೆಳೆದನಂತರ ತಕ್ಷಣ ಅದಕ್ಕೆ ಮಾರ್ಕೆಟ್ ಸಿಗುತ್ತಾ ಇಲ್ಲ. ಸರ್ಕಾರದವರು ಅದಕ್ಕಾಗಿ ಹಣವನ್ನು ಅಡ್ವಾನ್ಸ್‌ಮಾಡಿ, ಹಿಂದುಮುಂದು ನೋಡದೆ ಎಷ್ಟು ನಷ್ಟವಾದರೂ ಪರವಾಇಲ್ಲ, ಈ ಕೆಲಸವನ್ನು ಮಾಡಬೇಕು. ಆದರೆ ಬೀಜಗಳ ಉತ್ಪಾದನೆ ಸಾಕಷ್ಟು ವ್ಯವಸ್ಥೆ ಇಲ್ಲ. ದಾಸ್ತಾನಿಗೂ ವ್ಯವಸ್ಥೆ ಇಲ್ಲ. ಅದಕ್ಕೆ ಏರ್ ಕಂಡೀಷನ್ ವ್ಯವಸ್ಥೆ ಬೇಕು. ವೇರ್‌ಹೌಸಿಂಗ್ ಕಾರ್ಪೊರೇಷನ್ನಿನವರಲ್ಲಿ ಮೊರೆ ಹೋಗಬೇಕು. ಇದರ ಬಗ್ಗೆ ಟಾಪ್ ಪ್ರಯಾರಿಟಿ ಕೊಟ್ಟು ಅದಕ್ಕೆ ಹೆಚ್ಚಿನ ಅವಕಾಶ ಕೊಟ್ಟರೆ ಬೀಜಗಳ ಶೇಖರಣೆ ಬಗ್ಗೆ ಅನುಕೂಲವಾಗುತ್ತದೆ. ಜೊತೆಗೆ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಬೀಜಗಳನ್ನು ಶೇಖರಣೆ ಮಾಡಲು ಏರ್ ಕಂಡೀಷನ್ಡ್ ಗೋಡೌನ್ ಕೊಟ್ಟರೆ ಬೀಜಗಳ ಗುಣವನ್ನು ಒಳ್ಳೆಯ ರೀತಿಯಿಂದ ಕಾಪಾಡಬಹುದು. ಇಲ್ಲಿ ಅನೇಕರು, ಬೀಜಗಳು ಮೊಳಕೆ ಬರದೆ ಅನೇಕ ಕಡೆ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಅದಕ್ಕೆ ಈ ರೀತಿ ಮಾಡಿದರೆ ಕೊಂಡುಕೊಳ್ಳುವವನಿಗೂ ಗ್ಯಾರಂಟಿ ಸಿಗುತ್ತದೆ. ಅದೇ ರೀತಿ ಬೀಜಗಳಿಗೆ ಸರ್ಟಿಫಿಕೇಟ್ ಕೊಡುವಂತದನ್ನು ಇನ್ನು ಮುಂದೆ ರಾಜ್ಯ ಸರ್ಕಾರದವರೇ ವಹಿಸಿಕೊಳ್ಳುತ್ತಾರೆಂದು ತಿಳಿದುಬಂದಿದೆ. ಅಡರ್ಲ್ಟೇಷನ್ ಆಗಿ, ಬೆಳೆಯುವವನಿಗೂ, ಕೊಳ್ಳು

ವವನಿಗೂ ತೊಂದರೆಯಾಗುತ್ತದೆ, ಮತ್ತು ಕೆಟ್ಟ ಹೆಸರೂ ಬರುತ್ತದೆ. ಆದ್ದರಿಂದ ಸರ್ಟಿಫಿಕೇಟ್ ಬಗ್ಗೆ ಎಚ್ಚರಿಕೆ ವಹಿಸಬೇಕು. ಅದಷ್ಟು ಜಾಗ್ರತೆ ಈ ಸೀಡ್ ಆಕ್ಟ್‌ನ್ನು ಜಾರಿಗೆ ತಂದರೆ ಬಹಳ ಒಳ್ಳೆಯದು. ಎಷ್ಟು ಜಾಗ್ರತೆ ಸೀಡ್ ಆಕ್ಟ್ ಬಂದರೆ, ಅಷ್ಟು ಒಳ್ಳೆಯದು. ಅದನ್ನು ಇಲಾಖೆ ಯವರು ಜಾಗ್ರತೆ ತರುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸಲಹೆಮಾಡುತ್ತೇನೆ.

ಜೊತೆಗೆ ಕೃತಕ ಗೊಬ್ಬರದ ವಿಚಾರ. ಹಿಂದೆ ಕೃತಕ ಗೊಬ್ಬರದ ಅಭಾವ ಇದ್ದಾಗ, ಅನೇಕ ರೈತರು ಬ್ಲಾಕ್ ಮಾರ್ಕೆಟ್ಟಿನಿಂದ ಕೊಂಡುಕೊಳ್ಳುತ್ತಿದ್ದರು. ಈಗ ಕೃತಕ ಗೊಬ್ಬರ ಹೆಚ್ಚಿನ ಮಟ್ಟದಲ್ಲಿ ಸರಬರಾಜು ಆಗುತ್ತಾ ಇದೆ, ಮತ್ತು ಜಾಗ್ರತೆ ರೈತರಿಗೆ ಸಿಗುತ್ತದೆ. ಆದರೆ ಕೇಂದ್ರ ಸರ್ಕಾರದವರು ಇದರ ಧಾರಣೆಯನ್ನು ಜಾಸ್ತಿ ಮಾಡಿ, ಕೊಳ್ಳುವ ರೈತನಿಗೆ ಬಹಳ ಅನಾನುಕೂಲ ಮತ್ತು ಹೊರೆಯಾಗಿದೆ. ಆ ಒಂದು ದೃಷ್ಟಿಯಿಂದ ಅದರ ಬೆಲೆಯನ್ನು ಕಡಿಮೆಮಾಡಿ, ಅದನ್ನು ಒಂದು ವ್ಯಾಪಾರದ ಲಾಭದ ದೃಷ್ಟಿಯಿಂದ ನೋಡದೆ, ರೈತರಿಗೆ ಸಿಗುವಹಾಗೆ ಮಾಡಬೇಕೆಂದು ಹೇಳುತ್ತೇನೆ. ಅದೇ ರೀತಿ ಇವತ್ತು ವಿದ್ಯುಚ್ಛಕ್ತಿ ದರವನ್ನೂ ಕೂಡ ಹೆಚ್ಚು ಮಾಡುತ್ತಾರೆಂದು ಪೇಪರಿನಲ್ಲಿ ನಾನು ಓದಿದ್ದೇನೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಅಷ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುತ್ತಿರುವಾಗ ಈ ದರವನ್ನು ಹೆಚ್ಚು ಮಾಡತಕ್ಕದ್ದು ಸರಿಯಲ್ಲ. ಆದ್ದರಿಂದ ಅದಷ್ಟು ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ನಮ್ಮ ರಾಜ್ಯಸರ್ಕಾರದವರು ಒದಗಿಸುವಂತೆ, ದರಗಳ ಪುನ ರ್ವಿಮರ್ಶೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಅಗ್ರೋ ಇಂಡಸ್ಟ್ರೀಸ್, ಕಾರ್ಪೊರೇಷನ್ ಮುಖಾಂತರ ಟ್ರಾಕ್ಟರ್ಸ್, ಪವರ್ ಟೆಲ್ಲರ್ಸ್ ಮುಂತಾದ ವ್ಯವಸಾಯ ಉಪಕರಣಗಳನ್ನು ಕೊಡುತ್ತಿದ್ದಾರೆ. ಹಿಂದೆ ಇಲಾಖೆಯವರು ಕೊಡುತ್ತಿದ್ದರು. ಆಗ ಶೇಕಡಾ 5 ಬಡ್ಡಿ ಇತ್ತು. ಈಗ ಶೇಕಡಾ 9ರಂತೆ ಮಾಡಿದ್ದಾರೆ. ಅದನ್ನು ರಿಜಿಸ್ಟರ್ ಮಾಡಿಕೊಳ್ಳುವುದಕ್ಕೆ ಸಾಧಾರಣ 1,000 ರೂಪಾಯಿಯ ಸ್ಟಾಂಪ್ ಡ್ಯೂಟಿ ಕೊಡಬೇಕಾಗುತ್ತದೆ. ಆದ್ದರಿಂದ ಇದು ಬಹಳ ಜಾಸ್ತಿ ಯಾಗುವುದರಿಂದ ಇದನ್ನು ಪುನರ್ವಿಮರ್ಶೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಬೆಂಗಳೂರಿನ ಡೈರಿಯ ಬಗ್ಗೆ ಒಂದು ವಿಚಾರ. ಇದನ್ನು 1965ನೇ ಇಸವಿಯಲ್ಲಿ ಸದುದ್ದೇಶದಿಂದ ಸ್ಥಾಪನೆ ಮಾಡಿದರು. ಇದರಿಂದ ಬೆಂಗಳೂರಿನ ನಾಗರಿಕರಿಗೆ ಸುಲಭವಾಗಿ, ಶೀಘ್ರದಲ್ಲಿ ಹಾಲು ತಲುಪುವಂತೆ ಮಾಡಬೇಕೆಂದು ಮಾಡಿದ್ದರು. ಆದರೆ ಡೈರಿಯವರು ಅನುಸರಿಸ ತಕ್ಕ ರೀತಿ ನೀತಿಯನ್ನು ನೋಡಿದರೆ, ನಿಜವಾಗಿಯೂ ಸದುದ್ದೇಶದಿಂದ ಮಾಡುತ್ತಾರೆಯೋ, ಒಂದೂವರೆ ಕೋಟಿ ಬಂಡವಾಳದಿಂದ ಮಾಡಿದಂಥದ್ದನ್ನು ಸರಿಯಾಗಿ ನಡೆಸುತ್ತಿದ್ದಾರೆಯೋ ಎಂದು ಅನುಮಾನ ನಮ್ಮಲ್ಲಿ ಬಂದಿದೆ. ಉದಾಹರಣೆಗೆ ಹೋದ ಸಾರಿ 1968ರ ಬೇಸಿಗೆಯಲ್ಲಿ 80 ಸಾವಿರ ಲೀಟರ್ ಹಾಲು ಬರುತ್ತಿತ್ತು. ಇವತ್ತು 35 ಸಾವಿರ ಲೀಟರಿಗೆ ಅದನ್ನು ಇಳಿಸಿದ್ದಾರೆ. ಇದಕ್ಕೆ ನಾನಾ ಕಾರಣಗಳಿವೆ. ಇದರ ಬಗ್ಗೆ ಅನೇಕ ಮಿತ್ರರು ಮಾತನಾಡಿದ್ದಾರೆ. ಈಗ ದರಗಳನ್ನು 6 ತಿಂಗಳು, 3 ತಿಂಗಳಿಗೊಮ್ಮೆ ಪುನರ್ವಿಮರ್ಶೆ ಮಾಡುತ್ತಿದ್ದಾರೆ. ಅದಕ್ಕೆ ಏನಾದರೂ ಕಮಿಟಿ ಇದೆಯೇ, ರೈತನ ಯೋಗಕ್ಷೇಮವನ್ನು ನೋಡಿಕೊಂಡು ಪುನರ್‌ವಿಮರ್ಶೆ ಮಾಡುತ್ತಾರೆಯೇ? ಡೈರಿಯಲ್ಲಿ ಕೊಂಡುಕೊಳ್ಳುವ ಬೆಲೆಗೂ ಮಾರುವ ಬೆಲೆಗೂ ತುಂಬಾ ವ್ಯತ್ಯಾಸ ಇದೆ. ಇದರಿಂದ ಸಹಸ್ರಾರು ರೂಪಾಯಿ ಬೆಲೆಯ ಹಸುಗಳನ್ನು ಇಟ್ಟುಕೊಂಡಿರುವ ರೈತರಿಗೆ ತುಂಬಾ ನಷ್ಟ ವಾಗುತ್ತಿದೆ. ಅದರಿಂದ ದರಗಳನ್ನು ಪುನರ್‌ವಿಮರ್ಶೆ ಮಾಡಿ, ಸರಬರಾಜುದಾರರಿಗೆ ಬಹಳ ನಷ್ಟವಾಗುವುದನ್ನು ತಪ್ಪಿಸಬೇಕು. ಇಲ್ಲದಿದ್ದರೆ, ಒಂದಲ್ಲ ಒಂದು ದಿನ ಡೈರಿಗೆ ಹಾಲು ಕೊಡುವು ದನ್ನು ನಿಲ್ಲಿಸಬೇಕಾದ ಸಂದರ್ಭ ಬರುತ್ತದೆ. ಹೋದ ಸಾರಿ 25—30 ರೂಪಾಯಿ ಬೆಲೆಯ ಬೆಣ್ಣೆಯನ್ನು ಸುಟ್ಟು ಹಾಕಿದ್ದಾರೆಂದು ಕೇಳಿದ್ದೇನೆ. ಇದಕ್ಕೆ ಕಾರಣವೇನು? ಬೆಣ್ಣೆಗೆ ಮಾರ್ಕೆಟ್ ಇರಲಿಲ್ಲವೇ? ಅನೇಕ ಸಾರಿ ನಾನು ಕೂಡ ಅಲ್ಲಿನ ಅಧಿಕಾರಿಯ ಹತ್ತಿರ ಮಾತನಾಡಿದ್ದೇನೆ. ಮಾರ್ಕೆಟ್ಟಿನಲ್ಲಿ ಬೇಕಾದಷ್ಟು ಡಿಮ್ಯಾಂಡ್ ಇದೆ. ಮಾರ್ಕೆಟ್ ಬೆಲೆಗಿಂತ 10 ಪೈಸೆ ಕಡಿಮೆ ದರದಲ್ಲಿ ಬೇಕಾದರೂ ಕೊಡಿ ಎಂದು ಹೇಳಿದ್ದೇನೆ. ಇದನ್ನು ಕೇವಲ ಲಾಭದಾಯಕವಾದ ದೃಷ್ಟಿಯಲ್ಲಿ ಮಾತ್ರ ನಾವು ನೋಡಿದರೆ ಪ್ರಯೋಜನವಿಲ್ಲ. ಒಂದು ವೇಳೆ ಸ್ವಲ್ಪ ನಷ್ಟವಾದರೂ ಚಿಂತೆಇಲ್ಲ. ಅದರಿಂದ ಬಳಕೆದಾರರಿಗೂ, ಉತ್ಪಾದಕರಿಗೂ ಅನುಕೂಲವಾಗಬೇಕು. ಮತ್ತು ಇವತ್ತು ಅಲ್ಲಿನ ಡೈರಿಯ ಆಡಳಿತ ವರ್ಗವನ್ನು ಬದಲಾವಣೆ ಮಾಡಿದರೆ ಬಹಳ ಒಳ್ಳೆಯದು. ಅದರಿಂದ ನಮಗೂ ಒಳ್ಳೆಯ ಹೆಸರು ಅವರಿಗೂ ಒಳ್ಳೆಯ ಹೆಸರು. ಕೊನೆಯದಾಗಿ ಒಂದು ಮಾತುಗೆ ಈ ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸಯಿನ್ಸ್. ಒಳ್ಳೆಯ ಕೆಲಸ ಅವರು ಸ್ವಲ್ಪ ಮಾಡಿದ್ದಾರೆ. ಅವರು ಇನ್ನೂ ಹೆಚ್ಚು ಗಮನ ಸಂಶೋಧನೆಯ ಕಡೆ ಕೊಡಬೇಕು. ಮತ್ತು ಹೆಚ್ಚು ಹೆಚ್ಚು ಹೊಸ ಹೊಸ ತಳಿಯನ್ನು ಸಂಶೋಧನೆ ಮಾಡಿದರೆ ಒಳ್ಳೆಯದು. ಅದೇ ರೀತಿ ಅಗ್ರಿಕಲ್ಚರಲ್ ಇಂಜಿನಿಯರಿಂಗ್ ಇಲಾಖೆಯನ್ನೂ ಸುಧಾರಣೆ ಮಾಡಬೇಕು. ಅವರು ಒಂದು ವರ್ಷಕ್ಕೆ ಅರ್ಧ, ಮುಕ್ಕಾಲು ಬಾವಿಯನ್ನು ಮಾಡುತ್ತಿದ್ದಾರೆ. ಆದ್ದರಿಂದ ಹೆಚ್ಚು ಹೆಚ್ಚು ತೀವ್ರಗತಿಯಲ್ಲಿ ಕೆಲಸವನ್ನು ನಡೆಸ

(ಶ್ರೀ ಬಿ. ವೆಂಕಟರಾಯಪ್ಪ)

ಬೇಕು. ಇಲ್ಲದಿದ್ದರೆ ಆ ಇಲಾಖೆಯನ್ನೇ ಮುಚ್ಚಿ ಜಿಯಲಾಜಿಕಲ್ ಇಲಾಖೆಯವರಿಂದ, ಇಲ್ಲವೇ ಖಾಸಗೀಯವರಿಂದ ಮಾಡಿಸಿದರೆ ನಷ್ಟವಾಗುವುದನ್ನಾದರೂ ತಪ್ಪಿಸಬಹುದು ಎಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಸ್ವಾಮಿ ನಮ್ಮ ಮುಂದೆ ವ್ಯವಸಾಯ ಮಂತ್ರಿಯವರು ತಂದಿರತಕ್ಕಂತಹ 11 ಕೋಟಿ, 24 ಲಕ್ಷ, 39 ಸಾವಿರ ರೂಪಾಯಿಯ ಡಿಮ್ಯಾಂಡ್ ಏನಿದೆ, ಅದನ್ನು ವಿರೋಧಿಸುತ್ತಾ ಮಾತನಾಡುವುದು, ಅಥವಾ ಅನುಮೋದನೆ ಮಾಡಿ ಮಾತನಾಡತಕ್ಕಂತದ್ದು ಎಷ್ಟು ಸೂಕ್ತ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ನಾನು ಅನುಮೋದಿಸಲೂ ಬೇಕಾಗುತ್ತದೆ, ವಿರೋಧಿಸಲೂಬೇಕಾಗಿದೆ, ಎರಡನ್ನೂ ಜೊತೆಗೆ ಮಾಡಬೇಕಾಗುತ್ತದೆ. ಸ್ವಾಭಾವಿಕವಾಗಿ ಸರ್ಕಾರದ ಪ್ರತಿನಿಧಿಗಳು, ನಾವು ಏನು ಹೇಳುತ್ತೇವೆ ಅದನ್ನು ಕಾರ್ಯಗತ ಮಾಡಿದರೆ, ನಾವು ಸಲಹೆಯನ್ನು ಮಾಡುವುದರಿಂದ ಪ್ರಯೋಜನವಾಗುತ್ತದೆ. 67ನೇ ಇಸವಿಯಲ್ಲಿ ಈ ಇಲಾಖೆಯನ್ನು ವಹಿಸಿದ್ದಂತಹ, ದೇಶದ ಮುಖ್ಯಮಂತ್ರಿಯಾಗಿದ್ದವರು ನಾವು ರೈತರಿಗೆ ಕಡಿಮೆ ಬಡ್ಡಿಯಲ್ಲಿ ಹಣವನ್ನು ಒದಗಿಸಿದರೆ ಮಾತ್ರ ಅವರಿಗೆ ಅನುಕೂಲವಾಗುತ್ತದೆಂದು ಹೇಳಿದ್ದಾರೆ. ಇತ್ತೀಚೆಗೆ ದೇಶದಲ್ಲಿ ಏನು ಕೆಲಸ ಕಾರ್ಯಗಳು ನಡೆದಿವೆ ಎಂಬುದನ್ನು ನೋಡಬೇಕು. ಮುಖ್ಯ ಮಂತ್ರಿಯಾಗಿದ್ದವರು ಏನು ಹೇಳಿದ್ದಾರೆ, ಅದನ್ನು ಕಾರ್ಯತಃ ಮಾಡಿದ್ದಾರೆಯೇ? ನಮ್ಮ ದೇಶದ ಜನತೆಯ ಪ್ರೀತಿ ಗಳಿಸುವುದಕ್ಕೋಸ್ಕರ ಈ ರೀತಿ ಮಾತನಾಡುತಿದ್ದಾರಲ್ಲವೆ, ನಿಜವಾಗಿ ರೈತರ ಕಷ್ಟ ಸುಖಗಳನ್ನು ಅರಿತು ಮಾಡುತ್ತಾ ಇಲ್ಲ. ಇವತ್ತು ಸರ್ಕಾರದವರು ಆಡಿದಂತೆ ಮಾಡಿ, ರೈತ ವರ್ಗದವರಿಗೆ ಬೇಕಾದ ಸಹಾಯವನ್ನು ಒದಗಿಸಿ, ಅವರು ಒಂದು ಸುಖವನ್ನು ಕಾಣುವಂತೆ ಮಾಡಬೇಕು. ಅವರ ಅಗತ್ಯತೆಯನ್ನು ಕಂಡು ಅದನ್ನು ಪೂರೈಸಿ, ಅವರು ಶಾಂತಿಯುತವಾಗಿ ತಮ್ಮ ಜೀವನವನ್ನು ನಡೆಸುವುದಕ್ಕೆ ಸರ್ಕಾರದವರು ಸಹಾಯವನ್ನು ಮಾಡಬೇಕು, ಆ ರೀತಿಯಲ್ಲಿ ಕೆಲಸಕಾರ್ಯಗಳನು ಮಾಡಬೇಕು.

7-00 P.M.

ನೀರಾವರಿ ಬಾವಿಗಳನ್ನು ತೆಗೆಯಲು ರಿಯಾಯಿತಿ ಬಡ್ಡಿ ದರದಲ್ಲಿ, ಕಡಿಮೆ ಬಡ್ಡಿ ದರದಲ್ಲಿ ರೈತರಿಗೆ ಸರ್ಕಾರದವರು ದೀರ್ಘಾವಧಿ ಸಾಲವನ್ನು ಕೊಟ್ಟರೆ ರೈತಾಪಿ ಜನಗಳಿಗೆ ಎಲ್ಲಾ ಸಹಾಯವನ್ನೂ ನೀಡಿದಂತಾಗುತ್ತದೆ. ಆದ್ದರಿಂದ ಕಡಿಮೆ ಬಡ್ಡಿ ದರದಲ್ಲಿ ನೀರಾವರಿ ಬಾವಿಗಳನು ತೆಗೆಯಲು ರೈತರಿಗೆ ದೀರ್ಘಾವಧಿ ಸಾಲವನ್ನು ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. 1967ನೇ ಇಸವಿಯಲ್ಲಿ ಈ ವ್ಯವಸಾಯ ಇಲಾಖೆಯ ಮಂತ್ರಿಗಳಾಗಿದ್ದ ಮಾನ್ಯ ಮುಖ್ಯಮಂತ್ರಿಗಳಿಗೇ ಈ ಬಗ್ಗೆ ಬಹಳ ವಿಶಾದವಾಗಿ ಹೇಳಿದ್ದೇವೆ. ಆದ್ದರಿಂದ ಇದನ್ನು ಈ ಇಲಾಖೆಯ ಮಂತ್ರಿಗಳು, ಮತ್ತು ಮುಖ್ಯ ಮಂತ್ರಿಗಳು ವಿಚಾರ ಮಾಡಿ ಆ ಒಂದು ಸೌಲಭ್ಯವನ್ನು ರೈತಾಪಿ ಜನಗಳಿಗೆ ಒದಗಿಸಿ ಕೊಡುವುದಾದರೆ ಅದರಿಂದ ಅವರು ಎಷ್ಟೋ ಅಭಿವೃದ್ಧಿ ಆಗಬಹುದು ಎಂದು ಗೊತ್ತಾಗುತ್ತದೆ. ಆ ಒಂದು ಕಾರ್ಯವನ್ನು ಸರ್ಕಾರದವರು ಮಾಡದೇ ಹೋದರೆ ಜನ ಸರ್ಕಾರದಿಂದ ಏನೊಂದು ಸಹಾಯವನ್ನು ನಿರೀಕ್ಷಣೆ ಮಾಡಿದ್ದರೋ ಅದನ್ನು ಸರ್ಕಾರದವರು ರೈತರಿಗೆ ಒದಗಿಸಿ ಕೊಟ್ಟಂತಾಗುವುದಿಲ್ಲ. ಇದರಿಂದಾಗಿ ಅವರ ಮನಸ್ಸಿನಲ್ಲಿ ಒಂದು ಕೆಟ್ಟ ಪರಿಣಾಮ ಉಂಟಾಗುವುದಕ್ಕೆ ಅವಕಾಶವಾಗುತ್ತದೆ. ಅದಕ್ಕೆ ಅವಕಾಶ ಕೊಡದಂತೆ ಸರ್ಕಾರದವರು ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು. ಈ ಇಲಾಖೆಯ ಮಾನ್ಯ ಮಂತ್ರಿಗಳೂ ಸಹ ಒಳ್ಳೆಯ ಹಾಗೂ ಹೆಚ್ಚು ಕೆಲಸ ಮಾಡತಕ್ಕವರು ಎಂದು ನಮ್ಮ ಕಡೆ ಇರತಕ್ಕ ಅನೇಕರು ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಅದನ್ನು ಗಮನದಲ್ಲಿಟ್ಟುಕೊಂಡು ರೈತರಿಗೆ ಆ ಒಂದು ಸೌಲಭ್ಯವನ್ನು ದೊರಕಿಸಿ ಕೊಡುತ್ತಾರೆ ಎಂದು ನಾನು ನಂಬಿದ್ದೇನೆ.

ಇನ್ನೊಂದು ವಿಷಯ. ಸಾಯಿಲ್ ಕನ್‌ಸರ್‌ವೇಷನ್ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈ ದೃಷ್ಟಿಯಿಂದ ನಾನು ಒಂದು ವಿಷಯವನ್ನು ಸರ್ಕಾರದವರ ಅವಗಾಹನೆಗೆ ತರುತ್ತೇನೆ. ಅದು ಏನೆಂದರೆ ತೆಂಗಿನತೋಟಗಳಿಗೆ ಒಡ್ಡುಗಳನ್ನು ಅಣೆಕಟ್ಟುಗಳನ್ನು ಹಾಕಬೇಕೆಂದು 1968ನೇ ಇಸವಿಯಿಂದ ಈಚೆಗೆ ನಾವು ಸರ್ಕಾರಕ್ಕೆ ಹೆಚ್ಚು ಒತ್ತಾಯ ಮಾಡಿದ್ದೇವೆ. ಆ ಕೆಲಸವನ್ನು ಮೈನರ್ ಇರಿಗೇಷನ್ ಮುಖಾಂತರ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಮಾಡಿಕೊಡುತ್ತಿದ್ದರು. ಆಮೇಲೆ ಅವರು ಆ ಕೆಲಸವನ್ನು ಮಾಡುವುದನ್ನು ನಿಲ್ಲಿಸಿದರು. ಅದನ್ನು ವಿಚಾರ ಮಾಡಿ

ಆ ಕೆಲಸವನ್ನು ಮಾಡಿಸಿಕೊಡಬೇಕೆಂದು ನಾನು ಅನೇಕ ಸಾರಿ ಸರ್ಕಾರಕ್ಕೆ ಕಾಗದ ಬರೆದಿದ್ದೇನೆ. ಮುಖ್ಯಮಂತ್ರಿಗಳಿಗೂ ಈ ಬಗ್ಗೆ ನಾನು ಕಾಗದವನ್ನು ಬರೆದಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಮನವಿಯನ್ನು ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟಿಗೆ ಕಳುಹಿಸಿದ್ದಾರೆಂದು ಗೊತ್ತಾಯಿತು. ಆಮೇಲೆ ಮೈನರ್ ಇರಿಗೇಷನ್ ಮಂತ್ರಿಗಳಾದ ಶ್ರೀಮಾನ್ ದೊಡ್ಡಮೇಟಿಯವರಿಗೆ ಕಾಗದವನ್ನು ಬರೆದರೆ ಅವರು ಪಿ.ಡಬ್ಲ್ಯು. ಸೆಕ್ರೆಟರಿಯವರು ಆ ಬಗ್ಗೆ ಕ್ರಮ ತೆಗೆದುಕೊಂಡು ಪತ್ರ ಬರೆಯುತ್ತಾರೆ ಎಂದು ಹೇಳಿದ್ದಾರೆ. ಆ ವಿಚಾರ ಏನಾಯಿತು ಎಂಬುದು ಗೊತ್ತಾಗಲಿಲ್ಲ. ಈ ವಿಚಾರದಲ್ಲಿ ನಾನು ಮೊನ್ನೆ ಪ್ರಶ್ನೆ ಕೇಳಿದಾಗ ಮಾನ್ಯ ನೀರಾವರಿ ಮಂತ್ರಿಗಳು ಹೇಳಿದರು. ಆ ತೆಂಗಿನ ಮರಗಳಿಗೆ ಒಡ್ಡು ಹಾಕುವ ಕೆಲಸವನ್ನು ಸಾಯಿಲ್ ಕನ್‌ಸರ್‌ವೇಶನ್ ಮುಖಾಂತರ ಮಾಡಿಸಿಕೊಡುತ್ತೇವೆಂದು. ಆದರೆ ಆ ಬಗ್ಗೆ ಹಣ ಒದಗಿಸಿರುವುದು ಬಜೆಟ್ಟಿನಲ್ಲಿ ಹುಡುಕಿದರೂ ಕಾಣುವುದಿಲ್ಲ. ನಮ್ಮ ರಾಜ್ಯದಲ್ಲಿ ಮುಖ್ಯವಾಗಿ ನಾಲ್ಕು ತಾಲ್ಲೂಕುಗಳಲ್ಲಿ ವಿಶೇಷವಾಗಿ ತೆಂಗಿನ ಫಸಲು ಇವೆಯೆಂಬುದು ಸರ್ಕಾರಕ್ಕೂ ಕೂಡ ಮನವರಿಕೆಯಾಗಿದೆ. ಆದರೂ ಸಹ ಈ ತೆಂಗಿನ ಬೆಳೆಯ ಅಭಿವೃದ್ಧಿಯ ಬಗ್ಗೆ ಸರ್ಕಾರದವರು ಸಾಕಷ್ಟು ಗಮನಕೊಟ್ಟು ಅದರ ಬೆಳವಣಿಗೆಗೆ ಬೇಕಾದಂತಹ ಸೌಲಭ್ಯಗಳನ್ನು ಸರಿಯಾಗಿ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತಾ ಇಲ್ಲ. ತಿಪಟೂರು ತಾಲ್ಲೂಕಿನಲ್ಲಿ ಬೆಳೆಯುತಕ್ಕ ತೆಂಗಿನ ಕಾಯಿ ಮತ್ತು ಕೊಬ್ಬರಿ ಪ್ರಪಂಚದಲ್ಲೇ ಹೆಸರುವಾಸಿಯಾಗಿದೆ ಇಂಥಾದ್ದನ್ನು ಸರಿಯಾಗಿ ಬೆಳೆಸದೇಹೋದರೆ ಹೇಗೆ ಸಾಧ್ಯ ? ತಿಪಟೂರು, ತುರುವೇಕೆರೆ, ಗುಬ್ಬಿ ಮತ್ತು ಅರಸಿಕೆರೆ ಈ ತಾಲ್ಲೂಕುಗಳಲ್ಲಿ ತೆಂಗು ವಿಶೇಷವಾಗಿ ಬೆಳೆಯುತ್ತದೆ ಈ ತಾಲ್ಲೂಕುಗಳಲ್ಲಿ ಒಟ್ಟು $1\frac{1}{4}$ ಲಕ್ಷ ಎಕರೆಯಲ್ಲಿ ತೆಂಗಿನ ಬೆಳೆಯನ್ನು ಬೆಳೆಯುತ್ತಾರೆ. ತೆಂಗಿನ ತೋಟಗಳಿಗೆ ಪಿಕಪ್‌ಗಳನ್ನು ಒಡ್ಡುಗಳನ್ನು ಮೈನರ್ ಇರಿಗೇಷನ್ ಫಂಡಿನಿಂದ ಲೋಕೋಪಯೋಗಿ ಇಲಾಖೆಯಿಂದ ಹಾಕದೆ ಇದ್ದರೆ ಸಾಯಿಲ್ ಕನ್‌ಸರ್‌ವೇಶನ್‌ನಲ್ಲಿ ಬಹಳಮಟ್ಟಿಗೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಸರ್ಕಾರದವರು ಸಾಕಷ್ಟು ಆಸಕ್ತಿಯನ್ನು ವಹಿಸದೇಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಯಾವ ಇಲಾಖೆಯ ಮುಖಾಂತರವೇ ಆಗಲೀ ಈ ತೆಂಗಿನ ಬೆಳೆಯ ಅಭಿವೃದ್ಧಿಯ ಬಗ್ಗೆ ಮಾಡಬೇಕಾದ ಕೆಲಸಗಳಿಗೆ ಹಣವನ್ನು ಒದಗಿಸಿ ಈ ಕೆಲಸಗಳನ್ನು ಮಾಡಿಸಿಕೊಡಬೇಕೆಂದು ನಾನು ಹೇಳುತ್ತೇನೆ. ಈಗ $1\frac{1}{4}$ ಲಕ್ಷ ಎಕರೆಯಲ್ಲಿ ತೆಂಗು ಇದೆ. ಇನ್ನೂ $4\frac{1}{2}$ ಲಕ್ಷ ಎಕರೆಯಲ್ಲಿ ತೆಂಗನ್ನು ಬೆಳೆಯುವಂತಹ ಭೂಮಿ ನಮ್ಮಲ್ಲಿ ಇದೆ. ಆದರೆ ಆ ಭೂಮಿಯಲ್ಲಿ ತೆಂಗಿನಗಿಡಗಳನ್ನು ಬೆಳೆಸುವುಕ್ಕೆ ರೈತರಿಗೆ ಸಾಕಷ್ಟು ಶಕ್ತಿ ಇಲ್ಲ. ಅಗ್ರೋ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಮುಖಾಂತರವಾಗಲೀ, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರವಾಗಲೀ ಇದಕ್ಕೆ ಹಣವನ್ನು ಒದಗಿಸಿ, ರೈತರು ತೆಂಗಿನ ಬೆಳೆಯನ್ನು ಬೆಳೆಸುವುದಕ್ಕೆ ಸರ್ಕಾರದವರು ಸಹಾಯಮಾಡಬೇಕೆಂದು ನಾನು ಹೇಳುತ್ತೇನೆ. ತಿಪಟೂರಿನ ತೆಂಗು ಪ್ರಪಂಚದಲ್ಲೇ ಹೆಸರುವಾಸಿಯಾದ, ರುಚಿಯಾದ ಮತ್ತು ಹೆಚ್ಚು ಮಾರ್ಕೆಟ್ ಬೆಳೆ ಇರತಕ್ಕದ್ದು. ಇಂಥಾ ತೆಂಗಿನ ಬೆಳೆಯನ್ನು ಇನ್ನೂ ಹೆಚ್ಚುಕ್ಷೇತ್ರದಲ್ಲಿ ಚೆನ್ನಾಗಿ ಬೆಳೆಯುವುದಕ್ಕೆ ಸರ್ಕಾರದವರು ರೈತರಿಗೆ ಹೆಚ್ಚಿನ ಸಹಾಯ ಸೌಲಭ್ಯವನ್ನು ನೀಡಬೇಕು ಎಂದು ನಾನು ಹೇಳುತ್ತೇನೆ. ಸರ್ಕಾರದವರು ತೆಂಗಿನ ಗಿಡಗಳಿಗೆ ಒಡ್ಡು ಹಾಕಿಸುವಂತಹ ಕೆಲಸವನ್ನು ಯಾವುದೇ ಇಲಾಖೆಯ ಮುಖಾಂತರವಾದರೂ ಮಾಡಿಸಲಿ ಆ ಕೆಲಸವನ್ನು ಮಾಡಿಸಿಕೊಡುವುದು ಅವರ ಕರ್ತವ್ಯ, ತೆಂಗಿನ ಮರಗಳಿಗೆ ಹಣಬೆ ರೋಗ ಬರುತ್ತದೆ. ಈ ರೋಗವನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇಹೋದರೆ ತೆಂಗಿನ ಬೆಳೆಯನ್ನು ಮಾಡತಕ್ಕ ರೈತನಿಗೆ ತುಂಬಾ ತೊಂದರೆಯಾಗುತ್ತದೆ. ತೆಂಗಿನ ಮರಕ್ಕೆ ಈ ಹಣಬೆರೋಗ ಬಂದರೆ ಆ ಮರವನ್ನೇ ತೆಗೆದರೆ ಅನುಕೂಲವಾಗುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇಂಥಾ ಪ್ರಯೋಗಗಳನ್ನು ಮಾಡಿ ರೈತ ತೆಂಗಿನ ಗಿಡಗಳನ್ನು ಕಾಪಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. 300 ವರ್ಷಗಳ ಕಾಲ ರೈತನಿಗೆ ಸಹಾಯ ಮಾಡತಕ್ಕಂಥ ತೆಂಗಿನ ಮರ, ಕಲ್ಪವೃಕ್ಷ ಎನಿಸಿದೆ ಇದರ ಅಭಿವೃದ್ಧಿಯ ಬಗ್ಗೆ ಸರ್ಕಾರದವರು ಗಮನಕೊಟ್ಟು ಇದಕ್ಕೆ ಬರತಕ್ಕಂಥ ರೋಗವನ್ನು ತಡೆಗಟ್ಟದೇ ಹೋದರೆ ರೈತ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ತೆಂಗಿನ ಮರದ ರಕ್ಷಣೆ ಬಹಳ ಮುಖ್ಯವಾದುದ್ದು. ತೆಂಗಿನ ಮರಗಳಿಗೆ ಈ ಹಣಬೆ ರೋಗ ಬಂದು ಸಾವಿರಾರು ಎಕರೆಯಲ್ಲಿರತಕ್ಕ ತೆಂಗು ಹಾಳಾಗುತ್ತಿದೆ ಆದ್ದರಿಂದ ಇದನ್ನೆಲ್ಲಾ ಸರ್ಕಾರದವರು ವಿಚಾರಣೆ ಮಾಡಿ ಅದರ ರಕ್ಷಣೆಗೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು ಮತ್ತು ತೆಂಗಿನ ಮರದ ಅಭಿವೃದ್ಧಿಯ ಬಗ್ಗೆ ಮಾಡಬೇಕಾದ ಕೆಲಸವನ್ನು ಸರ್ಕಾರದವರು ಮಾಡಿಕೊಡಬೇಕೆಂದು ನಾನು ಈ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

(ಶ್ರೀ ವಿ. ಎಲ್. ಶಿವಪ್ಪ)

ಇನ್ನೊಂದು ವಿಷಯ. ಅರಣ್ಯ ಇಲಾಖೆಯ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ಖಾಸಗೀ ಜಮೀನುಗಳಲ್ಲಿ ಗಂಧದ ಮರ ಬೆಳೆದರೆ ಅದು ಶತ್ರು ಎಂದು ತಿಳಿದುಕೊಂಡಿದ್ದಾರೆ. ಈ ಬಗ್ಗೆ ಹಿಂದೆ ಇದ್ದಂತಹ ಕಾನೂನೇ ಈಗಲೂ ಇದೆ. ಈ ಗಂಧದ ಮರವನ್ನು ಯಾರಾದರು ಮುರಿದು ಹಾಕಿದರೆ ರೆವಿನ್ಯೂ ಇಲಾಖೆಯವರೂ ಶಿಕ್ಷೆ ಮಾಡುತ್ತಾರೆ, ಮತ್ತು ಫಾರೆಸ್ಟ್ ಇಲಾಖೆಯವರೂ ಶಿಕ್ಷೆ ಮಾಡುತ್ತಾರೆ. ಇದರಿಂದ ಈಗ ಏನಾಗಿದೆ ಎಂದರೆ ದೇಶಕ್ಕೆ ಬರತಕ್ಕಂಥ ಉತ್ಪತ್ತಿ ಕಡಿಮೆಯಾಗಿದೆ. ರೈತನ ಹೊಲದಲ್ಲಿ ಈ ಗಂಧದ ಸಸಿ ಏನಾದರೂ ಹುಟ್ಟಿದರೆ ಅವನು ಸರ್ಕಾರದವರ ಶಿಕ್ಷೆಯ ಭಯದಿಂದ ಅವನ್ನು ತನ್ನ ಪರಮ ಶತ್ರುವಿನೋಪಾದಿಯಲ್ಲಿ ಕಾಣುತ್ತಾನೆ. ನಿಕೃಷ್ಟಭಾವನೆಯಿಂದ ಕಾಣುತ್ತಾನೆ. ಏತಕ್ಕೆಂದರೆ ಮಾನ ಮರ್ಯಾದೆಗೋಸ್ಕರ ರೈತ ಅಂಜಿಕೆಯಿಂದ ನಡೆದುಕೊಳ್ಳುತ್ತಾನೆ. ರೈತನ ಜಮೀನಿನಲ್ಲಿರತಕ್ಕ ಗಂಧದ ಮರ ಆಕಸ್ಮಿಕವಾಗಿ ಏನಾದರೂ ಮುರಿದರೆ, ನಾಶವಾದರೆ ರೈತನನ್ನು ಸರ್ಕಾರದವರು ಹೆರಾಸ್ ಮಾಡುವುದು ಅವನ ಮೇಲೆ ಕ್ರಿಮಿನಲ್ ಕೇಸ್ ಹಾಕುವುದು ಇಂಥವುಗಳೆಲ್ಲಾ ನಡೆಯುತ್ತಿವೆ. ಇದರಿಂದಾಗಿ ರೈತನ ಮಾನ ಮರ್ಯಾದೆಯನ್ನು ಹಾಳುಮಾಡುತ್ತಾರೆ. ಇಂಥಾ ಒಂದು ಪರಿಸ್ಥಿತಿ ಇರುವುದರಿಂದ ಈ ಗಂಧದ ಮರಗಳಿಂದ ರೈತನಿಗೂ ಉಪಯೋಗವಾಗುವುದಿಲ್ಲ. ದೇಶಕ್ಕೂ ಉತ್ಪತ್ತಿ ಬರುವುದಿಲ್ಲ. ಇದನ್ನೆಲ್ಲಾ ಸರ್ಕಾರದವರು ವಿಮರ್ಶೆ ಮಾಡಿ ಈಗ ಇರತಕ್ಕ ಕಾನೂನನ್ನು ಬದಲಾವಣೆ ಮಾಡಿ ಗಂಧದ ಮರವನ್ನು ಬೆಳೆಸತಕ್ಕ ವಿಧಾನದಲ್ಲಿ ರೈತನಿಗೂ ಪೂರ್ಣ ಅಧಿಕಾರವನ್ನು ಕೊಟ್ಟು, ಅದರಲ್ಲಿ ಅವನಿಗೂ ಅನುಕೂಲವಾಗುವಂತೆ ಮಾಡಿದರೆ ಒಳ್ಳೆಯದು ಮತ್ತು ಸರ್ಕಾರಕ್ಕೂ ಹೆಚ್ಚು ಉತ್ಪತ್ತಿ ಬರುತ್ತದೆ. ಈ ದೃಷ್ಟಿಯಿಂದ ಈಗ ಇರತಕ್ಕ ಕಾನೂನನ್ನು ಬದಲಾವಣೆ ಮಾಡಿ ಗಂಧದ ಮರವನ್ನು ಬೆಳೆಸುವ ಬಗ್ಗೆ ರೈತನಿಗೂ ಪ್ರೋತ್ಸಾಹ ಕೊಡುವ ರೀತಿಯಲ್ಲಿ ಮಾಡಿದರೆ ಗಂಧದ ಮರಗಳನ್ನು ರೈತ ಇನ್ನೂ ಫಲವತ್ತಾಗಿ ಬೆಳೆಯುತ್ತಾನೆ. ಅಂಥಾ ಒಂದು ಅವಕಾಶವನ್ನು ಸರ್ಕಾರದವರು ಮಾಡಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ತುಮಕೂರು ಜಿಲ್ಲೆಯಲ್ಲಿ ಜನಗಳಿಗೆ ತುಂಬಾ ಕಷ್ಟಪರಿಸ್ಥಿತಿ ಇದೆ. ಅಲ್ಲಿ ನೀರಾವರಿ ಪ್ರದೇಶ 6 ಪರ್ಸೆಂಟ್‌ಗಿಂತ ಜಾಸ್ತಿ ಇಲ್ಲ. ಅದರಲ್ಲಿಯೂ ತಿಪಟೂರು ತಾಲ್ಲೂಕಿನಲ್ಲಿ 3 ಪರ್ಸೆಂಟ್ ನೀರಾವರಿಗಿಂತ ಜಾಸ್ತಿ ಇಲ್ಲ. ಆ ತಾಲ್ಲೂಕಿನಲ್ಲಿ ಕೆರೆ ಕಟ್ಟೆಗಳ ನಿರ್ಮಾಣ ಮತ್ತು ರಿಪೇರಿ ವಿಷಯದಲ್ಲಿ ಸರಕಾರ ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ. ಇದು ಸರಿಯಲ್ಲ. ತೆಂಗಿನ ತೋಟಗಳಿಗೆ ಒಡ್ಡು ಹಾಕಿಸುವ ಕೆಲಸವನ್ನೂ ಸರ್ಕಾರದವರು ಶೀಘ್ರವಾಗಿ ಮಾಡಿಸಿಕೊಡಬೇಕು. ಈಗ ಕೆರೆ ಕಟ್ಟೆಗಳು ಏನು ಒಡೆದು ಹೋಗಿವೆ ಅವುಗಳನ್ನು ಕಟ್ಟಿಸಿಕೊಡಬೇಕು. ಈಗ ರಿಪೇರಿ ಆಗಬೇಕಾಗಿರತಕ್ಕ ಕೆರೆಗಳನ್ನು ರಿಪೇರಿ ಮಾಡಿಸಿಕೊಡಬೇಕು. ಈ ಕೆಲಸಗಳನ್ನೆಲ್ಲಾ ಮಾಡಿಸಿಕೊಡುವುದಾದರೆ ಆ ಪ್ರದೇಶದ ರೈತರು ಸರ್ಕಾರಕ್ಕೆ ತುಂಬಾ ಕೃತಜ್ಞರಾಗುತ್ತಾರೆ. ಇದನ್ನು ಸರ್ಕಾರದವರು ಮನಸ್ಸಿನಲ್ಲಿಟ್ಟುಕೊಂಡು ಕೆಲಸಗಳನ್ನು ಮಾಡಿಸಬೇಕು. ತೆಂಗಿನ ಗಿಡಗಳಿಗೆ ಸರ್ಕಾರದವರು ಒಡ್ಡುಗಳನ್ನು ಹಾಕಿಸಿಕೊಡುವುದಾದರೆ, ಅದಕ್ಕೆ ಸಂಬಂಧಪಟ್ಟ ತೆರಿಗೆಯನ್ನೂ ಸಹ ಕೊಡುವುದಕ್ಕೆ ರೈತರು ಸಿದ್ಧರಾಗಿದ್ದಾರೆ. ಆ ಕೆಲಸವನ್ನು ಮಾಡಿಕೊಡಬೇಕೆಂದು ಹೆಚ್ಚು ಒತ್ತಾಯಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಕೆ. ಅಮೀನ್ (ಉಡುಪಿ).—ಮಾನ್ಯ ಅಧ್ಯಕ್ಷರೇ, ಈ ಹೊತ್ತು ಈ ಸದನದ ಮುಂದೆ ಮಾನ್ಯ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಹೇಳಲು ಆಶಿಸುತ್ತೇನೆ. ಈ ಹೊತ್ತು ಇಲ್ಲಿ ಚರ್ಚಿಸತಕ್ಕ ಬೇಡಿಕೆಗಳ ವಿಷಯ ವ್ಯವಸಾಯ, ಪಶುಸಂಗೋಪನೆ, ಕೋಳಿ ಸಾಕಾಣಿಕೆ, ಅರಣ್ಯ ಇವುಗಳಿಂದ ಬರತಕ್ಕಂಥ ಉತ್ಪತ್ತಿ, ಎಲ್ಲವನ್ನೂ ತೆಗೆದುಕೊಂಡು ನಮ್ಮ ರಾಜ್ಯದ, ನಮ್ಮ ದೇಶದ ಸಂಪನ್ಮೂಲಗಳನ್ನು ಹೆಚ್ಚಿಸತಕ್ಕದ್ದು ಆಗಿದೆ. ನಮ್ಮ ದೇಶದ ಗಾತ್ರ, ನಮ್ಮ ದೇಶದಲ್ಲಿರತಕ್ಕ ಜನತೆ ಇವುಗಳನ್ನು ಗಣನೆಗೆ ತೆಗೆದುಕೊಂಡರೆ ಈ ಬೇಡಿಕೆಗಳಿಗೆ ಒದಗಿಸುವ ಹಣ ಎಲ್ಲಕ್ಕೂ ಸಾಕಾಗುವುದಿಲ್ಲ. ವ್ಯವಸಾಯ, ಅರಣ್ಯ ಮತ್ತು ಪಶುಪಾಲನೆ ಇವುಗಳನ್ನು ರಚನಾತ್ಮಕವಾಗಿ ಬೆಳೆಸಿಕೊಂಡರೆ ಅದರಿಂದ ನಮ್ಮ ರಾಜ್ಯದ ಸಂಪತ್ತನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯ ಇದೆ. ಮತ್ತು ಅದರಿಂದ ನಮ್ಮ ದೇಶದ ಬಡತನವನ್ನು ನೀಗಿಸುವುದಕ್ಕೆ ಬರುತ್ತದೆ. ನಾನು ಇವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ರಾಜ್ಯದಲ್ಲಿ ಯಾವುದೇ ಒಂದು ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತಗೊಳಿಸಬೇಕಾದರೆ ಜನರ ಮನಸ್ಸನ್ನು ಆ ಕಡೆಗೆ ಸೆಳೆಯಬೇಕಾಗುತ್ತದೆ. ಆದರೆ ದುರದೃಷ್ಟವಶಾತ್ ನಾವು ಈ ಸದನದಲ್ಲಿ ಅಭಿವೃದ್ಧಿಕಾರ್ಯಗಳ ಕಡೆಗೆ ಗಮನ ಕೊಡದೆ ರಾಜಕೀಯದ ಕಡೆಗೆ ಗಮನ

ಕೊಟ್ಟು ಅದರ ಒಂದು ಉತ್ಪಾದನೆ ಮಾಡುತ್ತಿದ್ದೇವೆಂದು ಬೇಸರದಿಂದ ಹೇಳಬೇಕಾಗುತ್ತದೆ. ಈ ಮೂಲಕ ಜನರ ಮನಸ್ಸನ್ನು ಕೂಡ ರಾಜಕೀಯದ ಕಡೆಗೆ ಸೆಳೆದಿದ್ದೇವೆ. ಈ ಕಾರಣದಿಂದ ಜನರಲ್ಲಿ ಒಂದು ಭಾವನೆ ಬಂದಿದೆ. ಏನೆಂದರೆ, ಬೇರೆ ಕಸುಬುಗಳನ್ನು ಮಾಡುವ ಬದಲು ರಾಜಕೀಯಕ್ಕೆ ಪ್ರವೇಶಿಸಿದರೆ ಹೆಚ್ಚಿನ ಅನುಕೂಲವಾಗಬಹುದೆಂದು. ಇನ್ನು ಮುಂದೆಯೂ ಕೂಡ ನಾವು ಇದೇ ನೀತಿಯನ್ನು ಅನುಸರಿಸಿದರೆ ನಮ್ಮ ಅಭಿವೃದ್ಧಿಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ ಕೆಲಸಕಾರ್ಯಗಳು ಒಳ್ಳೆಯ ರೀತಿಯಲ್ಲಿ ಸಾಧನೆಯಾಗ ಬೇಕಾದರೆ ಮತ್ತು ಅದರಿಂದ ಜನರಿಗೆ ಅನುಕೂಲವಾಗಬೇಕಾದರೆ ನಾವು ಮೊದಲು ಕ್ರಿಯಾತ್ಮಕ ವಾಗಿ ಮತ್ತು ರಚನಾತ್ಮಕವಾಗಿ ಕೆಲಸ ಮಾಡಬೇಕಾಗುತ್ತದೆ.

ನಮ್ಮ ರಾಜ್ಯವನ್ನು ಮುಂದೆ ತರಬೇಕಾದರೆ ಮೀನುಗಾರಿಕೆಯ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡಬೇಕಾಗಿದೆ. ನಮ್ಮ ಮೈಸೂರು ರಾಜ್ಯ ವಿಶಾಲ ಕರ್ನಾಟಕವಾದಮೇಲೆ 1957-58ರಲ್ಲಿ ಮೀನುಗಾರಿಕೆಯ ಅಭಿವೃದ್ಧಿಗಾಗಿ ಸರ್ಕಾರದವರು 5.98 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರು. 1967-68ರಲ್ಲಿ 76.47 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಸಾಲಿಗೆ 2.14 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸರ್ಕಾರದವರು ತೊಡಗಿದ್ದಾರೆ. ಜನರಿಗೆ ಯಾಂತ್ರೀಕೃತ ದೋಣಿಗಳನ್ನು ಒದಗಿಸಲು ಸರ್ಕಾರದವರು ಕಳೆದ 10 ವರ್ಷಗಳಲ್ಲಿ 90 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ದೋಣಿಗಳನ್ನು ಜನರು ಉಪಯೋಗ ಮಾಡಿಕೊಂಡು ಸುಮಾರು 10 ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡಿದ್ದಾರೆ. ಆದ್ದರಿಂದ ಯಾವುದೇ ಒಂದು ರಂಗಕ್ಕೆ ಹಣವನ್ನು ತೊಡಗಿಸಿದ್ದೇ ಆದರೆ ಅದರಿಂದ ಜನರು ಉತ್ತಮ ಜೀವನ ನಡೆಸು ವುದಕ್ಕೆ ಸಾಧ್ಯವಾಗುತ್ತದೆಯಲ್ಲದೆ ಸರ್ಕಾರಕ್ಕೂ ಕೂಡ ಆದಾಯ ಬರುತ್ತದೆಂದು ಧೈರ್ಯವಾಗಿ ಹೇಳಬಹುದು. ನಮ್ಮ ರಾಜ್ಯದ ಒಳನಾಡಿನಲ್ಲಿ, ಅದರಲ್ಲೂ ಕರಾವಳಿ ಪ್ರದೇಶಗಳಲ್ಲಿ 10 ಲಕ್ಷ ಜನರು ವಾಸ ಮಾಡುತ್ತಿದ್ದಾರೆ. ಮೊದಲು ಈ ಜನರು ಮೀನುಗಾರಿಯ ಕಸಬನ್ನು ಉಪಯುಕ್ತ ವಲ್ಲದ ಕಸಬು ಎಂದು ತಿಳಿದುಕೊಂಡು ಆ ಕಸಬನ್ನು ಮಾಡಲು ಮುಂದೆ ಬರುತ್ತಿರಲಿಲ್ಲ. ಹಿಂದೆ ಈ ಕಸಬನ್ನು 50 ಸಾವಿರ ಜನರು ಮಾತ್ರ ಅವಲಂಬಿಸಿದ್ದರು. ಆದರೆ ಈಗ 2 ಲಕ್ಷ ಜನರು ಈ ಕಸಬನ್ನು ಅವಲಂಬಿಸಿದ್ದಾರೆ. ಮತ್ತು ಅದರ ಒಂದು ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಈ ಕಸಬನ್ನು ಬಿಟ್ಟು ಬೇರೆ ಕಸಬಿಗೆ ಹೋದರೂ ಕೂಡ ಇವತ್ತಿನ ದಿವಸ ಅದೇ ಕಸುಬಿಗೆ ಆಕರ್ಷಿತರಾಗಿ ಬರುತ್ತಾರೆ. ಆದಕಾರಣ ನಾವು ರಚನಾತ್ಮಕವಾಗಿ ಒಂದು ಕಾರ್ಯವನ್ನು ಕೈಕೊಂಡರೆ ಅದರಿಂದ ಹೆಚ್ಚಿನ ಪ್ರಯೋಜನ ಹೊಂದಲು ಸಾಧ್ಯವಾಗುತ್ತದೆಂದು ಇದರಿಂದ ತಿಳಿದುಕೊಳ್ಳಬಹುದು. ಮೀನುಗಾರಿಕೆಯಲ್ಲಿ ಸಾಧಿಸಬಹುದಾದುದು ಬಹಳವಿದೆ. ಸಮುದ್ರಸಾಗರದಲ್ಲಿ ಅಪಾರವಾದ ಸಂಪತ್ತು ಇದೆ. ಕುದುರೆಮುಖದಲ್ಲಿರುವ ಸಂಪತ್ತನ್ನು ನಾವು ಉಪಯೋಗಿಸಿದರೆ ಇನ್ನು 10-12 ವರ್ಷಗಳಲ್ಲಿ ಆ ಸಂಪತ್ತು ಮುಗಿದುಹೋಗಬಹುದು. ಆದರೆ ಸಾಗರದಲ್ಲಿರುವ ಸಂಪತ್ತು ಎಷ್ಟು ವರ್ಷಗಳಾದರೂ ಕೂಡ ಮುಗಿಯುವುದಿಲ್ಲ. ಈ ಕಾರಣದಿಂದ ಈ ಸಂಪತ್ತನ್ನು ಉಪಯೋಗಿಸಿ ಕೊಳ್ಳಲು ಸರ್ಕಾರದವರು ಹೆಚ್ಚು ಹೆಚ್ಚು ಹಣವನ್ನು ಮಾಡುತ್ತಿದ್ದಾರೆ. ಸರ್ಕಾರದವರು ಬಂದರು ಅಭಿವೃದ್ಧಿಕಾರ್ಯಗಳನ್ನು ಜಾಗ್ರತೆ ಮಾಡಿ ಮುಗಿಸಿದ್ದರೆ ಮತ್ತು ಇನ್ನಿತರ ಸೌಕರ್ಯಗಳನ್ನು ಒದಗಿಸಿಕೊಡದಿದ್ದರೆ ಸಮುದ್ರದಲ್ಲಿರುವ ಸಂಪತ್ತನ್ನು ಪಡೆಯುವುದು ಕಷ್ಟವಾಗುತ್ತದೆ. ಆದಕಾರಣ ಸರ್ಕಾರದವರು ಮೀನುಗಾರಿಕೆಯ ಕಡೆಗೆ ಹೆಚ್ಚಿನ ಲಕ್ಷ ಕೊಡಬೇಕೆಂದು ಹೇಳುತ್ತೇನೆ. ಈ ಮೀನುಗಾರಿಯ ಕಸಬಿನಲ್ಲಿ ತೊಡಗಿರುವ ಜನತೆ ಕಷ್ಟದಲ್ಲಿದ್ದಾರೆ. ಸುಮಾರು ಒಂದು ಲಕ್ಷ ಜನರು ಕ್ಷಾಮದಲ್ಲಿದ್ದಾರೆ. ಇವರಿಗೆ ಸರ್ಕಾರದವರು ಫ್ಯಾಮಿನ್ ರಿಲೀಫ್ ಫಂಡ್‌ನಿಂದ ಕಡಿಮೆ ಬಡ್ಡಿಯಲ್ಲಿ ಹಣವನ್ನು ಸಾಲವಾಗಿ ಕೊಟ್ಟಿದ್ದರು. ಅವರು ಆ ಹಣವನ್ನು ಎರಡು ವರ್ಷಗಳಲ್ಲಿ ಮರುಪಾವತಿ ಮಾಡಿದರು. ಈಗ ಸರ್ಕಾರದವರು ಅದೇ ರೀತಿಯ ಸಾಲವನ್ನು ಮತ್ತೇ ಕೊಟ್ಟು ಅವರಿಗೆ ಸಹಾಯ ಮಾಡಲು ಆಲೋಚನೆ ಮಾಡಬೇಕು. ಮೀನುಗಾರಿಕೆ ಅಭಿವೃದ್ಧಿಗೆ ಸರ್ಕಾರದವರು ಇನ್ನೂ ಹೆಚ್ಚಿನ ಹಣವನ್ನು ಖರ್ಚುಮಾಡಬೇಕೆಂದು ಹೇಳಿ ನನಗೆ ಮಾತ ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಮಲ್ಲಪ್ಪ (ಬೀರೂರು).—ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಸಲಹೆಗಳನ್ನು ನೀಡಬಯಸುತ್ತೇನೆ. ನಮ್ಮ ರಾಜ್ಯ ವ್ಯವಸಾಯ ಪ್ರಧಾನವಾದ ರಾಜ್ಯ. ನಮ್ಮ ರಾಜ್ಯದಲ್ಲಿ ಬಹುತೇಕವಾಗಿ ಜನರು ಹಳ್ಳಿಗಳಲ್ಲಿ ವಾಸ ಮಾಡುವವರಾಗಿದ್ದಾರೆ. ಅವರ ಮುಖ್ಯವಾದ ಕಸಬು ವ್ಯವಸಾಯ. ಹಾಗಿರುವಾಗ ಅವರು ವಾಸ ಮಾಡುತ್ತಿರುವ ಪ್ರದೇಶಗಳನ್ನು ಒಳ್ಳೆಯ ವಾತಾವರಣದಲ್ಲಿರುವಂತೆ ಮಾಡಿದಿದ್ದರೆ ವ್ಯವಸಾಯದ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ ಅವರಿಗೆ ಒಳ್ಳೆಯ

(ಶ್ರೀ ಎಂ. ಮಲ್ಲಪ್ಪ)

ಯೋಗ್ಯವಾದ ವಾತಾವರಣವನ್ನು ಕಲ್ಪಿಸಿಕೊಡಬೇಕೆಂದು ಹೇಳಬಯಸುತ್ತೇನೆ. ಹಳ್ಳಿಗಳ ಚಿತ್ರವೆಂದರೆ ರೈತರಿಗೆ ವಾಸ ಮಾಡಲು ಸರಿಯಾದ ಮನೆ ಇಲ್ಲದಿರುವುದು, ಕುಡಿಯುವುದಕ್ಕೆ ನೀರಿನ ಸೌಕರ್ಯ ಇಲ್ಲದಿರುವುದು, ರಸ್ತೆಗಳ ಸೌಕರ್ಯ ಇಲ್ಲದಿರುವುದು. ಈ ಸೌಕರ್ಯಗಳನ್ನು ಸರ್ಕಾರದವರು ಒದಗಿಸಿಕೊಡಲು ಪ್ರಯತ್ನ ಮಾಡಬೇಕು. ಈ ಸೌಕರ್ಯಗಳನ್ನು ರೈತರಿಗೆ ಒದಗಿಸಿಕೊಟ್ಟರು ಅವರು ನಿಜವಾಗಿಯೂ ಅದುನಿಕ ವ್ಯವಸಾಯ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇವತ್ತಿನದಿವಸ ರೈತರಿಗಿಂತ ಬಡತನ, ಅವರು ವಾಸಮಾಡುತ್ತಿರುವ ಕನಿಷ್ಟಸ್ಥಿತಿ ಇವನ್ನು ನೋಡಿದರೆ ಅವರು ವ್ಯವಸಾಯವನ್ನು ಮಾಡಬೇಕೆಂದರೆ ಎಷ್ಟರಮಟ್ಟಿಗೆ ಸಾಧ್ಯವಾದೀತು ಎಂಬುದನ್ನು ಯೋಚನೆ ಮಾಡುವ ಕಾಲ ಬಂದಿದೆ. ನಮ್ಮ ದೇಶದಲ್ಲಿ ವ್ಯವಸಾಯವನ್ನು ಶೇಕಡ 75 ಜನರು ಅವಲಂಬಿಸಿದ್ದರೂ ಕೂಡ ನಮಗೆ ಬೇಕಾದ ಆಹಾರವನ್ನು ಬೆಳೆದುಕೊಳ್ಳುವುದಕ್ಕೆ ಸಾಮರ್ಥ್ಯವಿಲ್ಲದವರಾಗಿದ್ದಾರೆ. ಇದಕ್ಕೆ ಕಾರಣವೆಂದರೆ ರೈತರಿಗೆ ಸಕಾಲದಲ್ಲಿ ಬೇಕಾಗುವ ಅನುಕೂಲಗಳನ್ನು ಒದಗಿಸಿಕೊಡದಿರುವುದು. ರೈತರಿಗೆ ಜಮೀನಿಗೆ ಬೇಕಾಗುವ ನೀರಿನ ಸೌಕರ್ಯವನ್ನು ಒದಗಿಸಿಕೊಡಬೇಕು. ಇವತ್ತಿನದಿವಸ ಸರ್ಕಾರದವರು ದೊಡ್ಡ ನೀರಾವರಿ ಯೋಜನೆಗಳನ್ನು, ಸಣ್ಣ ನೀರಾವರಿ ಯೋಜನೆಗಳನ್ನು, ವ್ಯವಸಾಯಕ್ಕೆ ಯೋಗ್ಯವಾದ ನೀರಾವರಿ ಬಾವಿಗಳನ್ನು ಒದಗಿಸಿಕೊಡುವ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಇದು ಕಾಗದದಮೇಲೆ ಯೋಜನೆಗಳಾಗಿವೆಯೇ ಹೊರತು ಕಾರ್ಯತಃ ಸಾಧನೆಯಾಗುತ್ತಿಲ್ಲ. ಒಂದೊಂದು ಜಿಲ್ಲೆಯಲ್ಲಿ ಫ್ಯಾಮಿನ್ ರಿಲೀಫ್ ವರ್ಕ್ಸ್ ಮೂಲಕ ಹತ್ತಾರು ಬಾವಿಗಳನ್ನು ತೆಗೆಸಬೇಕೆಂದು ಸರ್ಕಾರದವರು ಯೋಚನೆ ಮಾಡಿದ್ದರೆ ಮುಗಿಸಿದ್ದು 7-8 ಮಾತ್ರ ಎಂದು ಹೇಳಬಹುದು. ಈ ರೀತಿಯಾದರೆ ರೈತರು ನಿಜವಾಗಿಯೂ ಯಾವ ರೀತಿ ಪ್ರಗತಿ ಹೊಂದುತ್ತಾರೆ ಮತ್ತು ಆರ್ಥಿಕವಾಗಿ ಅವರು ಮುಂದೆ ಬರಬಲ್ಲರೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇವತ್ತಿನ ದಿವಸ ರೈತರಿಗೆ ಮುಖ್ಯವಾಗಿ ಒಳ್ಳೆಯ ಬೀಜ ಬೇಕಾಗಿದೆ, ರಾಸಾಯನಿಕ ಗೊಬ್ಬರಗಳು ಬೇಕಾಗಿವೆ, ಕ್ರಿಮಿನಾಶಕಗಳು ಬೇಕಾಗಿವೆ, ಮತ್ತು ಸಕಾಲದಲ್ಲಿ ದೊರೆಯಬೇಕಾಗಿದೆ. ಈ ಸೌಕರ್ಯಗಳನ್ನು ಒದಗಿಸಿಕೊಟ್ಟರೆ ಮಾತ್ರ ಅವರು ಸುಧಾರಿತ ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತಿನ ದಿವಸ ರೈತರು ಸಾಲದಲ್ಲಿ ಮುಳುಗಿಹೋಗಿದ್ದಾರೆ. ಈಗ ಅಭಾವ ಪರಿಸ್ಥಿತಿ ಇರುವುದರಿಂದ ಹಿಂದಿನ ಕಂದಾಯವನ್ನೆ ವಸೂಲುಮಾಡಬೇಕೆಂದು ಸರ್ಕಾರದವರು ಅದೇಶ ಕೊಡುತ್ತಿದ್ದಾರೆ. ಅಭಾವ ಪರಿಸ್ಥಿತಿಯ ಬಗ್ಗೆ ನಮ್ಮ ಸರಕಾರ ಸಾಕಷ್ಟು ಸುಧಾರಿಸಲು ಪ್ರಯತ್ನ ಮಾಡಿದರೂ ಅದನ್ನು ಪೂರ್ಣವಾಗಿ ತಡೆಗಟ್ಟುವ ಸಾಮರ್ಥ್ಯ ನಮ್ಮ ದೇಶದಲ್ಲಿ ಇನ್ನೂ ಆಗಲಿಲ್ಲ. ಸಾಧಾರಣವಾಗಿ ಕಂದಾಯ ವಸೂಲು ಮಾಡುವುದನ್ನು ಕೈಬಿಡುತ್ತೇವೆ ಎಂದು ಹೇಳಿದರೆ ಆದರಿಂದ ಅಭಾವದ ಸ್ಥಿತಿ ಕಡಿಮೆಯಾಗುವುದಿಲ್ಲ. ಹಿಂದಿನ ಕಂದಾಯವನ್ನು ವಸೂಲು ಮಾಡಬೇಡಿ ಎಂದು ಈಗ ಹೇಳಿದರೆ ಬಾಕಿ ಇತರ ತರಹದ ತೆರಿಗೆಗಳನ್ನು ವಸೂಲುಮಾಡುತ್ತಾರೆ. ಇದನ್ನು ತಪ್ಪಿಸುವ ಹಾಗಿಲ್ಲ. ಇಂದು ರೈತ ಇರುವ ಸ್ಥಿತಿಯಲ್ಲಿ ಇವನ್ನೆಲ್ಲಾ ಕೊಡಲು ಶಕ್ತಿ ಇಲ್ಲ. ಅಲ್ಲದೆ ರೈತನಿಗೆ ಕೊಂಡುಕೊಳ್ಳುವ ಶಕ್ತಿಯೇ ಇಲ್ಲದಿರುವಾಗ ಬೀಜ ಗೊಬ್ಬರಗಳನ್ನು ಎಲ್ಲಿಂದ ತರಲು ಸಾಧ್ಯವಾಗುತ್ತದೆ. ಅವನಿಗೆ ಸುಲಭದರದಲ್ಲಿ ಸಾಲವನ್ನು ಕೊಟ್ಟು ಸಹಾಯ ಮಾಡಬೇಕೆಂದು ಸರಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಇದರಲ್ಲಿ ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ, ಹಾಗೂ ಪರಮಾವಧಿ ಸಾಲ ಎಂದು ಕೊಡುತ್ತಿದ್ದಾರೆ. ಹೀಗೆ ಕೊಡುತ್ತಿರುವ ಸಾಲವನ್ನು ತೆಗೆದುಕೊಂಡರೆ ಅದನ್ನು ವಾಪಸು ಕೊಡುವ ಶಕ್ತಿ ಸಾಮರ್ಥ್ಯ ಕೂಡ ಅವನಲ್ಲಿ ಇಲ್ಲ. ಇಂದಿನ ನಿಜವಾದ ಪರಿಸ್ಥಿತಿಯಲ್ಲಿ ರೈತನಿಗೆ ಏನು ಕಷ್ಟವಿದೆ ಎನ್ನುವುದನ್ನು ಯಾರೂ ನೋಡುತ್ತಿಲ್ಲ. ಸುಮ್ಮನೆ ಸರಕಾರದವರು ಯೋಜನೆಗಳನ್ನು ಮಾಡುತ್ತೇವೆ ಎಂದು ಹೇಳುತ್ತಾರೆ. ಬರೀ ಕಾಗದದ ಯೋಜನೆಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಇಂತಹ ಕಾಗದದ ಯೋಜನೆಗಳನ್ನು ಹಾಕಿದರೆ ಇದರಿಂದ ಖಂಡಿತ ರೈತನನ್ನು ಉದ್ಧಾರ ಮಾಡಲು ಸಾಧ್ಯವಾಗುವುದಿಲ್ಲ. ಇಂದು ನಮ್ಮಲ್ಲಿರುವ ನೀರಾವರಿ ಯೋಜನೆಗಳಿಗಾಗಿ ಶೇಕಡಾ 8 ರಷ್ಟು ಮಾತ್ರ ಖರ್ಚಾಗುತ್ತಿದೆ. ಇನ್ನು ಶೇಕಡಾ 92 ರಷ್ಟು ಭಾಗ ನೀರನ್ನು ನಾವು ಸರಿಯಾಗಿ ಉಪಯೋಗಿಸಿಕೊಳ್ಳಬೇಕಾಗಿದೆ. ರೈತ ವ್ಯವಸಾಯ ಮಾಡುವುದಕ್ಕೆ ಇನ್ನೂ ಹೆಚ್ಚು ನೀರನ್ನು ಉಪಯೋಗಮಾಡುತ್ತಿಲ್ಲ. ಇದರಲ್ಲಿ ಸರಕಾರದ ಜವಾಬ್ದಾರಿ ಪೂರ್ಣವಾಗಿದೆ. ಸರಕಾರದವರು ಎರಡೆರಡು ಎಕರೆಗಳಷ್ಟು ಪ್ರದೇಶಗಳಲ್ಲಿ ನೀರಾವರಿಗೆ ಅನುಕೂಲವಾಗುವಂತೆ ಬಾವಿಗಳನ್ನು ನಿರ್ಮಾಣ ಮಾಡುವ ಜವಾಬುದಾರಿಯನ್ನು ಹೊರಬೇಕು. ಸುಮ್ಮನೆ ಭಾರಿ ಭಾರಿ ನೀರಾವರಿ ಯೋಜನೆಗಳನ್ನು ಮಾಡುವುದಕ್ಕಿಂತ ಇಂತಹ ಯೋಜನೆಗಳನ್ನು ಮಾಡಿ ರೈತರಿಗೆ ಬಾವಿಗಳನ್ನು ಮಾಡಿಕೊಟ್ಟರೆ ವ್ಯವಸಾಯ ಮಾಡಲು

ಎಷ್ಟೋ ಸಹಾಯವಾಗುತ್ತದೆ. ನಿಜವಾಗಿಯೂ ಇಂದು ಇರಿಗೇಷನ್ ಶೇಕಡಾ ಐದರಿಂದ ಹತ್ತರವರೆಗೆ ಕೂಡ ಹೆಚ್ಚಾಗಿಲ್ಲ. ರೈತರಿಗೆ ಎಲ್ಲ ವಿಧವಾದ ಸಹಾಯ ಸೌಕರ್ಯ-ಗಳನ್ನು ಒದಗಿಸಿ ಕೊಟ್ಟರೆ ಸ್ವಲ್ಪಮಟ್ಟಿಗಾದರೂ ರೈತ ಬೇಸಾಯ ಮಾಡಿ ಬೆಳೆತೆಗೆಯಬಹುದು. ಇವೊತ್ತು ರೈತನಲ್ಲಿ ಕೇವಲ 50 ಪೈಸೆಯಷ್ಟು ಕೂಡ ಶಕ್ತಿ ಇಲ್ಲ. ಅವನ ಹಿಂದಿನ ವಾತಾವರಣ ಇನ್ನೂ ಸುಧಾರಿಸಿಲ್ಲ. ಅವನಿಗೆ ವಾಸಕ್ಕೆ ಅನುಕೂಲವಾದ ಮನೆ ಕೂಡ ಇಲ್ಲ ಇಂತಹ ರೈತಾಪಿ ಜನರನ್ನು ಸರಕಾರ ಉಪೇಕ್ಷೆ ಮಾಡಿದರೆ ಸರಿಯಾಗಿರುವುದಿಲ್ಲ. ಇಂತಹ ರೈತರಿಗಾಗಿ ಉಪಯುಕ್ತವಾದ ಯೋಜನೆಗಳನ್ನು ಮಾಡಿ ಅವು ಕಾರ್ಯಗತವಾಗುವಂತೆ ಮಾಡಬೇಕು ಮತ್ತು ರೈತರಿಗೆ ಮುಖ್ಯ ವಾಗಿ ಬೇಕಾಗಿರುವ ನೀರಾವರಿ ಬಾವಿಗಳನ್ನು ಸರಕಾರದವರೇ ಏರ್ಪಾಡು ಮಾಡಿಕೊಡಬೇಕು ಮತ್ತು ಅವರ ಜೀವನವನ್ನು ಸುಧಾರಿಸಲು ಪ್ರಯತ್ನಮಾಡಬೇಕು. ಎಷ್ಟೋ ಕಡೆ ಹಳ್ಳಿಗಳಲ್ಲಿರುವ ರೈತಾಪಿ ಜನರನ್ನು ಹೋಗಿ ನೋಡಿದರೆ ಅವರು ಯಾವ ರೀತಿ ಜೀವನ ಸಾಗಿಸುತ್ತಿದ್ದಾರೆ ಎನ್ನುವ ಅರಿವುಂಟಾಗುತ್ತದೆ. ಇವರು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಇಂತಹ ರೈತರ ಚಿತ್ರ ಕಣ್ಣಿಗೆ ಕಾಣುತ್ತಿರುವಾಗ ಇವರ ತೊಂದರೆಗಳನ್ನು ಹೋಗಲಾಡಿಸಲು ಸರಕಾರ ಸೂಕ್ತವಾದ ಯೋಜನೆಗಳನ್ನು ಹಾಕಿಕೊಂಡು ಇವರನ್ನು ಉದ್ಧಾರಮಾಡಬೇಕು. ಇವರಿಗೆ ಮುಖ್ಯವಾಗಿ ಬೇಕಾಗಿರುವ ನೀರಾವರಿ ಬಾವಿಗಳನ್ನು ಬೇಗನೆ ಏರ್ಪಾಡು ಮಾಡಿಸಿಕೊಡಬೇಕು ಮತ್ತು ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಕೊಟ್ಟು ಬಾವಿಗಳ ಮೂಲಕ ಪಂಪುಗಳನ್ನು ಹಾಕಿಸಿಕೊಳ್ಳುವ ಸಾಕರ್ಯವನ್ನು ಮಾಡಿಕೊಡಬೇಕು. ಇಂತಹ ಸೌಕರ್ಯಗಳನ್ನು ಒದಗಿಸಿಕೊಟ್ಟರೆ ನಿಜವಾಗಿಯೂ ವ್ಯವಸಾಯ ಮಾಡುವ ಜನಕ್ಕೆ ತುಂಬಾ ಅನುಕೂಲಮಾಡಿದಂತಾಗುತ್ತದೆ. ವ್ಯವಸಾಯಗಾರನಿಗೆ ವಿದ್ಯುಚ್ಛಕ್ತಿ ಹಾಗೂ ನೀರಾವರಿ ಬಾವಿಗಳು ಇವೆರಡು ಒಟ್ಟಿಗೆ ಹೋಗಬೇಕು. ಇದರ ಬಗ್ಗೆ ಇಲಾಖೆಯವರು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಮತ್ತು ಈ ಇಲಾಖೆ ಚೆನ್ನಾಗಿ ಕೆಲಸವನ್ನೇನೋ ಮಾಡುತ್ತಿದೆ. ಆದರೆ ಬೆಂಗಳೂರು ಡೈರಿ ವಿಷಯ ಒಂದು ಬಿಟ್ಟರೆ ಇಲಾಖೆ ಚೆನ್ನಾಗಿ ಕೆಲಸ ಮಾಡುತ್ತಿದೆ. ದನಗಳಿಗಾಗಿ ಹೆಚ್ಚು ಆಸ್ಪತ್ರೆಗಳನ್ನು ಅಲ್ಲಲ್ಲಿ ತೆರೆದಿದ್ದಾರೆ. ಮತ್ತು ಹೆಚ್ಚು ಸೌಕರ್ಯಗಳನ್ನೇನೋ ಒದಗಿಸುತ್ತಿದ್ದಾರೆ. ಇನ್ನೂ ಹೆಚ್ಚು ಹೆಚ್ಚು ಆಸ್ಪತ್ರೆ ಗಳನ್ನು ತೆರೆದು ರೈತರಿಗೆ ಅನುಕೂಲವಾಗುವಂತೆ ಸುಧಾರಿಸಬೇಕು ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಅರಣ್ಯ ಇಲಾಖೆಯ ಬಗ್ಗೆ ಹೇಳುವುದಾದರೆ ಇಲ್ಲಿ ಕಳ್ಳ ವ್ಯಾಪಾರ ಎನ್ನುವುದು ದಿನೇ ದಿನೇ ಜಾಸ್ತಿಯಾಗುತ್ತಿದೆ. ಗಂಧದ ಮರದ ಕಳ್ಳಸಾಗಾಣಿಕೆ ಹೆಚ್ಚಾಗುತ್ತಿದೆ. ತೇಗದ ಮರವಂತೂ ಹೇಳಲೇಬೇಕಾಗಿಲ್ಲ. ಬೇಕಾದಷ್ಟು ಮರಗಳು ಆಗಲೇ ಹಾಳಾಗಿ ಹೋದವು. ಅರಣ್ಯ ಇಲಾಖೆ ಯಲ್ಲಿ ನಮಗೆ ಹೆಚ್ಚು ಹಣ ಸಂಪಾದನೆ ಮಾಡಿಕೊಳ್ಳಲು ಅವಕಾಶ ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ವಲ್ಪ ಎಚ್ಚರಿಕೆ ವಹಿಸಿ ಇಲಾಖೆಯ ಅಧಿಕಾರಿಗಳ ಆಡಳಿತವನ್ನು ಬಿಗಿ ಮಾಡಿ ಅರಣ್ಯ ಸಂಪತ್ತನ್ನು ರಕ್ಷಿಸುವ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಸಲಹೆ ಮಾಡುತ್ತೇನೆ ಮತ್ತು ಇಲಾಖೆಯ ಉತ್ಪನ್ನವನ್ನು ಇನ್ನೂ ಹೆಚ್ಚು ಮಾಡಲು ತಕ್ಕ ಕ್ರಮತೆಗೆದುಕೊಳ್ಳಬೇಕು.

ಮಾನ್ಯ ಅಧ್ಯಕ್ಷರು ಕೊನೆಯಲ್ಲಿ ಮಾತನಾಡಲು ಇಷ್ಟು ಅವಕಾಶವನ್ನು ಕೊಟ್ಟುದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿವಸಗಳಿಂದ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಮತ್ತು ಅರಣ್ಯ ಇಲಾಖೆಗಳ ಮೇಲೆ ನಡೆದಂತಹ ಚರ್ಚೆಯನ್ನು ಅದ್ಯಂತವಾಗಿ ಕೇಳಿದ್ದೇನೆ. ಇದರಲ್ಲಿ ನನಗೆ ಸಂಬಂಧಪಟ್ಟ ಹಾಗೆ ಬೇಸಾಯ ಮತ್ತು ತೋಟಗಾರಿಕೆ ಇಲಾಖೆಗಳ ವಿಷಯದಲ್ಲಿ ಮಾತನಾಡಿದಂತಹ ಸನ್ಮಾನ್ಯ ಸದಸ್ಯರೆಲ್ಲರೂ ಬಹಳ ಉಪಯುಕ್ತವಾದ ಹಾಗೂ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಇದಕ್ಕಾಗಿ ನಾನು ಅವರೆಲ್ಲರಿಗೂ ಮೊದಲನೆಯದಾಗಿ ನನ್ನ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸು ತ್ತೇನೆ. ಬಹುಶಃ ಮಾತನಾಡಿದಂತಹ ಮಾನ್ಯ ಸದಸ್ಯರೆಲ್ಲರೂ ಈ ದೇಶದಲ್ಲಿ ಆಹಾರದ ಉತ್ಪತ್ತಿ ಹೆಚ್ಚಾಗಬೇಕು, ಆಹಾರಕ್ಕಾಗಿ ನಾವು ಪರದೇಶಗಳಿಗೆ ಕೈ ಚಾಚುವ ಒಂದು ಪರಿಸ್ಥಿತಿ ಬೇಗ ಹೋಗ ಬೇಕು ಮತ್ತು ಆಹಾರದಲ್ಲಿ ಸ್ವಯಂಪರಿಪೂರ್ಣತೆಯನ್ನು ನಾವು ಪಡೆದುಕೊಳ್ಳಬೇಕು ಎನ್ನುವ ಮಹತ್ವಾಕಾಂಕ್ಷೆಯಿಂದ ಇಲ್ಲಿ ಮಾತನಾಡಿದ್ದಾರೆ ಹಾಗೆ ಮಾತನಾಡಿದವರ ಪೈಕಿ ಬಹುಶಃ ದೇಶ ಪ್ರೇಮದಿಂದ ಮಾತನಾಡಿದಂತಹ ಸನ್ಮಾನ್ಯ ಸದಸ್ಯರಾದ ಶ್ರೀಮಾನ್ ಚನ್ನಬಸಪ್ಪನವರು ಈ ಸಂಸ್ಥಾನದ ಸಚಿವರಾಗಿದ್ದವರು ಮತ್ತು ಈ ವ್ಯವಸಾಯ ಕ್ಷೇತ್ರದಲ್ಲಿ ಯಾವ ರೀತಿ ಅಡ್ಮಿನಿಸ್ಟ್ರೇಷನ್ ಮಾರ್ಪಾಡು ಮಾಡಬೇಕು ಎನ್ನುವ ಒಂದು ಸಮಿತಿಯ ಅಧ್ಯಕ್ಷರಾಗಿಯೂ ಇರುವವರು, ಈ ದೇಶದಲ್ಲಿ ಬೇಸಾಯದ ಪದ್ಧತಿಯಲ್ಲಿ ಇರತಕ್ಕ ತೊಡಕುಗಳನ್ನು ಹಾಗೂ ಇನ್ನು ಕೆಲವಾರು

(ಶ್ರೀ ಬಿ. ರಾಚಯ್ಯ)

ವಿಚಾರಗಳನ್ನೂ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕೇಂದ್ರ ಸರ್ಕಾರಕ್ಕೂ ಮತ್ತು ಪ್ರಾಂತ ಸರಕಾರಕ್ಕೂ ಕೃಷಿ ಸಂಬಂಧವಾಗಿ ಮುಂದೆ ಏನು ಸಂಬಂಧವಿರಬೇಕು ಎಂದು ಹೇಳುತ್ತಾ, ಬಹುಶಃ ಕೇಂದ್ರ ಸರಕಾರದವರು ಹೆಚ್ಚಾಗಿ ಇದರಲ್ಲಿ ಕೈಹಾಕುತ್ತಿದ್ದಾರೆ ಇದನ್ನು ಸ್ವಲ್ಪಮಟ್ಟಿಗೆ ಪ್ರಾಂತ ಸರಕಾರದವರು ನಮ್ಮ ಸಂಸ್ಥಾನಗಳಿಗೆ ಸಂಬಂಧಪಟ್ಟ ಹಾಗೆ ಯೋಜನೆಗಳನ್ನು ಸ್ವಶಕ್ತಿಯಿಂದ ತಯಾರು ಮಾಡಬೇಕು, ಮತ್ತು ಇದಕ್ಕೆ ಕೊಟ್ಟಿರತಕ್ಕ ಹಣ ಬಹುಮಟ್ಟಿಗೆ ಸಾಲುವುದಿಲ್ಲ ಎಂದು ಹೇಳಿದ್ದಾರೆ. ಇದರ ಜೊತೆಗೆ ಈ ಇಲಾಖೆಯಲ್ಲಿ ಏನು ಬಹು ಜನರ ಆಡಳಿತ ಇದೆ ಇವನ್ನು ತಪ್ಪಿಸಿ ಒಬ್ಬರೇ ಇಲಾಖೆಯ ಮುಖ್ಯಸ್ತರಾಗಿ ಅವರ ಮುಖ್ತೇನ ಕೆಲಸ ನಡೆದರೆ, ಬಹುಮಟ್ಟಿಗೆ ಕೆಲಸಕಾರ್ಯಗಳು ಚೆನ್ನಾಗಿ ನಡೆಯುತ್ತವೆ ಇದೂ ಅಲ್ಲದೆ ಈಗ ರೈತ ಬೆಳೆಯುವ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ ಹಾಗೆ ರೈತನಿಗೆ ಸರಿಯಾದ ಬೆಲೆ ಸಿಗುವಂತೆ ಮಾಡಬೇಕಾದರೆ ಅವನಿಗೆ ಬೇಕಾಗಿರತಕ್ಕ ಸಹಾಯ ಸೌಲಭ್ಯಗಳನ್ನು ಸಾಧನಗಳನ್ನು ಏನು ಕೊಡಬೇಕು ಅಂತಹ ಸೌಲಭ್ಯಗಳು ಸುಲಭವಾಗಿ ದೊರಕುವಂತೆ ಆಗಬೇಕು ಎನ್ನುವುದನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದೇ ರೀತಿಯಲ್ಲಿ ಇನ್ನೂ ಇತರ ಮಾನ್ಯ ಸದಸ್ಯರು ಎಂದರೆ ಸುಮಾರು ಹದಿನೆಂಟು ಜನ ಮಾನ್ಯ ಸದಸ್ಯರು ಭೂಮಿಯನ್ನು ಮಟ್ಟ ಮಾಡತಕ್ಕ ವಿಷಯ, ಮತ್ತು ನೀರು ಒದಗಿಸತಕ್ಕ ವಿಷಯ, ಉತ್ತಮವಾದ ಬೀಜವನ್ನು ಒದಗಿಸತಕ್ಕ ವಿಷಯ, ಅವರಿಗೆ ಬೇಕಾಗುವ ರಸಾಯನಿಕ ಗೊಬ್ಬರ ಒದಗಿಸುವ ವಿಷಯ ಮತ್ತು ಇತರ ಸಲಕರಣೆಗಳು ಹಾಗೂ ರೋಗನಿವಾರಣೆ ಮಾಡುವ ಕ್ರಿಮಿಕೀಕ ಔಷಧಿ ಹಾಗದ ಪೆಸ್ಟಿಸೈಡ್ಸ್ ಇತ್ಯಾದಿಗಳನ್ನು ಒದಗಿಸುವುದಕ್ಕೆ ಇರುವ ಎಡರು ತೊಡರುಗಳ ವಿಷಯ ಪ್ರಸ್ತಾಪಮಾಡಿದ್ದಾರೆ. ಇವುಗಳೆಲ್ಲಕ್ಕೂ ಪ್ರತ್ಯೇಕವಾಗಿ ಉತ್ತರ ಕೊಡುವುದಕ್ಕೆ ಬದಲಾಗಿ ಸೂಕ್ಷ್ಮವಾಗಿ ಇದನ್ನು ಐದಾರು ಭಾಗಗಳಾಗಿ ಮಾಡಿಕೊಂಡು ಇದರ ಬಗ್ಗೆ ಉತ್ತರ ಕೊಡುವುದಕ್ಕೆ ನನ್ನ ಕೈಲಾದಮಟ್ಟಿಗೆ ಪ್ರಯತ್ನ ಮಾಡುತ್ತೇನೆ.

7-30 P.M.

ಬಹುಶಃ ನಮ್ಮ ಮೈಸೂರು ಪ್ರಾಂತ ಅಲ್ಲದೆ ಇತರ ಪ್ರಾಂತಗಳಲ್ಲೂ ಕೂಡ ಆಗಾಗ್ಗೆ ಕ್ಷಾಮ ತಲೆದೋರುತ್ತಾ ಬಂದಿದೆ. ಅಂತಹ ಕ್ಷಾಮ ಬಂದಂಥ ಕಾಲದಲ್ಲಿ, ನಮ್ಮ ರೈತರಿಗೆ ಹೆಚ್ಚು ನೀರನ್ನು ಒದಗಿಸಿ ಆದರ ಮುಖಾಂತರ ಹೆಚ್ಚು ಆಹಾರೋತ್ಪಾದನೆಯನ್ನು ಮಾಡುವ ಹವ್ಯಾಸ 1891 ರಿಂದ ಈವೊತ್ತಿನವರೆಗೂ ನಡೆದುಬಂದಿದೆ. ದಾದಾಬಾಯಿ ನವರೋಜಿಯವರಿಂದ ಹಿಡಿದು ನೆಹರೂರ ವರೆಗೂ ನೀರಾವರಿ ವಿಷಯದಲ್ಲಿ ನಮ್ಮ ಪ್ರಯತ್ನವನ್ನು ಮಾಡಬೇಕು ಎಂದು ಹೇಳುತ್ತಾ ಬಂದಿದ್ದರು ಅದೇ ರೀತಿ ಪ್ರಯತ್ನ ನಡೆಯುತ್ತಾ ಇದೆ. ಈ ಕೃಷಿ ಬಗ್ಗೆ ಶಾಶ್ವತವಾದ ರೀತಿಯಲ್ಲಿ ಒಂದು ಯೋಜನೆ ಮಾಡಬೇಕು, ಅದು ಇನ್ನೂ ತಯಾರಾಗಿಲ್ಲ ಎನ್ನುವ ಮಾತನ್ನು ಅನೇಕ ಸದಸ್ಯರು ಪ್ರಸ್ತಾಪ ಮಾಡಿದರು. ಅದರೆ ನಮ್ಮ ಮೈಸೂರು ಪ್ರಾಂತದ ವಿಚಾರವಾಗಿ ಹೇಳುವುದಾದರೆ 100ಕ್ಕೆ 10 ಭಾಗದಷ್ಟು ನೀರಾವರಿ ಪ್ರದೇಶ ಇದೆ ಇನ್ನು ಮಿಕ್ಕ 90 ಭಾಗದಷ್ಟು ಪ್ರದೇಶ ಮಳೆಯ ನೀರನ್ನು ಅವಲಂಬಿಸಿದೆ. ಮೈಸೂರಿನಲ್ಲಿ 10 ಇಂಚಿನಿಂದ 250 ಇಂಚಿನವರೆಗೂ ಮಳೆ ಆಗುತ್ತಾ ಇದೆ. ಖುಷ್ಕಿ ಬೆಳೆ ಆಗುವಂಥಾ ಭಾಗದಲ್ಲಿ 30 ಇಂಚು ಒಳಗೆ ಮಳೆ ಆಗುತ್ತದೆ. ಈ ಖುಷ್ಕಿ ಪ್ರದೇಶದಲ್ಲಿ ಬೆಳೆಯತಕ್ಕಂಥ ಬಾಗದಲ್ಲಿ ಮಳೆಯ ನೀರು ಬಿದ್ದದ್ದು ಭೂಮಿಯಲ್ಲಿ ಇಂಗಿ ಹೋಗದಂತೆ ನೋಡಿಕೊಂಡು, ಆದು ರೈತರಿಗೆ ಉಪಯೋಗವಾಗಬೇಕು ಎನ್ನುವ ದೃಷ್ಟಿಯಿಂದ ಈ ಭೂಸಂರಕ್ಷಣಾ ಯೋಜನೆ ಏನು ಇವೆ ಅದನ್ನು ನಡೆಸಿಕೊಂಡು ಬರುತ್ತಾ ಇದ್ದೇವೆ. ಇದಲ್ಲದೆ ಅಲ್ಲಲ್ಲಿ ಒಡ್ಡುಗಳನ್ನು ಹಾಕಿ ನೀರು ಎಲ್ಲಿಯೂ ಹೋಗದಂತೆ ಮಾಡಬೇಕು ಎನ್ನುವ ಒಂದು ಯೋಜನೆಯನ್ನೂ ಇಟ್ಟುಕೊಂಡಿದ್ದೇವೆ. ಈ ರೀತಿ ಮೈಸೂರು ಸಂಸ್ಥಾನದಲ್ಲಿ ಈ ವರ್ಷ ಸುಮಾರು 2 ಲಕ್ಷ 84 ಸಾವಿರ ಎಕರೆಯಷ್ಟು ಜಮೀನಿನಲ್ಲಿ ಭೂಸಂರಕ್ಷಣಾ ಕಾರ್ಯ ನಡೆದಿದೆ. ಅದು ಸಾಲದು, ಇನ್ನೂ ಜಾಸ್ತಿಯಾಗಬೇಕು. ಶ್ರೀಮಾನ್ ರಾಮೇಗೌಡರು ಮಾತನಾಡುವಾಗ ಭೂಸಂರಕ್ಷಣಾ ಕಾರ್ಯದಲ್ಲಿ ಮಾಡುವ ಕೆಲಸ ಪ್ರತಿವರ್ಷವೂ ಕಡಿಮೆಯಾಗುತ್ತಾ ಇದೆ ಇದನ್ನು ದುಃಖದಿಂದ ಹೇಳುತ್ತಾ ಇದ್ದೇನೆ, ಅದು ಇನ್ನೂ ಹೆಚ್ಚಾಗಬೇಕು ಎನ್ನುವ ಮಾತನ್ನು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಅದಕ್ಕಾಗಿ ಈ ವರ್ಷ ಇದಕ್ಕೆ 95 ಲಕ್ಷ ರೂಪಾಯಿಯಷ್ಟನ್ನು ಇಟ್ಟುಕೊಂಡಿದ್ದೇವೆ. ಮುಂದಿನ ವರ್ಷ ಕ್ಷಾಮ ಪರಿಹಾರ ನಿಧಿಯಿಂದ ಹೆಚ್ಚು ಹಣವನ್ನು ಪಡೆದು ಅದರ ಮುಖಾಂತರ ಪ್ರತಿವರ್ಷವೂ 3-4 ಲಕ್ಷ ಎಕರೆಯಷ್ಟಾದರೂ ಭೂಸಂರಕ್ಷಣಾ ಕಾರ್ಯ ನಡೆಸಬೇಕೆಂದು ಇದ್ದೇವೆ. ಅದಕ್ಕೆ ಬೇಕಾದಷ್ಟು ಸಿಬ್ಬಂದಿಯನ್ನು ಒದಗಿಸಿಕೊಂಡಿದ್ದೇವೆ. ಆದರೆ ಹಣದ ಕೊರತೆಯಿಂದ ಈವರ್ಷ ಎಷ್ಟುಮಟ್ಟಿಗೆ ಮಾಡುವುದಕ್ಕೆ ಸಾಧ್ಯವೋ ಅಷ್ಟು ಕೆಲಸ ನಡೆದಿದೆ. ಮುಂದಿನ 15

ವರ್ಷದಲ್ಲಿ 100ಕ್ಕೆ 90 ಭಾಗ ಭೂಮಿಯಲ್ಲಿ ಭೂಸಂರಕ್ಷಣಾ ಕಾರ್ಯನಡೆಸಬೇಕು ಎಂದು ಇದ್ದೇವೆ. ಅದಕ್ಕಾಗಿ 280 ಕೋಟಿ ರೂಪಾಯಿಯ ಅಂದಾಜನ್ನು ತಯಾರು ಮಾಡಿ ಆ ಭಾಗಗಳನ್ನು ಅಭಿವೃದ್ಧಿ ಮಾಡಬೇಕು ಎನ್ನುವ ಯೋಜನೆ ತಯಾರಾಗಿದೆ. ಆದರೆ ಕೇಂದ್ರ ಸರ್ಕಾರದವರು ಮತ್ತು ಪ್ರಾಂತ ಸರ್ಕಾರದವರು ಅದಕ್ಕೆ ಎಷ್ಟರಮಟ್ಟಿಗೆ ಹಣವನ್ನು ಒದಗಿಸುತ್ತಾರೆ ಆದರ ಮೇಲೆ ಈ ಕಾರ್ಯವನ್ನು ಮುಂದುವರಿಸುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ಆ ಕಡೆ ಯೋಜನೆಯೇ ಮಾಡಿಲ್ಲ ಎಂದು ಹೇಳುವ ಮಾತು ಸತ್ಯಕ್ಕೆ ದೂರವಾದುದು. ನಾವು ಆ ಕಡೆ ಯೋಚನೆ ಮಾಡಿ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಬೇಕು ಎನ್ನುವ ಉದ್ದೇಶದಿಂದಲೇ ಈ ಭೂಸಂರಕ್ಷಣಾ ಕಾರ್ಯ ಮಾಡುವುದು. ಭೂಮಿಯ ಗುಣ, ನೀರಿನಗುಣ, ಪರೀಕ್ಷೆ ಮಾಡಿ ಭೂಮಿಯಲ್ಲಿ ಹುದುಗಿರತಕ್ಕಂಥ ನೀರನ್ನು ಬಾವಿಗಳ ಮುಖಾಂತರ ಮೇಲಕ್ಕೆ ತಂದು ಬೆಳೆಗಳನ್ನು ತೆಗೆಯುವುದಕ್ಕೆ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಈಗಾಗಲೇ ಜಿಯಾಲಜಿಕಲ್ ಸರ್ವೆ ನಡೆಯುತ್ತಾ ಇದೆ. ಅದರ ಪ್ರಕಾರ ಈ ಪ್ರಾಂತದಲ್ಲಿ ಅವರ ರಿಪೋರ್ಟ್ ಪ್ರಕಾರ ಇನ್ನೂ 15 ಲಕ್ಷ ಬಾವಿ ತೋಡಿಸಿದರೂ ಅಷ್ಟಕ್ಕೂ ನೀರು ಒದಗಿಸುವ ಸಾಧ್ಯತೆ ಇದೆ ಎಂದು ತಿಳಿದು ಬರುತ್ತಾ ಇದೆ. ಬಾವಿಗಳನ್ನು ತೋಡಿಸುವುದಕ್ಕೆ ಇದುವರೆಗೆ ಇಲಾಖೆಯ ಮುಖಾಂತರ ಸಾಲವನ್ನು 3 ಸಾವಿರ ರೂಪಾಯಿ ಕೊಡುತ್ತಾ ಇದ್ದರು. ಅದು ಸಾಕಾಗುವುದಿಲ್ಲ ಎಂದು ಈಗ 5 ಸಾವಿರ ರೂಪಾಯಿಗಳಿಗೆ ಹೆಚ್ಚಿಸಿದೆ. 1965 ನೇ ಇಸವಿಯಿಂದ ಈಚೆಗೆ ಕೇಂದ್ರ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ಸಾಲ ಕೊಡುವ ವ್ಯವಸ್ಥೆ ಮಾಡಿದರೆ ಹೆಚ್ಚು ಬಾವಿಗಳನ್ನು ತೆಗೆಯುವುದಕ್ಕೆ ಅವಕಾಶವಾಗುತ್ತದೆ ಎಂದು ತಿಳಿದು ಅವರ ಮುಖಾಂತರ ಸಾಲ ಕೊಡಬೇಕೆಂದು ಈ ಕೆಲಸವನ್ನು ಅವರಿಗೆ ವರ್ಗಾಯಿಸಿದ್ದೇವೆ. ಅವರು ಬಾವಿಗಳನ್ನು ತೋಡಿಸುವುದಕ್ಕೆ 32 ಸಾವಿರ ಬಾವಿಗಳಿಗೆ ಹಣವನ್ನು ಮಂಜೂರು ಮಾಡಿದ್ದಾರೆ. ಅದರಲ್ಲಿ ಕೇವಲ 11 ಸಾವಿರ ಬಾವಿಗಳು ಪೂರ್ತಿಯಾಗಿವೆ. ಮಿಕ್ಕ ಬಾವಿಗಳು ಪೂರ್ತಿ ಆಗಬೇಕು. ಆದರೆ ಅವು ಆಗದೇ ಇರುವುದಕ್ಕೆ ಕಾರಣ ಅದರಲ್ಲಿ ಬಂಡೆ ಸಿಕ್ಕಿರಬಹುದು, ಅವರಿಗೆ ಕೊಟ್ಟಂಥ ಹಣ ಸಾಕಾಗದೇ ಇರಬಹುದು ಮತ್ತು ಅವರಿಗೆ 3–4ನೇ ಕಂತು ಕೊಡದೇ ಇರುವುದರಿಂದ ಬಾವಿ ಕೆಲಸ ಪೂರ್ತಿ ಆಗದೇ ಇರಬಹುದು. ಈ ಕಾರಣದಿಂದ ಅವು ಪೂರ್ತಿಯಾಗದೇ ಇರಬಹುದು. ರಿಸರ್ವ್ ಬ್ಯಾಂಕ್ ಆದೇಶದ ಪ್ರಕಾರ ಸಾಲವನ್ನು ಕೊಟ್ಟಿರುವುದರಲ್ಲಿ 100ಕ್ಕೆ 90 ಭಾಗದಷ್ಟು ಹಣವನ್ನು ವಾಪಸ್ಸು ಪಡೆಯದೇ ಹೋದರೆ ನಾವು ರೈತರಿಗೆ ಹೆಚ್ಚು ಹಣವನ್ನು ಕೊಡುವುದಕ್ಕೆ ಅವಕಾಶವಾಗುವುದಿಲ್ಲ. ಈ ಬಾವಿ ಕೆಲಸಗಳನ್ನು ಏನಾದರೂ ಪೂರ್ತಿ ಮಾಡಿದ್ದರೆ ಆವಾಗ ಬಹುಶಃ ರಿಸರ್ವ್ ಬ್ಯಾಂಕ್‌ನವರನ್ನು ಕೆಲವು ರಿಯಾಯಿತಿಗಳನ್ನು ಕೇಳುವುದಕ್ಕೆ ಅವಕಾಶವಾಗುತ್ತಿತ್ತು. ಕೇಂದ್ರದ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನವರಿಗೆ ಡಿಬೆಂಚರ್‌ನ್ನು ರೈಸ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದುದರಿಂದ ಮುಂದಿನ ವರ್ಷ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ಹೆಚ್ಚು ಹಣವನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ ಈಗ ತೆಗೆದುಕೊಂಡಿರತಕ್ಕವರು ಇನ್ನೂ ಸರಿಯಾಗಿ ಪಾವತಿ ಮಾಡಿಲ್ಲ. ಆದುದರಿಂದ ಅವರಿಗೇನಾದರೂ ಕೆಲವು ರಿಯಾಯಿತಿಗಳನ್ನು ತೋರಿಸಿ ಹೊಸ ಸಾಲವನ್ನು ಕೊಡುವುಕ್ಕೆ ಅವಕಾಶ ಇದೆಯೋ? ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನಾದರೂ ಪರಿಹಾರ ಕಂಡುಹಿಡಿದಿದ್ದೀರಾ?

ಶ್ರೀ ಬಿ. ರಾಚಯ್ಯ.—ಈವಾಗ ಡಿಬೆಂಚರ್‌ಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಈಗ ತಾತ್ಕಾಲಿಕವಾಗಿ ಸ್ವಲ್ಪ ತೊಂದರೆ ಇರಬಹುದು. ಈ ಮಾತನ್ನು ಜವಾಬ್ದಾರಿಯಿಂದ ತಿಳಿಸುತ್ತೇನೆ. ಇದುವರೆಗೆ ಮೈಸೂರು ಸಂಸ್ಥಾನದಲ್ಲಿ 87 ಸಾವಿರ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದೆ ಈ ವರ್ಷ ಸುಮಾರು 8 ಸಾವಿರ ಬಾವಿಗಳಿಗೆ ವಿದ್ಯುಚ್ಛಕ್ತಿ ಒದಗಿಸಿದೆ. ಎಲೆಕ್ಟ್ರಿಸಿಟಿ ಬೋರ್ಡ್‌ನವರಿಗೆ ಇನ್ನೂ 20 ಸಾವಿರ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕು ಎಂದು ಹೇಳಿದ್ದೇನೆ. ಅದಕ್ಕೆ ಬೇಕಾಗಿರುವ ಹಣವನ್ನು ಖಾಸಗೀ ಬ್ಯಾಂಕ್ ಮುಖಾಂತರ ಸರ್ಕಾರದ ಗ್ಯಾರಂಟಿ ಮೇಲೆ ಒದಗಿಸಿಕೊಡಬೇಕೆಂದು ಮಾಡಿದ್ದೇವೆ. ಇದರಿಂದ ಮುಂದಿನ ವರ್ಷದೊಳಗೆ 20 ಸಾವಿರ ಬಾವಿಗಳಿಗೆ ಹಣವನ್ನೂ ಮತ್ತು ವಿದ್ಯುಚ್ಛಕ್ತಿಯನ್ನೂ ಮಂಜೂರು ಮಾಡಿಕೊಡಬೇಕೆಂದು ಈಗಾಗಲೇ ತೀರ್ಮಾನ ಮಾಡಿಕೊಂಡಿದ್ದೇವೆ. ಅನೇಕ ಸದಸ್ಯರುಗಳು ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಈ ವಿಚಾರದಲ್ಲಿ ಹೇಳುವುದಾದರೆ ರೈತರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಖಾಂತರ ಮತ್ತು ಷೆಡ್ಯೂಲ್ಡ್ ಬ್ಯಾಂಕ್‌ಗಳ ಮುಖಾಂತರ ಪಂಪ್‌ಸೆಟ್ಸ್, ಆಯಿಲ್ ಇಂಜಿನ್ಸ್ ಎಲೆಕ್ಟ್ರಿಕ್ ಪಂಪ್ ಸೆಟ್ಸ್ ಇವುಗಳನ್ನು ಕೊಡುವುದಕ್ಕೆ ಪ್ರಯತ್ನವನ್ನು ಇದುವರೆಗೆ ನಡೆಸಿಕೊಂಡು ಬಂದಿದ್ದೇವೆ. ಬಹುಶಃ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು

(ಶ್ರೀ ಬಿ. ರಾಚಯ್ಯ)

ಈವೊತ್ತಿನವರೆಗೆ ಸುಮಾರು 660 ಆಯಿಲ್ ಇಂಜಿನ್ಸ್ ಕೊಟ್ಟಿದ್ದಾರೆ. 808 ಎಲೆಕ್ಟ್ರಿಕಲ್ ಪಂಪ್ ಸೆಟ್‌ಗಳನ್ನೂ ಸಹ ಕೊಟ್ಟಿದ್ದಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಸ್ವಾಮಿ, ಡಿಸ್ಟ್ರಿಕ್ಟ್‌ವೈಸ್ ಹೇಳುತ್ತೀರಾ?

ಶ್ರೀ ಬಿ. ರಾಚಯ್ಯ.—ಡಿಸ್ಟ್ರಿಕ್ಟ್‌ವೈಸ್ ಈ ರೀತಿ ಇದೆ.

Dharwar	...	Electrical Pumpsets	38
		Oil Engine	1
Raichur	...	Electrical Pumpsets	15
		Oil Engine	...
Bangalore	...	Electrical Pumpsets	256
		Oil Engines	59
Kolar	...	Electrical Pumpsets	32
		Oil Engines	36
Bijapur	...	Electrical Pumpsets	47
		Oil Engines	251
Chitradurga	...	Electrical Pumpsets	36
		Oil Engines	60
Belgaum	...	Electrical Pumpsets	19
		Oil Engines	62
Bellary	...	Electrical Pumpsets	23
		Oil Engines	...
Chickmagalur	...	Electrical Pumpset	1
		Oil Engines	2
Coorg	...	Nil	
Hassan	...	Electrical Pumpsets	11
		Oil Engines	15
Shimoga	...	Nil	
Mysore	...	Electrical Pumpsets	57
		Oil Engines	9
Tumkur	...	Electrical Pumpsets	243
		Oil Engines	118

ಮಂಗಳೂರಿನಲ್ಲಿ 30 ಎಲೆಕ್ಟ್ರಿಕ್ ಪಂಪ್‌ಸೆಟ್ ಮತ್ತು 46 ಆಯಿಲ್ ಇಂಜಿನ್‌ಗಳನ್ನು ಕೊಟ್ಟಿದ್ದಾರೆ. ಮಂಡ್ಯ ಮತ್ತು ಬಿದರೆ ಜಿಲ್ಲೆಗಳಿಗೆ ಏನೂ ಕೊಟ್ಟಿಲ್ಲ. ಆಯಿಲ್ ಇಂಜಿನ್‌ಗಳನ್ನು ಮತ್ತು ಎಲೆಕ್ಟ್ರಿಕ್ ಪಂಪ್‌ಸೆಟ್‌ಗಳನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರ ಮುಖಾಂತರ ಕೊಟ್ಟಿದ್ದಾರೆ. ಭೂ ಅಭಿವೃದ್ಧಿ ಬ್ಯಾಂಕ್ ಮುಖಾಂತರ ಕೂಡ ಕೆಲವು ಆಯಿಲ್ ಇಂಜಿನ್ ಮತ್ತು ಪಂಪ್‌ಸೆಟ್‌ಗಳನ್ನೂ, ಎಲೆಕ್ಟ್ರಿಸಿಟಿ ಬೋರ್ಡ್ ಮುಖಾಂತರ ಕೆಲವು ಎಲೆಕ್ಟ್ರಿಕ್ ಪಂಪ್‌ಸೆಟ್‌ಗಳನ್ನೂ ಕೊಟ್ಟಿದೆ.

ಶ್ರೀ ಎಸ್. ಶಿವಪ್ಪ.—ತೋಟಗಾರಿಕೆ ಮತ್ತು ವ್ಯವಸಾಯ ಇಲಾಖೆಯ ಮೂಲಕ ಮಾತ್ರ ಕೊಡುವ ವ್ಯವಸ್ಥೆಯನ್ನು ಏಕೆ ಮಾಡಬಾರದು?

ಶ್ರೀ ಬಿ. ರಾಚಯ್ಯ.—ಅದನ್ನು ಯೋಚನೆ ಮಾಡಬೇಕಾಗುತ್ತದೆ. ಆಯಾ ಇಲಾಖೆಗಳಿಗೆ ಹೆಚ್ಚು ಹಣವನ್ನು ಒದಗಿಸಿಕೊಂಡಿದ್ದೇವೆ. ಈವೊತ್ತೇ ಯಾವರೀತಿ ಮಾಡಲು ಸಾಧ್ಯ

ಎಂದು ಹೇಳುವುದಕ್ಕಾಗುವುದಿಲ್ಲ. ಸರ್ಕಾರ ಇದರ ಬಗ್ಗೆ ಯೋಚನೆ ಮಾಡುತ್ತದೆಂದು ಮಾತ್ರ ತಿಳಿಸುತ್ತೇನೆ.

ಹಿಂದೆ ಇಲಾಖೆಯ ಮುಖಾಂತರವಾಗಿ ಬಾವಿಗಳಿಗೆ ಮತ್ತು ಪಂಪ್‌ಸೆಟ್‌ಗಳಿಗೆ ಸಾಲ ಕೊಡುತ್ತಿದ್ದಾಗ 6 ಪರ್ಸೆಂಟ್ ಬಡ್ಡಿ ಮೇಲೆ ಕೊಡುತ್ತಿದ್ದರು ಈವಾಗ 9 ಪರ್ಸೆಂಟ್ ಬಡ್ಡಿ ಆಗಿದೆ, ಅದು ಸ್ವಲ್ಪ ದುಬಾರಿಯಾಗಿದೆ, ಸ್ಟ್ಯಾಂಪ್ ಡ್ಯೂಟಿ ಜಾಸ್ತಿಯಾಗಿದೆ ರೈತರಿಗೆ ತೊಂದರೆಯಾಗಿದೆ ಅದರ ವಿಚಾರವಾಗಿ ಪುನರ್ಪರಿಶೀಲನೆ ಮಾಡಬೇಕು, ಏನು ರಿಯಾಯಿತಿ ಕೊಡುವುದಕ್ಕೆ ಸಾಧ್ಯವೋ ಆ ರೀತಿ ಮಾಡಬೇಕು ಎಂದು ಒತ್ತಾಯ ಮಾಡಿದ್ದಾರೆ. ಇನ್‌ಸ್ಟಿಟ್ಯೂಷನ್‌ಗಳ ಮೂಲಕ ಏನು ಸಾಲ ಕೊಡುತ್ತಿದ್ದೇವೆ, ಅದಕ್ಕೆ ರಿಸರ್ವ್ ಬ್ಯಾಂಕ್‌ನವರು ಯಾವ ದರದಲ್ಲಿ ಬಡ್ಡಿಯನ್ನು ಹಾಕುತ್ತಾರೆ ಅದರ ಮೇಲೆ ಈ ಸಂಸ್ಥೆಗಳವರು ಮಾಡುವಂಥ ಸರ್ವಿಸ್‌ಗೋಸ್ಕರ ಸ್ವಲ್ಪಮಟ್ಟಿಗಾದರೂ ನಾವು ಹೆಚ್ಚು ಬಡ್ಡಿಯನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ದೃಷ್ಟಿಯಿಂದ 9 ಪರ್ಸೆಂಟ್ ಆಗುತ್ತದೆ.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಸಬ್ಸಿಡಿ ಕೊಟ್ಟು 6 ಪರ್ಸೆಂಟ್ ಏಕೆ ಮಾಡ ಬಾರದು ?

ಶ್ರೀ ಬಿ. ರಾಚಯ್ಯ.—ಈಗ ಹಾಕುತ್ತಿರುವ ಬಡ್ಡಿ ಜಾಸ್ತಿ, ಇದನ್ನು ಕಡಿಮೆ ಮಾಡಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ. ಇದರಲ್ಲಿ ಎಷ್ಟುಮಟ್ಟಿಗೆ ಕಡಿಮೆ ಮಾಡಲು ಸಾಧ್ಯವಾಗುತ್ತದೆ, ಸ್ಟ್ಯಾಂಪ್ ಡ್ಯೂಟಿ ರಿಯಾಯಿತಿ ಕೊಡುವುದಕ್ಕೆ ಸಾಧ್ಯವಾಗುತ್ತದೆ, ಇದನ್ನೆಲ್ಲ ಸರ್ಕಾರ ಯೋಚನೆ ಮಾಡಬೇಕಾಗಿದೆ. ರೈತರಿಗೆ ಏನು ತೊಂದರೆ ಇದೆ ಎನ್ನುವುದನ್ನು ನಾನು ಮನಗಂಡಿದ್ದೇನೆ ಎಂದು ಮಾತ್ರ ಅರಿಕೆ ಮಾಡಿಕೊಳ್ಳುತ್ತೇನೆ.

ಇದುವರೆಗೆ ಮೈಸೂರು ಸಂಸ್ಥಾನದಲ್ಲಿ ಕೊಟ್ಟಿರತಕ್ಕ ಆಯಿಲ್ ಇಂಜಿನ್‌ಗಳು 28, 230 ಮತ್ತು ಎಲೆಕ್ಟ್ರಿಕ್ ಪಂಪ್‌ಸೆಟ್ಟುಗಳು, 83, 816. ಎಲ್ಲಿ ಭೂಮಿಯಮೇಲೆ ನೀರು ಸಿಕ್ಕುವುದಿಲ್ಲ ಎಲ್ಲಿ ಅಣೆಕಟ್ಟುಗಳನ್ನು ಕಟ್ಟಿ ಅಥವಾ ಕೆರೆಗಳನ್ನು ಕಟ್ಟಿ ನೀರನ್ನು ಒದಗಿಸುವುದಕ್ಕೆ ಆಗುವು ದಿಲ್ಲ, ಅಂಥ ಕಡೆಗಳಲ್ಲಿ ಬಾವಿಗಳಿಂದ ಪಂಪ್‌ಸೆಟ್‌ಗಳ ಮೂಲಕ ನೀರನ್ನೆತ್ತಿ ನೀರಾವರಿ ಮಾಡುವು ದಕ್ಕೆ ಅನುಕೂಲವಾಗಿದೆ. ಆದರೆ ತುಂಗಭದ್ರ, ಭದ್ರ ಮುಂತಾದ ದೊಡ್ಡ ದೊಡ್ಡ ಜಲಾಶಯಗಳು ಏನಿವೆ ಅದರ ಕೆಳಗೆ 6,50,758 ಎಕರೆಗಳಲ್ಲಿ 1967–68 ರಲ್ಲಿ ನೀರಾವರಿಯನ್ನು ಹೆಚ್ಚು ಮಾಡಿ ದ್ದೇವೆ. ಈ ಭಾಗದಲ್ಲಿ ಮುಂದಿನ ಸಾಲಿನಲ್ಲಿ ಒಂದು ಲಕ್ಷ ಎಕರೆಯಷ್ಟು ಜಮೀನಿಗೆ ನೀರನ್ನು ಒದಗಿಸಿ ನೀರಾವರಿ ಮಾಡಬೇಕೆಂಬ ಉದ್ದೇಶವನ್ನು ಇಲಾಖೆ ಇಟ್ಟುಕೊಂಡಿದೆ ಮತ್ತು ಇನ್ನೂ ಎಂಟು ಸಾವಿರ ಎಲೆಕ್ಟ್ರಿಕ್ ಪಂಪ್‌ಸೆಟ್‌ಗಳನ್ನು, ಐದು ಸಾವಿರ ಡೀಸಲ್ ಪಂಪ್‌ಸೆಟ್ಟುಗಳನ್ನು ಒದಗಿಸುವುದಲ್ಲದೆ. 20 ಸಾವಿರ ಬಾವಿಗಳನ್ನು ಮುಂದಿನ ವರ್ಷ ಮಾಡಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡಿದ್ದೇವೆ. ಮಂಡ್ಯ ಜಿಲ್ಲೆಯಲ್ಲಿ ತುಂಗಭದ್ರ ಮತ್ತು ಬಳ್ಳಾರಿಗೆ ಸೇರಿದ ಭಾಗಗಳಲ್ಲಿ ಇನ್‌ಟೆನ್ಸಿವ್ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಪ್ರೋಗ್ರಾಂ ಇಟ್ಟುಕೊಂಡಿದ್ದೇವೆ. ಇನ್ನೂ ಹತ್ತು ಸ್ಥಳಗಳಲ್ಲಿ ಈಗಾಗಲೇ ಸಾಂದ್ರ ಬೇಸಾಯ ಪದ್ಧತಿಯನ್ನು ಅನುಸರಿಸಿರುವು ದರಿಂದ ಅಲ್ಲಿ ಉತ್ತಮವಾದ ಬೀಜ ಮತ್ತು ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕ ಶಕ್ತಿ ಗಳು, ಆಧುನಿಕ ಬೇಸಾಯ ಪದ್ಧತಿ, ಇವುಗಳ ವಿಷಯದಲ್ಲಿ ಇಲಾಖೆಯ ಮುಖಾಂತರ ತಾಂತ್ರಿಕ ನೆರವನ್ನು ಹೆಚ್ಚಾಗಿ ಒದಗಿಸುತ್ತಿದ್ದೇವೆ. ಇದರಿಂದ ಬಹುಶಃ ಎರಡು ಮೂರು ವರ್ಷಗಳಲ್ಲಿ ನಮ್ಮ ಆಹಾರ ಪರಿಸ್ಥಿತಿ ಉತ್ತಮಗೊಳ್ಳಬಹುದು, ಮಳೆ ಸಕಾಲಕ್ಕೆ ಬಾರದೆ ಅಭಾವ ಆಯಾ ಭಾಗಗಳಲ್ಲಿ ಇದ್ದರೂ ಕೂಡ ಈ ವರ್ಷ 44 ಲಕ್ಷ ಟನ್ ಆಹಾರ ಉತ್ಪತ್ತಿ ಮಾಡಿದ್ದೇವೆ. ಈ ಅಂಕಿ ಅಂಶಗಳು ಕೂಡ ಕನ್‌ಸರ್ವೇಟಿವ್ ಎಂದು ನಾನು ಹೇಳಬೇಕಾಗಿದೆ. ರಾಬಿ, ಖಾರಿಫ್ ಈ ಬೆಳೆಗಳಲ್ಲಿ ಎರಡು ಮೂರು ಬೆಳೆಯಾಗಿರತಕ್ಕುದನ್ನು ಕೆಲವು ಸಂದರ್ಭಗಳಲ್ಲಿ ಸೇರಿಸಿಲ್ಲ. ಇದನ್ನೂ ಸೇರಿಸಿಕೊಂಡರೆ ನಮ್ಮ ಇಲಾಖೆಯ ತಜ್ಞರ ಅಭಿಪ್ರಾಯದ ಪ್ರಕಾರ ಸುಮಾರು 50 ಲಕ್ಷ ಟನ್‌ಗಿಂತ ಹೆಚ್ಚಾಗುತ್ತದೆ. ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುವುದರಿಂದ ಮತ್ತೆ ಸುಧಾರಿತ ಬೀಜವನ್ನು ಉಪಯೋಗಿಸುವುದರಿಂದ, ಕ್ರಿಮಿನಾಶಕ ಶಕ್ತಿಗಳನ್ನು ಉಪಯೋಗಿಸುವುದರಿಂದ ಸ್ವಲ್ಪಮಟ್ಟಿಗೆ ಈ ವರ್ಷದ ಬತ್ತದ ಬೆಳೆಯಲ್ಲಿ ಜಳ್ಳು ಕಡಿಮೆಯಾಗಿ ಒಳ್ಳೆಯ ಬೆಳೆ ಯಾಯಿತು ಎನ್ನುವುದನ್ನು ರೈತರಿಂದ ಅನೇಕ ಸಂದರ್ಭಗಳಲ್ಲಿ ತಿಳಿದುಕೊಂಡಿದ್ದೇನೆ ಅದೂ ಅಲ್ಲದೆ ಈ ವರ್ಷ ಏರಿಯಲ್ ಸ್ಪ್ರೇ ಮಾಡಿದ್ದರಿಂದ ಒಂದು ಎಕರೆಯಲ್ಲಿ ಮೂರು ಕ್ವಿಂಟಾಲ್ ಬತ್ತ ಹೆಚ್ಚಾಯಿತು ಎನ್ನುವುದನ್ನು ಮಂಡ್ಯ ತಾಲ್ಲೂಕು ರೈತರಿಂದ ನಾನು ತಿಳಿದುಕೊಂಡಿದ್ದೇವೆ. ಕ್ರಿಮಿನಾಶಕಶಕ್ತಿಯನ್ನು ಉಪಯೋಗಿಸತಕ್ಕ ಕಾಲದಲ್ಲಿ ಯಾವುದೋ ಕ್ರಿಮಿನಾಶಕಗಳನ್ನು ಉಪಯೋಗಿಸುತ್ತಾರೆ. ಆದರಲ್ಲಿ ನಿಜವಾದ ಸತ್ವ ಇರುವುದಿಲ್ಲ, ರೋಗ

(ಶ್ರೀ ಬಿ. ರಾಚಯ್ಯ)

ಏನು ಹೋಗಬೇಕಾಗಿದೆಯೋ ಅದು ಹೋಗುವುದಿಲ್ಲ. ಆದಕ್ಕೋಸ್ಕರ ಮಾರಾಟ ಮಾಡತಕ್ಕವರ ಮೇಲೆ ನಿರ್ಬಂಧವಿರಬೇಕಾದಂತದ್ದರ ಬಗ್ಗೆ ಕಾನೂನು ಏನಿದೆ ಅದನ್ನು ಬೇಗ ಜಾರಿಗೆ ಕೊಟ್ಟು ಯಾವ ಪ್ರಮಾಣದಲ್ಲಿ ಔಷಧಿ ಇರಬೇಕು, ಅದರಂತೆ ಯಾವ ಯಾವ ಔಷಧಿಯನ್ನು ಉಪಯೋಗಿಸ ಬೇಕು ಎನ್ನುವ ನಿಯಂತ್ರಣವನ್ನು ಬೇಗ ತನ್ನಿ ಎಂದು ಮಾನ್ಯ ಸದಸ್ಯರು ಹೇಳಿದರು. ಈಗಾ ಗಲೇ ಅಗ್ರಿಕಲ್ಚರಲ್ ಪೆಸ್ಟ್ಸ್ ಅಂಡ್ ಡೀಸೀಸಸ್ ಆಕ್ಟ್‌ಗೆ ಈ ಮಾನ್ಯ ಸಭೆ ಅನುಮತಿಯನ್ನು ಕೊಟ್ಟಿದೆ. ಅದು ಸದ್ಯದಲ್ಲಿಯೇ ಜಾರಿಗೆ ಬರುವುದರಲ್ಲಿದೆ. ರೋಗ ಬಂದ ಕಾಲದಲ್ಲಿ ರೋಗವನ್ನು ತಡೆಗಟ್ಟಲು ಒಬ್ಬೊಬ್ಬರು ಕ್ರಿಮಿನಾಶಕಗಳನ್ನು ಉಪಯೋಗಿಸಿ, ಕೆಲವರು ಉಪಯೋಗಿಸದೆ ಇದ್ದರೆ ಆ ರೋಗ ಮತ್ತೊಂದು ಕಡೆಗೆ ಹರಡುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಯಾವ ಭಾಗದಲ್ಲಿ ರೋಗ ತಗುಲಿವೆ ಅಂಥ ಭಾಗದಲ್ಲಿ ಇಲಾಖೆಯು ಮುಖಾಂತರವಾಗಿ ಕ್ರಿಮಿ ನಾಶಕ ಶಕ್ತಿಗಳನ್ನು ಉಪಯೋಗಿಸಿ ರೋಗವನ್ನು ತಡೆಕಟ್ಟತಕ್ಕ, 'ವಾರ್ ಫುಟಿಂಗ್' ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ ಎಂದು ತಿಳಿಸು ತ್ತಿದ್ದೇನೆ.

ಬೀಜವನ್ನು ಕೊಡತಕ್ಕ ಸಂದರ್ಭದಲ್ಲಿ ಸರಿಯಾದ ರೀತಿಯಲ್ಲಿ ಪರೀಕ್ಷೆ ಮಾಡದೆ ನ್ಯಾಷನಲ್ ಸೀಡ್ ಕಾರ್ಪೊರೇಷನ್‌ನವರು ಏನು ಸರ್ಟಿಫಿಕೇಟ್ ಕೊಟ್ಟಿದ್ದಾರೆ ಆದರ ಪ್ರಕಾರ ತೆಗೆದು ಕೊಂಡು ಹೋಗಿ ಹಾಕಿದರೂ ಕೂಡ ಕೆಲವು ಕಡೆ ಸರಿಯಾದ ರೀತಿಯಲ್ಲಿ ಮೊಳಕೆ ಬರಲಿಲ್ಲ. ಬಂದರೂ ಅತ್ಯಂತ ಕಡಮೆ ಪ್ರಮಾಣದಲ್ಲಿ ಬಂತು ಎಂದು ಮಾನ್ಯ ಸದಸ್ಯರಾದ ಮಂಚೇಗೌಡರು ಮತ್ತು ಇನ್ನೂ ಅನೇಕ ಸದಸ್ಯರೂ ಪ್ರಸ್ತಾಪ ಮಾಡಿದ್ದಾರೆ. ಬಹುಶಃ ನ್ಯಾಷನಲ್ ಸೀಡ್ ಕಾರ್ಪೊರೇಷನ್‌ನವರು, ಕೇಂದ್ರ ಸರ್ಕಾರದ ಅಧಿಕಾರಿಗಳು ಬಂದು ಅದರ ಪರೀಕ್ಷೆಯನ್ನು ಮಾಡಿದ್ದಾರೆ. ನಾವು ಕೂಡ ಸೀಡ್ ಟೆಸ್ಟಿಂಗ್ ಲ್ಯಾಬೋರೇಟರಿಯನ್ನು ಇಲ್ಲಿಯೇ ಮಾಡಿ ಬೀಜದಲ್ಲಿ ಮೊಳಕೆ ಯಾವ ಪ್ರಮಾಣದಲ್ಲಿ ಬರುತ್ತದೆ, ಯಾವುದು ಸರಿಯಾಗಿದೆ ಎಂದು ನೋಡುವ ಜವಾ ಬ್ದಾರಿಯನ್ನು ನಾವೇ ತೆಗೆದುಕೊಳ್ಳಬೇಕೆಂದು ಕೇಂದ್ರವನ್ನು ಒತ್ತಾಯ ಮಾಡುತ್ತಿದ್ದೇವೆ. ಬಹುಶಃ ಅವರು ಅದಕ್ಕೆ ಒಪ್ಪುತ್ತಾರೆಂದು ನಾನ ನಂಬಿದ್ದೇನೆ. ಕೇಂದ್ರ ಸರ್ಕಾರದ ಮಂತ್ರಿಗಳ ಜೊತೆ ಪ್ರಸ್ತಾಪಮಾಡಿದಾಗ ನಮ್ಮ ಸಂಸ್ಥಾನಕ್ಕೆ ಬೇಕಾದ ಬೀಜವನ್ನು ಕಳಿಸಲು ತಯಾರಿದ್ದೇವೆ ಅದನ್ನು ಸರ್ಟಿಫೈ ಮಾಡಿ ಜನಸಾಮಾನ್ಯರಿಗೆ ಒದಗಿಸಲು ಒಪ್ಪುವುದಾದರೆ ಸರಬರಾಯಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದುವರೆಗೆ ಕಳಿಸಿರುವ ಬೀಜ ಒಳ್ಳೆಯ ಇಳುವರಿಯನ್ನು ಕೊಡುತ್ತಿದೆ, ಶೀಘ್ರವಾಗಿ ಉತ್ಪತ್ತಿ ಕೊಡುತ್ತದೆ, ಕೆಲವು ಕಡೆ ಬೆಳೆ ಚೆನ್ನಾಗಿ ಬಂದಿದೆ. ಕೆಲವು ಕಡೆ ತೊಂದರೆಯಾಗಿರಬಹುದು. ಇದುವರೆಗೆ 12 ಸೀಡ್ ಪ್ರೋಸೆಸಿಂಗ್ ಸೆಂಟರ್ಸ್ ಏರ್ಪಾಡಾ ಗಿವೆ, ಅದರಲ್ಲಿ 7 ಖಾಸಗಿಯವು, ನಮ್ಮ ಇಲಾಖೆಯವು 5 ಇವೆ. ಇನ್ನೂ ಎರಡನ್ನು ಇಲಾಖೆಯ ಮೂಲಕ ತೆರೆಯಬೇಕೆಂದು ಸರಕಾರ ಯೋಚನೆಮಾಡಿಕೊಂಡಿದೆ. ನಮ್ಮ ಪ್ರಾಂತದಲ್ಲಿ ಸುಮಾರು 14 ಸಾವಿರ ಕ್ವಿಂಟಾಲ್ ಅಧಿಕ ಇಳುವರಿಯ ಬೀಜ ಉತ್ಪತ್ತಿಯಾಗಿದೆ ರೈತರಿಗೆ ಸಕಾಲ ದಲ್ಲಿ ಒಳ್ಳೆಯ ಬೀಜವನ್ನು ಕೊಡಲು ಅನೇಕ ರೀತಿಯಲ್ಲಿ ಏರ್ಪಾಡುಮಾಡಿದ್ದೇವೆ. ಇದರಿಂದ ಸ್ವಲ್ಪಮಟ್ಟಿಗೆ ಕೆಲವರಿಗೆ ಬೀಜ ಸಾಕಷ್ಟು ಪ್ರಮಾಣದಲ್ಲಿ ಮಾರಾಟವಾಗದಿರಬಹುದು, ಹೆಚ್ಚಿನ ಉಪಯೋಗವಾಗದಿರಬಹುದು. ರೈತರಿಗೆ ಬೇಕಾದಾಗ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅವರಿಗೆ ಕೊಡಲೇಬೇಕು, ಸ್ವಲ್ಪ ನಷ್ಟವಾದರೂ ಚಿಂತೆಯಿಲ್ಲ ಎಂದು ಕೆ. ಎಚ್. ಪಾಟೀಲರು ಹೇಳಿದರು. ಅದರಂತೆ ರೈತರಿಗೆ ಉತ್ತಮವಾದ ಅಧಿಕ ಇಳುವರಿ ಕೊಡುವ ಬೀಜ ಕೊಡದಿದ್ದರೆ ಏಳೆಂಟು ಲಕ್ಷ ಎಕರೆಗಳಲ್ಲಿ ಅಧಿಕ ಬೆಳೆಯನ್ನು ತೆಗೆಯುವುದಕ್ಕಾಗುತ್ತಿರಲಿಲ್ಲ. ಈ ದೃಷ್ಟಿಯಿಂದ ಅಲ್ಪಸ್ವಲ್ಪ ನಷ್ಟವಾದರೂ ಅದನ್ನು ವಹಿಸಿಕೊಳ್ಳಬೇಕು. ಆದ್ದರಿಂದ ರೈತರಿಗೆ ಹೆಚ್ಚಿನ ಉಪ ಯೋಗವಾಗುತ್ತದೆ ಎಂಬುದು ಸರಕಾರದ ಅಭಿಪ್ರಾಯ,

ಅದೇ ರೀತಿಯಲ್ಲಿ ಗೊಬ್ಬರದ ವಿಷಯದಲ್ಲಿ ಸೋಮಶೇಖರಪ್ಪನವರು ಮಾತನಾಡುವಾಗ ಮೈಸೂರು ದೇಶದಲ್ಲಿ 3 ವರ್ಷಕ್ಕೆ ಒಂದು ಲಕ್ಷದ 45 ಸಾವಿರ ಟನ್ ಗೊಬ್ಬರ ಸರಾಸರಿ ಉಪ ಯೋಗವಾಗಿದೆ, ಆದರೆ 3 ಲಕ್ಷದ 48 ಸಾವಿರ ಟನ್ ರಸಾಯನಿಕ ಗೊಬ್ಬರ ದಾಸ್ತಾನಿದೆ. ಇದಕ್ಕೆ ಸುಮಾರು 23 ಕೋಟಿ ರೂಪಾಯಿ ಖರ್ಚಾಗಿದೆ, ಇಷ್ಟು ನಿಂತಿದೆ, ಆದುದರಿಂದ ಹೆಚ್ಚು ಗೊಬ್ಬರ ತರಿಸುವಾಗ ಯೋಚನೆಮಾಡಿ ತರಿಸಬೇಕಾಗಿತ್ತು ಎಂದು ಸ್ವಲ್ಪಮಟ್ಟಿಗೆ ಅಗ್ರಹದಿಂದ ಹೇಳಿದರು. ಬಹುಶಃ ನಮ್ಮ ಸಂಸ್ಥಾನಕ್ಕೆ 65 ರಿಂದ 67—68 ರವರೆಗೆ ಇಷ್ಟುಬೇಕೆಂದು ಕೇಂದ್ರ ಸರಕಾರವನ್ನು ಕೇಳಿದ್ದರೂ ಅದರಲ್ಲಿ ಅರ್ಧಕ್ಕಿಂತ ಕಡಮೆ ಕೊಟ್ಟರು. ನಮ್ಮ ದೇಶದಲ್ಲಿ ಗೊಬ್ಬ

ರದೆ ಕಾರ್ಖಾನೆಗಳು ಹೆಚ್ಚಾಗಿಲ್ಲದಿರುವುದರಿಂದ ಹೊರಗಿನಿಂದ ತರಿಸಬೇಕಾಗಿರುವುದರಿಂದ ಮತ್ತು ಕಾಳಸಂತೆಗೆ ಅವಕಾಶವಾಗಬಾರದೆಂಬ ದೃಷ್ಟಿಯಿಂದ ನಮಗೆ ಬೇಕಾಗುವುದನ್ನು ಲೆಕ್ಕಮಾಡಿ ಸುಮಾರು 1,59,144 ಮೆಟ್ರಿಕ್ ಟನ್ನುಗಳನ್ನು ಕೇಳಿದೆವು. ತಜ್ಞರು ಎಷ್ಟು ಬೇಕೆಂಬುದನ್ನು ಲೆಕ್ಕಮಾಡಿ ತಿಳಿಸಿದ್ದರು. ಅದರ ಪ್ರಕಾರ ಇಷ್ಟು ಬೇಕೆಂದು ಪ್ರತಿ ಸಾರಿ ಕೇಂದ್ರ ಸರಕಾರವನ್ನು ಕೇಳಿದ್ದೇವೆ. ಅವರು ಕೊಟ್ಟ ಗೊಬ್ಬರದಲ್ಲಿ 3 ವರ್ಷದಿಂದ ಸ್ವಲ್ಪಮಟ್ಟಿಗೆ ನಿಂತಿದೆ. ಕಾರಣ ಸರಿಯಾಗಿ ಮಳೆಯಾಗಿಲ್ಲ. ಜನರಿಗೇನು ನಮ್ಮ ಇಲಾಖೆ ತಜ್ಞರು ಸಲಹೆ ಕೊಟ್ಟಿದ್ದಾರೆ ಅದರ ಪ್ರಕಾರ ಅವರು ಉಪಯೋಗ ಮಾಡಿದ್ದರೆ ಖರ್ಚಾಗುತ್ತಿತ್ತು. ಅದೂ ಸಾಲದೆ ಇನ್ನೂ 10 ಲಕ್ಷ ಟನ್ ಬೇಕಾಗುತ್ತಿತ್ತು. ಒಟ್ಟಿನಲ್ಲಿ 23 ಕೋಟಿ ರೂಪಾಯಿನಲ್ಲಿ ಸುಮಾರು 7 ಕೋಟಿ ರೂಪಾಯಿಯನ್ನು ಕೇಂದ್ರ ಸರಕಾರ ಸಾಲವಾಗಿ ಸೇಕಡ 3 ರಂತೆ ಬಡ್ಡಿ ಮೇಲೆ ಕೊಟ್ಟಿದೆ, ರಿಸರ್ವ್ ಬ್ಯಾಂಕು 3 ಕೋಟಿ ಕೊಟ್ಟಿದೆ. ಇದರಿಂದ ರೈತರಮೇಲೆ ಹೊರೆ ಬೀಳುವುದೆಂದು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಮತ್ತು ಅದರ ಕೆಳಗಿರುವ ಸೊಸೈಟಿಗಳಲ್ಲಿ ಮೂರು ಟೈರ್ ಇರುವುದನ್ನು ಎರಡು ಟೈರ್‌ಗೆ ಕಡಮೆಮಾಡಬೇಕು, ಇನ್ನೂ ಕಡಮೆ ಮಾಡಲು ಸಾಧ್ಯವೇ ಎಂದು ಯೋಚನೆ ಮಾಡುತ್ತಿದ್ದೇವೆ. ಮತ್ತು ಕೇಂದ್ರ ಸರಕಾರ ಸ್ವಲ್ಪ ಮಟ್ಟಿಗೆ ಬೆಲೆ ಕಡಮೆಮಾಡಿ ಕೊಡಬೇಕು. ರಿಯಾಯಿತಿ ಕೊಡಬೇಕು ಎಂದು ಪ್ರಯತ್ನ ಕೂಡ ಮಾಡಲಾಗುತ್ತಿದೆ. ಗೊಬ್ಬರದ ಬೆಲೆ ಇಂದು ನಮ್ಮ ಸರಕಾರ ಕಡಮೆ ಮಾಡುವುದು ಎಂದು ಹೇಳಲು ಶಕ್ತಿಯಿಲ್ಲ. ಒಟ್ಟಿನಲ್ಲಿ ಮೂರು ದಿನ ಗೊಬ್ಬರ ಮಾರಾಟಮಾಡಬಾರದು ಎಂದು ತಡೆಯಾಜ್ಞೆ ಕೊಟ್ಟರು. ಅದು ಈಗ ರಿವೈಜ್ ಆಗಿದೆ. ಅಮೋನಿಯ 50 ಕೆ.ಜಿ. ಗೆ 458 ರೂಪಾಯಿತ್ತು ಈಗ 495 ಆಗಿದೆ. ಅಮೋನಿಯಂ ಸಲ್ಫೇಟ್ 100 ಕೆ.ಜಿ.ಗೆ 447 ರೂಪಾಯಿತ್ತು, ಈಗ 484 ಆಗಿದೆ. ಯೂರಿಯಾಕ್ಕೆ 750 ರೂ. ಇತ್ತು, ಈಗ 863 ಆಗಿದೆ. ಅಮೋನಿಯ ಕ್ಲೋರೇಟ್‌ಗೆ 450 ಇತ್ತು. ಈಗ 484 ಆಗಿದೆ. ಕ್ಯಾಲ್ಸಿಯಂ ಅಮೋನಿಯ ನೈಟ್ರೇಟ್‌ಗೆ 475 ಇದ್ದುದು 515 ಆಗಿದೆ, ಅಮೋನಿಯ ಫಾಸ್ಫೇಟ್ ಬೆಲೆ ಒಂದು ಸಾವಿರ ರೂಪಾಯಾಗಿದೆ. ಇದು ನೆಟ್ ಪ್ರೈಸ್, ಮೊನ್ನೆ ಜಾಸ್ತಿಯಾಗಿರುವುದು. ಎನ್. ಪಿ. ಕೆ. 970 ರೂಪಾಯಿ ಇದ್ದುದು 1047 ಆಗಿದೆ. ಪೊಟ್ಯಾಷ್ 483 ರೂಪಾಯಾಗಿದೆ. ಇದಲ್ಲದೆ ನಮ್ಮ ಸಂಸ್ಥಾನದಲ್ಲಿ ಈ ವರ್ಷ ಸುಮಾರು ಒಂದು ಲಕ್ಷ 61 ಸಾವಿರ ಟನ್ ಗೊಬ್ಬರ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಮೂಲಕ ಖರ್ಚಾಗಿದೆ. ಪ್ರೈವೇಟ್ ಕಂಪನಿಯವರೂ ಕೂಡ ಗೊಬ್ಬರ ಮಾರಾಟಮಾಡುತ್ತಿದ್ದಾರೆ. ಬಹುಶಃ ಅವರು ಒಂದು ಲಕ್ಷ ಟನ್ ಮಾರಾಟ ಮಾಡಿರಬಹುದು. ನಮ್ಮ ಗೋಡೌನ್‌ನಿಂದ ಮತ್ತು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಮತ್ತು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಿಂದ ಮಾರಾಟವಾಗುವುದಕ್ಕೆ ಕೆಲವು ಪ್ರೈವೇಟ್ ಕಂಪನಿಗಳ ಏಜೆಂಟರೇ ಕಾರಣರಾಗಿರುವುದರಿಂದ ಅಲ್ಲಿ ಗೊಬ್ಬರ ಮಾರಾಟವಾಗುವುದು ಸ್ವಲ್ಪಮಟ್ಟಿಗೆ ನಿಧಾನವಾಗಿದೆ. ನಮ್ಮ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು ಅವರಿಗೆ ಮಾರ್ಜಿನ್ ಕೊಟ್ಟಿರಬೇಕು. ಪ್ರೈವೇಟ್ ಕಂಪನಿಗಳು ಇಂತಹ ಕ್ಯಾನ್‌ವಾಸಿಂಗ್ ಏಜೆಂಟರುಗಳನ್ನಿಟ್ಟುಕೊಳ್ಳುವುದು ಧರ್ಮ. ಆ ಪ್ರಕಾರ ಮಾಡುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್. (ಹುಣಸೂರು).—ಮೂರು ಹಂತದಲ್ಲಿ ಗೊಬ್ಬರ ಹಂಚಿಕೆಯಾಗಿ ಕೊನೆಯ ಹಂತದಲ್ಲಿ ರೈತರಿಗೆ ಮಾರಾಟವಾಗುತ್ತದೆ. ಹಾಗಿರುವಾಗ ಈ ಮೂರು ಹಂತಗಳಲ್ಲಿ ಆಗುವ ಖರ್ಚನ್ನು ವಹಿಸಲು ಸಾಧ್ಯವೇ ? 23 ಕೋಟಿ ರೂಪಾಯಿನ ಮೂರುವರೆ ಲಕ್ಷ ಟನ್ ಗೊಬ್ಬರ ಸರ್ಕಾರದಲ್ಲಿದೆ ಎಂದು ಹೇಳುತ್ತೀರಿ, ಅದಕ್ಕೆ ವರ್ಷಕ್ಕೆ 6 ಪರ್ಸೆಂಟ್ ಬಡ್ಡಿ ಎಂದರೂ ಒಂದೂವರೆ ಕೋಟಿ ರೂಪಾಯಿ ಆಗುತ್ತದೆ. ತಾವು ಮಾರಾಟ ಮಾಡುವಾಗ ಆ ಬಡ್ಡಿಯನ್ನು ಸೇರಿಸಿ ಮಾರಾಟ ಮಾಡಿದರೆ ಈಗಾಗಲೇ ಮೂರನೆ ಹಂತದಲ್ಲಿ ಬಹಳ ಜಾಸ್ತಿಯಾಗಿದೆ ಆದ್ದರಿಂದ ರೈತರಿಗೆ ಮಾರಾಟ ಮಾಡುವ ಕಾಲದಲ್ಲಿ ಬಡ್ಡಿ ವಜಾಮಾಡಿ ಮಾರಾಟ ಮಾಡುವುದನ್ನು ಯೋಚನೆ ಮಾಡುತ್ತೀರಾ ?

8-00 P.M.

ಶ್ರೀ ಬಿ. ರಾಚಯ್ಯ.—ಬಡ್ಡಿಯಲ್ಲಿ ಮಾರ್ಜಿನ್ ಕೊಡುತ್ತಾ ಇದ್ದೇವೆ. ಒಂದು ಟನ್‌ಗೆ ಸುಮಾರು 90 ರೂಪಾಯಿವರೆಗೂ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರಿಗೆ ಸಿಕ್ಕುತ್ತಾ ಇದೆ. ಅದರಲ್ಲೂ ಕೂಡ ಅವರೇ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಇದನ್ನೆಲ್ಲಾ ಕಟ್ಟಿಕೊಳ್ಳಬೇಕಾಗುತ್ತದೆ. 2 ಟೈರ್ ಮಾಡುವುದರಿಂದ ಬೆಲೆ ಕಡಿಮೆ ಮಾಡುವುದಕ್ಕೆ ಸಾಧ್ಯವೇ ಅನ್ನುವುದನ್ನು ಯೋಚನೆ ಮಾಡುತ್ತಾ ಇದ್ದೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಪ್ರಪಂಚದಲ್ಲಿ ಯಾವ ಭಾಗದಲ್ಲೂ ಕೂಡ ಇಷ್ಟೊಂದು ರೇಟ್ ಇಲ್ಲ, ಕೇಂದ್ರ ಸರ್ಕಾರದವರಿಗೆ ಒತ್ತಾಯವಾಗಿ ಬರೆಯಬೇಕು.

ಶ್ರೀ ಬಿ. ರಾಚಯ್ಯ.—ಆ ರೀತಿ ಒತ್ತಾಯವನ್ನು ತರುತ್ತಾ ಇದ್ದೇವೆ. ಇದು ಫುಲ್ ಇಷ್ಯೂ ಪ್ರೈಸು.

ಬುಲಡೋಜರ್ಸ್ ನಮ್ಮಲ್ಲಿ ಹಳೇದು 50 ಇದ್ದವು ಈಗ 47 ಹೊಸದಾಗಿ ಬಂದಿವೆ ಒಟ್ಟು 97 ಇವೆ. ಹಳೇ ಬುಲಡೋಜರ್ಸ್ ಇದುವರೆಗೂ 53 ಸಾವಿರ ಎಕರೆ ಭೂಮಿಯನ್ನು ಮಟ್ಟ ಮಾಡಿದೆ. ಇನ್ನು ಮುಂದಿನ ವರ್ಷಗಳಲ್ಲಿ ಹೆಚ್ಚು ಮಾಡುವುದಕ್ಕೆ ಅವಕಾಶ ಇದೆ. ಮುಂದಿನ ವರ್ಷ ಕೂಡ 80 ರಷ್ಯನ್ ಬುಲ್‌ಡೋಜರ್ಸ್ ಕೊಡುವುದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೆ. 36 ಟ್ರಾಕ್ಟರ್ಸ್ ಡಿಪಾರ್ಟ್‌ಮೆಂಟ್ ಮುಖಾಂತರ ತುಂಗಭದ್ರಾ ಏರಿಯಾದಲ್ಲಿ ಕೆಲಸ ಮಾಡುತ್ತಾ ಇವೆ. ಅಗ್ರೋ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಮುಖಾಂತರ ಇದುವರೆಗೂ ಕೂಡ 293 ಟ್ರಾಕ್ಟರುಗಳನ್ನು ರೈತರಿಗೆ ಕೊಡಲಾಗಿದೆ. ಒಟ್ಟು ಸುಮಾರು 2 ಸಾವಿರದ 7 ಟ್ರಾಕ್ಟರುಗಳು ಸಂಸ್ಥಾನದಲ್ಲಿ ಕೆಲಸ ಮಾಡುತ್ತಾ ಇವೆ. ಬುಲಡೋಜರ್ಸ್ ಆರ್ಗನೈಸೇಷನ್ ಏನಿದೆ ಅದು ಯಾವ ರೀತಿ ಕೆಲಸ ಮಾಡುತ್ತಾ ಇದೆ ಎಂಬುದನ್ನೆಲ್ಲಾ ಕೂಲಂಕಷವಾಗಿ ತಿಳಿದುಕೊಂಡಿದ್ದೇನೆ. ಒಂದು ಹೊಸ ರೀತಿಯಲ್ಲಿ ಎಲ್ಲವನ್ನೂ ಒಂದುಗೂಡಿಸಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಈ ವರ್ಷ ಪ್ರಗತಿ ಚೆನ್ನಾಗಿದೆ ಎಂದು ಹೇಳುತ್ತೇನೆ. ಮುಂದಿನ ವರ್ಷ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆಯುವುದಕ್ಕೆ ಎಷ್ಟು ಬುಲ್‌ಡೋಜರ್ಸ್ ಕೆಲಸ ಮಾಡಬೇಕು, ಬೋರಿಂಗ್ ಮಷಿನಗಳು ಕೆಲಸ ಮಾಡಬೇಕು, ಎಷ್ಟು ಬಾರಿ ಆಗಬೇಕು ಎಂಬುದನ್ನೆಲ್ಲ ಈಗಾಗಲೇ ಸರಾಸರಿ ಲೆಕ್ಕಹಾಕಿ ಮದ್ರಾಸ್, ಆಂಧ್ರ ಮತ್ತು ನಮ್ಮ ಪ್ರಾಂತ್ಯದಲ್ಲಿ ಹೇಗೆ ಕೆಲಸ ಮಾಡುತ್ತಿದೆ ಎಂಬ ಒಂದು ಕಂಪ್ಯಾರೆಟೀವ್ ಸ್ಟೇಟ್‌ಮೆಂಟ್ ಕೂಡ ತಯಾರು ಮಾಡಿಕೊಂಡು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಅಲ್ಲದೆ ಮುಂದಿನ ವರ್ಷದಲ್ಲಿ ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಂದ ಸುಮಾರು 1,500 ಟ್ರಾಕ್ಟರುಗಳನ್ನು ರೈತರಿಗೆ ಕೊಡತಕ್ಕ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಮತ್ತು 200, 14 ಎಚ್. ಪಿ. ಟ್ರಾಕ್ಟರುಗಳು ಯು.ಎಸ್.ಎಸ್.ಆರ್.ನಿಂದ ಬರುತ್ತವೆ. ಬೈಲೂರಿನಲ್ಲಿ 50 ಎಚ್. ಪಿ. ಟ್ರಾಕ್ಟರ್ ಇದೆ. ಜಿ.ಡಿ.ಆರ್. ನಿಂದ 300, ರುಮೇನಿಯಾದಿಂದ 50 ಎಚ್.ಪಿ. ಟ್ರಾಕ್ಟರುಗಳು ಬರುತ್ತವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಬುಲಡೋಜರುಗಳನ್ನು ತರಿಸಿ ಕೊಡುತ್ತೀರಿ ಅದಕ್ಕೆ ಸ್ಪೇರ್ ಪಾರ್ಟ್ಸ್ ಇಲ್ಲ, ಟೈರ್ ಇಲ್ಲ, ಅಂತಹ ಟ್ರಾಕ್ಟರುಗಳ ಗತಿ ಏನು ?

ಶ್ರೀ ಬಿ. ರಾಚಯ್ಯ.—ಜೆಕೊಸ್ಲೋವಾಕಿಯಾದಿಂದ 400 ಬರುತ್ತವೆ. ಮುಂದಿನ ವರ್ಷ ಅಗ್ರೋ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಮುಖಾಂತರ ಅವುಗಳನ್ನು ಹಂಚಬೇಕೆಂದು ಮಾಡಿದ್ದೇವೆ. ಸ್ಪೇರ ಪಾರ್ಟ್ಸ್ ಮತ್ತು ಸರ್ವೀಸಿಂಗ್ ತೊಂದರೆ ಇದೆ, ಅದಕ್ಕೇ ಸ್ಪೇರ ಪಾರ್ಟ್ಸನ್ನು ಎಸೆನ್‌ಷಿಯಲ್ ಕಮಾಡಿಟಿ ಅಂತ ಪರಿಗಣಿಸಬೇಕೆಂದು ಕೇಂದ್ರ ಸರ್ಕಾರದವರಿಗೆ ಬರೆದಿದ್ದೆವು, ಅದನ್ನು ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟ್‌ನಲ್ಲಿ ಸೇರಿಸಿದ್ದಾರೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನನ್ನು ಏಜೆಂಟಾಗಿ ತೆಗೆದುಕೊಂಡಿದ್ದೇವೆ ಅವರು ಸಂಸ್ಥಾನದಲ್ಲಿ ಎಲ್ಲೆಲ್ಲಿ ಟ್ರಾಕ್ಟರುಗಳು ಕೆಲಸ ಮಾಡುತ್ತಾ ಇವೆ, ಅವಕ್ಕೆ ಏನೇನು ಸ್ಪೇರ ಪಾರ್ಟ್ಸ್ ಬೇಕು ಎಂಬುದನ್ನು ನೋಡಿಕೊಂಡು ಇನ್‌ಡೆಂಟ್ ಮಾಡಿದ್ದಾರೆ. ಮುಂದಿನ ಕೆಲವಾರು ತಿಂಗಳುಗಳಲ್ಲಿ ಈ ಒಂದು ಕಷ್ಟ ನಿವಾರಣೆಮಾಡಲು ಸಾಧ್ಯವಾದೀತು ಎಂದು ಆಶೆ ಮಾಡುತ್ತಾ ಇದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಿನ್ನೆ ದಿವಸ ಕಂಪೆನಿಗೆ ಹೋಗಿ ಕೇಳಿಕೊಂಡು ಬಂದಿದ್ದೇನೆ, ಸರ್ಕಾರದವರೇ ಏಕೆ ಸಾಮಾನುಗಳನ್ನು ತರಿಸಬಾರದು ಎಂದು ಅವರು ಕೇಳುತ್ತಾರೆ, ನಿಮ್ಮನ್ನು ಕೇಳಿದರೆ ಸ್ವಲ್ಪಮಟ್ಟಿಗೆ ಬಗೆಹರಿಸುವುದಕ್ಕೆ ಸಾಧ್ಯವಾದೀತು ಅಂತ ಅನ್ನುತ್ತೀರಿ. ಎಷ್ಟು ದಿವಸದಲ್ಲಿ ತರಿಸಿಕೊಡುತ್ತೀರಿ ಅನ್ನುವುದನ್ನು ತಾವು ಹೇಳಬೇಕು.

ಶ್ರೀ ಬಿ. ರಾಚಯ್ಯ.—ಈಗಾಗಲೇ ಇಂಡೆಂಟ್ ಮಾಡಿದ್ದಾರೆ ಬಂದ ಮೇಲೆ ಕೊಡುತ್ತೇವೆ ಅಂತ ಅಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಬಿ. ಎನ್. ಪಾಟೀಲ್.—ಬ್ಲಾಸ್ಟಿಂಗ್ ಯುನಿಟ್ಸ್ ಎಷ್ಟಿವೆ ? ಎಲ್ಲೆಲ್ಲಿ ಕೆಲಸ ಮಾಡುತ್ತಾ ಇವೆ ?

ಶ್ರೀ ಬಿ. ರಾಚಯ್ಯ.—ಬಿದರ್‌ನಲ್ಲಿ ಒಂದು ಇದೆ, ಅದು ನಮ್ಮ ಅಗ್ರಿಕಲ್ಚರಲ್ ಇಲಾಖೆಗೆ ಸೇರಿದ್ದು. ಈ ವರ್ಷ 20 ಹೊಸ ಯೂನಿಟ್ಟುಗಳನ್ನು ಕೊಂಡುಕೊಳ್ಳಬೇಕೆಂದು ಅಂದುಕೊಂಡಿದ್ದೇವೆ. ಎರಡು ಯೂನಿಟ್‌ಗಳು ಹೊಸಕೋಟೆಯಲ್ಲಿ ಕೆಲಸ ಮಾಡುತ್ತಾ ಇದ್ದವು. ಒಂದು ಯೂನಿಟ್ಟು ಡಿವಿಜನಲ್ ಕಮಿಷನವರು ಫ್ಯಾಮಿನ್ ರಿಲೀಫ್ ವರ್ಕ್ಸ್‌ನಲ್ಲಿ ಕೊಂಡುಕೊಂಡಿರುವ ಹಾಗೆ ಕಾಣುತ್ತದೆ ನಮ್ಮ ಇಲಾಖೆ ಮುಖಾಂತರ ಅಲ್ಲಿಗೆ ಕಳುಹಿಸಿ ಕೊಟ್ಟಿಲ್ಲ. ಅದರೂ ಕೂಡ ಏಕೆ ಸರಿಯಾಗಿ ಕೆಲಸಮಾಡುತ್ತಿಲ್ಲ ಎಂಬುದನ್ನು ವಿಚಾರ ಮಾಡಲು ಅಗ್ರೋ ಇಂಡಸ್ಟ್ರಿಯಲ್ ಕಾರ್ಪೊರೇಷನ್ನಿನವರಿಗೆ ತಿಳಿಸಲಾಗಿದೆ. ನಾವೀಗ ಹೊಸದಾಗಿ ಕೊಂಡಿರತಕ್ಕ ಬ್ಲಾಸ್ಟಿಂಗ್ ಯೂನಿಟ್ಟುಗಳನ್ನು 18 ಜಿಲ್ಲೆಗಳಿಗೂ ಹಂಚಿಕೆ ಮಾಡಲಾಗಿದೆ. ಬೆಂಗಳೂರು ಜಿಲ್ಲೆಗೆ 4 ಯೂನಿಟ್‌ಗಳನ್ನೂ ತುಮಕೂರು ಜಿಲ್ಲೆಗೆ 3, ಕೋಲಾರ ಜಿಲ್ಲೆಗೆ 3, ಚಿತ್ರದುರ್ಗ ಜಿಲ್ಲೆಗೆ 2, ಬಿಜಾಪುರ ಜಿಲ್ಲೆಗೆ 2, ಗುಲ್ಬರ್ಗ ಜಿಲ್ಲೆಗೆ 2, ಬೀದರ್ ಜಿಲ್ಲೆಗೆ 2, ಮೈಸೂರು ಜಿಲ್ಲೆಗೆ 2, ಮತ್ತು ಬೆಳಗಾಂ ಜಿಲ್ಲೆಗೆ 2, ಹೀಗೆ 18 ಜಿಲ್ಲೆಗಳಿಗೂ ಹಂಚಿಕೆ ಮಾಡಿದ್ದೇವೆ. ಈಗ ಸಧ್ಯಕ್ಕೆ ಜಿಲ್ಲೆಗಳ ಅಗತ್ಯಕ್ಕೆ ತಕ್ಕಂತೆ ಜಿಲ್ಲಾಧಿಕಾರಿಗಳಿಂದಲೂ ಮತ್ತು ಬ್ಲಾಕ್ ಡೆವಲಪ್‌ಮೆಂಟ್ ಅಧಿಕಾರಿಗಳಿಂದಲೂ ಬಂದ ಸಲಹೆಯ ಪ್ರಕಾರ ಈ 22 ಯೂನಿಟ್‌ಗಳನ್ನು ಕೊಳ್ಳಲಾಯಿತು. ಆದರೆ ಇನ್ನೂ 30 ಯೂನಿಟ್ಟುಗಳನ್ನು ಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ ಎಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

Sri G. CHANDRAKANT.—The blasting machine was lying idle sometime back in Bidar as there was no lubricating oil. Now it is lying idle because of no operator. Will the Government make available, the services of an operator?

Sri B. RACHAIAH.—I understand that machine does not belong to Agriculture Engineering section.

Sri V. N. PATIL.—How is it that nobody is responsible for that machine?

Sri B. RACHAIAH.—For the first time the hon. Member mentioned it yesterday and I have made enquiries. ಬ್ಲಾಸ್ಟಿಂಗ್ ಮೆಷೀನ್ ಒಂದು ಯೂನಿಟ್ಟಿಗೆ 80 ಸಾವಿರ ಆಗುತ್ತೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ತಿಂಗಳಾನುಗಟ್ಟಲೆ ಅಷ್ಟು ಮೆಷೀನುಗಳು ನಿದ್ರೆಮಾಡುತ್ತಿದ್ದರೆ ಸರ್ಕಾರದವರೇಕೆ ಏನೂ ಕ್ರಮ ಕೈಗೊಳ್ಳಲಿಲ್ಲಾ?

ಶ್ರೀ ಬಿ. ರಾಚಯ್ಯ.—ನಮ್ಮಲ್ಲಿರತಕ್ಕ ರಿಗ್ಸ್‌ಗಳೆಲ್ಲಾ ಬಹಳ ಹಳೆಯವು. ಅವುಗಳನ್ನು ರಿಪೇರಿ ಮಾಡುವುದಕ್ಕೆ ಒಂದೆರಡು ತಿಂಗಳ ಕಾಲವಕಾಶ ಬೇಕು. ಅದರ ಜೊತೆಗೆ ನಮ್ಮಲ್ಲಿ ಸಾಕಷ್ಟು ಟ್ರೇಡ್ ಸಿಬ್ಬಂದಿ ಇಲ್ಲ. ಇರತಕ್ಕ ಜನರು ರಾಜ್ಯದಲ್ಲಿದ್ದರೂ ಇಲ್ಲ ಕೆಲಸಕ್ಕೆ ತೊಂದರೆಯಾಗುತ್ತದೆ. ಇನ್ನು ಕೆಲವರು ವರ್ಗ ಮಾಡಿದ ಸ್ಥಳಕ್ಕೆ ಹೋಗದೆ ಅಸಂಮ್ಮತಿ ಸೂಚಿಸಿದಾಗಲೂ ಅಲ್ಲ ಕೆಲಸಕ್ಕೆ ತೊಂದರೆ ಆಗೇ ಆಗುತ್ತದೆ. ಆದ್ದರಿಂದ 100 ಜನ ಬೇಕಾಗಿರತಕ್ಕ ಕಡೆ 200 ಜನರನ್ನು ಟ್ರೈನಿಂಗಿಗೆ ಕಳುಹಿಸಲಾಗುತ್ತಿದೆ. ಅಷ್ಟೇ ಅಲ್ಲದೆ ಈ ಆಪರೇಟರುಗಳು ಹೆಚ್ಚು ಆಸಕ್ತಿ ವಹಿಸಿ ಕೆಲಸಮಾಡುವುದಕ್ಕಾಗಿ ಅವರಿಗೆ ಒಂದು ಇನ್‌ಸೆಂಟೀವ್ ಕೊಡಲು ಕೆಲವು ಬಹುಮಾನಗಳನ್ನು ಕೊಡಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಕೆಲಸಕ್ಕೆ ಬಾರದ ಹಳೆಯ ರಿಗ್ಸ್‌ನ್ನು ಮುಂದಿನ ವರ್ಷ ಕಂಡೆಂ ಮಾಡಿ, ಅಂದರೆ ಇನ್ನು ಅವುಗಳನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕವುಗಳನ್ನು ಕಂಡೆಂ ಮಾಡಿ, ಅವುಗಳ ಬದಲ 20 ಹೊಸ ರಿಗ್ಸ್‌ಗಳನ್ನು ತರಿಸಿಕೊಳ್ಳಬೇಕೆಂಬ ಉದ್ದೇಶ ಸರ್ಕಾರಕ್ಕಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಸರ್ಕಾರದ ಟ್ರೈನಿಂಗ್ ಶಾಲೆಯಲ್ಲಿ ಹೆಚ್ಚು ಜನರಿಗೇಕೆ ಟ್ರೈನಿಂಗ್ ಕೊಡಬಾರದು?

ಶ್ರೀ ಬಿ. ರಾಚಯ್ಯ.—ಈಗ ಕೊಡಲಾಗುತ್ತಿದೆ. ಆದರೆ ಇದು ಕಷ್ಟದ ಕೆಲಸ ಎಂದು ಜನ ಬರುತ್ತಿಲ್ಲ. ಬಂದರೂ ಕೂಡ 8 ದಿನಗಳಿಂತ ಜಾಸ್ತಿ ಕೆಲಸದಲ್ಲಿ ಇರತಕ್ಕವರು ಬಹಳ ಕಡಮೆ. ಆದ್ದರಿಂದ ಈ ಕೆಲಸಕ್ಕೆ ಬರತಕ್ಕ ಜನರೇ ಬಹಳ ಕಡಮೆ. ಇತ್ತೀಚೆಗೆ ಇವರಿಗೆ ಸಂಬಳ ಕೂಡ ಜಾಸ್ತಿ ಮಾಡಬೇಕೆಂದು ತೀರ್ಮಾನ ಮಾಡಿದೆ. ಹೀಗೆ ಅವರಿಗೆ ಇನ್ನೂ ಹೆಚ್ಚಿನ ರಿಯಾಯಿತಿಗಳನ್ನು ಕೊಡಬೇಕೆಂದು ತೀರ್ಮಾನಮಾಡಿದೆ. ನಾವು ಈ ರಿಗ್ಸ್‌ಗಳನ್ನು ಸರಬರಾಯಿ ಮಾಡತಕ್ಕ ಕಂಪೆನಿ

(ಶ್ರೀ ಬಿ. ರಾಚಯ್ಯ)

ಯಾರಿಗೇ ಹೇಳಿದೆವು ಅವರಿಗೇ ಬೇಕಾಗಿದ್ದರೆ ಡಬ್ಬಲ್ ಛಾರ್ಜನ್ನು ಕೊಟ್ಟರೂ ಕೊಡುತ್ತೇವೆ ನೀವೇ ಕೆಲಸವನ್ನೂ ಮಾಡಿಸಿ ಕೊಡಿ ಎಂದು ಕೇಳಿದೆವು. ಅದಕ್ಕೆ ಅವರು ಸಾಧ್ಯವಿಲ್ಲ ಎಂದು ಹೇಳಿದರು. ಆ ಕೆಲಸಕ್ಕೆ ಯಾರೂ ಮುಂದೆ ಬರುತ್ತಿಲ್ಲ. ನಾವು ಇತ್ತೀಚೆಗೆ ಕೇಂದ್ರಕ್ಕೆ ಬೇರೆ ಬರೆದಿದ್ದೇವೆ. ಅಲ್ಲಿಂದಲೂ ಕೂಡ 18–20 ಹೊಸ ನಮೂನೆಯ ರಿಗ್ಸ್ ಬರುತ್ತವೆ. ಬೀಹಾರಿನಿಂದ ದೊಡ್ಡ ಸೈಜಿನ ರಿಗ್ಸ್ 3 ಬರುತ್ತವೆ. ಈ ಎಲ್ಲಾ ಕಾರಣಗಳಿಂದ ಮುಂದಕ್ಕೆ ಈ ಬೋರ್‌ವೆಲ್‌ಗಳ ಪರಿಸ್ಥಿತಿ ಸುಧಾರಣೆ ಆಗಬಹುದೆಂದು ಹೇಳುತ್ತೇನೆ. ಆದರೆ ನಮ್ಮಲ್ಲಿ ಸಾಕಷ್ಟು ಹಣವಿಲ್ಲ. ಎಲ್ಲಾ ಜಿಲ್ಲೆಗಳಿಗೂ ಸಾಕಾಗುವಷ್ಟು ರಿಗ್ಸ್‌ಗಳನ್ನು ತರಿಸಿ ಹಂಚುವುದಕ್ಕೆ ಅಷ್ಟು ಹಣವಿಲ್ಲ.

ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ಕಡಬದಲ್ಲಿ ಭಗವಾನ್ ಎನ್ನತಕ್ಕವರಲ್ಲಿ ಒಂದು ಇದೆ. ಅಲ್ಲಿ ಕಳೆದ ಒಂದೂವರೆ ತಿಂಗಳಿಂದಲೂ ಒಂದು ಬಾವಿಯಲ್ಲಿ ಕುಳಿತಿರುವ ರಿಗ್ಸನ್ನು ಹೊರಕ್ಕೆ ತೆಗೆಸಲು ಸರ್ಕಾರಕ್ಕೆ ಇಷ್ಟವಿಲ್ಲ; ಸಹಾನುಭೂತಿಯೂ ಇಲ್ಲ. ಅತ್ತ ರೈತರು ಅಲ್ಲಿ ಬೆಳೆಯನ್ನೂ ತೆಗೆಯುವಂತಿಲ್ಲ. ಒಂದೂವರೆ ತಿಂಗಳಿಂದಲೂ ಹಾಗೇ ಬಾವಿಯಲ್ಲಿ ಕುಳಿತಿದೆ. ಇಷ್ಟಾದರೂ ಸರ್ಕಾರದವರು ಕೊಡತಕ್ಕ ರೇಟಿಗಿಂತ ರೈತರು ಕೊಡತಕ್ಕ ಹಣ ಜಾಸ್ತಿ ಆಗಿದ್ದರೂ ರೈತರಿಗೆ ತೊಂದರೆ ತಪ್ಪುವಂತಿಲ್ಲ............

ಉಪಾಧ್ಯಕ್ಷರು.—ನೀವು ಅದನ್ನೆಲ್ಲಾ ಮಂತ್ರಿಗಳಿಗೆ ಬರೆದು ಕೊಡಿ.

ಶ್ರೀ ಬಿ. ರಾಚಯ್ಯ.—ನಮ್ಮಲ್ಲಿ ಇರತಕ್ಕ ರಿಗ್ಸಗಳೆಲ್ಲಾ ಬಹಳ ಹಳೇವು. ಅವುಗಳನ್ನೇ ಒಂದು ಪ್ರಯಾರಿಟಿ ಬೇಸಿಸ್ ಮೇಲೆ ಎಲ್ಲರಿಗೂ ಒದಗಿಸುತ್ತಿದ್ದೇವೆ.

Sri V. N. PATIL.—In Bihar 8,000 wells were dug within a period of six months by a corporation. Why not our Government do when such corporations can do ?

ಶ್ರೀ ಬಿ. ರಾಚಯ್ಯ.—ಸ್ವಿಸ್ ಕಂಪೆನಿ ಎಂಬುದಾಗಿ ಒಂದು ಕಂಪನಿ ಇದೆ. ಅದರ ಮೂಲಕ ಕೆಲವು ಕಡೆ ಬಾವಿಗಳನ್ನು ತೆಗೆಸಲಾಗುತ್ತಿದೆ. ಇನ್ನು ಜಿಯಲಾಜಿಕಲ್ ಮೂಲಕ ಕೆಲವು, ಅಗ್ರಿಕಲ್ಚರಲ್ ಇಲಾಖೆಯ ಮೂಲಕ ಕೆಲವು ಮತ್ತು ಪಿ.ಡಬ್ಲ್ಯು.ಡಿ. ಮೂಲಕ ಕೆಲವು ನ್ಯಾಷನಲ್ ವಾಟರ್ ಸಪ್ಲೈ ಬಾವಿಗಳನ್ನು ತೆಗೆಸಲಾಗುತ್ತಿದೆ. ಆದರೆ ಅಲ್ಲೆಲ್ಲಾ ಏನು ಕಾರಣದಿಂದ ಕೆಲಸ ಚೆನ್ನಾಗಿ ನಡೆಯುತ್ತಿದೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಹೆಚ್ಚು ದಕ್ಷತೆಯಿಂದ ಕೆಲಸ ಮಾಡುವವರಿಗೆ ಹೆಚ್ಚು ಪ್ರೋತ್ಸಾಹ ನೀಡುವುದಕ್ಕೆ ಸರ್ಕಾರ ಹಿಂದೆಗೆಯುವುದಿಲ್ಲ ಎಂದು ಹೇಳುತ್ತೇನೆ. ಮತ್ತೆ ಬೇರೆ ಪ್ರಾಂತಗಳು ಅಂದರೆ, ಮದ್ರಾಸ್, ಮಹಾರಾಷ್ಟ್ರ, ಆಂಧ್ರಪ್ರದೇಶ, ಇವುಗಳಲ್ಲಿ ಯಾವ ರೀತಿ ಕೆಲಸ ಮಾಡಿದೆ, ಎಷ್ಟು ಗಂಟೆಗಳವರೆಗೆ ಕೆಲಸ ಮಾಡಿದರೆ ಎಷ್ಟು ಬಾವಿಗಳನ್ನು ತೆಗೆಸಿದೆ— ಎಂಬ ಬಗ್ಗೆ ವರ್ಕ್‌ಲೋಡ್ ಕಂಪೇರ್ ಮಾಡಿ ನೋಡಿದಾಗ ಸ್ವಲ್ಪಮಟ್ಟಿಗೆ ಈ ಇಲಾಖೆಯಲ್ಲಿ ತೃಪ್ತಿಕರವಾಗಿ ನಡೆಯದೇ ಇದ್ದರೂ ಸ್ವಲ್ಪ ಹೆಚ್ಚುಕಡಿಮೆ ಕೆಲಸ ಚೆನ್ನಾಗಿ ನಡೆದಿದೆ, ಎಂದು ಅಂಕಿ ಅಂಶಗಳು ತಿಳಿದುಬಂದಿದೆ, ಒಟ್ಟಿನಲ್ಲಿ ಇಲ್ಲಿ ಕೆಲಸ ಇನ್ನೂ ಚೆನ್ನಾಗಿ ನಡೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮೆಲ್ಲರ ಕುತೂಹಲವಿದೆ. ಸಾಧ್ಯವಾದಮಟ್ಟಿಗೆ ಇದರಲ್ಲಿ ಏನೇನು ತೊಡಕುಗಳಿವೆ ಅವನ್ನು ಕೂಡಲೇ ಬಗೆಹರಿಸುತ್ತೇವೆ.

ಇನ್ನು ರೈತರಿಗೆ ಸಾಲದ ಸೌಲಭ್ಯ ಕಡಮೆ ಇದೆಯೆಂದು ಹೇಳಿದ್ದಾರೆ. ಆದರೆ ಇವತ್ತು 27,85,18,475 ರೂಪಾಯಿಗಳನ್ನು ಸಹಕಾರ ಸಂಘಗಳ ಮುಖಾಂತರ ಹಾಗೂ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ 1957–58ರಿಂದ 1967–68ರವರೆಗೆ ಸರ್ಕಾರ ಸಾಲ ಕೊಟ್ಟಿದೆ. ಅದರಿಂದಾಗಿ ಷೆಡ್ಯೂಲ್ ಬ್ಯಾಂಕ್ ಮುಖಾಂತರ ಸರ್ಕಾರದ ಸಾಲ ರೈತರಿಗೆ ದೊರೆಯುತ್ತಿದೆ. ಈ ಸಾಲ ಕೇವಲ ಅನುಕೂಲವಾಗಿರತಕ್ಕ ರೈತರಿಗೆ ತಂತಮ್ಮ ಸ್ವಂತ ಕಾಲಿನ ಮೇಲೆ ನಿಲ್ಲತಕ್ಕವರಿಗೆ ದೊರಕಿದೆ. ಆದರೆ ಸಣ್ಣ ರೈತರಿಗೆ ಇದರಿಂದ ಹೆಚ್ಚಿಗೆ ಅನುಕೂಲವಾಗುತ್ತಾ ಇಲ್ಲ. ಅದಕ್ಕಾಗಿ, ನ್ಯಾಷನಲ್ ರೂರಲ್ ಕ್ರೆಡಿಟ್ ಸರ್ವೆ ಸಮಿತಿ (ವೆಂಕಟಪ್ಪ ಕಮಿಟಿ) ಯವರು ಸಣ್ಣ ಹಿಡುವಳಿದಾರರಿಗೆ ಬಾವಿಗಳನ್ನು ತೋಡಿಸುವುದು, ನೀರನ್ನು ಒದಗಿಸುವುದಕ್ಕೆ ಪಂಪು ಸೆಟ್ಟುಗಳನ್ನು ಒದಗಿಸುವುದು, ವಿದ್ಯುಚ್ಛಕ್ತಿ ಕೊಡಿಸುವುದು—ಈ ಕೆಲಸಗಳನ್ನು ಮಾಡುವುದಕ್ಕೆ ಒಂದು ಕಾರ್ಪೊರೇಷನನ್ನು ಏರ್ಪಾಡು ಮಾಡಿ ಅದರ ಮುಖಾಂತರ ವಿದ್ಯುಚ್ಛಕ್ತಿ ಮಂಡಲಿಗೆ ಸಾಲಗಳನ್ನು ಕೊಟ್ಟು ಈ ಕೆಲಸಗಳನ್ನು ಮಾಡಿಸಬಹುದು. ಬಹುಶಃ ಈ ಸಲಹೆಯನ್ನು ಕೇಂದ್ರ

ಸರ್ಕಾರದವರು ಒಪ್ಪುತ್ತಾರೆಂಬ ನಿರೀಕ್ಷೆ ಇದೆ. ಇದುವರೆಗೂ ವ್ಯವಸಾಯೋಪಕರಣಗಳಾಗಲೀ, ತಾಂತ್ರಿಕ ನೆರವಾಗಲೀ, ಬಹಳ ಉತ್ತಮ ರೀತಿಯಲ್ಲಿ ಬೀಜ, ಗೊಬ್ಬರವಾಗಲೀ ಅಥವಾ ಒಳ್ಳೆಯ ಸಲಕರಣೆಗಳನ್ನಾಗಲೀ ನಾವು ರೈತರಿಗೆ ಏನು ಕೊಡುತ್ತಿದ್ದೇವೆ, ಅವು ಸ್ವಲ್ಪಮಟ್ಟಿಗೆ ಬುದ್ಧಿವಂತರಾದ ರೈತರಿಗೆ ಹಾಗೂ ಶಕ್ತಿ ಇರುವವರಿಗೆ ಸಿಕ್ಕಿವೆ. ಇನ್ನು ಕೆಲವರಿಗೆ ಸಿಕ್ಕಿಲ್ಲ. ಈ ರೀತಿ ಸಿಗದೇ ಇರುವುದರಿಂದ ರೂರಲ್ ಏರಿಯಾದಲ್ಲಿ ಡಿಸ್‌ಪ್ಯಾರಿಟಿ ಬಿಟ್‌ವೀನ್ ದಿ ರಿಚ್ ಅಂಡ್ ದಿ ಪೂರ್ ಹೆಚ್ಚಿನ ರೀತಿಯಲ್ಲಿ ಆಗುತ್ತಿದೆ. ಅಂತಹ ಅವಕಾಶಕ್ಕೆ ಎಡೆಗೊಡದೆ ಎಲ್ಲಾ ರೈತರಿಗೂ ಒಂದು ಅವಕಾಶ ದೊರೆತು ಅವರೂ ಕೂಡ ತಮ್ಮ ಬೆಳೆಯನ್ನು ಬೆಳೆಯುವುದಕ್ಕೆ ಸರ್ಕಾರ ಏರ್ಪಾಡು ಮಾಡುತ್ತದೆಂದು ನಾನು ಹೇಳುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಅಂತಹವರಿಗೆ ಅವಕಾಶವನ್ನು ಯಾವ ರೀತಿಯಲ್ಲಿ ದೊರಕಿಸಿ ಕೊಡುತ್ತೀರಿ ?

ಶ್ರೀ ಬಿ. ರಾಚಯ್ಯ.—ಮಾನ್ಯ ಶ್ರೀ ಚನ್ನಬಸಪ್ಪನವರು ಮಾತನಾಡುವಾಗ ಒಂದು ವಿಷಯವನ್ನು ಹೇಳಿದರು. ಪ್ರತಿಯೊಬ್ಬ ರೈತನಿಗೆ ಅವನ ಆಸ್ತಿ, ಲೇನಾದೇನದ ಬಗ್ಗೆ ಒಂದು ಕಾರ್ಡನ್ನು ಅವನ ಕೈಗೆ ಕೊಡುವಾಗ, ಅವನ ಸಾಲದ ವ್ಯವಸ್ಥೆಯನ್ನು ಸರಿದೂಗಿಸಲು ಮೈಸೂರು ಸರಕಾರ ಏಕೆ ಸಾಲ ಕೊಡಬಾರದು ಎಂದು ಬಹುಶಃ ರೆವಿನ್ಯೂ ಮಂತ್ರಿಗಳು ಅದರ ಬಗ್ಗೆ ಉತ್ತರ ಹೇಳುತ್ತಾರೆ. ಅಂತಹ ಒಂದು ಪಟ್ಟಿಯನ್ನು ತಯಾರುಮಾಡುವುದಕ್ಕೆ ಒಂದು ಕಮಿಟಿ ಮಾಡಿದ್ದಾರೆ. ರೈತರಿಗೆ ಈ ಒಂದು ವ್ಯವಸ್ಥೆ ತುಂಬಾ ಸುಲಭವಾಗುತ್ತದೆಂದು ನಾನು ನಂಬಿದ್ದೇನೆ. ಎಷ್ಟು ಹೇಳಿದರೂ ಸಂಪೂರ್ಣವಾಗಿ ಎಲ್ಲರಿಗೂ ತೃಪ್ತಿಪಡಿಸುವುದಕ್ಕಾಗುವುದಿಲ್ಲ.

ಕೃಷಿ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸಿರುವುದರಿಂದ ಸುಮಾರು 8 ಲಕ್ಷ ರೂಪಾಯಿಗಳಷ್ಟು ರೆಕರಿಂಗ್ ಎಕ್ಸ್‌ಪೆಂಡಿಚರ್‌ನ್ನು ಸರ್ಕಾರದವರು ಕೊಡುವುದಕ್ಕೆ ಒಪ್ಪಿದ್ದಾರೆ. ಕೃಷಿಯಲ್ಲಿ ಅಧಿಕ ತಳಿಗೋಸ್ಕರ, ಸುಮಾರು 13 ತಳಿಗಳ ವಿವರಣೆಗಳನ್ನು ಕೊಟ್ಟು ರೈತರಿಗೆ ಉಪಕಾರ ಮಾಡಿಕೊಟ್ಟಿದ್ದಾರೆ. ಮುಂದಿನ ವರ್ಷದಲ್ಲಿ ಅಗ್ರಿಕಲ್‌ಚರಲ್ ಇಂಜನಿಯರಿಂಗ್ ಕಾಲೇಜನ್ನು ರಾಯಚೂರು ಜಿಲ್ಲೆಯಲ್ಲಿ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಮತ್ತೆ ಮೀನುಗಾರಿಕೆ ಕಾಲೇಜನ್ನೂ ಕೂಡ ತೆರೆಯುವುದಕ್ಕೆ ಪ್ರಯತ್ನಮಾಡಿದ್ದಾರೆ. ಇನ್ನೂ ಕೂಡ ವಿವಿಧ ಕೃಷಿ ವಿಶ್ವವಿದ್ಯಾನಿಲಯಕ್ಕೆ ಬೇಕಾದಂಥ ಭೂಮಿಯನ್ನೂ ಮತ್ತೆ ಅದಕ್ಕೆ ಬೇಕಾಗಿರತಕ್ಕ ಲ್ಯಾಬೊರೇಟರಿ ಸಾಮಾನುಗಳನ್ನು ಹೆಚ್ಚಿನ ರೀತಿಯಲ್ಲಿ ಒದಗಿಸಿಕೊಟ್ಟಿದ್ದಾರೆ. ಅದಕ್ಕಾಗಿ ಹೆಚ್ಚಿಗೆ ಹಣವನ್ನೂ ಒದಗಿಸಿಕೊಟ್ಟಿದ್ದಾರೆ.

ಇನ್ನು ತೋಟಗಾರಿಕೆ ವಿಚಾರದಲ್ಲಿ ಆ ಇಲಾಖೆ ಬಹಳ ಚೆನ್ನಾಗಿ ಕೆಲಸಮಾಡುತ್ತಿದೆ. ಎಲ್ಲಾ ತಾಲ್ಲೂಕುಗಳಲ್ಲಿಯೂ ಇದರ ವ್ಯಾಪ್ತಿ ಆಗಬೇಕೆಂದು ಹೇಳಿದ್ದಾರೆ. ಬಹುಶಃ 100 ತಾಲ್ಲೂಕುಗಳಲ್ಲಿ ಹಾರ್ಟಿಕಲ್‌ಚರಲ್ ಡಿಪಾರ್ಟ್‌ಮೆಂಟಿನ ಒಳ್ಳೆಯ ಫಾರಮ್ಸ್ ಇವೆ. ಇನ್ನುಳಿದ 74 ತಾಲ್ಲೂಕುಗಳಲ್ಲಿ ಇನ್ನೂ ಅವನ್ನು ಮಾಡಬೇಕಾಗಿದೆ. 64 ಸ್ಥಳಗಳಲ್ಲಿ ಇದರ ಆಫೀಸು ಕಟ್ಟಡಗಳು ಮತ್ತು ಸ್ಟಾಫ್ ಕ್ವಾಟರ್ಸ್ ಕೆಲಸ ನಡೆದಿದೆ. ಈ ಇಲಾಖೆಯ ಮುಖಾಂತರ ಮೂರು ಮುಖ್ಯವಾದ ಕೆಲಸಗಳನ್ನು ಮಾಡಿಸುತ್ತಿದ್ದಾರೆ, ಹಣ್ಣಿನ ಗಿಡಗಳನ್ನು ಬೆಳೆಸುವುದು, ತರಕಾರಿ ಗಿಡಗಳನ್ನು ಬೆಳೆಸುವುದು ಮತ್ತು ಹೂವಿನ ಗಿಡಗಳನ್ನು ಬೆಳೆಸುವುದು—ಈ ಕೆಲಸಗಳು ಆಗುತ್ತಿವೆ. ಇನ್ನು ಅಲ್ಲಿ ಉದ್ಯಾನವನಗಳನ್ನು ನೋಡಿಕೊಳ್ಳುವುದು, ಜೂ ಗಾರ್ಡನ್ ನೋಡಿಕೊಳ್ಳುವುದು, ಈ ಕೆಲಸಗಳನ್ನು ಅಲ್ಲಿ ಮಾಡುತ್ತಿದ್ದಾರೆ. ಈ ವರ್ಷ ಲಾಲ್‌ಬಾಗ್ ಮತ್ತು ಕಬ್ಬನ್‌ಪಾರ್ಕ್‌ಗಳನ್ನು ಇನ್ನೂ ಬಹಳ ಉತ್ತಮ ಪರಿಸ್ಥಿತಿಯಲ್ಲಿಡಬೇಕೆಂದು ಅಲ್ಲಿ ಹೆಚ್ಚಿಗೆ ಉದ್ಯಾನವನಗಳನ್ನು ಬೆಳೆಸಬೇಕೆಂದು ಸರ್ಕಾರದವರು ಹೆಚ್ಚು ಹಣವನ್ನು ಒದಗಿಸಿದ್ದಾರೆ. ಇವು ಒಂದು ಆಕರ್ಷಣೀಯ ಸ್ಥಳಗಳಾಗಿ ಉಳಿಯುವುದಕ್ಕೆ ಏನೇನು ಮಾಡಬೇಕೋ ಆ ಕೆಲಸಕಾರ್ಯಗಳನ್ನು ಇಟ್ಟುಕೊಂಡಿದ್ದಾರೆ. ಹಾಗೆಯೇ ಜೂ ಗಾರ್ಡನನ್ನು ವಿಸ್ತರಣೆ ಮಾಡುವುದಕ್ಕೆ ಹೆಚ್ಚು ಹಣವನ್ನು ಸರ್ಕಾರದವರು ಕೊಟ್ಟಿದ್ದಾರೆ. ಪ್ರತಿಯೊಂದು ಮೃಗಾಲಯದಲ್ಲಿ ಮೃಗಗಳು ಸ್ವಾಭಾವಿಕ ಪರಿಸ್ಥಿತಿಯಲ್ಲಿ ಅಡ್ಡಾಡುವುದಕ್ಕೆ ವ್ಯವಸ್ಥೆ ಮಾಡಿದೆ. ಆ ಕೆಲಸವನ್ನು ಮಾಡುವುದಕ್ಕೆ ಸಾಕಷ್ಟು ಹಣವನ್ನು ಒದಗಿಸಿಕೊಟ್ಟಿದ್ದಾರೆ. ಹಿಲ್ ಸ್ಟೇಷನ್—ನಂದಿ, ಕೆಮ್ಮಣ್ಣುಗುಂಡಿ, ಕೆ. ಆರ್. ಸಾಗರ—ಈ ಸ್ಥಳಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಬರತಕ್ಕ ಪ್ರಯಾಣಿಕರಿಗೆ ಆಕರ್ಷಣೀಯವಾಗಿರುವುದಕ್ಕಾಗಿ ಮತ್ತು ಅಲ್ಲಿ ಹೆಚ್ಚು ಸ್ಥಳಾವಕಾಶಮಾಡುವುದಕ್ಕಾಗಿ ಏರ್ಪಾಡುಮಾಡಿದ್ದಾರೆ. ಒಟ್ಟಿನಲ್ಲಿ ಹಣ್ಣು, ಹಂಪಲು, ತೆಂಗು, ಅಡಿಕೆ, ಕ್ಯಾಷ್ಯೂನಟ್, ಪ್ಪರ್ ಮತ್ತು ಇತರ ಬೆಳೆಗಳಿಗೆ ಬರತಕ್ಕ ರೋಗಗಳನ್ನು ತಡೆಗಟ್ಟುವುದಕ್ಕಾಗಿ ರೀಫೈನಾನ್ಸ್ ಕಾರ್ಪೊರೇಷನ್ ಮುಖಾಂತರ ಹೆಚ್ಚಿನ ಹಣವನ್ನು ಪಡೆದು ರೈತರಿಗೆ ಸಾಲವನ್ನು ಕೊಟ್ಟು ಅವುಗಳ ರಕ್ಷಣೆ ಮಾಡುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಗಿಡಗಳನ್ನೂ ಒದಗಿಸುವ ವ್ಯವಸ್ಥೆಮಾಡಿದ್ದಾರೆ.

(ಶ್ರೀ ಬಿ. ರಾಚಯ್ಯ)

ಕಾಲ ಹೆಚ್ಚಿಗೆ ಇಲ್ಲದೇ ಇರುವುದರಿಂದ ಅಂಕೆ ಅಂಶಗಳನ್ನು ಕೊಟ್ಟು ತಮ್ಮ ವೇಳೆಯನ್ನು ತೆಗೆದು ಕೊಳ್ಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಒಟ್ಟಿನಲ್ಲಿ ಆಹಾರ ಸ್ವಯಂಪೂರ್ಣತೆ ಕೇವಲ ದವಸ ಧಾನ್ಯಗಳನ್ನು ಬೆಳೆಯುವ ಮುಖಾಂತರವೇ ಆಗುವುದಿಲ್ಲ. ಹಣ್ಣಿನ ಗಿಡಗಳನ್ನು ತರಕಾರಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವುದರಿಂದ ಇನ್ನಷ್ಟು ಪೌಷ್ಟಿಕ ಆಹಾರವನ್ನು ಜನತೆಗೆ ದೊರಕಿಸಿ ಕೊಡಬಹುದು. ಈ ಕೆಲಸವನ್ನೂ ಮಾಡುವುದರಲ್ಲಿ ತೋಟಗಾರಿಕೆ ಇಲಾಖೆ ಬಹಳವಾಗಿ ನೆರವಾಗು ತ್ತಿದೆ. ಇನ್ನು ಕೆಲವು ಸಣ್ಣಪುಟ್ಟ ನ್ಯೂನತೆಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪಮಾಡಿದ್ದಾರೆ. ಎಲ್ಲವನ್ನೂ ಕೂಡ ಸಂಪೂರ್ಣವಾಗಿ ಉತ್ತರಿಸುವುದಕ್ಕೆ ಮಧ್ಯೆ ಮಧ್ಯೆ ಮಾನ್ಯ ಸದಸ್ಯರು ಕೆಲವು ಪ್ರಶ್ನೆಗಳನ್ನು ಕೇಳಿರುವದರಿಂದ ಕೆಲವು ಬಿಟ್ಟು ಹೋಗಿರಬಹುದು. ಮಾನ್ಯ ಸದಸ್ಯರು ಏನು ಸಲಹೆ ಗಳನ್ನು ಕೊಟ್ಟಿದ್ದಾರೋ ಅವೆಲ್ಲವನ್ನು ಸಾಧ್ಯವಾದಮಟ್ಟಿಗೆ ಗುರ್ತು ಹಾಕಿಕೊಂಡಿದ್ದೇನೆ. ಅವುಗಳ ಪೈಕಿ ಡಾ|| ನಾಗನಗೌಡರು 3–4 ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಫರ್ಟಿ ಲೈಜರ್ಸ್ ಮಿಕ್ಸ್ಚರ್ಸ್ ಟೆಸ್ಟ್ ಮಾಡುವುದು, ಷುಗರ್ ಫ್ಯಾಕ್ಟರಿ ಕಂಟ್ರೋಲ್ ಬಿಲ್ ಜಾರಿಗೆ ತರು ವುದು ಮತ್ತು ಸೀಡ್ ಆಕ್ಟ್ ಜಾರಿಗೆ ತರುವುದು, ಈ ವಿಚಾರಗಳನ್ನು ಹೇಳಿದ್ದಾರೆ. ಇವನ್ನು ಆದಷ್ಟು ಜಾಗ್ರತೆ ಅಮಲಿನಲ್ಲಿ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಮಾನ್ಯ ಸಭೆಯ ಸದಸ್ಯರು ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾ ರದ ಪರವಾಗಿ ನಾನು ಹೇಳಿದಂಥ ಕೆಲವಾರು ಉತ್ತರಗಳನ್ನು ಶಾಂತರೀತಿಯಿಂದ ಕೇಳಿದ್ದಕ್ಕಾಗಿ ಮಾನ್ಯ ಸದಸ್ಯರೆಲ್ಲರಿಗೂ ಮತ್ತು ತಮಗೂ ನನ್ನ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸಿ, ಈ ಬೇಡಿಕೆಗಳನ್ನು ತಾವೆಲ್ಲರೂ ಒಪ್ಪಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

8–30 A.M.

ಶ್ರೀ ವಿ. ಎನ್. ಪಾಟೀಲ್.—ಈಗ ರೈತರು ಬೆಳೆಸಿದರೆ ಮಾರ್ಕೆಟ್ಟಿನಲ್ಲಿ ಸರಿಯಾದ ಬೆಲೆಯಿಲ್ಲ. ಉದಾಹರಣೆಗೆ ಆಗಸ್ಟ್ 1968ರಲ್ಲಿ ಬೆಲ್ಲದ ಬೆಲೆ ಇಡೀ ರಾಜ್ಯದಲ್ಲಿ ಕ್ವಿಂಟಲಿಗೆ 250 ರೂಪಾಯಿ ಇದ್ದದ್ದು ಡಿಸೆಂಬರ್ 1968ರಲ್ಲಿ ಕೂಡಲೇ 50–60 ರೂಪಾಯಿಗೆ ಇಳಿಯಿತು. ಇದರಿಂದ ಅವನು ಕಾಸ್ಟ್ ಆಫ್ ಪ್ರೊಡಕ್ಷನ್ ಹೇಗೆ ಮೀಟ್ ಮಾಡುವುದಕ್ಕಾಗುತ್ತದೆ? ಅವನಿಗೆ ಪ್ರೊಟೆಕ್ಷನ್ ಯಾವ ರೀತಿ ಕೊಡುತ್ತೀರಿ ?

ಶ್ರೀ ಬಿ. ರಾಚಯ್ಯ.—ಈಗ ಗೊತ್ತುಮಾಡಿದ ಬೆಲೆ ಏನಿದೆ, ಅದನ್ನು ಕಡಿಮೆ ಮಾಡುವುದಿಲ್ಲ. ರೈತರಿಂದ ಅದನ್ನು ಕೊಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಬೆಲೆ ಕಡಿಮೆ ಆದಾಗ ಹತ್ತಿರದ ಪ್ರಾಂತ್ಯಕ್ಕೆ ಸಾಗಿಸಿಕೊಂಡು ಹೋಗಬಹುದೆಂದು ಅನುಮತಿಯನ್ನು ರೈತರಿಗೆ ಕೊಟ್ಟಿ ದ್ದೇವೆ. ಈ ಹೈಬ್ರಿಡ್ ಜೋವರಾಗಲಿ, ಮೆಕ್ಕೆಜೋಳವಾಗಲಿ, ಅಥವಾ ಮೆಕ್ಸಿಕನ್ ವೀಟ್ ಏನಿದೆ, ಅದನ್ನು ರೈತರಿಗೆ ಕಡಿಮೆ ದರದಲ್ಲಿ ಕೊಡಬೇಕೆಂದು ಸರ್ಕಾರದವರು ಪರಿಶೀಲನೆಯಲ್ಲಿ ಇಟ್ಟುಕೊಂಡಿದ್ದಾರೆ. ಈ ರೀತಿ ರಕ್ಷಣೆ ಕೊಡದಿದ್ದಪಕ್ಷದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರೈತರು ಬೆಳೆಯುವುದಕ್ಕೆ ಸಾಧ್ಯ ವಿಲ್ಲ. ಸಪೋರ್ಟು ಪ್ರೈಸ್ ಯಾವ ರೀತಿ ಕೊಡಬೇಕೆಂದು ಸರ್ಕಾರದವರು ಪರಿಶೀಲನೆ ಮಾಡುತ್ತಿ ದ್ದಾರೆ.

†ಶ್ರೀ ಎಚ್. ಸಿ. ಲಿಂಗಾರೆಡ್ಡಿ.—(ಮೀನುಗಾರಿಕೆ ಮತ್ತು ಬಂದರು ಶಾಖೆಗಳ ರಾಜ್ಯ ಮಂತ್ರಿಯವರು).—ಮಾನ್ಯ ಸಭಾಧ್ಯಕ್ಷರೇ, ಮೀನುಗಾರಿಕೆಯ ಇಲಾಖೆಗೆ ಸಂಬಂಧಪಟ್ಟ ಆಯ ವ್ಯಯದ ಸಂಬಂಧವಾಗಿ ಅನೇಕ ಮಾನ್ಯ ಸದಸ್ಯರುಗಳು ಬಹಳ ಅಮೂಲ್ಯವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರೆಲ್ಲರನ್ನೂ ನಾನು ಹೃತ್ಪೂರ್ವಕವಾಗಿ ವಂದಿಸುತ್ತೇನೆ; ಮತ್ತು ಅವರ ಬಗ್ಗೆ ಕೇವಲ ಕೆಲವು ಮಾತುಗಳನ್ನು ಮಾತ್ರ ಹೇಳಿದರೆ ಸಾಕು ಎಂದು ತಿಳಿಯುತ್ತೇನೆ. ಈ ಮೀನುಗಾರಿಕೆಯ ಇಲಾಖೆಯನ್ನು ಮೇಜರ್ ಇಲಾಖೆಯನ್ನಾಗಿ ಮಾಡಬೇಕೆಂದು ಬಹಳ ಸದಸ್ಯರಿಗೆ ಅಭಿಪ್ರಾಯವಿದೆ. ಈ ಇಲಾಖೆಯಲ್ಲಿ ಮೊದಲನೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೇವಲ 42 ಲಕ್ಷ ರೂಪಾಯಿಗಳನ್ನು ನಿಗದಿಮಾಡಿತ್ತು. ಮೂರನೆಯ ಪಂಚ ವಾರ್ಷಿಕ ಯೋಜನೆಯಲ್ಲಿ 130 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದೆ. ನಾಲ್ಕನೆಯ ಪಂಚ ವಾರ್ಷಿಕ ಯೋಜನೆಯಲ್ಲಿ 400 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಮಾನ್ಯ ಸದಸ್ಯರಾ ದಂತಹ ನಾಡಕರ್ಣಿಯವರು ಮತ್ತು ಇದಿನಬ್ಬನವರು ಮಾತನಾಡುತ್ತಾ, ಈ ಸಾರಿ ಈ ಆಯುವ್ಯಯ ಪಟ್ಟಿಯಲ್ಲಿ ಕೇವಲ 94 ಲಕ್ಷ ರೂಪಾಯಿ ಮಾತ್ರ ತೆಗೆದಿಟ್ಟಿದ್ದಾರೆಂದು ಹೇಳಿದರು; ಮತ್ತು ಅದು

ಸಾಲದೂ ಎಂದು ಹೇಳಿದರು. ಆದರೆ ಅವರು ಕೇವಲ ಈ ನಾನ್ ಪ್ಲಾನ್ ಖರ್ಚನ್ನು ಮಾತ್ರ ಗಣನೆಗೆ ತೆಗೆದುಕೊಂಡು ಹೇಳಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಪ್ಲಾನ್ಡ್ ಸ್ಕೀಂಸ್ 80 ಲಕ್ಷ ರೂಪಾಯಿ ಎನ್ನುವುದನ್ನು ಮರೆತಿದ್ದಾರೆ. ಮತ್ತು ಸೆಂಟ್ರಲೀ ಸ್ಪಾನ್ಸರ್ಡ್ ಸ್ಕೀಂಸ್ 35 ಲಕ್ಷ ರೂಪಾಯಿ, ಇವೆಲ್ಲಾ ಕೂಡಿ, ಪೂರ್ತಿ ಖರ್ಚು ಎರಡು ಕೋಟಿ 14 ಲಕ್ಷ ರೂಪಾಯಿಗಳು. ಮತ್ತು ಈ ಇಲಾಖೆಯಿಂದ ಆದಾಯ ಕೂಡ 76 ಲಕ್ಷ 84 ಸಾವಿರ ರೂಪಾಯಿ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಒಟ್ಟಿನಲ್ಲಿ ಖರ್ಚು ಮತ್ತು ಅದಾಯ ಎರಡೂ ಸೇರಿ, ಎರಡು ಕೋಟಿ 91 ಲಕ್ಷ 21 ಸಾವಿರದ 700 ರೂಪಾಯಿಯ ಭಾರೀ ಮೊತ್ತದ ಹಣವನ್ನು ಈ ಇಲಾಖೆಯ ಕೆಲಸ ಕಾರ್ಯಗಳನ್ನು ನಿರ್ವಹಣೆ ಮಾಡುವುಕ್ಕೋಸ್ಕರ ಇಟ್ಟಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸು ತ್ತೇನೆ. ಮತ್ತು ಈ ಇಲಾಖೆಯನ್ನು ಮೈನರ್ ಇಲಾಖೆಯಾಗಿ ಇಟ್ಟುಕೊಳ್ಳಬೇಕೇ ಅಥವಾ ಮೇಜರ್ ಇಲಾಖೆಯಾಗಿ ಇಟ್ಟುಕೊಳ್ಳಬೇಕೇ ಎಂಬುದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ. ಇದು ತೋಟಗಾರಿಕೆ ಇಲಾಖೆ ಮತ್ತು ಬೇರೆ ಇಲಾಖೆಗಳಂತೆ ಹೆಚ್ಚಿನ ವಹಿವಾಟನ್ನು ಸಂಸ್ಥಾನದಲ್ಲಿ ಮಾಡುತ್ತಿದೆ ಎಂಬುದನ್ನು ಹಲವು ಸದಸ್ಯರು ಹೇಳಿದರು. ಅದನ್ನು ನಾನು ಸಂಪೂರ್ಣವಾಗಿ ಈ ಸಂದರ್ಭದಲ್ಲಿ ಅನುಮೋದನೆ ಮಾಡುತ್ತೇನೆ. ಮಾನ್ಯ ಸದಸ್ಯರು ಹೇಳಿದಂತೆ, ಈ ಮೀನು ಎಂಬುದು ಬಹಳ ರುಚಿಕರವಾದಂತಹ ಆಹಾರ, ಹಾಗೂ ಜನರಿಗೆ ಕೆಲಸಗಳನ್ನು ಕೊಡತಕ್ಕ ಮತ್ತು ವಿದೇಶೀವಿನಿಮಯವನ್ನು ಗಳಿಸತಕ್ಕಂಥದ್ದು. ಸುದೈವದಿಂದ ಮೈಸೂರು ಸಂಸ್ಥಾನಕ್ಕೆ, ರಾಜ್ಯ ಪುನರ್ವಿಂಗಡಣೆ ಆದಮೇಲೆ ಸುಮಾರು 200 ಮೈಲಿಗಳಷ್ಟು ಕರಾವಳಿ ಪ್ರದೇಶವು ಬಂದಿದೆ. ಇದನ್ನು ಅಭಿವೃದ್ಧಿಪಡಿಸುವುದಕ್ಕೆ ಮತ್ತು ಆ ಜನರ ಒಂದು ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಲು ಮೈಸೂರು ಸಂಸ್ಥಾನದಲ್ಲಿ ಮೀನುಗಾರಿಕೆಯನ್ನು ಒಂದು ಕೈಗಾರಿಕೆಯ ರೀತಿಯಲ್ಲಿ ಅಭಿವೃದ್ಧಿಪಡಿಸಲು ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅನೇಕ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ತಾರತಮ್ಯ ಇದೆ ಎಂದು ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿ ಕೆಲಸಮಾಡಿದ್ದಾರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಅಷ್ಟು ಮಾಡಿಲ್ಲ ಎಂದು ಕೂಡ ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆ ಮದ್ರಾಸಿನಿಂದ ಮೈಸೂರಿಗೆ ಬಂದಾಗಲೇ ಬಹಳ ಅಭಿವೃದ್ಧಿಯ ಸ್ಥಿತಿಯಲ್ಲಿತ್ತು ಎಂಬುದನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬಹುದು ಮತ್ತು ಉತ್ತರ ಕನ್ನಡ ಜಿಲ್ಲೆಯ ಸದಸ್ಯರು ಬಹಳ ಮಟ್ಟಿಗೆ ಎಚ್ಚತ್ತು ಅಲ್ಲಿ ಮೀನಿನ ಕೈಗಾರಿಕೆ ಅಭಿವೃದ್ಧಿಯಾಗಬೇಕು ಎಂದು ಹೇಳುವ ಆತುರ ಮತ್ತು ಕಾತುರತೆಯನ್ನು ವ್ಯಕ್ತಪಡಿಸಿದ್ದನ್ನು ನಾನು ಮೆಚ್ಚುತ್ತೇನೆ; ಮತ್ತು ಸ್ವಾಗತಿಸುತ್ತೇನೆ. ಸರ್ಕಾರ ದವರು ಕೂಡ ಎರಡೂ ಜಿಲ್ಲೆಗಳಿಗೆ ಹೆಚ್ಚಿನ ಸೌಕರ್ಯವನ್ನು ಉಂಟುಮಾಡಬೇಕು ಮತ್ತು ಮೀನಿನ ಅಭಿವೃದ್ಧಿಯನ್ನು ಎರಡು ಕಡೆಯೂ ಹೆಚ್ಚು ಮಾಡಬೇಕೆಂದು ಏನೇನು ಯೋಜನೆಗಳು ಬೇಕೋ ಅದೆಲ್ಲವನ್ನೂ ಹಾಕುತ್ತಿದ್ದಾರೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮ್ಯಾರಿನ್ ಪ್ರೊಡಕ್ಟ್ ಸೆಂಟರ್, ಇಂಡೋ ಜಪಾನೀಸ್ ಕೊಲಾಬರೇಷನ್‌ನಿಂದ, 57 ಲಕ್ಷ ರೂಪಾಯಿಯ ಯೋಜನೆಯ ಕೆಲಸ ಕಾರ್ಯಗತಮಾಡುತ್ತಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಲ್ಲಿ ಒಂದು ಐಸ್ ಪ್ಲಾಂಟ್ ಮತ್ತು ಕೋಲ್ಡ್ ಸ್ಟೋರೇಜ್ ಗೋಸ್ಕರ ಎರಡು ಮೂರು ಸಲ ಟೆಂಡರ್ ಕರೆದರೂ ಯಾರೂ ಬರಲಿಲ್ಲ. ಬಂದವರು ಕೂಡ ಅದನ್ನು ಮುಗಿಸದೆ ಸರ್ಕಾರವೇ ಮುಗಿಸಬೇಕಾದ ಸಂದರ್ಭ ಬಂದಿದೆ. ಇನ್ನು ಯಂತ್ರ ಚಾಲಿತ ದೋಣಿಗಳ ಕಾರ್ಯಕ್ರಮದಲ್ಲಿ ಅಗ್ರಿಕಲ್ಚರಲ್ ರೀಫೈನಾನ್ಸ್ ಕಾರ್ಪೊರೇಷನ್ ಸಹಾಯ ಮಾಡುತ್ತಿದೆ. ಎರಡು ಜಿಲ್ಲೆಗಳಿಗೂ ಒಟ್ಟು ಸುಮಾರು 529 ಯಂತ್ರ ಚಾಲಿತ ದೋಣಿಗಳನ್ನು ಕೊಟ್ಟಿದ್ದಾರೆ.

ಎರಡು ಜಿಲ್ಲೆಗಳಲ್ಲಿಯೂ ಕೂಡ ಈ ಯೋಜನೆಯನ್ನು ಅನ್ವಯ ಮಾಡಿದೆ. 50 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿಯೂ, 125 ಲಕ್ಷ ರೂಪಾಯಿ ಗಳ ಒಂದು ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ತೆಗೆದುಕೊಳ್ಳಬೇಕೆಂದಿದ್ದೇವೆ. 50 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಪ್ರಾರಂಭಮಾಡಿದರೂ ಕೂಡ ಅದು ಪ್ರಾರಂಭವಾ ಗುವುದೇ ಕಷ್ಟವಾಯಿತು. ಆ ಕೆಲಸವನ್ನು ಮಾಡಿಸುವುದಕ್ಕೆ ಯಾರೂ ಮುಂದೆ ಬರಲಿಲ್ಲ. ಈಗ ನಾರ್ತ್ ಕೆನರಾ ಕೋ ಆಪರೇಟೀವ್ ಯೂನಿಯನ್ನಿನವರು ಮುಂದೆ ಬಂದು ಆ ಕೆಲಸವನ್ನು ವಹಿಸಿ ಕೊಂಡು ಕೆಲಸ ಮಾಡುತ್ತಿದ್ದಾರೆ. ಶ್ರೀಮಾನ್ ನಾಡಕರ್ಣಿಯವರು ಕಾರವಾರ ಬಂದರು ಅಭಿವೃದ್ಧಿ ಯಾಗಬೇಕು, ರೈಲ್ವೆ ಅಭಿವೃದ್ಧಿಯಾಗಬೇಕು ಎಂದು ಅನೇಕ ವಿಷಯಗಳನ್ನು ಹೇಳಿದ್ದಾರೆ. ಶ್ರೀಮಾನ್ ಅಮೀನ್ ಅವರು ಶ್ರೀಮಾನ್ ಇದಿನಬ್ಬ ಅವರು, ಹಾಗೂ ಶ್ರೀಮಾನ್ ಜಾಲಸಟ್ಟಿ ಯವರು ಫಿಷರೀಸ್ ಪೋರ್ಟುಗಳನ್ನು ಅಭಿವೃದ್ಧಿಪಡಿಸಬೇಕು, ಮೀನುಗಾರಿಕೆಯ ಅಭಿವೃದ್ಧಿಯ

(ಶ್ರೀ ಹೆಚ್. ಸಿ. ಲಿಂಗಾರೆಡ್ಡಿ)

ಕಡೆಗೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂದು ಹೇಳಿದ್ದಾರೆ. ಅದಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕು, ಈ ಮೀನುಗಾರಿಕೆಗೆ ಯಂತ್ರಚಾಲಿತ ದೋಣಿಗಳನ್ನು ಒದಗಿಸಬೇಕು ಎಂದು ಹೇಳಿದ್ದಾರೆ. ಇದೂ ಸಹ ಬಹಳ ಮುಖ್ಯವಾಗಿ ಗಮನಿಸಬೇಕಾದ ವಿಷಯ. ಅದಕ್ಕೆ ಹೆಚ್ಚು ಗಮನ ಕೊಟ್ಟು 520 ದೋಣಿಗಳನ್ನು ಕೊಟ್ಟಿರುವುದರ ಜೊತೆಗೆ ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ 510 ದೋಣಿಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡೋಣ ಎಂದು ಸರ್ಕಾರದವರಲ್ಲಿ ತೀರ್ಮಾನ ಮಾಡಲಾಗಿದೆ. ಅದಕ್ಕಾಗಿ 150 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಫಿಷರೀಸ್ ಹಾರ್‌ಬರ್ ಆಗಬೇಕೆಂದು ಸರ್ಕಾರದವರು ಇಂಡೋಪ್ರೋರ್ ಯುಗೋಸ್ಲೋವಿಯಾ ಸಂಸ್ಥೆ ಯೋಜನೆ ವ್ಯವಹಾರಮಾಡಿ ಅವರು ಕೊಟ್ಟಂತಹ ವರದಿಯನ್ನು ಸರ್ಕಾರದವರು ಈಚೆಗೆ ಪರಿಕ್ಷೆ ಮಾಡಿ, ವಿಮರ್ಶೆ ಮಾಡಿ ಇಂಡಿಯಾ ಸರ್ಕಾರದವರಿಗೆ ಕಳಿಹಿಸಿದ್ದು ಮಲ್ಪೆ, ಹೊನ್ನಾವರಗಳಲ್ಲಿ ಮೀನಿನ ಹಾರ್‌ಬರ್ ಕಟ್ಟಬೇಕು ಎಂದು ತೀರ್ಮಾನ ಮಾಡಲಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಕಡೆಗಳಲ್ಲಿಯೂ ಫಿಷರೀಸ್ ಹಾರ್ಬರ್ಸ್ ಕಟ್ಟಬೇಕೆಂದು ಈಗಾಗಲೇ ಸರ್ವೆ ಕೆಲಸವನ್ನು ಮಾಡಿ ಅವುಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಬೇಕೆಂದು ಅದಕ್ಕಾಗಿ ಹಣವನ್ನೂ ಕೂಡ ತೆಗೆದು ಇಟ್ಟಿದ್ದೇವೆ. ಕೇಂದ್ರ ಸರ್ಕಾರದವರು, ಈ ಯೋಜನೆಯನ್ನು ತಯಾರುಮಾಡತಕ್ಕ ಇಲಾಖೆಯವರೂ ಕೂಡ ಇಲ್ಲಿಗೆ ದಯಮಾಡಿಸಿ ಈ ಯೋಜನೆಯು ಬಹಳ ಯಶಸ್ವಿಯಾಗಿ ಹೆಚ್ಚು ಲಾಭವನ್ನು ಕೊಡತಕ್ಕಂಥ ಯೋಜನೆಯಾಗಿದೆ, ಅಲ್ಲಿ ಮೀನಿನ ಕೈಗಾರಿಕೆ ಬಹಳ ಚೆನ್ನಾಗಿ ನಡೆಯುವುದಕ್ಕೆ ಅವಕಾಶ ಇದೆ. ಪಶ್ಚಿಮ ಕರಾವಳಿ ಅಭಿವೃದ್ಧಿ ಆಗಬೇಕು, ಅವುಗಳ ಬಗ್ಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು ಎಂದು ಹೇಳಿದ್ದಾರೆ. ಈ ದೃಷ್ಟಿಯಿಂದ ಈ ಯೋಜನೆಗೆ ಫಿಷರೀಸ್ ಹಾರ್ಬರ್ ಕಟ್ಟುವುದಕ್ಕೆ ಮಲ್ಪೆಗೆ 1.95 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಾವು ಕೇಂದ್ರ ಸರ್ಕಾರದವರನ್ನು ಕೇಳಿದ್ದೆವು. ಅದಕ್ಕೆ ಅವರು 9.37 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಮಾಡಿ ಕೇಂದ್ರ ಸರ್ಕಾರದವರು ಕೊಡತಕ್ಕಂಥ ಹಣದ ಜೊತೆಗೆ ಮೈಸೂರು ಸರ್ಕಾರದವರು ಬ್ಯಾಂಕುಗಳ ಮುಖಾಂತರ ಹಣವನ್ನು ಒದಗಿಸಿಕೊಂಡು ಮತ್ತು ಯುಗೋಸ್ಲೇವಿಯಾ ಸರ್ಕಾರದವರ ಕೊಲ್ಯಾಬೋರೇಷನ್ ಪಡೆದುಕೊಂಡು ಅಲ್ಲಿ ಫಿಷರೀಸ್ ಹಾರ್ಬರ್ ಕಟ್ಟಬೇಕೆಂದು ಒಂದು ಯೋಜನೆಯನ್ನು ಹಾಕಿದ್ದಾರೆ. ಹೊನ್ನಾವರದಲ್ಲಿ 8.80 ಕೋಟಿ ರೂಪಾಯಿಗಳ ಖರ್ಚಿನಲ್ಲಿ ಒಂದು ಮೀನುಗಾರಿಕೆ ಬಂದರನ್ನು ಕಟ್ಟಬೇಕೆಂದು ತೀರ್ಮಾನ ಮಾಡಿ ಈಗಾಗಲೇ ಅದಕ್ಕೆ ಸ್ವಲ್ಪ ಹಣವನ್ನು ಕೂಡ ತೆಗೆದು ಇಟ್ಟಿದ್ದೇವೆ. ಇದಕ್ಕಾಗಿ ಕೇಂದ್ರ ಸರ್ಕಾರದಿಂದ 3.30 ಕೋಟಿ ರೂಪಾಯಿಗಳನ್ನು ನಾವು ಕೇಳಿದ್ದೇವೆ. 5 ಕೋಟಿ ರೂಪಾಯಿಗಳನ್ನು ಇಂಡೋಪ್ರೋರ್‌ನವರು ಸಹಾಯ ಮಾಡುವವರಾಗಿದ್ದಾರೆ. ಈ ಒಂದು ಸಹಾಯವನ್ನು ಪಡೆಯುವುದಕ್ಕೆ ಇಂಡಿಯಾ ಸರ್ಕಾರದವರು ಮತ್ತು ಬೇರೆ ಬ್ಯಾಂಕುಗಳು ಸಹಕರಿಸಿ ಕೆಲಸ ಮಾಡಬೇಕಾಗಿದೆ. ಈ ಕೆಲಸ ಚೆನ್ನಾಗಿ ನಡೆಯಬೇಕಾದರೆ ಇಲಾಖೆಯ ಮುಖಾಂತರ ಸಾಧ್ಯವಾಗುವುದಿಲ್ಲ. ಹೆಚ್ಚಿನ ಹಣವನ್ನು ಇಲಾಖೆಯವರು ಒದಗಿಸಿಕೊಳ್ಳತಕ್ಕಂಥಾದ್ದು ಕಷ್ಟ ಎಂದು ಯೋಚನೆ ಮಾಡಿ ಫಿಷರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಮಾಡಬೇಕೆಂದು ಯೋಚನೆ ಮಾಡಿ ಈ ಬಗ್ಗೆ ನಾನಾ ಇಲಾಖೆಗಳ ಸಲಹೆಗಳನ್ನೂ ತೆಗೆದುಕೊಳ್ಳಲಾಗಿದೆ. ಮತ್ತು ಇದರ ಬಗ್ಗೆ ಇರತಕ್ಕ ಸಾಧಕ ಬಾಧಕಗಳೇನು, ಇದು ಲಾಭದಾಯಕವಾಗಿ ವ್ಯಾಪಾರ ದೃಷ್ಟಿಯಿಂದ ಚೆನ್ನಾಗಿ ನಡೆಯಬೇಕಾದರೆ ಏನು ಮಾಡಬೇಕು ಎಂಬ ಬಗ್ಗೆ ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕಮಾಡಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗಿದೆ. ಆ ಎಕ್ಸ್‌ಪರ್ಟ್ ಕಮಿಟಿಯವರು ಫಿಷರೀಸ್ ಇಂಡಸ್ಟ್ರಿ, ಮೈನರ್ ಪೋರ್ಟ್ಸ್ ಇವುಗಳ ವಿಚಾರದಲ್ಲಿಯೂ ಅವರು ಕೊಟ್ಟಿರತಕ್ಕ ಅಭಿಪ್ರಾಯ ಏನೆಂದರೆ ಫಿಷರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬ್ರಾಡ್ ಬೇಸ್ಡ್ ಆಗಿರಬೇಕು ಎನ್ನುವ ಅಭಿಪ್ರಾಯವನ್ನು ಅವರು ಕೊಟ್ಟಿದ್ದಾರೆ. ಈ ಎಲ್ಲಾ ದೃಷ್ಟಿಯಿಂದ ಕೂಡ ವಿಮರ್ಶೆಮಾಡಿ ಅದನ್ನು ಜಾಗ್ರತೆಯಾಗಿ ಕಾರ್ಯಗತ ಮಾಡಬೇಕು ಎನ್ನುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಎನ್ನುವ ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ನಾನು ತರಬಯಸುತ್ತೇನೆ. ಮಾನ್ಯ ಸದಸ್ಯರು ಅನೇಕರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನೆಲ್ಲಾ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆ ಎರಡು ಜಿಲ್ಲೆಗಳಲ್ಲಿಯೂ ಮೀನುಗಾರಿಕೆಯ ಅಭಿವೃದ್ಧಿಯಾಗಬೇಕು ಎಂದು ಮಾನ್ಯ ಸದಸ್ಯರ ಅಭಿಪ್ರಾಯ ಇರುವ ಹಾಗೆ ಕಾಣುತ್ತದೆ. ಕರಾವಳಿಯ ಮೀನಿನ ಅಭಿವೃದ್ಧಿಯಾಗಬೇಕು ಎನ್ನುವುದರ ಜೊತೆಗೆ ಒಳನಾಡಿನ ಮೀನುಗಾರಿಕೆಯ ಅಭಿವೃದ್ಧಿಯ ಬಗ್ಗೆ, ಅನೇಕ ಯೋಜನೆಗಳನ್ನು ಹಾಕಿ ಮೈಸೂರು ಸಂಸ್ಥಾನದಲ್ಲಿ 30 ಸಾವಿರ ಮೈನರ್ ಕೆರೆಗಳು, ಎರಡು ಸಾವಿರ ಮೇಜರ್ ಕೆರೆಗಳು,

ರಿಜರ್ವಾಯರ್ಸ್, ಕೆರೆಕಟ್ಟೆಗಳಲ್ಲಿ ಸುಮಾರು 10 ಲಕ್ಷ ಎಕರೆಯಷ್ಟು ನೀರು ಪ್ರದೇಶದಲ್ಲಿ 25 ಲಕ್ಷ ಮೀನಿನ ಮರಿಗಳನ್ನು ಬಿಡಲಾಗಿದೆ. ಒಳನಾಡಿನ ಪ್ರದೇಶದಲ್ಲಿಯೂ ಮೀನಿನ ಅಭಿವೃದ್ಧಿ ಮಾಡಬೇಕು ಎಂಬುದು ಸರ್ಕಾರದ ಆಶಯ. ಅದಕ್ಕಾಗಿ ಭದ್ರಾ ರಿಜರ್ವಾಯರ್‌ನಲ್ಲಿಯೂ ಒಂದು ಫಿಷರೀಸ್ ಫಾರಂ ತೆಗೆದು ಅದರಲ್ಲಿ ಮೀನಿನ ಮರಿಗಳನ್ನು ಬಿಟ್ಟು ಮೀನಿನ ಅಭಿವೃದ್ಧಿಯನ್ನು ಮಾಡಲಾಗುತ್ತದೆ. ಮತ್ತು ಅನೇಕ ತಾಲ್ಲೂಕು ಬೋರ್ಡುಗಳ ಬಜೆಟ್ಟಿನಲ್ಲಿ ಅಂದಾಜು ಮಾಡಿರುವ ಪ್ರಕಾರ ಫಿಷರೀಸ್ ಇನ್‌ಸೆನ್‌ಟೀವ್ ಯೋಜನೆಯನ್ನು ಮಾಡಬೇಕೆಂದು ತೀರ್ಮಾನ ಮಾಡಲಾಗಿದೆ. ಈ ಮೀನಿನ ಕೈಗಾರಿಕೆಯಲ್ಲಿ ಒಂದು ರೂಪಾಯಿ ಖರ್ಚು ಮಾಡಿದರೆ ಅದರಿಂದ 10 ರೂಪಾಯಿಗಳು ಲಾಭ ಬರುತ್ತದೆ. 100 ರೂಪಾಯಿಗಳನ್ನು ಹಾಕಿದರೆ 1000 ರೂಪಾಯಿಗಳ ಲಾಭ ಬರುತ್ತದೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಒಂದು ಚಿನ್ನದ ಗಣಿ ಕೋಲಾರದಲ್ಲಿ ಇದೆ. ಹಾಗೆಯೇ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನಿನ ಗಣಿಗಳು ಇವೆ. ಆ ಒಂದು ಗಣಿಯನ್ನು ಉಪಯೋಗಿಸಿಕೊಂಡು ಮೀನುಗಾರಿಕೆಯಿಂದ ಹೆಚ್ಚಿನ ಸಂಪಾದನೆ ಮಾಡಬಹುದು ಎಂದು ತಿಳಿದುಕೊಂಡು ಆ ದಿಶೆಯಲ್ಲಿ ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ ಎಂದು ನಾನು ಹೇಳುತ್ತೇನೆ. ಇಷ್ಟು ಹೇಳಿ ಮಾನ್ಯ ಸದಸ್ಯರೆಲ್ಲರೂ ಕೂಡ ಈ ಬೇಡಿಕೆಯನ್ನು ಒಪ್ಪಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೇ, ಪಶುಪಾಲನೆ, ಪಶು ವೈದ್ಯ, ಹೈನು ಅಭಿವೃದ್ಧಿ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರು ಮಾತನಾಡುತ್ತಾ ನನಗೆ ಸಂಬಂಧಪಟ್ಟ ಇಲಾಖೆಗಳ ವಿಚಾರದಲ್ಲಿ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಹಾಗೂ ಲೋಪದೋಷಗಳನ್ನು ಎತ್ತಿ ತೋರಿಸಿದ್ದಾರೆ. ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿರುವುದಕ್ಕೂ ಮತ್ತು ಲೋಪದೋಷಗಳನ್ನು ಎತ್ತಿ ತೋರಿಸುವುದಕ್ಕೂ ನಾನು ಮಾನ್ಯ ಸದಸ್ಯರಿಗೆ ಋಣಿಯಾಗಿದ್ದೇನೆ. ಟೀಕೆಗಳೂ ಬೇಕು, ಹಾಗೂ ಒಳ್ಳೆಯ ಸಲಹೆಗಳೂ ಬೇಕು. ಚರ್ಚೆಯ ಉದ್ದೇಶವೇ ಅದು ಎಂದು ನಾನು ತಿಳಿದುಕೊಂಡಿದ್ದೇನೆ. ಟೀಕೆ ಮತ್ತು ಸಲಹೆಗಳು ಇಲ್ಲದೆ ಈ ಡಿಮ್ಯಾಂಡ್‌ಗೆ ಒಪ್ಪಿಗೆ ತೆಗೆದುಕೊಂಡುಬಿಟ್ಟರೆ, ಮುಂದೆ ಯಾವ ರೀತಿ ಮತ್ತು ಯಾವ ಮಾರ್ಗದರ್ಶನದಲ್ಲಿ ಕೆಲಸಕಾರ್ಯಗಳನ್ನು ಮಾಡಬೇಕೆಂಬುದು ತಿಳಿಯದೆ ಕಷ್ಟವಾಗುತ್ತದೆ. ಆದಕಾರಣ ನಾನು ಟೀಕೆ ಮತ್ತು ಸಲಹೆಗಳನ್ನು ಸ್ವಾಗತ ಮಾಡುತ್ತೇನೆ. ವ್ಯವಸಾಯ ಇಲಾಖೆ ಮತ್ತು ಪಶುಪಾಲನೆಯ ಇಲಾಖೆಗಳ ಗುರಿ ಒಂದೇ ಆಗಿದೆ. ಈ ದಿಶೆಯಲ್ಲಿ ಆಹಾರದ ಉತ್ಪಾದನೆ ಹೆಚ್ಚಾಗಬೇಕು. ನಮ್ಮ ದೇಶದಲ್ಲಿ ಇವತ್ತಿನ ದಿವಸ ಆಹಾರದ ಅಭಾವ ಇದೆ. ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ನಮ್ಮ ಭಾರತ ದೇಶದಲ್ಲಿಯೇ ಆಹಾರದ ದೃಷ್ಟಿಯಿಂದ ಸ್ವಯಂಪೂರ್ಣವಾದ ಒಂದು ರಾಷ್ಟ್ರವನ್ನಾಗಿ ಮಾಡಬೇಕೆನ್ನುವ ದೃಷ್ಟಿಯಿಂದ ವ್ಯವಸಾಯ ಇಲಾಖೆಯಲ್ಲಿ ಮತ್ತು ಪಶುಸಂಗೋಪನಾ ಇಲಾಖೆಯಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆ ಒಂದು ಕಾರ್ಯಕ್ರಮದ ಮೂಲಕ ಹೆಚ್ಚಿನ ಆಹಾರದ ಉತ್ಪಾದನೆಯನ್ನು ಮಾಡಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ವ್ಯವಸಾಯ ಕ್ಷೇತ್ರದಲ್ಲಿ ಇವತ್ತಿನ ದಿವಸ ಸಾಕಷ್ಟು ಸುಧಾರಣೆ ಇನ್ನೂ ಆಗಬೇಕಾಗಿದೆ. ವ್ಯವಸಾಯದ ಉತ್ಪಾದನೆ ಎಂದರೆ ಧಾನ್ಯಗಳ ಉತ್ಪಾದನೆ ಮಾತ್ರವಲ್ಲ, ಧಾನ್ಯಗಳ ಉತ್ಪಾದನೆಯಾದರೆ ಮಾತ್ರ ನಮ್ಮ ಆಹಾರದ ಸಮಸ್ಯೆ ಬಗೆಹರಿಯುತ್ತದೆಂದು ಯಾರೂ ತಿಳಿದುಕೊಂಡಿಲ್ಲ. ಧಾನ್ಯಗಳ ಉತ್ಪಾದನೆಯ ಜೊತೆಗೆ ಪ್ರಾಣಿಜನ್ಯ ಆಹಾರವೂ ಸಹ ಅಷ್ಟೇ ಪ್ರಮಾಣದಲ್ಲಿ ಉತ್ಪಾದನೆಯಾಗಬೇಕಾಗಿದೆ. ಜಾನುವಾರುಗಳಾದ ಕುರಿ, ಕೋಳಿ, ಹಂದಿ ಇವುಗಳಿಂದ ಪ್ರಾಣಿಜನ್ಯ ಆಹಾರವು ಸಿಗುತ್ತದೆ. ಇಂತಹ ಆಹಾರವನ್ನು ನಾವು ಹೆಚ್ಚು ಉತ್ಪಾದನೆ ಮಾಡಬೇಕಾಗಿದೆ. ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚು ಇಳುವರಿ ಕೊಡುವ ಆಹಾರ ಧಾನ್ಯಗಳನ್ನು ಬೆಳೆಯುವ ಬಗ್ಗೆ ಸಂಶೋಧನೆಯಾಗಿರುವಂತೆ ಪಶುಸಂಗೋಪನೆ ಇಲಾಖೆಯಲ್ಲಿ ಹಸುಗಳು ಹೆಚ್ಚು ಹಾಲು ಕೊಡುವ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಯಾಗಬೇಕಾಗಿದೆ. ಈ ಬಗ್ಗೆ ಇದುವರೆಗೆ ಆಗಿರುವ ಸಂಶೋಧನೆಯ ವಿಚಾರದಲ್ಲಿ ನಾವು ತೃಪ್ತಿಪಟ್ಟುಕೊಳ್ಳುವಂತೆ ಇಲ್ಲ. ತಜ್ಞರು ಹೇಳುವ ಪ್ರಕಾರ ನಾವು ಇನ್ನೂ ಹೆಚ್ಚಿನ ಸಂಶೋಧನೆ ನಡೆಸಿದರೆ ಇನ್ನು 3–4 ವರ್ಷಗಳಲ್ಲಿ ನಾವು ಆಹಾರಧಾನ್ಯಗಳ ವಿಚಾರದಲ್ಲಿ ಮತ್ತು ಹಾಲಿನ ವಿಚಾರದಲ್ಲಿ ಸ್ವಯಂಪೂರ್ಣತೆ ಪಡೆಯಬಹುದಾಗಿದೆ. ಇವತ್ತಿನ ದಿವಸ ಭೂಮಿ ಇರುವಷ್ಟೇ ಇರುತ್ತದೆ. ಆದರೆ ಜನಸಂಖ್ಯೆ ಮಾತ್ರ ಬೆಳೆಯುತ್ತಿರುತ್ತದೆ. ಬೆಳೆಯುತ್ತಿರುವ ಸಂಖ್ಯೆಗೆ ಅನುಗುಣವಾಗಿ ಸಾಕಷ್ಟು ಆಹಾರವನ್ನು ನಾವು ಪಡೆಯಬೇಕಾಗಿದೆ. ವ್ಯವಸಾಯ ಕ್ಷೇತ್ರವನ್ನು ಬಿಟ್ಟರೆ ಜಾನುವಾರು ಕ್ಷೇತ್ರದಲ್ಲಿ ನಾವು ಆಹಾರವನ್ನು ಪಡೆಯಬಹುದಾಗಿದೆ. ಜಾನುವಾರು ಕ್ಷೇತ್ರದಲ್ಲಿ ಸಿಗುವ ಆಹಾರ ಶ್ರೇಷ್ಠವಾದ ಆಹಾರ, ಪೌಷ್ಠಿಕವಾದ ಆಹಾರ ಮತ್ತು ಸಮತೋಲನವಾದ ಆಹಾರವಾಗಿದೆ. ಮನುಷ್ಯನ

(ಶ್ರೀ ಜಿ. ಬಿ. ಶಂಕರರಾವ್)

ಬುದ್ಧಿ ಬೆಳವಣಿಗೆಯಾಗಬೇಕಾದರೆ, ದೇಹದ ಬೆಳವಣಿಗೆಯಾಗಬೇಕಾದರೆ ಈ ಪ್ರಾಣಿಜನ್ಯ ಆಹಾರವನ್ನು ಉಪಯೋಗ ಮಾಡಬೇಕಾಗುತ್ತದೆ. ಪ್ರಾಣಿಜನ್ಯ ಅಹಾರವೆಂದರೆ ಅದು ಮಾಂಸಾಹಾರವೇ ಆಗಿರಬಹುದು, ಶಾಕಾಹಾರವೇ ಆಗಿರಬಹುದು. ಇವತ್ತು ಜನರಲ್ಲಿ ಮತ್ತು ಮಾನ್ಯ ಸದಸ್ಯರುಗಳಲ್ಲಿ ಒಂದು ಕಲ್ಪನೆ ಇದೆ, ಏನೆಂದರೆ ಶಾಕಾಹಾರಿಗಳು ಪ್ರಾಣಿಜನ್ಯ ಆಹಾರವನ್ನು ಉಪಯೋಗ ಮಾಡುವುದು ತಪ್ಪು ಎಂದು. ಇವತ್ತು ಇಡೀ ಭಾರತದೇಶವನ್ನೇ ತೆಗದುಕೊಂಡರೂ ಕೂಡ 100ಕ್ಕೆ 100ರಷ್ಟು ಶಾಕಾಹಾರಿಗಳು ಇಲ್ಲ. ಇವತ್ತಿನ ದಿವಸ 100ಕ್ಕೆ 50 ಜನ ಪ್ರಾಣಿಜನ್ಯ ಆಹಾರವನ್ನು ಉಪಯೋಗ ಮಾಡುತ್ತಿದ್ದಾರೆ. ಆದರೆ ಹಾಲು, ಬೆಣ್ಣೆ, ತುಪ್ಪ ಮತ್ತು ಹಾಲಿನಿಂದ ತಯಾರಾಗುವ ಇತರೇ ವಸ್ತುಗಳನ್ನು ಮಾತ್ರ 100ಕ್ಕೆ 100ರಷ್ಟು ಜನರು ಉಪಯೋಗ ಮಾಡುತ್ತಿದ್ದಾರೆ. ಈ ಒಂದು ಹಾಲಿನ ಪದಾರ್ಥವನ್ನು ಹುಟ್ಟಿದಾಗಿನಿಂದ ಹಿಡಿದು ಸಾಯುವವರೆಗೂ ಉಪಯೋಗಿಸಬೇಕಾಗುತ್ತದೆ. ಇವತ್ತಿನ ದಿವಸ ಪ್ರಾಣಿಜನ್ಯ ಆಹಾರವನ್ನು ಹೆಚ್ಚು ಜನರು ಉಪಯೋಗ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಹಾಲಿನ ಉತ್ಪಾದನೆ ಹೆಚ್ಚಾಗಿದೆ ಮತ್ತು ಉಪಯೋಗವು ಸಹ ಜಾಸ್ತಿಯಾಗಿದೆ. ಪಶುಗಳನ್ನು ಸಾಕುವುದು ಕೀಳು ಎಂದು ಜನರು ಭಾವನೆ ಮಾಡಿಕೊಂಡಿದ್ದಾರೆ, ಅದು ಹೋಗಬೇಕು. ರೈತರು ಹೆಚ್ಚು ಹೆಚ್ಚು ಹಸುಗಳನ್ನು ಸಾಕಬೇಕು. ಈ ದಿಶೆಯಲ್ಲಿ ಸಾಕಷ್ಟು ಅಭಿವೃದ್ಧಿಯಾಗಿಲ್ಲ. ಶ್ರೀ ಪ್ಯಾಲನಯ್ಯನವರು ಈ ಡಿಮ್ಯಾಂಡ್‌ಗೆ ಒದಗಿಸಿರುವ ಹಣ ಕಡಿಮೆ ಎಂದು ಹೇಳಿದರು. ಪಶುಪಾಲನೆಯ ಬಗ್ಗೆ ಜನರು ಸಾಕಷ್ಟು ನಿರ್ಲಕ್ಷ್ಯ ವಹಿಸಿರುವುದನ್ನು ನೋಡಿದರೆ ದುಃಖವಾಗುತ್ತದೆ. ಈ ವಿಚಾರದಲ್ಲಿ ಜನರಿಗೆ ಸಾಕಷ್ಟು ತಿಳುವಳಿಕೆಯಾಗಬೇಕಾಗಿದೆ. ಹಾಲಿನ ಉತ್ಪಾದನೆಯ ಜೊತೆಗೆ ಕೋಳಿ ಮತ್ತು ಕುರಿಗಳನ್ನು ಸಹ ಹೆಚ್ಚು ಹೆಚ್ಚು ಸಾಕಬೇಕಾಗಿದೆ. ಮೀನು, ಕೋಳಿಮೊಟ್ಟೆ ಮತ್ತು ಹಣ್ಣುಗಳನ್ನು ಹೆಚ್ಚು ಹೆಚ್ಚು ಉಪಯೋಗ ಮಾಡುವುದು ಒಳ್ಳೆಯದು. ಇವತ್ತಿನ ನಾಗರೀಕರಲ್ಲಿ ಒಂದು ತಪ್ಪು ಭಾವನೆ ಇದೆ. ಏನೆಂದರೆ ಕೇವಲ ಧಾನ್ಯಗಳನ್ನು ಮತ್ತು ಪಾಲೀಸ್ ಮಾಡಿದ ಚರಟದ ಅಕ್ಕಿ (ಸ್ಟಾರ್ಚ್) ಯನ್ನು ಉಪಯೋಗಮಾಡಿದರೆ ಹೆಚ್ಚಿನ ಶಕ್ತಿ ಬರುತ್ತದೆಂದು. ಇವುಗಳನ್ನು ಮಾತ್ರ ಉಪಯೋಗಿಸಿದರೆ ಬುದ್ಧಿಶಕ್ತಿ ಕುಂಠಿತವಾಗುತ್ತದೆ. ನಮ್ಮ ದೇಶದಲ್ಲಿ ಈ ಭಾವನೆ ಇರುವುದರಿಂದ 52 ಕೋಟಿ ಜನರು ಇದ್ದರೂ ಕೂಡ ವಿಜ್ಞಾನಿಗಳು ಬಹಳ ಕಡಿಮೆ ಇದ್ದಾರೆ. ಅದೇ ಕಡಮೆ ಜನಸಂಖ್ಯೆ ಇರುವ ದೇಶಗಳಲ್ಲಿ ಹೆಚ್ಚು ಪ್ರಾಣಿಜನ್ಯ ಅಹಾರವನ್ನು ಉಪಯೋಗಮಾಡುತ್ತಿರುವುದರಿಂದ ಆ ದೇಶದಲ್ಲಿ ವಿಜ್ಞಾನಿಗಳು, ತಜ್ಞರುಗಳು, ಬುದ್ಧಿವಂತರು ಜಾಸ್ತಿ ಇದ್ದಾರೆ. ಇದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಪೌಷ್ಟಿಕ ಆಹಾರವನ್ನು ನಾವು ಜಾಸ್ತಿ ಉಪಯೋಗ ಮಾಡದಿರುವುದರಿಂದ ನಮ್ಮ ಬುದ್ಧಿಶಕ್ತಿ ನಮ್ಮ ಪೂರ್ವಜರಿಗಿಂತ ಕಡಿಮೆಯಾಗುತ್ತಿದೆ. ಇದು ಎಲ್ಲರೂ ಒಪ್ಪುವ ಮಾತಾಗಿದೆ. ಭಾರತ ದೇಶದಲ್ಲಿ ಬಹಳ ಬುದ್ಧಿವಂತರು ಇದ್ದಾರೆಂದು ನಾವು ಹೇಳಿಕೊಳ್ಳಬಹುದು, ಆದರೆ ಬೇರೆಯವರು ಅದನ್ನು ಒಪ್ಪುವುದಿಲ್ಲ. ಈ ರಾಜ್ಯದಲ್ಲಿ ತಳಿಗಳ ಸುಧಾರಣೆ ಆಗಬೇಕಾಗಿದೆ. ನಮ್ಮ ರಾಜ್ಯದಲ್ಲಿ ಹಳ್ಳಿಕಾರ, ದೇವನಿ, ಕಿಲಾರೆ, ಜರ್ಸಿ, ಅಮೃತಮಹಲ್ ಎಂಬುದಾಗಿ 5 ತರಹ ತಳಿಗಳು ಇವೆ. ಭಾರತ ದೇಶ ಒಕ್ಕಲು ಪ್ರಧಾನವಾದ ದೇಶವಾಗಿದೆ. ಅದಕಾರಣ ಶಕ್ತಿಯುತವಾದ ಹೋರಿಗಳು ಬೇಕಾಗಿವೆ. ನಮ್ಮಲ್ಲಿ ವ್ಯವಸಾಯಕ್ಕೆ ಬೇಕಾಗುವ ಹೋರಿಗಳು ಸಾಕಷ್ಟು ಪ್ರಮಾಣದಲ್ಲಿ ಇವೆ. ಆದರೂ ಕೂಡ ತಳಿಹೋರಿಗಳ ಬಗ್ಗೆ ಇನ್ನೂ ಸುಧಾರಣೆಯಾಗಬೇಕಾಗಿದೆ. ಈ ಕಾರಣದಿಂದ ನಾವು ಮಿಶ್ರತಳಿ ಯೋಜನೆಯನ್ನು ಅವಲಂಬಿಸದೆ ಗತ್ಯಂತರವಿಲ್ಲ. ಇಡೀ ಭಾರತ ದೇಶದಲ್ಲಿಯೇ ಮಿಶ್ರತಳಿಯೋಜನೆ ಜಾರಿಯಲ್ಲಿದೆ. ಇಡೀ ದೇಶಕ್ಕೆ ಅನ್ವಯಿಸುವ ಈ ಒಂದು ಯೋಜನೆಯನ್ನು ಕೇಂದ್ರ ಸರ್ಕಾರದವರೇ ಒಪ್ಪಿಕೊಂಡಿದ್ದಾರೆ. ಮಿಶ್ರ ತಳಿಯ ಯೋಜನೆ ಒಂದು ಒಳ್ಳೆಯ ಬೆಳವಣಿಗೆಯಾಗಿದೆ.

9–00 P.M.

ಮೈಸೂರು ಸರ್ಕಾರದವರು ಭಾರತ ಸರ್ಕಾರದ ಧೋರಣೆಯನ್ನು ಒಪ್ಪಿಕೊಂಡಿದ್ದಾರೆ. ಅದನ್ನು ಅನುಸರಿಸುತ್ತಾ ಇದ್ದಾರೆ. ತಳಿಯ ಅಭಿವೃದ್ಧಿಗಾಗಿ, ತಳಿ ಸುಧಾರಣೆಗಾಗಿ ಸಾಕಷ್ಟು ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಇನ್‌ಸೆಂಟಿವ್ ಕ್ಯಾಟಲ್ ಡೆವಲಪ್‌ಮೆಂಟ್ ಸ್ಕೀಂ, ಷೀಪ್ ಬ್ರೀಡಿಂಗ್ ಸ್ಕೀಂ ಹಾಗೂ ಕೃತಕ ಗರ್ಭಧಾರಣಾ ಕಾರ್ಯಕ್ರಮವನ್ನು ನಾವು ಇಟ್ಟುಕೊಂಡಿದ್ದೇವೆ. ಈ ಯೋಜನೆಯ ಮುಖಾಂತರ ಜಾನುವಾರು ತಳಿ ಅಭಿವೃದ್ಧಿಯಾಗುತ್ತದೆ. ಇದು ದೇಶಾದ್ಯಂತ ದೊಡ್ಡ ಪ್ರಮಾಣದಲ್ಲಿ ನಡೆಯಬೇಕು ಎನ್ನುವ ಉದ್ದೇಶದಿಂದ, ಉತ್ತಮವಾದ ಹಾಲು

ಹೆಚ್ಚಿಗೆ ಕೊಡತಕ್ಕ ಪ್ರದೇಶದಲ್ಲಿರುವ ತಳಿಯ ಹೋರಿಗಳನ್ನು ತಂದು ಅವುಗಳ ವೀರ್ಯದಿಂದ ನಮ್ಮ ದೇಶದ ದನಗಳನ್ನು ಅಭಿವೃದ್ಧಿ ಮಾಡಬೇಕೆಂದಿದ್ದೇವೆ. ನಮ್ಮ ದೇಶದಲ್ಲಿ ಜಾನುವಾರು ಸಂಖ್ಯೆ ದೊಡ್ಡದು ಅಂದರೆ 26 ಕೋಟಿಯಷ್ಟು ಇದೆ. ಪ್ರಜಾಸಂಖ್ಯೆ 52 ಕೋಟಿ ಇದೆ. ಮೈಸೂರಿನಲ್ಲಿ ಪ್ರಜಾಸಂಖ್ಯೆ 2 ಕೋಟಿ 35 ಲಕ್ಷ ಇದ್ದರೆ ಜಾನುವಾರು ಸಂಖ್ಯೆ 2¼ ಕೋಟಿ ಇದೆ. ಇದೆಲ್ಲಾ ನಿರುಪಯುಕ್ತವಾದ ಲಾಭದಾಯಕ ಅಲ್ಲದ ಮತ್ತು ಉತ್ಪತ್ತಿ ಕೊಡದೇ ಇರತಕ್ಕ ಕರಡು ದನ. ಇದರ ಸಂಖ್ಯೆ ಕಡಿಮೆ ಆಗಬೇಕು. ಹೆಚ್ಚು ಹಾಲು ಕೊಡತಕ್ಕಂಥ ಜಾನುವಾರು ಸಂಖ್ಯೆಯನ್ನು ದೇಶಾದ್ಯಂತ ಬೆಳೆಸಬೇಕು. ಹೀಗಾದರೆ ಆಹಾರ ಸಮಸ್ಯೆ ಬಗೆಹರಿಸುವುದರಲ್ಲಿ ಸಹಕಾರಿಯಾಗುತ್ತದೆ. ಇದಕ್ಕಾಗಿ ಒಂದು ವೀರ್ಯಕೇಂದ್ರವನ್ನು ಹೆಬ್ಬಾಳ್‌ನಲ್ಲಿ ಸ್ಥಾಪನೆ ಮಾಡಿದ್ದೇವೆ. ಇದೇ ರೀತಿ ನಮ್ಮ ರಾಜ್ಯದಲ್ಲಿ 4 ರೆವಿನ್ಯೂ ಭಾಗಗಳಲ್ಲಿ ಒಂದೊಂದು ಕಡೆ ಒಂದೊಂದು ವೀರ್ಯ ಕೇಂದ್ರವನ್ನು ಸ್ಥಾಪಿಸಬೇಕು ಎನ್ನುವುದು ಸರ್ಕಾರದ ಆಲೋಚನೆ ಇದೆ. ಇಗಾಗಲೇ ಮುನಿರಾಬಾದಿನಲ್ಲಿ ಒಂದು ಅಂತಹ ಕೇಂದ್ರ ಹೋದ ಆಗಸ್ಟ್‌ನಲ್ಲಿ ಪ್ರಾರಂಭ ಮಾಡಿದ್ದಾರೆ. ಇಷ್ಟೊಂದು ಜಾನುವಾರುಗಳ ತಳಿಗಳ ಅಭಿವೃದ್ಧಿ ವಿಷಯವಾಗಿ ಹೇಳಿದೆ.

ಇನ್ನು ಜಾನುವಾರುಗಳಿಗೆ ಕೊಡತಕ್ಕ ಮೇವಿನ ವಿಚಾರ ಹೇಳಬೇಕಾಗಿದೆ. ಸಾಕಷ್ಟು ಗುಣಾಂಶಗಳಿಂದ ಕೂಡಿದ ಮೇವು ಇಲ್ಲ. ಮನುಷ್ಯನಿಗೆ ಒಳ್ಳೆಯ ಆಹಾರ ಹೇಗೆ ಬೇಕೋ ಹಾಗೆ ಜಾನುವಾರುಗಳಿಗೆ ಒಳ್ಳೆಯ ಆಹಾರ ಬೇಕು. ಒಳ್ಳೆಯ ಆಹಾರ ತಿಂದರೆ ಪೌಷ್ಟಿಕವಾದ ಹಾಲು ಕೊಡುತ್ತವೆ. ಈ ಮೇವಿನ ಅಭಿವೃದ್ಧಿಗಾಗಿ ಸರ್ಕಾರದವರು ಒಂದು ದೊಡ್ಡ ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ. ದೇಶಾದ್ಯಂತ ಒಳ್ಳೆಯ ಬೀಜವನ್ನು ಮತ್ತು ಒಳ್ಳೆಯ ಹುಲ್ಲನ್ನು ಬೆಳೆಸುವುದಕ್ಕೋಸ್ಕರ ಒಂದು ದೊಡ್ಡ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಅದಕ್ಕೋಸ್ಕರ 4ನೇ ಪಂಚವಾರ್ಷಿಕ ಯೋಜನೆಯಲ್ಲಿ 18 ಲಕ್ಷ ರೂಪಾಯಿಯನ್ನು ಇಟ್ಟಿದ್ದೇವೆ, ದೇಶದಲ್ಲಿ ಮೇಲಿಂದ ಮೇಲೆ ಬರತಕ್ಕ ಅಭಾವ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಮತ್ತು ಮೇವಿನ ದೃಷ್ಟಿಯಿಂದ ಬರಬಹುದಾದಂಥ ಅಭಾವವನ್ನು ನೀಗಿಸಲಿಕ್ಕೆ, ಬಳ್ಳಾರಿ ಭಾಗದಲ್ಲಿ ಫಾಡರ್ ಬ್ಯಾಂಕ್ ಕೂಡ ಸ್ಥಾಪನೆ ಮಾಡಬೇಕು ಎನ್ನುವ ಯೋಚನೆ ಇದೆ. ಭಾರತದೇಶದಲ್ಲಿ ಬಹುಭಾಗ ನಾವು ಮತ್ತು ನಮ್ಮ ಮಕ್ಕಳು, ಪೌಷ್ಟಿಕವಾದ ಸಸ್ಯಜನ್ಯ ಆಹಾರವನ್ನು ಸೇವನೆಮಾಡಿ ಬದುಕುತ್ತಿದ್ದೇವೆ. ಇದು ಹೋಗಬೇಕು ಇದು ಹೋಗಬೇಕಾದರೆ ಪೌಷ್ಟಿಕವಾದ ಪ್ರಾಣಿಜನ್ಯ ಆಹಾರ ಹೆಚ್ಚು ಹೆಚ್ಚಾಗಿ ಬೆಳೆಸಬೇಕು. ಅದಕ್ಕಾಗಿ ಕುರಿ ತಳಿಯನ್ನು ಅಭಿವೃದ್ಧಿ ಮಾಡಬೇಕು. ಉಣ್ಣೆಯನ್ನು ಹೆಚ್ಚು ಮಾಡುವುದಕ್ಕೋಸ್ಕರ ಅಷ್ಟೇ ಅಲ್ಲ ಮಾಂಸವನ್ನು ಹೆಚ್ಚು ಮಾಡಲಿಕ್ಕೆ ತಕ್ಕ ಕಾರ್ಯಕ್ರಮವನ್ನು ನಾವು ಅನುಸರಿಸಲೇಬೇಕಾಗಿದೆ. ದೇಶದಲ್ಲಿ ಸುಮಾರು 6 ಪ್ರಾದೇಶಿಕ ಕೋಳಿ ಸಾಗಾಣಿಕೆ ಕೇಂದ್ರಗಳು ಇವೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೋಳಿಮೊಟ್ಟೆ ಕೊಂಡುಕೊಳ್ಳುವವರರಿಲ್ಲದೆ ಎಲ್ಲಾ ಕೆಡೆಯೂ ಸ್ಟಾಕ್ ಹಾಗೆಯೇ ಇದೆ.

ಶ್ರೀ ಜಿ. ಬಿ. ಶಂಕರರಾವ್.—ಕೋಳಿಮೊಟ್ಟೆ ಕೊಂಡುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಕೋಳಿ ಸಾಕುವ ವ್ಯವಸ್ಥೆ ನಮ್ಮ ಮೈಸೂರು ದೇಶದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಾ ಇದೆ. ಅನುಕೂಲವಾದಂಥ ಹವಾಗುಣ ಇದೆ ಮತ್ತು ಬೇಕಾದ ಸಾಲ ಕೊಡುತ್ತಾರೆ. ಸರ್ಕಾರ ಅಷ್ಟೇ ಅಲ್ಲ, ರಿಜರ್ವ್ ಬ್ಯಾಂಕ್ ಸ್ಥಳೀಯ ಬ್ಯಾಂಕ್ ಮುಖಾಂತರ ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಮೈಸೂರು ಬ್ಯಾಂಕ್ ಮುಂತಾದವರು ಕೋಳಿ ಸಾಕುವುದಕ್ಕೆ, ಹೈನು ದನಗಳನ್ನು ಸಾಕುವುದಕ್ಕಾಗಿ ಸಾಲಗಳನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಕೆನರಾ ಬ್ಯಾಂಕ್ 3 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದೆ. ಇಂತಹ ಯೋಜನೆಗೆ ಕೊಡುವುದಕ್ಕೆ ರೈತರಿಗೆ ಪರ್ಸನಲ್ ಸೆಕ್ಯೂರಿಟಿ ಮೇಲೆ ಸಾಲಸೋಲಗಳನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ ಎಂದು ಅವರು ಹೇಳಿದ್ದಾರೆ. ಮೊಟ್ಟೆ ಉತ್ಪಾದನೆ ಹೆಚ್ಚು ಪ್ರಮಾಣದಲ್ಲಿ ಆಗಬೇಕಾದರೆ ಅದಕ್ಕೆ ಸರಿಯಾಗಿ ಪ್ರೋತ್ಸಾಹ ಕೊಡಬೇಕು.

ಇನ್ನು ಬೆಂಗಳೂರು ಡೈರಿ ವಿಚಾರ ಹೇಳಬೇಕಾಗಿದೆ. ಕೆಲವು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ಡೈರಿ ವಿಚಾರದಲ್ಲಿ ಬೆಣ್ಣೆಯನ್ನು ಸುಟ್ಟ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಬೆಣ್ಣೆ ಸುಟ್ಟದ್ದು ಮಾನ್ಯ ಸದಸ್ಯರಿಗೂ ಗೊತ್ತಿದೆ, ಸರ್ಕಾರಕ್ಕೂ ಗೊತ್ತಿದೆ. ಬೆಣ್ಣೆ ಸುಟ್ಟ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಸ್ಪಷ್ಟೀಕರಣ ಕೇಳಿದ್ದೇವೆ. ಅವರು ಸ್ಪಷ್ಟೀಕರಣ ಕೊಟ್ಟಿದ್ದಾರೆ. ಬೆಣ್ಣೆ ಸುಡುವುದು ಅವರ ಅಧಿಕಾರದ ವ್ಯಾಪ್ತಿಯಲ್ಲಿ ಇದೆಯೇ, ಅವರು ಹೇಳಿದ ಹಾಗೆ ಫುಡ್ ಅಡಲ್ಟ್ರೇಷನ್ ಆಕ್ಟ್ ಆಧಾರದ ಮೇಲೆ ಬೆಣ್ಣೆ ಸುಟ್ಟಿದ್ದಾರೆಯೇ ಎನ್ನುವ ವಿಚಾರ ಸಾಕಷ್ಟು ತೀವ್ರ ಪರಿಶೀಲನೆಯಲ್ಲಿದೆ. ಈ ವಿಚಾರ ಕೈಬಿಟ್ಟಿಲ್ಲ.

(ಶ್ರೀ ಜಿ. ಬಿ. ಶಂಕರರಾವ್)

ಯಾರನ್ನಾದರೂ ರಕ್ಷಣೆ ಮಾಡಬೇಕು, ಬೆಣ್ಣೆ ಸುಟ್ಟು ನಷ್ಟ ಆದ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇಲ್ಲ ಎನ್ನುವುದನ್ನು ಯಾರೂ ತಿಳಿದುಕೊಳ್ಳಬಾರದು. ಆ ರೀತಿ ವಿಚಾರ ಇಲ್ಲ. ಯಾರು ತಪ್ಪು ಮಾಡಿದ್ದಾರೆ ಅವರಿಗೆ ಸರಿಯಾದ ಶಿಕ್ಷೆ ಆಗಬೇಕು. ಈ ವಿಚಾರ ತೀವ್ರ ಪರಿಶೀಲನೆ ಮಾಡಿ ಕಾನೂನು ಪ್ರಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುವುದಕ್ಕೆ ಕಾರ್ಯೋನ್ಮುಖರಾಗಿದ್ದೇವೆ ಮತ್ತು ಅದು ಪರಿಶೀಲನೆಯಲ್ಲಿದೆ.

ಶ್ರೀ ಎ. ಎನ್. ಪಾಟೀಲ್.— ಪರಿಶೀಲನೆ ಮಾಡುವುದಕ್ಕೆ ಎಷ್ಟು ವರ್ಷ ಆಗಬೇಕು ?

ಶ್ರೀ ಜಿ. ಬಿ. ಶಂಕರರಾವ್.— ಕಾನೂನು ಪ್ರಕಾರ ಮಾಡಬೇಕು. ಸಿ. ಸಿ. ಎ. ರೂಲ್ಸ್ ಗೊತ್ತಿದೆ. ಕಾಂಡಕ್ಟ್ ರೂಲ್ಸ್ ಗೊತ್ತಿದೆ. ಅದನ್ನು ಹೇಳಬೇಕಾಗಿಲ್ಲ. ಈ ವಿಚಾರ ಕೈಬಿಟ್ಟಿಲ್ಲ. ನಾವು ತೀವ್ರವಾಗಿ ಆಲೋಚನೆ ಮಾಡುತ್ತಾ ಇದ್ದೇವೆ. ಕಾನೂನು ಪ್ರಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದಕ್ಕೆ ಕಾನೂನು ಇಲಾಖೆ ಇದೆ, ಆ ಇಲಾಖೆ ಮುಖಾಂತರ ಪರಿಶೀಲನೆ ನಡೆಯುತ್ತಾ ಇದೆ. ಇಷ್ಟು ಹೇಳಿದರೆ ಸಾಕು ಎನಿಸುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ ಇರುವ ಬೆಣ್ಣೆ, ತುಪ್ಪ ಯಾವ ಪರಿಸ್ಥಿತಿಯಲ್ಲಿದೆ ?

ಶ್ರೀ ಬಿ. ರಾಚಯ್ಯ.—ಈಗ ಬಹಳ ಚೆನ್ನಾಗಿದೆ.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರಿಗೆ ಒಂದು ಭಾವನೆ ಇದೆ, ಬೆಂಗಳೂರು ಡೈರಿಯಲ್ಲಿ ಬೆಣ್ಣೆ ಸಾಕಷ್ಟು ಪ್ರಮಾಣದಲ್ಲಿದೆ, ಬೆಣ್ಣೆಯನ್ನು ಸ್ಟಾಕ್ ಇಟ್ಟಿದ್ದರಿಂದ ನಷ್ಟವಾಗಿದೆ. ಹೆಚ್ಚು ಉತ್ಪಾದನೆ ಮಾಡುವುದರಿಂದ ನಷ್ಟವಾಗುತ್ತಿದೆ ಎಂದು ಹೇಳಿದ್ದಾರೆ. ಯಾವ ಕಾಲಕ್ಕೋ ಬೆಣ್ಣೆ ಹೆಚ್ಚು ಸ್ಟಾಕ್ ಇತ್ತು ಎಂದು ತಿಳಿದುಕೊಂಡು ಈವೊತ್ತು ತುಪ್ಪ ಮತ್ತು ಬೆಣ್ಣೆ ಎಷ್ಟು ಇದೆ ಎಂದು ಕೇಳಿದರೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ರಾಮೇಗೌಡ.—ಮುಖ್ಯವಾದ ವಿಚಾರ, ಡೈರಿಯವರು ಒಂದು ಲೀಟರ್‌ಗೆ 45 ಪೈಸೆ ಪ್ರಕಾರ ಕೊಟ್ಟು ಕೊಂಡುಕೊಂಡು ಅದನ್ನು 125 ಪೈಸೆಗೆ ಮಾರಾಟ ಮಾಡಿದರು, ಆ ಮೇಲೆ 150 ಪೈಸೆಗೆ ಮಾರಾಟಮಾಡಿದರು. ಅನಂತರ 80 ಪೈಸೆಗೆ ತೆಗೆದುಕೊಂಡು 120 ಪೈಸೆಗೆ ಮಾರಿದರು, ಈಗ 70 ಪೈಸೆಗೆ ತೆಗೆದುಕೊಂಡು 125 ಪೈಸೆಗೆ ಮಾರುತ್ತಿದ್ದಾರೆ. ಯಾವ ಆಧಾರದ ಮೇಲೆ ಕೊಂಡುಕೊಳ್ಳುವ ಬೆಲೆಯನ್ನು ಗೊತ್ತುಮಾಡುತ್ತೀರಿ ? ಮನಸ್ಸಿಗೆ ಬಂದಹಾಗೆ ಏರಿಸುವುದು, ಇಳಿಸುವುದು ಹೀಗೆ ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಕೊಳ್ಳುವ ಮತ್ತು ಮಾರಾಟ ಮಾಡುವ ದರದಲ್ಲಿ ನಾವು ವೈಯಕ್ತಿಕವಾಗಿ ಏನೂ ನಿರ್ಧಾರ ತೆಗೆದುಕೊಳ್ಳಲಿಲ್ಲ. ತಜ್ಞರ ಅಭಿಪ್ರಾಯದ ಮೇಲೆ ಆ ತರಹ ನಿಗದಿ ಮಾಡಿದ್ದೇವೆ. ಭಾರತ ದೇಶದ ರಾಷ್ಟ್ರೀಯ ಡೈರಿ ಇನ್‌ಸ್ಟಿಟ್ಯೂಟ್ ಚೇರ್‌ಮನ್ ಅವರಾದ ಡಾಕ್ಟರ್ ಕುರಿಯನ್ ಅವರ ಸಲಹೆ ಪ್ರಕಾರ ಬೆಲೆಯನ್ನು ನಿಗದಿ ಮಾಡಿದ್ದೇವೆ. ನಮ್ಮ ಇಚ್ಛೆ ಪ್ರಕಾರ ನಿಗದಿ ಮಾಡಿಲ್ಲ. ಮಾನ್ಯ ಸದಸ್ಯರು ಹೇಳುವಂತೆ ಕೊಳ್ಳುವ ದರ ಬಹಳ ಕಡಿಮೆ ಇದೆ. ಒಂದು ಕಡೆ ಬೆಲೆ ಕಡಿಮೆ ಮಾಡಿದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ ಎಂದು ಹೇಳುತ್ತಾರೆ. ಡೈರಿಗೆ ನಷ್ಟವಾದರೂ ಚಿಂತೆ ಇಲ್ಲ ಹೆಚ್ಚು ಉತ್ತೇಜಕವಾದ ದರ ಕೊಡಿರಿ ಎಂದು ಕೆಲವು ಸದಸ್ಯರು ಹೇಳುತ್ತಾರೆ. ಡೈರಿಯಲ್ಲಿ ಸಾಕಷ್ಟು ನಷ್ಟವಾಗಿದೆ, ಹಾಕಿದ ಬಂಡವಾಳ ಕರಗಿ ಹೋಗುತ್ತದೆ, ನಷ್ಟ ಕಡಿಮೆ ಮಾಡಿ ಎಂದು ಕೆಲವು ಸದಸ್ಯರು ಹೇಳುತ್ತಾರೆ. ದರ ನಿಗದಿ ಮಾಡುವ ಕಾಲಕ್ಕೆ ಉತ್ಪಾದನೆ ಮಾಡುವವರಿಗೆ ಲಾಭದಾಯಕವಾಗಿರಬೇಕು ಮತ್ತು ಉಪಯೋಗ ಮಾಡುವವರಿಗೆ ಅನಾನುಕೂಲತೆ ಆಗಿರಬಾರದು, ಈ ಎರಡೂ ದೃಷ್ಟಿಯನ್ನಿಟ್ಟುಕೊಂಡು ನೋಡಬೇಕಾಗುತ್ತದೆ.

ಬೆಂಗಳೂರು ಡೈರಿಯ ವಿಶಿಷ್ಟತೆ ಏನೆಂದರೆ, ನಗರದ ಮಧ್ಯದಲ್ಲಿ ಸಾಕಷ್ಟು ಹಾಲು ಕೊಡತಕ್ಕ ಹಸುಗಳಿವೆ. ಹಸುಗಳನ್ನು ಇಟ್ಟುಕೊಂಡಂಥ ಜನ ಉತ್ಪಾದನೆ ಮಾಡುವ ಹಾಲನ್ನು ಸಂಪೂರ್ಣವಾಗಿ ಡೈರಿಯಿಂದ ಕೊಳ್ಳಬೇಕು ಮತ್ತು ಬೆಂಗಳೂರು ನಗರಕ್ಕೆ ಹಂಚಬೇಕು ಎಂದರೆ ಇಲ್ಲಿರತಕ್ಕ ಹಸುಗಳನ್ನು ಊರಿನಿಂದ ಹೊರಗೆ ಹಾಕಬೇಕಾಗುತ್ತದೆ. ಅದು ಕಷ್ಟವಾದೀತು. 60–70 ಸಾವಿರ ಹಸುಗಳನ್ನು ಇಟ್ಟುಕೊಂಡಿರುವ ಬಡಜನಗಳಿಗೆ ಹಾಲನ್ನು ಮಾರಿಕೊಂಡು ಜೀವನ ಮಾಡಲು ಅನುಕೂಲವಾಗುತ್ತಿದೆ, ಊರಿನಲ್ಲಿರುವ ಹಸುಗಳನ್ನು ಹೊರಗೆ ಹಾಕಬಾರದು ಎಂದು ಮಾನ್ಯ ಸದಸ್ಯರೇ ಹೇಳುತ್ತಾರೆ. ಈ ಎಲ್ಲ ವಿಚಾರಗಳನ್ನೂ ಗಮನದಲ್ಲಿಟ್ಟುಕೊಂಡು ಬೆಂಗಳೂರು ಡೈರಿಗೆ ಏನು ಹಾಲು ಶೇಖರಣೆಯಾಗುತ್ತದೆ, ಆ ಪ್ರಮಾಣವನ್ನು ಬಹಳ ಹೆಚ್ಚು

ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಅದೇ ರೀತಿ ಮಾರಾಟದ ಪ್ರಮಾಣವನ್ನೂ ಹೆಚ್ಚು ಮಾಡಿದ್ದೇವೆ. ಮಾರುವ ಪ್ರಮಾಣ ಮತ್ತು ಶೇಖರಣೆಯಾಗತಕ್ಕ ಪ್ರಮಾಣವನ್ನು ಲೆಕ್ಕದಲ್ಲಿಟ್ಟುಕೊಳ್ಳಬೇಕು. ಮಾರಾಟ ಮಾಡುವುದಕ್ಕಿಂತ ಹೆಚ್ಚಾಗಿ ಶೇಖರಣೆಯಾದ ಹಾಲನ್ನು ಬೆಣ್ಣೆಯಾಗಿ ಪರಿವರ್ತನೆ ಮಾಡಬೇಕಾಗುತ್ತದೆ. ಹಾಲನ್ನು ಬೆಣ್ಣೆಗೆ ಪರಿವರ್ತನೆ ಮಾಡಿದರೆ ಒಂದು ಲೀಟರಿಗೆ 62 ಪೈಸೆ ನಷ್ಟವಾಗುತ್ತದೆ. ಈ ನಷ್ಟವನ್ನು ತಪ್ಪಿಸಬೇಕು ಮತ್ತು ಜನಗಳಿಗೆ ಹಾಲನ್ನು ಒದಗಿಸಬೇಕು ಎನ್ನುವ ದೃಷ್ಟಿಯಿಂದ ನಾವು ಬೆಲೆ ನಿಗದಿ ಮಾಡುತ್ತೇವೆ. ಮಾನ್ಯ ಭಾಸ್ಕರ ಶೆಟ್ಟರು ಮಾತನಾಡುವಾಗ, ಡೈರಿಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ನಷ್ಟವಾಗುತ್ತಿದೆ, ಬಂಡವಾಳ ಕರಗುತ್ತಿದೆ, ಬೆಂಗಳೂರು ಡೈರಿ ಅಸ್ತಿತ್ವದಲ್ಲಿದೆಯೇ ಎಂದು ಕೇಳಿದರು. ಯಾರದೋ ಮಾತು ಕೇಳಿಕೊಂಡು ನಷ್ಟವಾಗುತ್ತಿದೆ ಎಂದು ಹೇಳುತ್ತಿದ್ದಾರೆ ಅಲ್ಲಿರುವ ಯಂತ್ರೋಪಕರಣಗಳ ಮೇಲೆ ಆಗತಕ್ಕ ಸವಕಳಿ, ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಮೇಲೆ ಕೊಡತಕ್ಕ ಬಡ್ಡಿ, ಇದನ್ನೆಲ್ಲ ಕೂಡಿಸಿದರೆ ಒಂದು ತಿಂಗಳಿಗೆ 7500 ರೂಪಾಯಿ ಖರ್ಚು ಬರುತ್ತದೆ. ಅದನ್ನು ಲೆಕ್ಕ ಹಾಕಿ 25 ಲಕ್ಷ ರೂಪಾಯಿ ನಷ್ಟ ಬರುತ್ತಿದೆ ಎಂದು ಹೇಳಿದ್ದಾರೆಂದು ಕಾಣುತ್ತದೆ.

ಶ್ರೀ ಬಿ. ಭಾಸ್ಕರ್ ಶೆಟ್ಟಿ.—ಸರ್ಕಾರದವರು ಕೊಟ್ಟಿರುವ ರಿಪೋರ್ಟ್ ನೋಡಿ, ಆಡಿಟ್ ರಿಪೋರ್ಟ್ ನೋಡಿ. ಅದರಿಂದಲೇ ಗೊತ್ತಾಗುತ್ತದೆ.

Sri G. B. SHANKARA RAO..—The figures given are only the indication of the financial results of the Dairy. The figures are based on the figures given by the Account General. The actual cost is taken into account exclusive of depreciation, interest on the capital account and capital investment.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಎರಡು ಲಕ್ಷ ರೂಪಾಯಿ ಲಾರಿ ಬಾಡಿಗೆ ಕೊಟ್ಟಿರುವ ವಿಷಯದಲ್ಲಿ ಏನೂ ಹೇಳಲಿಲ್ಲ.

ಶ್ರೀ ಜಿ. ರಾಮೇಗೌಡ.—ಡೈರಿಯಲ್ಲಿ ನಷ್ಟವಾಯಿತು ಎಂದು ಕೇಳುವವರೂ ಇದ್ದಾರೆ, ರೈತರಿಗೆ ಇದನ್ನು ನಂಬಿಕೊಂಡು ನಷ್ಟವಾಯಿತು ಎನ್ನುವವರು ನಾವು ಇದ್ದೇವೆ. ನಮಗೂ ಉತ್ತರ ಹೇಳಬೇಕು. ಡೈರಿಯಿಂದ 125 ಪೈಸೆಗೆ ಮಾರಾಟ ಮಾಡುವಾಗ ಹಾಲನ್ನು ಒದಗಿಸುವವನಿಗೆ 75 ಪೈಸೆ ಪ್ರಕಾರ ಕೊಡಿ ಎಂದು ಡಾಕ್ಟರ್ ಕುರಿಯನ್ ಅವರು ಹೇಳಿದರೇ? ಹಾಲಿನ ಬೆಲೆಯನ್ನು ಇಳಿಸಿದಿರಿ, ಏರಿಸಿದಿರಿ, ಇದನ್ನೆಲ್ಲ ಡಾಕ್ಟರ್ ಕುರಿಯನ್ ಅವರು ಹೇಳಿದಂತೆಯೇ ಮಾಡಿದ್ದೀರಾ? 80 ಪೈಸೆಗೆ ರೈತರಿಂದ ತೆಗೆದುಕೊಂಡು 125 ಪೈಸೆಗೆ ಮಾರಿದಿರಲ್ಲ, ಆ ದುಡ್ಡೆಲ್ಲ ಏನಾಯಿತು? ರೈತರಿಗೆ ಏನೂ ತಿಳಿಯದು, ಅವರಲ್ಲಿ ಸಂಘಟನೆ ಇಲ್ಲ ಎಂದು ಈ ರೀತಿ ಮಾಡುತ್ತಿದ್ದೀರಾ? ಹಸುಗಳನ್ನು ತೆಗೆದುಕೊಳ್ಳಲು ಸಾಲ ಕೊಟ್ಟು 150 ಪೈಸೆಗೆ ತೆಗೆದುಕೊಳ್ಳುತ್ತಿದ್ದ ಹಾಲಿನ ಬೆಲೆಯನ್ನು 75 ಪೈಸೆಗೆ ಇಳಿಸಿದಿರಲ್ಲ, ರೈತರು ಏನು ಮಾಡಬೇಕು, ಅದಕ್ಕೆ ಏನು ಹೇಳುತ್ತೀರಿ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ದರಗಳ ವಿಚಾರದಲ್ಲಿ ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ ಎಂದು ಕಾಣುತ್ತದೆ. ಹಾಲಿನ ಬೆಲೆಯನ್ನು ನಿಗದಿ ಮಾಡುವಾಗ ಎಮ್ಮೆ ಹಾಲಿಗೆ ಇಷ್ಟು ಬೆಲೆ, ಹಸುವಿನ ಹಾಲಿಗೆ ಇಷ್ಟು ಬೆಲೆ ಎಂದು ನಿಗದಿ ಮಾಡಿದ್ದೇವೆ.

ಶ್ರೀ ಜಿ. ರಾಮೇಗೌಡ.—ಹಾಲಿನಲ್ಲಿರುವ ಪೌಷ್ಟಿಕಾಂಶದ ಮೇಲೆ ಹಾಲಿನ ಬೆಲೆಯನ್ನು ನಿಗದಿ ಮಾಡಿದ್ದೀರಿ. ಹಸುವಿನ ಹಾಲು, ಎಮ್ಮೆ ಹಾಲು ಎಂದು ಮಾಡಿಲ್ಲ.

ಶ್ರೀ ಜಿ. ಬಿ. ಶಂಕರರಾವ್.—ಹಸುವಿನ ಹಾಲಿನಲ್ಲಿ ಪೌಷ್ಟಿಕಾಂಶ ಕಡಿಮೆ ಇರುತ್ತದೆ ಎಮ್ಮೆ ಹಾಲಿನಲ್ಲಿ ಜಾಸ್ತಿ ಬರುತ್ತದೆ.

ಶ್ರೀ ಎನ್. ಚಿಕ್ಕೇಗೌಡ.—ಹಾಲಿನ ಬೆಲೆ ನಿಗದಿ ಮಾಡುವ ಕಾಲಕ್ಕೆ 3.5 ರಿಂದ 4.5 ರವರೆಗೂ ಪೌಷ್ಟಿಕಾಂಶ ಇರುವ ಹಾಲಿಗೆ ಇಷ್ಟು ಬೆಲೆ ಎಂದು ನಿಗದಿ ಮಾಡಿದ್ದೀರಿ. ಹಸುವಿನ ಹಾಲು, ಎಮ್ಮೆ ಹಾಲು ಎಂದು ಮಾಡಲಿಲ್ಲ. ಎಮ್ಮೆ ಹಾಲಿನಲ್ಲಿ ಪೌಷ್ಟಿಕಾಂಶ ಜಾಸ್ತಿ ಇರುತ್ತದೆ, ಹಸುವಿನ ಹಾಲಿನಲ್ಲಿ ಕಡಿಮೆ ಇರುತ್ತದೆ ಎನ್ನುವುದು ಸಾಮಾನ್ಯ ರೈತನಿಗೂ ಗೊತ್ತಿದೆ. ಡಾಕ್ಟರ್ ಕುರಿಯನ್ ಅವರು ಡೈರಿ ತಜ್ಞರು, ಅವರ ಸಲಹೆಯ ಮೇಲೆ ದರವನ್ನು ನಿಗದಿ ಮಾಡಲಾಗಿದೆ ಎಂದು ಹೇಳಿದ್ದೀರಿ. ದರವನ್ನು ಗೊತ್ತುಮಾಡುವ ಕಾಲಕ್ಕೆ ಪೀಕ್ ಸೀಸನ್‌ನಲ್ಲಿ 70 ಪೈಸೆ ಒಂದು ಲೀಟರ್‌ಗೆ ಕೊಡುತ್ತೀರಿ. ಒಂದು ಲೀಟರ್ ಹಾಲನ್ನು ಅಷ್ಟು ದರಕ್ಕೆ ಉತ್ಪತ್ತಿ ಮಾಡುವುದಕ್ಕಾಗುತ್ತದೆಯೇ? ಈ ದರವನ್ನು ಏಕೆ ಜಾಸ್ತಿ ಮಾಡಬಾರದು?

ಶ್ರೀ ಜಿ. ಬಿ. ಶಂಕರರಾವ್.—ವೇರಿಯೇಷನ್ ದೊಡ್ಡ ಪ್ರಮಾಣದಲ್ಲಿ ಆಗುವುದಿಲ್ಲ. ಹಾಲಿನಲ್ಲಿರುವ ಪೌಷ್ಟಿಕಾಂಶದ ಮೇಲೆ ಬೆಲೆಯನ್ನು ನಿಗದಿ ಮಾಡಲಾಯಿತು. ಬೆಂಗಳೂರು ಸುತ್ತಮುತ್ತ ಸಿಕ್ಕತಕ್ಕ ಆಕಳ ಹಾಲು ಬೆಂಗಳೂರು ಡೈರಿಗೆ ಬರುತ್ತದೆ. ಎಮ್ಮೆ ಹಾಲು ಬಹಳ ಕಡಿಮೆ ಪ್ರಮಾಣದಲ್ಲಿ ಬರುತ್ತದೆ. ಎಮ್ಮೆ ಹಾಲಿಗೆ ಹಸುವಿನ ಹಾಲನ್ನು ಯಾರೂ ಬೆರೆಸುವುದಿಲ್ಲ. ಎಮ್ಮೆ ಹಾಲಿಗೆ ದರ ಜಾಸ್ತಿ ಬರುತ್ತದೆ. ಕೆಲವರು ಹಸುವಿನ ಹಾಲಿಗೆ ಎಮ್ಮೆ ಹಾಲನ್ನು ಬೆರೆಸುತ್ತಾರೆ. ಹೆಚ್ಚು ಫ್ಯಾಟ್ ಕಂಟೆಂಟ್ ಹಸುವಿನ ಹಾಲಿನಲ್ಲಿರುವುದಿಲ್ಲ, 3.5 ರಿಂದ 4.2 ಇರಬಹುದು. ಇಷ್ಟು ಫ್ಯಾಟ್ ಕಂಟೆಂಟ್ ಇರುವುದಕ್ಕೆ ದರ 100 ಪೈಸೆ ಇದ್ದದ್ದು 80 ಪೈಸೆ ಆಗಿದೆ. ಎಮ್ಮೆ ಹಾಲಿಗೆ 120 ಪೈಸೆ ಇರಬೇಕು. ಶ್ರೀ ಕುರಿಯನ್‌ರವರು ದರ ನಿಗದಿಮಾಡಿದ್ದಾರೆ. ದರ ನಿಗದಿ ಮಾಡುವಾಗ ಹಾಲು ಹೆಚ್ಚಾಗಿ ಬರಲು ಉತ್ತಮವಾಗಿರುವ ದರ ಕೊಡಬೇಕು ಎಂಬ ಉದ್ದೇಶವಿದ್ದರೂ ಕ್ರಮೇಣ ಹಾಲು ಬರುವುದು ಹೆಚ್ಚಾದಾಗ ದರ ಕಡಮೆ ಮಾಡಬೇಕೆಂದು ಕುರಿಯನ್‌ರವರು ಹೇಳಿದ್ದಾರೆ. ಇಂದು 80 ಪೈಸೆ ಕೊಡುವುದರಿಂದ ರೈತರಿಗೆ ನಷ್ಟವಿಲ್ಲ. ಒಂದು ರೂಪಾಯಿ ಇದ್ದುದನ್ನು 80 ಪೈಸೆಗೆ ಇಳಿಸಿದ್ದರಿಂದ ಬಹಳ ನಷ್ಟವಾಗುತ್ತಿಲ್ಲ.

ಶ್ರೀ ಜಿ. ರಾಮೇಗೌಡ.—6.5 ಫ್ಯಾಟ್ ಕಂಟೆಂಟ್ ಇರುವುದಕ್ಕೆ ಪ್ರಪೋರ್ಷನೇಟ್ ಆಗಿ ಸರಿಯಾದ ಬೆಲೆ ಕೊಟ್ಟಿದ್ದೀರಾ? ನಾನು ಡೈರಿಯ ಆಫೀಸರನ್ನು ಏಕೆ ಬೆಲೆ ಹೆಚ್ಚು ಮಾಡಿಲ್ಲವೆಂದು ಕೇಳಿದೆ. ಅದಕ್ಕೆ ಅವರು ಆ ಹಾಲು ಬೇಕಾಗಿಲ್ಲ, 4.5 ಫ್ಯಾಟ್ ಕಂಟೆಂಟ್ ಇರುವ ಹಾಲನ್ನು ಸರಬರಾಯಿ ಮಾಡುತ್ತಿರುವುದರಿಂದ 6.5 ಫ್ಯಾಟ್ ಕಂಟೆಂಟ್ ಇರುವುದಕ್ಕೆ ದರ ಹೆಚ್ಚು ಕೊಟ್ಟಿಲ್ಲ ಎಂದು ಹೇಳಿದರು. ದರ ಕಡಮೆ ಮಾಡಿದ್ದಾರೆಂಬ ವರ್ತಮಾನವಿರುವುದು ನಿಜವೇ? ರೈತರಿಗೆ ತಿಳಿಯುವುದಿಲ್ಲ. 4.5 ಫ್ಯಾಟ್ ಕಂಟೆಂಟ್ ಇರುವುದಕ್ಕೆ 80 ಪೈಸೆ ಕೊಡುತ್ತಿರುವಾಗ 6.5 ಫ್ಯಾಟ್ ಕಂಟೆಂಡ್ ಇರುವುದಕ್ಕೇಕೆ ಪ್ರಪೋರ್ಷನೇಟ್ ಆಗಿ ದರ ಹೆಚ್ಚು ಕೊಟ್ಟಿಲ್ಲ? ಆಲ್ಕೋಹಾಲ್ ಟೆಸ್ಟ್ ಎಂದು ಮಾಡುವುದು ಹೆಚ್ಚು ಫ್ಯಾಟ್ ಕಂಟೆಂಟ್ ಇರುವುದಕ್ಕೆ ಹಿಡಿಯುವುದಿಲ್ಲ ಎಂದು ಗೊತ್ತಿರುವುದರಿಂದ ಅದನ್ನು ಜಾರಿಗೆ ತಂದು ಹಳ್ಳಿಗಳಲ್ಲಿ ಎಮ್ಮೆ ಸಾಕುವವರಿಗೆ ನಷ್ಟವನ್ನುಂಟುಮಾಡುವ ನೀತಿಯನ್ನನುಸರಿಸಿಲ್ಲವೇ? ದೊಡ್ಡಬಳ್ಳಾಪುರದ ಕೇಂದ್ರ ಒಂದರಿಂದಲೇ 10 ಸಾವಿರ ಲೀಟರ್ ಬರುತ್ತಿದ್ದುದು ಈ ದಿವಸ 3 ಸಾವಿರ ಲೀಟರ್‌ಗೆ ಇಳಿದಿರುವುದಕ್ಕೆ ಕಾರಣವೇನು? ಕಾರಣ ನಿಮ್ಮ ನೀತಿಯೋ ಅಥವಾ ಅಲ್ಲಿ ಹಸು ಮತ್ತು ಎಮ್ಮೆಯ ಹಾಲು ಇಲ್ಲವೋ? ಕೋ-ಆಪರೇಟಿವ್ ಸೊಸೈಟಿಗಳಿಂದ ಹಾಲು ತೆಗೆದುಕೊಳ್ಳಬೇಕೆಂದು ಡೈರಿ ಪ್ರಾರಂಭವಾದ ದಿವಸ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಹೇಳಿದ್ದರು, ನೀವೂ ಹೇಳಿದ್ದೀರಿ. ಆದರೆ ಬೆಂಗಳೂರಿನಲ್ಲಿ ಹಾಲು ಮಾರುವವರಿಂದ ಹೆಚ್ಚು ತೆಗೆದುಕೊಂಡು ಹಳ್ಳಿಗಳಿಂದ ಸರಬರಾಯಿ ಮಾಡುವವರಿಂದ ತೆಗೆದುಕೊಳ್ಳದೆ ಇರುವುದು, ಸಾಲ ಅವರು ವಾಪಸು ಕೊಡದಿರುವುದು—ಈ ಪರಿಸ್ಥಿತಿ ತಂದಿಲ್ಲವೇ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಹಸು ಮತ್ತು ಎಮ್ಮೆ ಹಾಲಿಗೆ ಫ್ಯಾಟ್ ಕಂಟೆಂಟ್ ಆಧಾರದ ಮೇಲೆ ದರ ನಿಗದಿಮಾಡಲಾಯಿತು. ಫ್ಯಾಟ್ ಕಂಟೆಂಟ್ ಹೆಚ್ಚಿದಾಗ ದರ ಕೂಡ ಹೆಚ್ಚುತ್ತದೆ.

ಶ್ರೀ ಜಿ. ರಾಮೇಗೌಡ.—ನೀವು ಒಂದು ಸಮಿತಿ ಮಾಡಬೇಕು. ನಾವು ಫ್ಯಾಟ್ ಕಂಟೆಂಟ್ ಪ್ರಕಾರ ದರ ಹೆಚ್ಚಿದ್ದರೆ ಒಪ್ಪಿಕೊಳ್ಳುತ್ತೇವೆ. ಫ್ಯಾಟ್ ಕಂಟೆಂಟಿಗೆ ಪ್ರಪೋರ್ಷನೇಟ್ ಆಗಿ ದರ ಹೆಚ್ಚಿಸಿದೆಯೇ ಎಂಬುದು ಇತ್ಯರ್ಥವಾಗಬೇಕು.

ಶ್ರೀ ಜಿ. ಬಿ. ಶಂಕರರಾವ್.—ಡೈರಿ ಮೂಲಕ ಹಾಲನ್ನು ಹಂಚಿಕೆ ಮಾಡುವ ವ್ಯವಸ್ಥೆ ಬೆಂಗಳೂರಿನಲ್ಲಿ ಮಾತ್ರವಲ್ಲದೆ ನಾಲ್ಕಾರು ಕಡೆ ಇದೆ, ಬೆಳಗಾಂ, ಮೈಸೂರು, ಗುಲ್ಬರ್ಗ, ಮಂಗಳೂರು, ಭದ್ರಾವತಿ ಮುಂತಾದ ಕಡೆಗಳಲ್ಲಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಾಲು ಸರಬರಾಯಿ ಯೋಜನೆ ಪ್ರಾರಂಭವಾಯಿತು, ಹೀಗೆ ಸಣ್ಣ ಸಣ್ಣ ಯೋಜನೆಗಳು ಕಾರ್ಯಗತವಾಗುತ್ತಿವೆ.

ಶ್ರೀ ಜಿ. ರಾಮೇಗೌಡ.—210 ಕೋ-ಆಪರೇಟೀವ್ ಸೊಸೈಟಿಗಳಿವೆ. ಮೊದಲು ಬೆಂಗಳೂರು ಡೈರಿಯ ವಿಚಾರ ಹೇಳಿ.

ಉಪಾಧ್ಯಕ್ಷರು.—ತಮ್ಮ ಪ್ರಶ್ನೆಯನ್ನು ಬರೆದು ಕಳುಹಿಸಿದರೆ ಉತ್ತರ ತರಿಸಿಕೊಡುತ್ತೇನೆ.

† ಶ್ರೀ ಆಲೂರು ಹನುಮಂತಪ್ಪ (ಅರಣ್ಯಶಾಖೆಯ ರಾಜ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ಹೆಚ್ಚು ವೇಳೆಯಾಗಿರುವುದರಿಂದ ನಾನು ಹೆಚ್ಚು ವಿಷಯ ಹೇಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಮಾನ್ಯ ಸದಸ್ಯರು ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ.

ಅರಣ್ಯ ಇಲಾಖೆಯ ಬಗ್ಗೆ ಉಪಯುಕ್ತವಾದ ಸಲಹೆಗಳನ್ನು ಈಗಾಗಲೆ ಕಾರ್ಯರೂಪಕ್ಕೆ ತರಲಾಗಿದೆ. ವನಮಹೋತ್ಸವಗಳು ಜಾಸ್ತಿಯಾಗಿ ಅರಣ್ಯ ಸಂಪತ್ತು ಹೆಚ್ಚುತ್ತಿದೆ, ಇಡೀ ದೇಶದಲ್ಲಿರುವ ಅರಣ್ಯದ ಪ್ರಮಾಣವನ್ನು ಹೆಚ್ಚುಮಾಡಿದ್ದೇವೆ, ಗೋಮಾಳ, ಖರಾಬು, ನದಿ ದಂಡೆ ಮುಂತಾದ ಕಡೆಗಳಲ್ಲಿ ವನಸಂಪತ್ತನ್ನು ಹೆಚ್ಚಿಸಲು ಯಥೇಷ್ಟವಾಗಿ ಹಣ ಮತ್ತು ಸಿಬ್ಬಂದಿ ಬೇಕು, ಜನರ ಸಹಕಾರ ಬೇಕು. ಈಗ ಗಾಂಧಿ ಶತಮಾನೋತ್ಸವವು ನಡೆಯುವುದು. ಕಾಡು ಹೆಚ್ಚ ಬೇಕಾದರೆ ಸತತವಾದ ಪ್ರಯತ್ನ ಬಹಳ ಹೆಚ್ಚು ಮಟ್ಟದಲ್ಲಿ ಆಗಬೇಕು. ಇದಕ್ಕೆ ಎಲ್ಲರ ಸಹಕಾರ ಬೇಕು. ಈ ವರ್ಷದಿಂದ ಪ್ರತಿಯೊಬ್ಬ ಮನುಷ್ಯನೂ ತನ್ನ ಶಕ್ತ್ಯಾನುಸಾರ ಕನಿಷ್ಟ 20 ಸಸಿಗಳನ್ನಾದರೂ ನೆಟ್ಟು ಕಾಪಾಡಿದರೆ ಕೆಲವು ವರ್ಷಗಳಲ್ಲಿ ಕೋಟಿಗಟ್ಟಲೆ ಮರಗಳನ್ನು ಬೆಳೆಸ ಬಹುದು. ಈಗ 87 ಲಕ್ಷ ಎಕರೆಗಳಷ್ಟು ಅರಣ್ಯವಿವೆ; ದಟ್ಟವಾದ ಕಾಡು ಮತ್ತು ಸಾಮಾನ್ಯ ವಾದ ಕಾಡು ಇವೆ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಇದೆ. ಮೇಲಾಗಿ ಅರಣ್ಯ ಸಂಪತ್ತನ್ನು ಹೆಚ್ಚಿಸಲು ಬೇಕಾದಷ್ಟು ಪ್ರದೇಶವಿದೆ; ಇದಕ್ಕೆ ಬೇಕಾದ ಬಹಳ ಉಪಯುಕ್ತವಾದ ಯೂಕಲಿಪ್ಟಸ್, ಹುಣಿಸೆ, ಹೊಂಗೆ ಮುಂತಾದ ಸಸಿಗಳನ್ನೂ, ರೈತರಿಗೆ ಉಪಯುಕ್ತವಾದ ಸಸಿಗಳನ್ನೂ ಅರಣ್ಯದ ವತಿಯಿಂದ ಬೆಳೆಸಿದ್ದೇವೆ. ಹಿಂದಿನಿಂದಲೂ ಸಹ ರೈತವರ್ಗ ಸಸಿಗಳನ್ನು ನೆಟ್ಟು ಸಹಕಾರ ನೀಡುತ್ತಿದೆ. ಈ ವರ್ಷ ಬಹಳ ಹೆಚ್ಚು ಅರಣ್ಯ ಬೆಳೆಸಬೇಕು ಎಂದು ಹೆಚ್ಚು ಸಸಿ ಬೆಳೆಸಿದ್ದೇವೆ. ಅವನ್ನು ಈ ವರ್ಷ ಎಲ್ಲಾ ಕಡೆಗೂ ಸರಬರಾಯಿ ಮಾಡಬೇಕೆಂದಿದ್ದೇವೆ.

9-30 P.M.

ನಮ್ಮಲ್ಲಿ 42 ಲಕ್ಷ ಎಕರೆ ಗೋಮಾಳ ಜಮೀನು ಇದೆ. 21 ಲಕ್ಷ ಎಕರೆ ಖರಾಬ್ ಜಮೀನು ಇದೆ. 10—20 ವರ್ಷಗಳಲ್ಲಿ ಲಕ್ಷಾಂತರ ಎಕರೆ ಜಮೀನಿನಲ್ಲಿ ಅರಣ್ಯ ಸಂಪತ್ತನ್ನು ಹೆಚ್ಚು ಮಾಡಬೇಕು. ಅದಕ್ಕಾಗಿ ಸರ್ಕಾರದವರು ಹೆಚ್ಚಿನ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ನೀಲಗಿರಿ ಮರಗಳನ್ನು ಬಹಳ ಹೆಚ್ಚಿಗೆ ಬೆಳೆಸಬೇಕು ಎನ್ನುವ ಸರ್ಕಾರದ ನಿಲುವನ್ನು ಈ ಸಭೆಯ ಮುಂದೆ ಇಡುತ್ತೇನೆ. ಇದಕ್ಕಾಗಿ ಅಗ್ರಿಕಲ್‌ಚರಲ್ ರೀಫೈನಾನ್ಸ್ ಕಾರ್ಪೊರೇಷನ್ನಿನಿಂದ ಹೆಚ್ಚಿಗೆ ಹಣವನ್ನು ಪಡೆದಿದ್ದೇವೆ. ಈ ನೀಲಗಿರಿ ಮರಗಳನ್ನು ಬೆಳೆಸುವುದಕ್ಕೆ ಒಳ್ಳೆಯ ಅವಕಾಶವಿದೆ. ಡ್ರೈಡಿಸ್ಟ್ರಿಕ್ಟ್‌ಗಳಲ್ಲಿ ಬಹಳ ಬೇಗ ಅದನ್ನು ಬೆಳೆಸಬಹುದು. ನಮ್ಮ ದೇಶದ ಗಂಧದ ಮರದ ವೈಶಿಷ್ಟ್ಯ. ಇಂಡಿಯಾ ದೇಶದ ಯಾವ ಭಾಗದಲ್ಲಿಯೂ ಇಲ್ಲ. ಅದನ್ನು ಕಾಪಾಡುವುದಕ್ಕೋಸ್ಕರ ಇಡೀ ಮೈಸೂರು ರಾಜ್ಯದ 4 ಭಾಗಗಳಿಂದ ಬಂದರತಕ್ಕ ಪ್ರಾಂತಗಳಿಗೆ ಅನ್ವಯಿಸತಕ್ಕ ಫಾರೆಸ್ಟ್ ಆಕ್ಟಿಗೆ ಸಂಬಂಧಪಟ್ಟ ರೂಲ್ಸ್‌ಗಳನ್ನು ಈಗಾಗಲೇ ಪಬ್ಲಿಷ್ ಮಾಡಿ ದೇಶಾದ್ಯಂತ ಸಮನ್ವಯವಾಂದಥ ಕಾನೂನನ್ನು ಜಾರಿಗೆ ತರಬೇಕೆಂದು ಇದ್ದೇವೆ. ಈಗ ಏನು ಇಕ್ಕಟ್ಟು ಜಿಜ್ಞಾಸೆ, ತೊಡಕು ಇವೆಯೋ ಅದನ್ನು ಹೋಗಲಾಡಿಸಿ ಗಂಧದ ಮರದ ಮೇಲೆ ಸರ್ಕಾರಕ್ಕೆ ಏನು ಹಕ್ಕು ಇದೆಯೋ ಅದನ್ನು ಜಾರಿ ಮಾಡಿದಾಗಿನಿಂದ ಬಹುಶಃ ಕಳ್ಳಸಾಗಾಣಿಕೆ ಸಾಧ್ಯವಾಗಲಾರದು. ರೈತರಿಗೆ ಇದರ ಮೇಲೆ ಇನ್ನು ಮುಂದೆ ಕಾಪಾಡುವ ಮನಸ್ಸು ಬರುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನಾರ್ತ್ ಕೆನರಾ ಜಿಲ್ಲೆಯಿಂದ ಬಂದಿರತಕ್ಕ ಮಾನ್ಯ ಸದಸ್ಯರು ಅಲ್ಲಿ ದಟ್ಟವಾದ ಅರಣ್ಯ, ಕಾಡು ಸೇಕಡ 80ರಷ್ಟಿದೆ. ಅದರಲ್ಲಿ ವ್ಯವಸಾಯಕ್ಕೆ ಬೇಕಾದ ಜಮೀನು ಇದೆಯೆಂದು ಒತ್ತಾಯಪಡಿಸುತ್ತಿರುವುದನ್ನು ನಾನು ಹತ್ತಾರು ವರ್ಷಗಳಿಂದ ಕೇಳಿದ್ದೇನೆ. ನಾರ್ತ್ ಕೆನರಾ ಜಿಲ್ಲೆಯಲ್ಲಿ ಅದಕ್ಕಾಗಿ ಒಂದು ಲಕ್ಷ ಎಕರೆ ಬಿಡಬೇಕು, ಆ ಬಗ್ಗೆ ಈಗ 42ಸಾವಿರ ಎಕರೆಯನ್ನು ರಿಲೀಜ್ ಮಾಡಿಕೊಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದಷ್ಟು ಜಾಗ್ರತೆಯಾಗಿ ಅಲ್ಲಿರತಕ್ಕ ಮರಗಳನ್ನು ತೆಗೆದು ಅದನ್ನು ವ್ಯವಸಾಯಕ್ಕೆ ಉಪಯೋಗಿಸುವ ಏರ್ಪಾಡನ್ನು ಮಾಡುತ್ತಿದ್ದೇವೆ. ಇನ್ನು ವ್ಯವಸಾಯ ಇಲಾಖೆಗೆ ಸಂಬಂಧಪಟ್ಟಹಾಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಅರಣ್ಯ ಇಲಾಖೆ ಮತ್ತು ವ್ಯವಸಾಯ ಇಲಾಖೆ— ಈ ಎರಡೂ ಸಮಾನವಾಗಿ ಹೋಗುವ ಹಾಗೆ ಅನೇಕ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಹಾರ್ಟಿಕಲ್‌ಚರಲ್ ಡೆವಲಪ್‌ಮೆಂಟಿಗೆ ಬೇಕಾದ ಜಮೀನನ್ನು ಬಿಟ್ಟುಕೊಡುತ್ತಿದ್ದೇವೆ. ಜಾಯಿಂಟ್ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಯನ್ನು ಎಲ್ಲಿ ಸರಿಯಾದ ರೀತಿಯಲ್ಲಿ ಮಾಡಿಕೊಂಡಿದ್ದಾರೋ ಅಂತಹ ಕಡೆಗಳಲ್ಲಿ ವ್ಯವಸಾಯಕ್ಕೆ ಜಮೀನನ್ನು ಕೊಡುತ್ತಿದ್ದೇವೆ. ಎಲ್ಲಿ ನೀರು ಇದೆಯೋ ಅಲ್ಲಿ ಪ್ರಾಜೆಕ್ಟ್‌ಗಳನ್ನು ಕಟ್ಟುವುದರಿಂದ ರೈತರು ವಲಸೆ ಹೋಗುವ ಪರಿಸ್ಥಿತಿ ಬರುತ್ತಿದೆ. ಅಂತಹ ಜನಗಳಿಗೆ ಅನುಕಂಪ ತೋರಿಸಿ ಜಮೀನುಗಳನ್ನು ಕೊಟ್ಟು ವ್ಯವಸಾಯ ಅಭಿವೃದ್ಧಿ ಮಾಡುತ್ತಿದ್ದೇವೆ. ಅರಣ್ಯ ಇಲಾಖೆಯಿಂದ ಒಂದು ಕಡೆ ಜಮೀನನ್ನು ನಾನಾ ಕಾರಣಗಳಿಂದ ಕೊಡುತ್ತಿದ್ದೇವೆ, ಇನ್ನೊಂದು ಕಡೆ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಿ ಅದು ಮುಜರಾಯಿ

(ಶ್ರೀ ಆಲೂರು ಹನುಮಂತಪ್ಪ)

ಜಮೀನಾಗಿರಲಿ, ರೆವಿನ್ಯೂ ಜಮೀನಾಗಿರಲಿ, ಬೆಟ್ಟಗುಡ್ಡ ಸಾರಾಗಿರಲಿ, ಅದನ್ನು ಅರಣ್ಯ ಇಲಾಖೆಗೆ ಬದಲಾಯಿಸಿಕೊಂಡು ಅರಣ್ಯವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈ ದೇಶದಲ್ಲಿ ಸೇಕಡ 33ರಷ್ಟು ಎಕರೆ ಅರಣ್ಯ ಸಂಪತ್ತು ಇರಬೇಕು; ಎನ್ನುವ ಅಖಿಲಭಾರತ ನೀತಿಯ ಮೇಲೆ ಜೂನ್ 1968ರಲ್ಲಿ ಅಖಿಲಭಾರತದ ಅಧಿವೇಶನದಲ್ಲಿ ವಿಶೇಷವಾಗಿ ಚರ್ಚೆ ನಡೆಯಿತು. ಆಗ ಒಂದು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ಸ್ ಸಮ್ಮೇಳನವನ್ನು ಕರೆದಿದ್ದರು. ಆ ಸಮ್ಮೇಳನದಲ್ಲಿ ಆಡಳಿತ ಯಂತ್ರವನ್ನು ಯಾವ ರೀತಿ ಸುಧಾರಿಸಬೇಕು ಅವರಿಗೆ ಯಾವ ರೀತಿ ಪ್ರೋತ್ಸಾಹವನ್ನು ಕೊಡಬೇಕೆಂಬುದನ್ನು ಚರ್ಚೆ ಮಾಡಿದ್ದಾರೆ. ಎಲ್ಲಿ ಕಳ್ಳಸಾಗಾಣಿಕೆ ನಡೆಯುತ್ತದೆಯೋ ಅಲ್ಲಿ ಸಾಧಾರಣವಾಗಿ ಅಧಿಕಾರಿಗಳ ಮೇಲೆ ಆರೋಪಣೆ ಬರುತ್ತದೆ. ಎಲ್ಲಿ ಖಾಸಗೀ ಮುಖಂಡರು ಸರ್ಕಾರಕ್ಕೆ ತಿಳಿಸುತ್ತಾರೋ ಅದನ್ನು ವಿಚಾರ ಮಾಡುವುದಕ್ಕಾಗಲೀ ಅಥವಾ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ವಿಚಾರಮಾಡುವುದಕ್ಕಾಗಲೀ ಸರ್ಕಾರ ಹಿಂಜರಿಯುವುದಿಲ್ಲ. ಇದಕ್ಕಾಗಿ ಆಂಟಿ ಸ್ಮಗಲಿಂಗ್ ಸ್ಕ್ವಾಡ್ಸ್ 12—13 ಇವೆ. ಒಂದುವೇಳೆ ಯಾವುದೇ ಬೆಲೆ ಬಾಳತಕ್ಕ ಗಂಧದ ಮರದ ಕಳ್ಳಸಾಗಾಣಿಕೆ ಈ ದೇಶದಲ್ಲಿ ನಡೆಯುತ್ತಿದ್ದರೆ ಅದು ಪೋಲೀಸ್ ಅಧಿಕಾರಿಗಳಿಗೆ ಅಥವಾ ಅರಣ್ಯ ಅಧಿಕಾರಿಗಳಿಗೆ ತಿಳಿದಾಗ ಅದನ್ನು ವಿಚಾರಣೆ ಮಾಡತಕ್ಕಂಥ ಸಿಬ್ಬಂದಿವರ್ಗದವರನ್ನೂ ಸಹ ನಾವು ಇಟ್ಟುಕೊಂಡಿದ್ದೇವೆ. ಗಂಧದಮರದ ಸಾಗಾಣಿಕೆಯಲ್ಲಿ ವಿಶೇಷವಾಗಿ ಕಳ್ಳತನಗಳು ಆಗುತ್ತಿವೆ ಎಂಬುದು ಅನೇಕ ವರ್ತಮಾನ ಪತ್ರಿಕೆಗಳಿಂದ ನಮಗೆ ಗೊತ್ತಾಗುತ್ತಿದೆ. ಸರ್ ಎಂ. ವಿಶ್ವೇಶ್ವರಯ್ಯನವರು ಭಾರತ ದೇಶದಲ್ಲಿ ಸಾಲುಮರಗಳನ್ನು ನೆಟ್ಟು ಅರಣ್ಯ ಸಂಪತ್ತು ಒಂದಕ್ಕೆ ಆರರಷ್ಟು ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ. ಆ ರೀತಿಯಾಗಿ ಮಾಡಿಕೊಳ್ಳುವುದಕ್ಕೆ ಬೇಕಾದಷ್ಟು ಅವಕಾಶವಿದೆ. ವನಸಂಪತ್ತು ಹೆಚ್ಚಾಗಬೇಕು, ಗೋಮಾಳ ಸಂಪತ್ತು ಹೆಚ್ಚಾಗಬೇಕು. ಅದಕ್ಕಾಗಿ ನದೀ ದಂಡೆಗಳಲ್ಲಿ ಸಾಲುಮರಗಳನ್ನು ಹಾಕಿದ್ದಾರೆ. ಪಿ. ಡಬ್ಲ್ಯು. ಡಿ. ಮತ್ತು ಸ್ಟೇಟ್ ಫಂಡ್ ತಾಲ್ಲೂಕ್ ಬೋರ್ಡ್ ರಸ್ತೆಗಳಲ್ಲಿ ರಿಲೀಫ್ ವರ್ಕ್‌ಗಳಲ್ಲಿ ಮರಗಳನ್ನು ಕಾಪಾಡುವುದು ಮುಖ್ಯ. ಏಕೆಂದರೆ ರಸ್ತೆಯ ಮರಗಳಿಂದ ಬಹಳಮಟ್ಟಿಗೆ ಹೆಚ್ಚಿನ ಪ್ರಯೋಜನವಾಗುತ್ತಿದೆ. ಇದನ್ನು ತೀವ್ರಗತಿಯಿಂದ ಸರ್ಕಾರ ಆಲೋಚನೆ ಮಾಡುತ್ತಿದೆ. ನದೀ ದಂಡೆಗಳಲ್ಲಿರತಕ್ಕ ಪ್ರದೇಶದಲ್ಲಿ ಸಾಯಿಲ್ ಕನ್‌ಸರ್‌ವೇಷನ್ ಮಾಡುವುದಕ್ಕೆ ಮತ್ತು ಅಫಾರೆಸ್ಟೇಷನ್ ಮಾಡುವುದಕ್ಕೆ ಸಾಯಿಲ್ ಎರೋಷನ್ ಆಗದೇ ಇರುವ ರೀತಿಯಲ್ಲಿ ಮರಗಳನ್ನು ಬೆಳೆಸಿದರೆ ಆಗ ಭೂಮಿ ಸುರಕ್ಷಿತವಾಗಿರುತ್ತದೆ ಎಂಬ ದೃಷ್ಟಿಯಿಂದ ಎಲ್ಲಾ ರೀತಿಯ ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಳ್ಳುತ್ತಿದೆ. ಈ ವರ್ಷದಿಂದ ಇದರ ಬಗ್ಗೆ ಪ್ರಯತ್ನಮಾಡುತ್ತಿದ್ದೇವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇನ್ನು ಈ ದೇಶದಲ್ಲಿ ಬೆರಣಿಯನ್ನು ಉರಿಸುವ ವಿಧಾನ ಹೆಚ್ಚು ಮಾಡಬೇಕಾಗಿದೆ. ಏಕೆಂದರೆ ಕೌಡಂಗ್ ಇವತ್ತು ಬಹಳ ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತದೆ. ಅದನ್ನು ಬೆರಣಿಮಾಡಿ ಉರಿಸಿದ ಮೇಲೆ ಆ ಬೂದಿಯನ್ನು ಗೊಬ್ಬರಕ್ಕಾಗಿ ಉಪಯೋಗಿಸಬಹುದು. ನಮಗೆ ಬೇಕಾದಂಥ ಗೊಬ್ಬರ ಇಲ್ಲದೇ ಇರುವುದರಿಂದ ನಮ್ಮ ವ್ಯವಸಾಯ ಕುಂಠಿತವಾಗುತ್ತದೆ. ನಮಗೆ ವಿದ್ಯುಚ್ಛಕ್ತಿ ಯಥೇಚ್ಛವಾಗಿ ಸಿಗುತ್ತಿದೆ. ಆದ್ದರಿಂದ ನಮಗೆ ಹೆಚ್ಚಿನ ಪ್ರಯೋಜನವಿದೆ. ಎಲೆಕ್ಟ್ರಿಕ್ ಹೋಂ ಮಾಡಿಕೊಂಡರೆ ನಾವು ನೀರು ಕಾಯಿಸುವುದಕ್ಕೆ, ಅಡಿಗೆ ಮಾಡಿಕೊಳ್ಳುವುದಕ್ಕೆ, ಇನ್ನೂ ಇತರ ಕಾರ್ಯಗಳನ್ನು ಮಾಡುವುದಕ್ಕೆ ಹೆಚ್ಚು ಅನುಕೂಲವಾಗಿರುತ್ತದೆ. ಆದ್ದರಿಂದ ಈ ದೇಶದಲ್ಲಿ ವನಸಂಪತ್ತನ್ನು ಹೆಚ್ಚುಮಾಡುವುದಕ್ಕೆ ಅನುಕೂಲಮಾಡಲಾಗುತ್ತದೆ. ಆದರೆ ಇದನ್ನು ಬಡವರು ಮಾಡುವುದಕ್ಕಾಗುವುದಿಲ್ಲ. ಕಾಡಿನ ಸಂಪತ್ತು ನಾನಾ ರೀತಿಯಲ್ಲಿದೆ. ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ಇದನ್ನು ಕಾಪಾಡಿಕೊಂಡು ಬರಬೇಕು. ಹುಣಸೇಮರಗಳನ್ನು ಬೆಳೆಸುವ ದೃಷ್ಟಿಯಿಂದ ಹುಣಿಸೇ ಸಸಿಗಳನ್ನು ಎಲ್ಲಾ ರೈತವರ್ಗದವರಿಗೂ, ಮತ್ತು ಗ್ರಾಮಪಂಚಾಯತಿಯವರಿಗೂ ಸರಬರಾಜುಮಾಡುತ್ತೇವೆ. ಯೂಕಲಿಪ್ಟಸ್‌ಮರಗಳಿಗೆ 25 ರೂಪಾಯಿಗಳ ದರದ ಪ್ರಕಾರ ವಾಲಂಟರಿಯಾಗಿ ಕೊಟ್ಟಿದ್ದಾರೆ. ಸುಮಾರು 8—10 ತಿಂಗಳುಗಳಿಂದ ಇದರ ವ್ಯವಸ್ಥೆಯನ್ನು ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಮೇಲೆ ಇದೆ. 1967ನೇ ಜನವರಿಯಿಂದೀಚೆಗೆ ಗ್ವಾಲಿಯರ್ ಫ್ಯಾಕ್ಟರಿಯವರು ಯೂಕಲಿಪ್ಟಸ್ ಮರಗಳನ್ನು ಆನ್ ಸ್ಪಾಟ್ ಡೆಲಿವರಿ 27 ರೂಪಾಯಿಗಳಂತೆ ಕೊಂಡುಕೊಳ್ಳುವುದರಿಂದ ಸರ್ಕಾರಕ್ಕೆ 25 ರೂಪಾಯಿಗಳಂತೆ ಬರುತ್ತದೆ. 1ನೇ ಅಕ್ಟೋಬರ್ 1969ಕ್ಕೆ ಅದು ರಿವೈಜ್ ಆಗಬೇಕು. ಏಕೆಂದರೆ ಮಾರ್ಕೆಟ್ ಬೆಲೆ ಒಂದೇ ಸಮನೆ ಇರುವುದಿಲ್ಲ. ವರ್ಷದಲ್ಲಿ ನಾನಾ ತರಹ ಮಾರ್ಕೆಟ್ ಬೆಲೆ ಇರುತ್ತದೆ. ನಮ್ಮ ಸರ್ಕಾರ ನ್ಯಾಯವಾದ ರೀತಿಯಲ್ಲಿ ಆ ಬೆಲೆಯನ್ನು ನಿಗದಿ ಮಾಡಿದ್ದಾರೆ. 1ನೇ ಅಕ್ಟೋಬರ್ 1969ಕ್ಕೆ ಇನ್ನೂ ಮಾರ್ಕೆಟ್ ಬೆಲೆ ಹೆಚ್ಚಿಗೆ ಬರುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಅದರ ಮಾರ್ಕೆಟ್ ದರ ಇವತ್ತು 26 ರೂಪಾಯಿಗಳು. ಅವರಿಗೆ ಕೊಟ್ಟಿರುವುದು 25 ರೂಪಾಯಿಗಳು ಇರಬಹುದು.

ಶ್ರೀ ಆಲೂರು ಹನುಮಂತಪ್ಪ.—ಮಾರ್ಕೆಟ್ ರೇಟ್ 18 ರೂಪಾಯಿಗಳಿದ್ದಾಗ 25 ರೂಪಾಯಿಗಳಂತೆ ನಿಗದಿ ಮಾಡಿತ್ತು. ಈಗ ಫ್ಯಾಕ್ಟರಿಗೆ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಸರಿಯಾದ ಬೆಲೆಯನ್ನು ಸರ್ಕಾರ ಕೊಟ್ಟಿದೆ. ತಾರೀಖು 1-10-1969ರ ನಂತರ ಈ ಮರಗಳ ಬೆಲೆ ಮಾರ್ಕೆಟಿನಲ್ಲಿ ಏನು ಇರುತ್ತದೋ ಅದನ್ನು ಆ ತಾರೀಖಿನಿಂದ ನಿಗದಿ ಮಾಡುತ್ತೇವೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅರಣ್ಯಾಭಿವೃದ್ಧಿಯ ಬಗ್ಗೆ ನಾನಾ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಅದಕಾರಣ ಮಾನ್ಯ ಸದಸ್ಯರುಗಳು ಈ ಅರಣ್ಯ ಇಲಾಖೆಯ ಬೇಡಿಕೆಗಳನ್ನು ಸರ್ವಾನುಮತದಿಂದ ಒಪ್ಪಬೇಕೆಂದು ತಮ್ಮೆಲ್ಲರನ್ನೂ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಸರ್ಕಾರದವರು ಬಿರ್ಲಾ ಕಂಪನಿಯವರಿಗೆ ನೀಲಗಿರಿ ಮರಗಳನ್ನು ಮಾರ್ಕೆಟ್ ರೇಟಿಗಿಂತ ಕಡಿಮೆ ಬೆಲೆಗೆ ಕೊಟ್ಟಿರುವ ಬಗ್ಗೆ ಯಾರು ಯಾರು ಕಾರಣರು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು ?

ಶ್ರೀ ಆಲೂರು ಹನುಮಂತಪ್ಪ.—1967ನೇ ಇಸವಿ ಜನವರಿ ತಿಂಗಳಲ್ಲಿ ಮಾರ್ಕೆಟ್ ಬೆಲೆ ಟನ್‌ಗೆ 18 ರೂಪಾಯಿ ಇದ್ದರೂ ಕೂಡ 25 ರೂಪಾಯಿಗಳಂತೆ ಬಿರ್ಲಾ ಕಂಪನಿಯವರಿಗೆ ಕೊಡಲಾಗಿದೆ. ಈ ರೇಟಿನ ಕರಾರು 1-10-1969ರವರೆಗೆ ಇರುತ್ತದೆ. ಅನಂತರ ಏನು ಬೆಲೆ ಮಾರ್ಕೆಟ್‌ನಲ್ಲಿ ಇರುತ್ತದೋ ಅದಕ್ಕೆ ಅನುಗುಣವಾಗಿ ಮತ್ತೆ ಬೆಲೆಯನ್ನು ನಿಗದಿಮಾಡಿ ಕೊಡಲಾಗುತ್ತದೆ.

ಶ್ರೀ ಎ. ನಂಜಪ್ಪ (ಶಾಂತಿನಗರ).—ರೈತರು ತಾವೇ ತಮ್ಮ ಜಮೀನಿನಲ್ಲಿ ಬೆಳೆದ ಸರ್ವೆ ಮರಗಳನ್ನು ಕಡಿದು ಬೆಂಗಳೂರಿಗೆ ತಂದು ಮಾರಬೇಕಾದರೆ ಪರ್ಮಿಟ್ ಪಡೆಯಬೇಕಾಗಿದೆ. ಪರ್ಮಿಟ್ ಕೊಡುವ ವಿಚಾರದಲ್ಲಿ ಅರಣ್ಯಾಧಿಕಾರಿಗಳು ಬಹಳ ಕಿರುಕುಳ ಕೊಡುತ್ತಿದ್ದಾರೆ ಅದಕಾರಣ ಈ ಪರ್ಮಿಟ್ ತೆಗೆಯುವ ಬಗ್ಗೆ ಸರ್ಕಾರದವರು ಏನು ನಿರ್ಧಾರ ಮಾಡಿದ್ದಾರೆ ?

ಶ್ರೀ ಆಲೂರು ಹನುಮಂತಪ್ಪ.—ತುಮಕೂರು, ಕೋಲಾರ ಮುಂತಾದ ಜಿಲ್ಲೆಗಳಿಂದ ಬೆಂಗಳೂರಿಗೆ ಸರ್ವೆ ಮರಗಳು ಬರುತ್ತವೆ. ಈ ಬಗ್ಗೆ ಪಡೆಯಬೇಕಾಗಿರುವ ಪರ್ಮಿಟ್‌ನ್ನು ತೆಗೆಯಬೇಕೆಂಬುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಈ ಬಗ್ಗೆ ಫಾರೆಸ್ಟ್ ರೂಲ್‌ಗಳನ್ನು ಸಡಿಲಗೊಳಿಸಲಾಗಿದೆ. ಈಗಿರುವ ಪರ್ಮಿಟ್ ಪದ್ಧತಿಯನ್ನು ತೆಗೆಯುತ್ತೇವೆಂಬುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ಅಫೋರ್‌ಸ್ಟೇಷನ್ ಸ್ಕೀಮ್ ಜಾರಿಯಲ್ಲಿದೆಯೆಂದು ಹೇಳುತ್ತೀರಿ. ನಾನ್ ಫಾರೆಸ್ಟ್ ಲ್ಯಾಂಡನ್ನು ಕೆಲವು ರೈತರು ಅಕ್ವೈರ್ ಮಾಡಿಕೊಂಡಿದ್ದಾರೆ. ಇಂತಹ ಜಮೀನಿನಲ್ಲಿ ಅವರೇ ಅಫೋರ್‌ಸ್ಟೇಷನ್ ಮಾಡುವುದಕ್ಕೆ ತಾವು ಏನು ಹೇಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅದು ಖಾಸಗೀಯವರಿಗೆ ಸೇರಿದ್ದರೆ ಅವರೇ ಅಫೋರ್‌ಸ್ಟೇಷನ್ ಮಾಡಿಕೊಳ್ಳಬಹುದು. ಆದರೆ ಅದು ಸರ್ಕಾರಕ್ಕೆ ಸೇರಿದ ಫಾರೆಸ್ಟ್ ಭೂಮಿಯಾಗಿದ್ದರೆ ಸರ್ಕಾರದ ಅನುಮತಿ ಪಡೆಯಬೇಕಾಗುತ್ತದೆ.

ಶ್ರೀ. ಸಿ. ಎಂ. ಎಸ್. ಶಾಸ್ತ್ರಿ.—ನಮ್ಮ ಕಡೆ ರೈತರು ತಮ್ಮ ಜಮೀನಿನಲ್ಲಿ ಬೆಳೆದ ಸೀಗೆಕಾಯಿ, ಅಂಟುವಾಳದಕಾಯಿ ಮತ್ತು ಹುಣಸೇಹಣ್ಣನ್ನು ಮಾರಾಟ ಮಾಡಬೇಕಾದರೆ ಅರಣ್ಯಾಧಿಕಾರಿಗಳ ಅನುಮತಿ ಪಡೆಯಬೇಕಾಗಿದೆ. ಈ ಬಗೆ ಅರಣ್ಯಾಧಿಕಾರಿಗಳು ರೈತರಿಗೆ ಇಲ್ಲದ ಕಿರುಕುಳ ಕೊಡುತ್ತಿದ್ದಾರೆ. ಇತ್ತೀಚೆಗೆ ಸರ್ಕಾರದವರು ಇವುಗಳನ್ನು ಮಾರಾಟ ಮಾಡಬೇಕಾದರೆ ತಹಶಿಲ್ದಾರರಿಂದ ಪರ್ಮಿಟ್ ಪಡೆಯಬೇಕೆಂದು ಆರ್ಡರ್ ಮಾಡಿದ್ದಾರೆ. ಇದರಿಂದ ರೈತರಿಗೆ ಬಹಳ ಕಿರುಕುಳವಾಗುತ್ತಿದೆ. ಈ ಒಂದು ಪರ್ಮಿಟ್ ಪದ್ಧತಿಯನ್ನು ತೆಗೆದು ರೈತರಿಗೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಈ ಬಗ್ಗೆ ಹೇಳುವುದಾದರೆ ಪ್ರತಿಯೊಂದು ಕೇಸಿನಲ್ಲಿಯೂ ಅರಣ್ಯಾಧಿಕಾರಿಗಳು ಕಿರುಕುಳ ಕೊಡುತಿದ್ದಾರೆ ಎಂದು ಹೇಳಿದರೆ ಒಪ್ಪುವುದಕ್ಕಾಗುವುದಿಲ್ಲ. ವಾಸ್ತವಿಕವಾದಂಥ ಕೇಸ್‌ಗಳು ಏನಾದರು ಇದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ ವಿಚಾರ ಮಾಡಬಹುದು.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಇಂತಹವು ಸಾವಿರಾರು ಕೇಸ್‌ಗಳು ಇವೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಣ್ಣ ಸಣ್ಣ ರೈತರು ತಮ್ಮ ಜಮೀನಿನಲ್ಲಿ ಬೆಳೆದ ಸೀಗೆಕಾಯಿ, ಅಂಟುವಾಳದಕಾಯಿಯನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುವುದಕ್ಕೆ ಅರಣ್ಯಾಧಿಕಾರಿಗಳು ಕಿರುಕುಳ ಕೊಡುತ್ತಿದ್ದಾರೆ. ರೈತರು ಅವುಗಳನ್ನು ಪರ್ಮಿಟ್ ಇಲ್ಲದೆ ಮಾರ್ಕೆಟ್‌ಗೆ ಸಾಗಿಸುವಂತೆಯೇ ಇಲ್ಲ. ಸರ್ಕಾರೀ ಜಮೀನಿನಲ್ಲಿ ಬೆಳೆಯುವ ಬೆಳೆಗಳನ್ನು ಸಂರಕ್ಷಣೆ ಮಾಡುವುದು ಮಾತ್ರ ಅರಣ್ಯಾಧಿಕಾರಿಗಳಿಗೆ ಸೇರಿದೆ. ಖಾಸಗೀ ಜಮೀನಿನಲ್ಲಿ ಬೆಳೆಯುವ ಬೆಳೆಗಳಿಗೆ ಏತಕ್ಕೆ ಲೈಸನ್ಸ್ ತೆಗೆದುಕೊಳ್ಳಬೇಕು?

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಪರಿಶೀಲನೆ ಮಾಡಬೇಕು.

ಉಪಾಧ್ಯಕ್ಷರು.—ಸ್ಪೆಸಿಫಿಕ್ ಆದ ಇನ್‌ಸ್ಟೆನ್‌ಸಸ್ ಇದ್ದರೆ ಬರೆದು ಕೊಡಿ, ಅದನ್ನು ಮಾನ್ಯ ಮಂತ್ರಿಗಳು ವಿಚಾರ ಮಾಡಿ ನೋಡುತ್ತಾರೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಇಂತಹವು ಸಾವಿರಾರು ಕೇಸ್‌ಗಳು ಇವೆ.

ಶ್ರೀ ಕೆ. ಎನ್. ವೀರಪ್ಪಗೌಡ.—ದಟ್ಟವಾಗಿರುವ ಅರಣ್ಯಗಳನ್ನು ಕಡಿದು ಅಲ್ಲಿ ನೀಲಗಿರಿ ಮರಗಳನ್ನು ಬೆಳೆಸಲಾಗುತ್ತದೆ ಎಂದು ಹೇಳಿದಿರಿ. ಕಾಡನ್ನು ಕಡಿಯುವುದಕ್ಕೆ ಬದಲು ಬಯಲು ಜಾಗದಲ್ಲಿ ಏತಕ್ಕೆ ನೀಲಗಿರಿ ಮರಗಳನ್ನು ಬೆಳೆಯಬಾರದು?

ಶ್ರೀ ಆಲೂರು ಹನುಮಂತಪ್ಪ.—ದಟ್ಟವಾದ ಕಾಡುಗಳಲ್ಲಿ ನೂರಾರು ವರ್ಷಗಳಿಂದ ದೊಡ್ಡ ದೊಡ್ಡ ಮರಗಳು ಬೆಳೆದಿರುತ್ತವೆ. ಅವು ಉಪಯೋಗಕ್ಕೆ ಬರುವುದಾದರೆ ಅಂತಹ ಮರಗಳನ್ನು ಕಡಿಯಬೇಕಾಗುತ್ತದೆ. ಸಮಯಕ್ಕೆ ಸರಿಯಾಗಿ ಆ ಮರಗಳನ್ನು ಕಡಿಯದಿದ್ದರೆ ಅವು ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಈ ಬಗ್ಗೆ ಒಂದು ವರ್ಕಿಂಗ್ ಪ್ಲಾನ್ ಇದೆ. ಆ ಪ್ಲಾನ್ ಪ್ರಕಾರ ಯಾವ ಯಾವ ಮರಗಳನ್ನು ಎಷ್ಟು ವರ್ಷದಲ್ಲಿ ತೆಗೆಯಬೇಕೆಂಬ ಬಗ್ಗೆ ಒಂದು ನಿಯಮವಿದೆ. ಅದರಂತೆ ಮಾಡುತ್ತೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ವರ್ಕಿಂಗ್ ಪ್ಲಾನ್ ಪ್ರಕಾರ ಮರಗಳನ್ನು ಕಡಿಯಲಾಗುತ್ತದೆ ಎಂದು ಹೇಳುತ್ತೀರಿ. ಆದರೆ ಕೆಲವು ಕಂಟ್ರಾಕ್ಟರ್‌ಗಳ ಪ್ಲಾನ್‌ಗೆ ವಿರುದ್ಧವಾಗಿ ಮರಗಳನ್ನು ಕಡಿದು ಫ್ಯಾಕ್ಟರಿಗೆ ಸಾಗಿಸುತ್ತಿದ್ದಾರೆ, ಇಂತಹವರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ?

[*No Answer*]

Mr. DEPUTY SPEAKER.—The question is :

"That the respective sums not exceeding the amounts mentioned in the Demands Nos. 20, 22, 38 and 51 be granted to the Government to defray the charges which will come in course of payment during the financial year for the period ending with 31st day of March 1970."

The motion was adopted.

As Directed by the Chair the motion of Demands for Grants adopted by the House are reporduced below.

DEMAND No. 20.—AGRICULTURE, HORTICULTURE AND FISHERIES.

31. Agriculture

"That a sum not exceeding Rs. 11,24,39,000 be granted to the Government to defray the charges which will come in course of payment during the financial year for the period ending 31st day of March 1970, in respect of 'Agriculture'."

DEMAND NO. 22.—ANIMAL HUSBANDRY.

33. Animal Husbandry

" That a sum not exceeding Rs. 1,95,18,000 be granted to the Government to defray the charges which will come in course of payment during the financial year for the period ending 31st day of March 1970, in respect of 'Animal Husbandry'."

DEMAND NO. 38.—FOREST

70. Forest

" That a sum not exceeding Rs. 6,99,92,000 be granted to the Government to defray the charges which will come in course of payment during the financial year for the period ending 31st day of March 1970, in respect of 'Forest.'"

DEMAND NO. 51.—CAPITAL OUTLAY ON FOREST.

119. Capital Outlay on Forests

" That a sum not exceeding Rs. 13,00,000 be granted to the Government to defray the charges which will come in course of payment during the financial year for the period ending 31st day of March 1970, in respect of 'Captial Outlay on Forests'."

Mr. DEPUTY SPEAKER.—The House now stands adjoured to meet to-morrow at 1-00 P.M.

The House adjourned at Fifty Minutes past Nine of the Clock to meet again at One of the Clock on Saturday, the 22nd March 1969.